ಶುಕ್ರವಾರ, ಜೂನ್ 23, 2023 | ₹ 7.00

ಪ್ರಜಾವಾ

ಸಿ.ಜೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಕಳವಳ

ಸರ್ಕಾರಿ ಶಾಲೆ ದುಃಸ್ಥಿತಿ: ಆತ್ಮಸಾಕ್ಷಿಗೆ ಆಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಕೆಲವು ಸರ್ಕಾರಿ ಶಾಲೆಗಳಲ್ಲಿ ಕುಡಿಯುವ ನೀರಿನ ಕೊರತೆ ಮತ್ತು ಶೌಚಾಲಯಗಳಿಗೆ ನೀರಿನ ಸೌಲಭ್ಯ ಇಲ್ಲ. ಕುಡಿಯುವ ನೀರನ್ನು ಹೊತ್ತು ತರುವ ಪರಿಸ್ಥಿತಿ ಇದೆ. ಇಂತಹ ಶಾಲೆಗಳಿಂದ ಯಾವ ರೀತಿಯ ಸಮಾಜದ ನಿರ್ಮಾಣ ಸಾಧ್ಯ' ಎಂದು ರಾಜ್ಯ ಸರ್ಕಾರದ ವಿರುದ್ಧ ಕಿಡಿ ಕಾರಿರುವ ಹೈಕೋರ್ಟ್, 'ಸರ್ಕಾರಿ ಶಾಲೆಗಳ ದುಃಸ್ಥಿತಿ ಗಮನಿಸಿದರೆ ಆತ್ಮಸಾಕ್ಷಿಗೆ ಆಘಾತವಾಗುತ್ತಿದೆ' ಎಂದು ತೀವ್ರ ಕಳವಳ ವ್ಯಕ್ತಪಡಿಸಿದೆ.

ಈ ಕುರಿತಂತೆ ಹೈಕೋರ್ಟ್ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿರುವ



ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಎಂ.ಜಿ. ಎಸ್. ಕಮಲ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು ಸಲ್ಲಿಸಿದ ವರದಿ ಮತ್ತು ಛಾಯಾಚಿತ್ರಗಳನ್ನು ಪರಿಶೀಲಿಸಿದ ನ್ಯಾಯಪೀಠ, 'ಶಾಲೆಗಳಲ್ಲಿ

> **ಮಕ್ಕಳ ಶಿಕ್ಷಣಕ್ಕಾಗಿ ಬಜೆಟ್‌ನಲ್ಲಿ ಪ್ರತೇಕ ಅನುದಾನವನ್ನು ಮೀಸಲಿಡಬೇಕು. ಆ ಮೊತ್ತವನ್ನು ನಿರ್ದಿಷ್ಟ ಕಾಲಮಿತಿಯಲ್ಲಿ ವಿನಿಯೋಗಿಸಬೇಕು**
>
> **ಪಿ.ಬಿ.ವರಾಳೆ,**
> ಮುಖ್ಯ ನ್ಯಾಯಮೂರ್ತಿ

ಶೌಚಾಲಯಗಳ ಸ್ಥಿತಿ ಅತ್ಯಂತ ಕರುಣಾಜನಕವಾಗಿದೆಯಲ್ಲಾ, ಈ ರೀತಿಯ ವರದಿ ಸಲ್ಲಿಸಿರುವ ಅಧಿಕಾರಿಯ ಮನೆಯಲ್ಲಿಯೂ ಇದೇ ಪರಿಸ್ಥಿತಿ ಇದೆಯೇ' ಎಂದು ಕುಟುಕಿತು.

ನ್ಯಾಯಮೂರ್ತಿ ಎಂ.ಜಿ.ಎಸ್. ಕಮಲ್, 'ಸೂಕ್ತ ಶೌಚಾಲಯ ಕಲ್ಪಿಸಿಲ್ಲ ಎಂದು ಕೋರ್ಟ್‌ಗೆ ಹೇಳುವಷ್ಟು ಧೈರ್ಯ ಅಧಿಕಾರಿಗೆ ಹೇಗೆ ಬಂತು? ಇವರೆಲ್ಲಾ ತಮ್ಮ ಮಕ್ಕಳನ್ನೂ ಇಂತಹ ಶಾಲೆಗಳಿಗೆ ಕಳುಹಿಸಲು ಮುಂದಾಗುತ್ತಾರೆಯೇ' ಎಂದು ಪಶ್ನಿಸಿದರು. 'ಅಧಿಕಾರಿಗಳ ಚಲ್ತಾ ಹೈ ಮನೋಭಾವ ಸಹಿಸುವುದಿಲ್ಲ' ಎಂದು ಎಚ್ಚರಿಸಿದರು.

ಸೂಚನೆ: 'ಸರ್ಕಾರಿ ಶಾಲೆಗಳಲ್ಲಿನ ಮೂಲಸೌಕರ್ಯಗಳ ಪರಿಸ್ಥಿತಿ ಏನಿದೆ ಎಂಬುದರ ಕುರಿತಂತೆ ಮುಂದಿನ 3 ತಿಂಗಳಲ್ಲಿ ಮರು ಸಮೀಕ್ಷೆ ನಡೆಸಬೇಕು. ಈ ಸಮೀಕ್ಷೆಯ ಸಂದರ್ಭದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಗಳ (ಕೆಎಸ್‌ಎಲ್‌ಎಸ್‌ಎ) ಸದಸ್ಯ ಕಾರ್ಯದರ್ಶಿಗಳೂ ಭಾಗಿಯಾಗುವಂತೆ ನೋಡಿಕೊಳ್ಳಬೇಕು' ಎಂದು ಸೂಚಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ದುಬಾರಿ ಶುಲ್ಕ: ಅಕ್ಕಿ ದರ ಹೆಚ್ಚಳ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ವಲಯಕ್ಕೆ ಪೂರೈಸುವ ವಿದ್ಯುತ್ ಮೇಲೆ ಶೇ 9ರಷ್ಟು ತೆರಿಗೆ ಏರಿಕೆಯಾಗಿರುವುದರಿಂದ ಅಕ್ಕಿ ದರವನ್ನು ಏರಿಸುವುದು ಅನಿವಾರ್ಯವಾಗಲಿದೆ ಎಂದು ಅಕ್ಕಿ ಗಿರಣಿಗಳ ಮಾಲೀಕರ ಸಂಘ ಪ್ರತಿಪಾದಿಸಿದೆ.

ಒಂದು ಕ್ವಿಂಟಲ್ ಭತ್ತವನ್ನು ಹಲ್ಲಿಂಗ್ ಮಾಡಿದರೆ 62ರಿಂದ 65 ಕೆ.ಜಿ. ಅಕ್ಕಿ ಸಿಗುತ್ತದೆ. ವಿದ್ಯುತ್ ಶುಲ್ಕ, ಕಾರ್ಮಿಕರ ಕೂಲಿ ಸೇರಿ ಪ್ರಸ್ತುತ ಪ್ರತಿ ಕ್ವಿಂಟಲ್‌ಗೆ ₹100 ಶುಲ್ಕ ಪಡೆಯಲಾಗುತ್ತದೆ. ವಿದ್ಯುತ್ ಶುಲ್ಕ ಏರಿಕೆಯ ಪರಿಣಾಮ ಹಲ್ಲಿಂಗ್ ದರ ದುಪ್ಪಟ್ಟಾಗುವ ಸಾಧ್ಯತೆ ಇದೆ. ಹಾಗಾಗಿ, ₹200ರಿಂದ ₹300 ಶುಲ್ಕ ವಿಧಿಸಲು ಗಿರಣಿಗಳ ಮಾಲೀಕರು ಮುಂದಾಗಿದ್ದಾರೆ.

ಗಿರಣಿಗಳಲ್ಲೇ ಅಕ್ಕಿ ಖರೀದಿಸಿದರೆ ಗುಣಮಟ್ಟ, ತಳಿಯ ಆಧಾರದಲ್ಲಿ ಪ್ರತಿ ಕ್ವಿಂಟಲ್‌ಗೆ ₹3,300ರಿಂದ ₹4,500 ಪಾವತಿಸಬೇಕಿತ್ತು. ಇನ್ನು ಮುಂದೆ ಸಿದ್ಧ ಅಕ್ಕಿಯ ದರವೂ ಹೆಚ್ಚಳವಾಗಲಿದೆ.

'ಕೂಲಿಕಾರ್ಮಿಕರಸಮಸ್ಯೆ, ಅಧಿಕವಿದ್ಯುತ್‌ಶುಲ್ಕಗಳಿಂದ ರಾಜ್ಯದ ಬಹುತೇಕ ಅಕ್ಕಿಗಿರಣಿಗಳು ನಷ್ಟದಲ್ಲಿವೆ. ಈಗ ವಿದ್ಯುತ್ ಶುಲ್ಕ ಹೆಚ್ಚಳ ಮಾಡಿರುವುದರಿಂದ ಭತ್ತದ ಹಲ್ಲಿಂಗ್ ದರ ಹಾಗೂ ಅಕ್ಕಿಯ ದರ ಹೆಚ್ಚಿಸುವುದು ಅನಿವಾರ್ಯವಾಗಿದೆ. ಹಾಗಾಗಿ, ಅಕ್ಕಿಯ ಬೆಲೆ ಕ್ವಿಂಟಲ್‌ಗೆ ಗರಿಷ್ಠ ₹200ರಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ. ಸಾಗಣೆ ವೆಚ್ಚ, ವ್ಯಾಪಾರಿಗಳ ಲಾಭವೂ ಸೇರಿ ಮುಕ್ತ ಮಾರುಕಟ್ಟೆಯಲ್ಲಿನ ಖರೀದಿ ದರ ಇನ್ನಷ್ಟು ಹೆಚ್ಚಳವಾಗಲಿದೆ' ಎಂದು ಅಕ್ಕಿ ಗಿರಣಿಗಳ ಮಾಲೀಕರ ಸಂಘದ ಅಧ್ಯಕ್ಷ ಪರಣ್ಣ ಮುನವಳ್ಳಿ 'ಪ್ರಜಾವಾಣಿ'ಗೆ ಹೇಳಿದರು.

ಮುಖ್ಯಾಂಶಗಳು

- ₹200ರಿಂದ ₹300 ಶುಲ್ಕ ವಿಧಿಸಲು ಮುಂದಾದ ಗಿರಣಿಗಳ ಮಾಲೀಕರು
- ವಿದ್ಯುತ್ ಶುಲ್ಕ ಏರಿಕೆಯ ಪರಿಣಾಮ ಹಲ್ಲಿಂಗ್ ದರ ದುಪ್ಪಟ್ಟು ಸಂಭವ
- ಮುಕ್ತ ಮಾರುಕಟ್ಟೆಯಲ್ಲಿನ ಖರೀದಿ ದರ ಇನ್ನಷ್ಟು ಏರಿಕೆ



ಹೋಟೆಲ್ ತಿಂಡಿ, ಕಾಫಿ ದರ ಏರಿಕೆಗೆ ಚಿಂತನೆ

'ವಿದ್ಯುತ್ ದರ ಸೇರಿ ದಿನಬಳಕೆ ವಸ್ತುಗಳ ದರ ನಿಯಂತ್ರಿಸದಿದ್ದರೆ ಹೋಟೆಲ್‌ಗಳ ಕಾಫಿ, ತಿಂಡಿ–ತಿನಿಸುಗಳ ದರ ಹೆಚ್ಚಿಸುವುದು ಅನಿವಾರ್ಯವಾಗಲಿದೆ' ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ. ರಾವ್ ತಿಳಿಸಿದ್ದಾರೆ.

ಈ ಬಗ್ಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿರುವ ಅವರು, 'ಹಾಲು, ಅಕ್ಕಿ, ಕಾಫಿಪುಡಿ, ಬೇಳೆಕಾಳುಗಳು, ತರಕಾರಿ ಸೇರಿ ದಿನನಿತ್ಯದ ವಸ್ತುಗಳ ಬೆಲೆಗಳು ಗಗನಕ್ಕೇರಿದ್ದು, ಹೋಟೆಲ್ ಉದ್ಯಮಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಸರ್ಕಾರ ಕೂಡಲೇ ದಿನಬಳಕೆ ವಸ್ತುಗಳ ಬೆಲೆ ನಿಯಂತ್ರಿಸಬೇಕು. ಇಲ್ಲದಿದ್ದರೆ ತಿಂಡಿ–ತಿನಿಸುಗಳ ದರ ಏರಿಕೆ ಮಾಡಬೇಕಾಗುತ್ತದೆ' ಎಂದು ತಿಳಿಸಿದ್ದಾರೆ.

'ಸರ್ಕಾರ ಅಕ್ಕಿ ಮತ್ತು ಹಾಲಿನ ದರ ಎಷ್ಟು ಏರಿಕೆ ಮಾಡುತ್ತದೆ ಎನ್ನುವುದನ್ನು ನೋಡಿ ಕೊಂಡು ಹೋಟೆಲ್‌ಗಳ ತಿಂಡಿ–ತಿನಿಸುಗಳ ದರಗಳ ಏರಿಕೆ ಮಾಡಲಾಗುವುದು' ಎಂದು ಅವರು ಹೇಳಿದ್ದಾರೆ.

ಪರಿಶಿಷ್ಟರಿಗೂ ದೇಗುಲ ಪ್ರವೇಶಕ್ಕೆ ಅಭಿಯಾನ

• ಕೆ.ಓಂಕಾರ ಮೂರ್ತಿ

ಕೋಲಾರ: ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳಲ್ಲಿ ಜಾತಿ, ಭೇದವಿಲ್ಲದೆ 'ಎಲ್ಲರಿಗೂ ಮುಕ್ತ ಪ್ರವೇಶ' ನೀಡುವಂತೆ ಒತ್ತಾಯಿಸುವ ಅಭಿಯಾನ ಜಿಲ್ಲೆಯಲ್ಲಿ ಯಶಸ್ಸು ಕಾಣುತ್ತಿದೆ.

ಈವರೆಗೆ ಜಿಲ್ಲೆಯ ಶೇ 40ರಷ್ಟು ಮುಜರಾಯಿ ದೇಗುಲಗಳ ಪ್ರವೇಶ ದ್ವಾರದಲ್ಲಿ 'ಎಲ್ಲರಿಗೂ ಮುಕ್ತ ಪ್ರವೇಶ' ಎಂಬ ಫಲಕ ನೇತು ಹಾಕಲಾಗಿದೆ. ಇಂದಿಗೂ ಕೆಲ ದೇಗುಲಗಳಲ್ಲಿ ಪರಿಶಿಷ್ಟರಿಗೆ ಪ್ರವೇಶ ನಿರಾಕರಿಸುತ್ತಿರುವ ಹಿನ್ನೆಲೆಯಲ್ಲಿ ಜಾಗೃತಿ ಮೂಡಿಸಲು ಮುಜರಾಯಿ ಇಲಾಖೆ ನೇತೃತ್ವದಲ್ಲಿ ಈ ಅಭಿಯಾನ ಶುರುವಾಗಿದೆ.

ಜಿಲ್ಲೆಯಲ್ಲಿ 1,351 ದೇವಸ್ಥಾನಗಳು ಮುಜರಾಯಿ ಇಲಾಖೆ ವ್ಯಾಪ್ತಿಗೆ ಸೇರಿದ್ದು, 507 ದೇವಸ್ಥಾನಗಳ ಮುಂದೆ ಫಲಕ ಹಾಕಲಾಗಿದೆ.

'ಎ ಹಾಗೂ ಬಿ ದರ್ಜೆಯ ಬಹುತೇಕ ದೇಗುಲಗಳಲ್ಲಿ ಫಲಕ ಅಳವಡಿಸಲಾಗಿದೆ. ಸಿ ದರ್ಜೆಯ ದೇಗುಲಗಳಲ್ಲಿ ಫಲಕ ಹಾಕುವುದನ್ನೂ ಪೂರ್ಣಗೊಳಿಸುತ್ತೇವೆ' ಎನ್ನುತ್ತಾರೆ ಮುಜರಾಯಿ ತಹಶೀಲ್ದಾರ್ ನಾಗವೇಣಿ.

ದಲಿತರಿಗೆ ದೇಗುಲದೊಳಗೆ ಪ್ರವೇಶ ಕೊಡಿಸಲು 2014ರಲ್ಲಿ ಉಪನ್ಯಾಸಕ ಡಾ.ಶಿವಪ್ಪ ಅರಿವು ನೇತೃತ್ವದಲ್ಲಿ 'ಗೃಹ ಪ್ರವೇಶ' ಹೆಸರಿನ ತಂಡ ಅಸ್ತಿತ್ವಕ್ಕೆ ಬಂದಿತು. ಉಪನ್ಯಾಸಕರು, ಶಿಕ್ಷಕರು, ಸಾಹಿತಿಗಳು, ರೈತ ಸಂಘದ ಸದಸ್ಯರು ಸದಸ್ಯರಾಗಿದ್ದಾರೆ. ಅಸ್ಪೃಶ್ಯತೆ ತಡೆಯಲು ಮುಜರಾಯಿ ಇಲಾಖೆಯನ್ನೂ ಎಚ್ಚರಿಸಲು ತಂಡದ ಜಾಗೃತಿ ಅಭಿಯಾನ ಶುರುವಾಯಿತು.



ಬಂಗಾರಪೇಟೆ ತಾಲ್ಲೂಕಿನ ಮಾಗೊಂದಿ ಆಂಜನೇಯ ದೇಗುಲದ ಮುಂದೆ ಬ್ಯಾನರ್

'ನಮ್ಮ ಮನವಿಗೆ ಸ್ಪಂದಿಸಿದ್ದ ಸರ್ಕಾರ ದೇವಾಲಯಗಳ ಮುಂದೆ ಮುಕ್ತ ಪ್ರವೇಶದ ಫಲಕ ಹಾಕಲು 2016ರಲ್ಲೇ ಸೂಚಿಸಿತ್ತು. ಕೆಲ ಅಧಿಕಾರಿಗಳು ನಗರ ದೇವಾಲಯಗಳ ಮುಂದೆ ಫಲಕ ಹಾಕಿ ಸುಮ್ಮನಾದರು. ಅಸ್ಪೃಶ್ಯತೆ ಹೆಚ್ಚಿರುವ ಹಳ್ಳಿಗಳಲ್ಲಿ ಫಲಕ ಹಾಕಲಿಲ್ಲ' ಎಂದು ಡಾ.ಶಿವಪ್ಪ ಹೇಳಿದರು.

> **ಕೆಲ ಗ್ರಾಮಗಳ ದೇಗುಲಗಳಲ್ಲಿ ಮುಕ್ತ ಪ್ರವೇಶದ ಫಲಕ ಹಾಕಲು ಬಾಕಿ ಇದೆ. ಆಯಾ ತಾಲ್ಲೂಕಿನ ತಹಶೀಲ್ದಾರ್, ದೇಗುಲದ ಅರ್ಚಕರಿಗೆ ತಿಳಿಸಲಾಗಿದೆ**
> **ನಾಗವೇಣಿ,** ತಹಶೀಲ್ದಾರ್, ಮುಜರಾಯಿ ಇಲಾಖೆ, ಕೋಲಾರ

> **ಹಲವಾರು ದೇಗುಲಗಳಲ್ಲಿ ಇವತ್ತಿಗೂ ದಲಿತರಿಗೆ ಪ್ರವೇಶ ಇಲ್ಲ. ಜಿಲ್ಲೆಯ ಎಲ್ಲಾ ದೇಗುಲಗಳಲ್ಲಿ ದಲಿತರಿಗೆ ಪ್ರವೇಶ ಕೊಡಿಸುವವರೆಗೆ ನಮ್ಮ ಅಭಿಯಾನ ನಿಲ್ಲಲ್ಲ**
> **ಡಾ.ಶಿವಪ್ಪ ಅರಿವು,** 'ಗೃಹಪ್ರವೇಶ' ತಂಡದ ಮುಂದಾಳು, ಕೋಲಾರ

ಉಳ್ಳೇರಹಳ್ಳಿ ಪ್ರಕರಣದ ಬಳಿಕ ದೇಗುಲಗಳ ಮುಕ್ತ ಪ್ರವೇಶಕ್ಕೆ ಮತ್ತಷ್ಟು ಒತ್ತಡ ಹೆಚ್ಚಿತು. ಆಗ ಅಧಿಕಾರಿಗಳು ದೇಗುಲದ ಬೀಗ ಒಡೆದು ಪರಿಶಿಷ್ಟ ಜಾತಿಯ ಬಾಲಕ ಹಾಗೂ ಆತನ ತಾಯಿ ಶೋಭಾ ಅವರಿಗೆ ದೇವರ ದರ್ಶನ ಮಾಡಿಸಿದ್ದರು.

ಮುಜರಾಯಿ ಇಲಾಖೆ ವ್ಯಾಪ್ತಿಗೆ ಸೇರದ ದೇಗುಲಗಳಲ್ಲೂ ಸ್ವಯಂಪ್ರೇರಿತವಾಗಿ ಫಲಕ ಹಾಕಬೇಕು ಎಂದು ಹಿಂದಿನ ಜಿಲ್ಲಾಧಿಕಾರಿ ಸೂಚಿಸಿದ್ದರು.

ಸ್ಮಶಾನಕ್ಕೆ ಜಮೀನು: ಬಹುತೇಕ ನೀಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಾದ್ಯಂತ ಬಹುತೇಕ ಎಲ್ಲ ಜನವಸತಿ ಗ್ರಾಮಗಳಿಗೆ ಸ್ಮಶಾನ ಭೂಮಿ ಒದಗಿಸಲಾಗಿದೆ. ಐದು ಕಡೆಗಳಲ್ಲಿ ಮಾತ್ರವೇ ಪಹಣಿಯಲ್ಲಿ ದಾಖಲಿಸಿ ಸ್ಥಳೀಯ ಸಂಸ್ಥೆಗಳ ಸುಪರ್ದಿಗೆ ಜಮೀನು ಒಪ್ಪಿಸಬೇಕಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ಮೊಹಮ್ಮದ್ ಇಕ್ಬಾಲ್ ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಜಿ.ನರೇಂದರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. ಪ್ರಮಾಣಪತ್ರ ಸಲ್ಲಿಸಿದ ಸರ್ಕಾರಿ ವಕೀಲ ಕಿರಣ್ ಕುಮಾರ್, 'ಎರಡು ಕಡೆ ಒತ್ತುವರಿ ತೆರವುಗೊಳಿಸಬೇಕಿದೆ. ಐದು ಕಡೆ ಪಹಣಿಯಲ್ಲಿ ದಾಖಲಿಸಬೇಕಿದೆ. ನಾಲ್ಕು ಕಡೆ ಕಂದಾಯ ಇಲಾಖೆಯಿಂದ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಬೇಕಿದೆ' ಎಂದು ವಿವರಿಸಿದರು.

ವರದಿ ದಾಖಲಿಸಿಕೊಂಡ ನ್ಯಾಯಪೀಠ, 'ಮುಂದಿನ ವಿಚಾರಣೆ ವೇಳೆಗೆ ಜಮೀನು ನೀಡಿಕೆ ಕುರಿತ ಅನುಪಾಲನಾ ವರದಿಯನ್ನು ಕೋರ್ಟ್‌ಗೆ ಸಲ್ಲಿಸಬೇಕು. ಇಲ್ಲವಾದಲ್ಲಿ ಸಂಬಂಧಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಸಿ ವಿಚಾರಣೆಯನ್ನು ಜುಲೈ 15ಕ್ಕೆ ಮುಂದೂಡಿತು. ಹಲವು ಜಿಲ್ಲಾಧಿಕಾರಿಗಳು ಖುದ್ದು ಹಾಜರಿದ್ದರು.

ಲೋಕಾಯುಕ್ತ ಬಲೆಗೆ ತಹಶೀಲ್ದಾರ್

ಪ್ರಜಾವಾಣಿ ವಾರ್ತೆ

ಪಾಂಡವಪುರ: ತಾಲ್ಲೂಕಿನ ದೊಡ್ಡಬೋಗನಹಳ್ಳಿ-ಗುಮ್ಮನಹಳ್ಳಿ ವೃತ್ತದ ಗ್ರಾಮ ಲೆಕ್ಕಾಧಿಕಾರಿ ಮರಿಸ್ವಾಮಿ ಅವರಿಂದ, ತಮ್ಮ ಕಚೇರಿಯಲ್ಲಿ ₹ 40 ಸಾವಿರ ಲಂಚ ಪಡೆಯುವಾಗ ತಹಶೀಲ್ದಾರ್ ಕೆ.ಸಿ.ಸೌಮ್ಯಾ ಗುರುವಾರ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದರು.


ಸೌಮ್ಯಾ

'ಬೇರೆಡೆಗೆ ನಿಯೋಜಿಸಲು ಹಾಗೂ ಕೆಲವು ಕಡತಗಳಿಗೆ ಸಹಿ ಹಾಕಲು ತಹಶೀಲ್ದಾರ್ ₹ 40 ಸಾವಿರ ಕೇಳಿದ್ದಾರೆ' ಎಂದು ಮರಿಸ್ವಾಮಿ ಬುಧವಾರ ನೀಡಿದ್ದ ದೂರು ಆಧರಿಸಿ ಸಂಜೆ 6 ಗಂಟೆಗೆ ಲೋಕಾಯುಕ್ತ ಡಿವೈಎಸ್‌ಪಿ ಸುನೀಲ್ ಕುಮಾರ್ ನೇತೃತ್ವದ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು. ಹಣದ ಸಮೇತ ಸೌಮ್ಯಾ ಅವರನ್ನು ವಶಕ್ಕೆ ಪಡೆದರು.

ವಿಮಾನದಲ್ಲೇ ಚಿಕಿತ್ಸೆ ನೀಡಿದ ಡಾ.ನಿರಂತರ ಗಣೇಶ್

ಪ್ರಜ್ಞಾಹೀನರಾದ ಮಹಿಳೆ: ತುರ್ತು ಭೂಸ್ಪರ್ಶ ಮಾಡಿದ ವಿಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನಿಂದ ದೆಹಲಿಗೆ ಹೊರಟಿದ್ದ ಇಂಡಿಗೋ ವಿಮಾನದಲ್ಲಿ ಮಹಿಳೆಯೊಬ್ಬರು ಪ್ರಜ್ಞಾಹೀನರಾಗಿದ್ದರಿಂದ ವಿಮಾನ ಅರ್ಧ ಗಂಟೆ ಮೊದಲೇ ಭೂಸ್ಪರ್ಶ ಮಾಡಬೇಕಾಯಿತು. ಬೆಂಗಳೂರಿನ ವೈದ್ಯ ಡಾ.ನಿರಂತರ ಗಣೇಶ್ ವಿಮಾನದಲ್ಲಿಯೇ ಪ್ರಥಮ ಚಿಕಿತ್ಸೆ ನೀಡಿ ಮಹಿಳೆ ಚೇತರಿಸಿಕೊಳ್ಳುವಂತೆ ಮಾಡಿದರು.

ಬುಧವಾರ ಮಧ್ಯಾಹ್ನ 12ಕ್ಕೆ ವಿಮಾನ ಹೊರಟಿತ್ತು. 1.30ರ ಹೊತ್ತಿಗೆ ರೋಸಮ್ಮ (60) ಅವರು ಅಧಿಕ ರಕ್ತದೊತ್ತಡ ಮತ್ತು ಮಧುಮೇಹದಿಂದಾಗಿ ಇದ್ದಕ್ಕಿದ್ದಂತೆ ಪ್ರಜ್ಞಾಹೀನರಾದರು. ಡಾ.ನಿರಂತರ ಗಣೇಶ್ ಅವರು ವಿಮಾನದಲ್ಲಿದ್ದ ಪ್ರಥಮ ಚಿಕಿತ್ಸೆಯ ಕಿಟ್ ಬಳಸಿಕೊಂಡು ಚಿಕಿತ್ಸೆ ನೀಡಿ ಹೃದಯದ ರಕ್ತನಾಳವನ್ನು ಪುನರುಜ್ಜೀವನಗೊಳಿಸಿದರು. 2.45ಕ್ಕೆ ದೆಹಲಿ ವಿಮಾನ ನಿಲ್ದಾಣದಲ್ಲಿ ಇಳಿಯಬೇಕಿದ್ದ ವಿಮಾನವನ್ನು 2.15ಕ್ಕೆ ದೆಹಲಿಯಲ್ಲಿ ಭೂಸ್ಪರ್ಶ ಮಾಡಬೇಕಾಯಿತು. ರೋಸಮ್ಮರನ್ನು ಆಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಕಳುಹಿಸಲಾಯಿತು.

'ಕೇರಳದ ರೋಸಮ್ಮ ಮತ್ತು ಅವರ ಪತಿ ವಿಮಾನದಲ್ಲಿದ್ದರು. ರೋಸಮ್ಮ ಪ್ರಜ್ಞಾಹೀನ ಸ್ಥಿತಿಗೆ ಹೋದಾಗ ಇಂಡಿಗೋ ಸಿಬ್ಬಂದಿಯ ಸಹಕಾರದಿಂದ ಪ್ರಥಮ ಚಿಕಿತ್ಸೆ ನೀಡಿ ಜೀವ ಉಳಿಸಲು ಸಾಧ್ಯವಾಯಿತು' ಎಂದು ಡಾ.ನಿರಂತರ ಗಣೇಶ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.


ಬೆಂಗಳೂರಿನಿಂದ ದೆಹಲಿಗೆ ಹೊರಟಿದ್ದ ಇಂಡಿಗೋ ವಿಮಾನದಲ್ಲಿ ಪ್ರಜ್ಞಾಹೀನರಾಗಿದ್ದ ಮಹಿಳೆಯೊಬ್ಬರು ಪ್ರಥಮ ಚಿಕಿತ್ಸೆಯ ಬಳಿಕ ಚೇತರಿಸಿಕೊಂಡರು



ಬಕ್ರೀದ್‌ಗೆ ಬಂದಿಹೆವು ...

ಬಕ್ರೀದ್ ಹಬ್ಬಕ್ಕೆ ಒಂದು ವಾರ ಇರುವಾಗಲೇ ಬೆಂಗಳೂರಿನ ಚಾಮರಾಜ ಪೇಟೆಯ ಈದ್ಗಾ ಮೈದಾನದ 'ಮೇಕೆ, ಕುರಿ ಮಾರುಕಟ್ಟೆ'ಯಲ್ಲಿ ವಿವಿಧ ಜಿಲ್ಲೆಗಳ, ವಿವಿಧ ತಳಿಗಳ ಮೇಕೆ, ಕುರಿಗಳನ್ನು ಕುರಿಗಾಹಿಗಳು ಹಾಗೂ ವ್ಯಾಪಾರಿಗಳು ಮಾರಾಟಕ್ಕೆ ಇಟ್ಟಿದ್ದಾರೆ

–ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ನೈಸರ್ಗಿಕ ವಿಕೋಪ ನಿರ್ವಹಣೆ: ಸಂಪುಟ ಉಪಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರ, ಪ್ರವಾಹ, ಇತರ ನೈಸರ್ಗಿಕ ವಿಕೋಪಗಳಿಂದ ಉದ್ಭವಿಸಬಹುದಾದ ಪರಿಸ್ಥಿತಿ ಪರಾಮರ್ಶಿಸಿ, ನಿಭಾಯಿಸಲು ಹಾಗೂ ಇದಕ್ಕೆ ಅಗತ್ಯವಾದ ನೀತಿ ರೂಪಿಸಲು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ಅಧ್ಯಕ್ಷತೆಯಲ್ಲಿ ಸಂಪುಟ ಉಪಸಮಿತಿ ರಚಿಸಲಾಗಿದೆ.

ಸಚಿವರಾದ ಸತೀಶ ಜಾರಕಿಹೊಳಿ, ಪ್ರಿಯಾಂಕ್ ಖರ್ಗೆ, ಎನ್. ಚಲುವರಾಯ ಸ್ವಾಮಿ, ಎಸ್.ಎಸ್. ಮಲ್ಲಿಕಾರ್ಜುನ ಮತ್ತು ಕೆ.ಎನ್. ರಾಜಣ್ಣ ಅವರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ.

ಪ್ರಯಾಣಿಕರ ಜತೆ ಸೌಜನ್ಯದಿಂದ ವರ್ತಿಸಿ: ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸ್ ಪ್ರಯಾಣಿಕರ ಜೊತೆಗೆ ಸೌಜನ್ಯದಿಂದ ವರ್ತಿಸಬೇಕು. ಇಲ್ಲದೇ ಇದ್ದರೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಕೆಎಸ್‌ಆರ್‌ಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕರು, ಬಸ್‌ಗಳ ಚಾಲಕರು ಮತ್ತು ನಿರ್ವಾಹಕರಿಗೆ ಎಚ್ಚರಿಕೆ ನೀಡಿದ್ದಾರೆ.

ಮಹಿಳೆಯರಿಗೆ ಸಾರಿಗೆ ಸಂಸ್ಥೆಗಳ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು 'ಶಕ್ತಿ' ಯೋಜನೆಯನ್ನು ಜಾರಿಗೊಳಿಸಲಾಗಿದೆ. ಇದರ ಅನುಷ್ಠಾನವೂ ಯಶಸ್ವಿಯಾಗಿ ನಡೆಯುತ್ತಿದೆ. ಆದರೆ, ಕೆಲವೊಂದು ಘಟನೆಗಳು ಈ ಮಹತ್ವದ ಯೋಜನೆಯ ಬಗ್ಗೆ ತಪ್ಪು ಅಭಿಪ್ರಾಯ ಬರಲು ಕಾರಣವಾಗುತ್ತಿವೆ. ನಿಗದಿತ ಬಸ್‌ನಿಲ್ದಾಣ, ನಿಲುಗಡೆ ಸ್ಥಳಗಳಲ್ಲಿ ಬಸ್ ನಿಲ್ಲಿಸದೇ ಇರುವುದು, ಉಚಿತವಾಗಿ ಪ್ರಯಾಣಿಸುವವರ ಬಗ್ಗೆ ಅಪಹಾಸ್ಯ ಮಾಡುವುದು, ಅಗೌರವದಿಂದ ನಡೆದುಕೊಳ್ಳುವುದು ಮುಂತಾದ ಪ್ರಕರಣಗಳು ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿವೆ.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಈ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿದ್ದು, ಸಿಬ್ಬಂದಿಗೆ ಸೂಕ್ತ ನಿರ್ದೇಶನ ನೀಡುವಂತೆ ಸೂಚಿಸಿದ್ದರು. ಅದನ್ನು ಆಧರಿಸಿ ಸುತ್ತೋಲೆ ಹೊರಡಿಸಲಾಗಿದೆ. 'ಪ್ರಯಾಣಿಕರನ್ನು ನಿಗದಿತ ಸ್ಥಳಗಳಲ್ಲಿ ಹತ್ತಿಸುವುದು, ಇಳಿಸುವುದು ಮಾಡಬೇಕು. ಸೌಜನ್ಯದಿಂದ ವರ್ತಿಸಬೇಕು. ಅಗೌರವದಿಂದ ವರ್ತಿಸುವ ಪ್ರಕರಣಗಳು ನಡೆದರೆ ಶಿಸ್ತುಕ್ರಮ ಅನಿವಾರ್ಯ' ಎಂದು ಎಚ್ಚರಿಕೆ ನೀಡಲಾಗಿದೆ.

ಕಮಿಷನರ್ ಕಚೇರಿಗೆ ಡಿಜಿ-ಐಜಿಪಿ ಭೇಟಿ • ಪೊಲೀಸ್ ಅಧಿಕಾರಿಗಳ ಸಭೆ

ಸುಳ್ಳು ಸುದ್ದಿ: ಕಾನೂನು ಕ್ರಮಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರದ ಯೋಜನೆಗಳ ಬಗ್ಗೆ ಅಪಪ್ರಚಾರ ಮಾಡುವ ಸುಳ್ಳು ಸುದ್ದಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಇಂಥ ಸುದ್ದಿಗಳನ್ನು ಸೃಷ್ಟಿಸುವವರು ಹಾಗೂ ಹರಡಿಸುವವರನ್ನು ಪತ್ತೆ ಮಾಡಿ ಕಾನೂನು ಕ್ರಮ ಜರುಗಿಸಿ' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ-ಐಜಿಪಿ) ಅಲೋಕ್ ಮೋಹನ್ ಅವರು ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇನ್ಫೆಂಟ್ರಿ ರಸ್ತೆಯಲ್ಲಿರುವ ಪೊಲೀಸ್ ಕಮಿಷನರ್ ಕಚೇರಿಗೆ ಗುರುವಾರ ಭೇಟಿ ನೀಡಿದ್ದ ಅಲೋಕ್ ಮೋಹನ್, ಪೊಲೀಸ್ ಅಧಿಕಾರಿಗಳ ಸಭೆ ನಡೆಸಿ ಕೆಲಸದ ಕಾರ್ಯವೈಖರಿ ಪರಿಶೀಲಿಸಿದರು.

'ದಟ್ಟಣೆ ನಿಯಂತ್ರಣಕ್ಕೆ ಕ್ರಮ'

'ನಗರದ ಹಲವು ರಸ್ತೆಗಳಲ್ಲಿ ಸಂಚಾರ ದಟ್ಟಣೆ ಹೆಚ್ಚಿದೆ. ಅದಕ್ಕೆ ಕಾರಣವೇನು? ಪರಿಹಾರವೇನು? ಎಂಬ ಬಗ್ಗೆ ವರದಿ ಸಿದ್ಧಪಡಿಸಬೇಕು. ಮೂಲ ಸೌಕರ್ಯಗಳ ಅಗತ್ಯವಿದ್ದರೆ ಪ್ರಸ್ತಾವ ಸಿದ್ಧಪಡಿಸಿ' ಎಂದು ಅಲೋಕ್ ಮೋಹನ್ ಸಂಚಾರ ಪೊಲೀಸ್ ಅಧಿಕಾರಿಗಳಿಗೆ ಹೇಳಿದರು.

'ಕೆಲವರು ಸಾಮಾಜಿಕ ಮಾಧ್ಯಮಗಳಲ್ಲಿ ನಕಲಿ ಖಾತೆಗಳನ್ನು ತೆರೆದು ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಅವರನ್ನು ಪತ್ತೆ ಮಾಡಿ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಿ' ಎಂದು ಡಿಜಿ-ಐಜಿಪಿ ಅವರು ಸಭೆಯಲ್ಲಿ ಹೇಳಿರುವುದಾಗಿ ಗೊತ್ತಾಗಿದೆ.

'ಪೊಲೀಸ್ ವ್ಯವಸ್ಥೆ ಜನಸ್ನೇಹಿಯಾಗಬೇಕು. ಪ್ರತಿ ದಿನವೂ ಡಿಸಿಪಿಗಳು ಹಾಗೂ ಎಸಿಪಿಗಳು ಠಾಣೆಗಳಿಗೆ ಭೇಟಿ ನೀಡಬೇಕು. ಗಸ್ತು ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಪ್ರತಿ ಠಾಣೆಗಳಲ್ಲಿ ಹಿರಿಯ ಅಧಿಕಾರಿಗಳ ಸಂಪರ್ಕ ಸಂಖ್ಯೆ ಫಲಕ ಹಾಕಬೇಕು. ಫಲಕ ಹಾಕದ ಠಾಣೆ ಇನ್‌ಸ್ಪೆಕ್ಟರ್ ವಿರುದ್ಧ ಕ್ರಮ ಜರುಗಿಸಬೇಕು.'

'ಬೆಂಗಳೂರಿನಲ್ಲಿ ರೌಡಿ ಚಟುವಟಿಕೆಗಳನ್ನು ಹತ್ತಿಕ್ಕಬೇಕು. ಯಾರಾದರೂ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುವ ಮಾಹಿತಿ ಸಿಕ್ಕರೆ, ಅಂಥ ರೌಡಿಯನ್ನು ವಶಕ್ಕೆ ಪಡೆದು ಮುಚ್ಚಳಿಕೆ ಬರೆಸಿಕೊಳ್ಳಬೇಕು. ಬಾಕಿ ಪ್ರಕರಣಗಳ ತನಿಖೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಬೇಕು' ಎಂದೂ ಡಿಜಿ-ಐಜಿಪಿ ನಿರ್ದೇಶನ ನೀಡಿರುವುದಾಗಿ ತಿಳಿದುಬಂದಿದೆ.

ಸಭೆಯಲ್ಲಿ ಕಮಿಷನರ್ ಬಿ. ದಯಾನಂದ್, ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ಇದ್ದರು.

ಶುಕ್ರವಾರ, ಜೂನ್ 23, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 173 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ
ಬಹುಬೇಡಿಕೆಯ ನಟ ಫಹಾದ್ ಫಾಸಿಲ್ 'ಧೂಮಂ' ಪ್ರವೇಶಿಸಿದ್ದು ಹೇಗೆ?

ಆಳ-ಅಗಲ
ಸಮುದ್ರದಾಳಕ್ಕೆ ಇಳಿದ 'ಟೈಟನ್' ಇರುವುದೆಲ್ಲಿ?

'ಅಮೂಲ್ ಗರ್ಲ್' ಸೃಷ್ಟಿಕರ್ತ ದಾಕುನ್ಹಾ ನಿಧನ 11

ನೌಕರರಿಗೆ ಖಾತರಿ ಮೊತ್ತದ ಪಿಂಚಣಿ? 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
63,239 ▼	18,771 ▼	₹60,670 (ಬೆಂಗಳೂರು) ▼	₹71,300 (ಬೆಂಗಳೂರು) ▼	81.96 ▲

ಸ್ಪೀಕರ್ ಖಾದರ್ ನಡೆಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಗೆ ನೂತನವಾಗಿ ಆಯ್ಕೆಯಾದ ಶಾಸಕರಿಗೆ ಇದೇ 26ರಿಂದ ಹಮ್ಮಿಕೊಂಡಿರುವ ಮೂರು ದಿನಗಳ ತರಬೇತಿ ಶಿಬಿರದಲ್ಲಿ ಸ್ಫೂರ್ತಿದಾಯಕ ಭಾಷಣ ಮಾಡಲು ಆಯ್ಕೆ ಮಾಡಿದ ಸಂಪನ್ಮೂಲ ವ್ಯಕ್ತಿಗಳ ಬಗ್ಗೆ ತೀವ್ರ ಆಕ್ಷೇಪ ಎದ್ದಿದೆ.

ತರಬೇತಿ ಶಿಬಿರ ಆಯೋಜಿಸಿರುವ ಕುರಿತು ಬುಧವಾರ ಮಾಹಿತಿ ನೀಡಿದ್ದ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, 'ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ, ಜಮಾತೆ ಇಸ್ಲಾಮಿ ಹಿಂದ್‌ನ ಮಹಮ್ಮದ್ ಕುಂಞಿ, ಗುರುರಾಜ ಕರಜಗಿ, ರಾಜಯೋಗಿನಿ ಬ್ರಹ್ಮಕುಮಾರಿ ಆಶಾ ದೀದಿ, ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ ಗುರೂಜಿ ಅವರನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಆಹ್ವಾನಿಸಲಾಗುವುದು' ಎಂದು ತಿಳಿಸಿದ್ದರು.

ಆ ಬೆನ್ನಲ್ಲೆ, ಧಾರ್ಮಿಕ ಪ್ರತಿನಿಧಿಗಳ, ವಿವಾದಾಸ್ಪದ ವ್ಯಕ್ತಿಗಳ ಪ್ರವಚನವನ್ನು ಕೈ ಬಿಡಬೇಕು ಎಂದು ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ವಲಯ ಒಕ್ಕೊರಲಿನಿಂದ ಆಗ್ರಹಿಸಿದೆ.

7ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕೇಂದ್ರ ಸಚಿವಾಲಯದ ಸೂಚನೆ: ಖರೀದಿ ವೆಚ್ಚದ ಮೇಲೆ ಶುಲ್ಕದ ಹೊರೆ

ಕಲ್ಲಿದ್ದಲು ಬರ; ವಿದ್ಯುತ್ 'ಬರೆ'

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ವಿದ್ಯುತ್ ಉತ್ಪಾದನೆಗೆ ಬಳಸುವ ಕಲ್ಲಿದ್ದಲನ್ನು ಕೇಂದ್ರ ಸರ್ಕಾರ ಆಮದು ಮಾಡಿಕೊಳ್ಳಲು ಮುಂದಾಗಿದ್ದು ಎಸ್ಕಾಂಗಳ ಆರ್ಥಿಕ ಹೊರೆ ಹೆಚ್ಚಿಸಿರುವುದಲ್ಲದೇ, ವಿದ್ಯುತ್ ಗ್ರಾಹಕರಿಗೂ ಸುಡುವ ಬರೆ ಹಾಕಿದೆ.

2022 ಡಿಸೆಂಬರ್ ಮುನ್ನ ಕೇಂದ್ರ ವಿದ್ಯುತ್ ಸಚಿವಾಲಯದ ಸೂಚನೆ, ಅದರ ಅನುಸಾರ 'ವಿದ್ಯುತ್ ಮೇಲ್ಮನವಿ ನ್ಯಾಯಮಂಡಳಿ'ಯ (ಎಟಿಇ) ತೀರ್ಪು ಆಧರಿಸಿ ಬಂದ ಆದೇಶಗಳು ಎಸ್ಕಾಂಗಳ ಪಾಲಿಗೆ ಹೊರೆಯಾಯಿತು.ಈ ಹೊರೆಯನ್ನು ಗ್ರಾಹಕರಿಗೆ ಹಂಚಬೇಕಾದ ಅನಿವಾರ್ಯ, ಅದರ ಮಧ್ಯೆಯೇ ದರ ಪರಿಷ್ಕರಣೆ, ಬಾಕಿ ಮೊತ್ತದ ಹೊಂದಾಣಿಕೆ ಎಲ್ಲವೂ ಜೂನ್ ತಿಂಗಳ ವಿದ್ಯುತ್ ಬಿಲ್‌ನಲ್ಲಿ ಜೋಡಣೆಯಾಗಿ, ಗ್ರಾಹಕರು ಆಘಾತಕ್ಕೊಳಗಾಗುವಷ್ಟು ಬಿಲ್ ಮೊತ್ತ ಬಂತು. ಕೇಂದ್ರ, ಎಟಿಇ ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ) ಕಾಲಕಾಲಕ್ಕೆ ಕೈಗೊಂಡ ಲಿಖಿತ ನಿರ್ಣಯ, ಆದೇಶಗಳು ವಾಸ್ತವ ಸಂಗತಿಯ ಮೇಲೆ ಬೆಳಕು ಚೆಲ್ಲುತ್ತವೆ.

ಕೇಂದ್ರ ಸರ್ಕಾರ ಆಮದು ಮಾಡಿಕೊಳ್ಳುತ್ತಿರುವ ಕಲ್ಲಿದ್ದಲು ಮೂರು ಪಟ್ಟು ಹೆಚ್ಚು ದುಬಾರಿಯಾಗಿದೆ. ದೇಶಿಯವಾಗಿ ಖರೀದಿಸುವ ಪ್ರತಿ ಮೆಟ್ರಿಕ್ ಟನ್ ಕಲ್ಲಿದ್ದಲು ಅಂದಾಜು ₹5 ಸಾವಿರಕ್ಕೆ ಲಭ್ಯವಿದ್ದರೆ, ಆಮದು ಮಾಡಿಕೊಳ್ಳುವ ಕಲ್ಲಿದ್ದಲು ಅದೇ ಹೊತ್ತಿಗೆ ₹15 ಸಾವಿರದಷ್ಟಿದೆ. ಹಲವು ಬಾರಿ ಈ ದರ ಏರುಪೇರಾಗುತ್ತದೆ. ಇದು ಹೊರೆಯಾಗಿ ಪರಿಣಮಿಸುತ್ತಿದೆ ಎನ್ನುತ್ತವೆ ಇಂಧನ ಇಲಾಖೆಯ ಮೂಲಗಳು.

ಕೇಂದ್ರ ಸರ್ಕಾರ ಪ್ರಸ್ತುತ ಆಮದು ಮಾಡಿಕೊಳ್ಳುತ್ತಿರುವ ಕಲ್ಲಿದ್ದಲಿನಿಂದಾಗಿ ದೇಶದ ಎಲ್ಲ ಸರ್ಕಾರಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಶೇ 30ರಷ್ಟು ಆರ್ಥಿಕ ಹೊರೆಯಾಗುತ್ತಿದೆ.

ಆಮದು ಮಾಡಿಕೊಳ್ಳುತ್ತಿರುವ ಕಲ್ಲಿದ್ದಲನ್ನು ದೇಶಿಯವಾಗಿ ಉತ್ಪಾದಿಸಲಾದ ಕಲ್ಲಿದ್ದಲು ಜತೆ ಕನಿಷ್ಠ ಶೇ 20ರಷ್ಟು ಮಿಶ್ರಣ ಮಾಡಲೇಬೇಕು ಎಂದು ಕೇಂದ್ರ ವಿದ್ಯುತ್ ಸಚಿವಾಲಯವು ಕರ್ನಾಟಕ ವಿದ್ಯುತ್ ನಿಗಮ ಸೇರಿದಂತೆ ರಾಜ್ಯಗಳಲ್ಲಿನ ಎಲ್ಲ ವಿದ್ಯುತ್ ಉತ್ಪಾದನೆ ಸಂಸ್ಥೆಗಳಿಗೆ ಸೂಚನೆ ನೀಡಿದೆ. ಹೆಚ್ಚುವರಿ ಕಲ್ಲಿದ್ದಲು ಬಳಸಿದಷ್ಟು ಗ್ರಾಹಕರಿಗೂ ಹೊರೆಯಾಗಲಿದ್ದು, ಇಂಧನ ವೆಚ್ಚ ಹೆಚ್ಚಳಕ್ಕೆ ಕಾರಣವಾಗುತ್ತಿದೆ ಎಂಬುದು ಅಧಿಕಾರಿಗಳ ವಿಶ್ಲೇಷಣೆ.

ಕಲ್ಲಿದ್ದಲು ಖರೀದಿಯ ವೆಚ್ಚವನ್ನು ಎಸ್ಕಾಂಗಳು ಮುಂಚಿತವಾಗಿಯೇ ಕೇಂದ್ರ ಸರ್ಕಾರದ ವಿದ್ಯುತ್ ಇಲಾಖೆಗೆ ಪಾವತಿಸುತ್ತವೆ. ಈ ವೆಚ್ಚವನ್ನು ಗ್ರಾಹಕರಿಂದಲೇ ಕಡ್ಡಾಯವಾಗಿ ವಸೂಲಿ ಮಾಡಬೇಕು ಎನ್ನುವ ನಿಯಮವನ್ನು ಕೇಂದ್ರ ಸರ್ಕಾರ ರೂಪಿಸಿದೆ. ಈ ನಿಯಮಕ್ಕೆ ಬದ್ಧವಾಗಿಯೇ ರಾಜ್ಯದಲ್ಲಿನ ಎಸ್ಕಾಂಗಳು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆಇಆರ್‌ಸಿಗೆ) ನಿರ್ದೇಶನದಂತೆ ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ (ಎಫ್‌ಪಿಪಿಸಿಎ) ಶುಲ್ಕವನ್ನು ಪಡೆಯುತ್ತವೆ.

10ನೇ ಪುಟ ನೋಡಿ

ವಿದ್ಯುತ್ ದರ ಹೆಚ್ಚಳ: ಕಾರಣ ಹಲವು

1 ಪ್ರತಿವರ್ಷ ಕೆಇಆರ್‌ಸಿ ಸಾಮಾನ್ಯವಾಗಿ ಮಾರ್ಚ್ 3೦ಗಳಲ್ಲಿ ವಿದ್ಯುತ್ ದರ ಪರಿಷ್ಕರಿಸುತ್ತಿತ್ತು. ಆದರೆ, ವಿಧಾನಸಭೆ ಚುನಾವಣೆ ಕಾರಣಕ್ಕಾಗಿ ವಿಳಂಬ ಮಾಡಿ, ಮೇ 12ರಂದು ಪ್ರತಿ ಯೂನಿಟ್‌ಗೆ 70 ಪೈಸೆಯಷ್ಟು ಹೆಚ್ಚಳ ಮಾಡಿ ಆದೇಶ ಹೊರಡಿಸಿತು. ಜತೆಗೆ ಏಪ್ರಿಲ್ 1ರಿಂದಲೇ ಪೂರ್ವಾನ್ವಯ ಆಗುವಂತೆ ಜಾರಿಗೊಳಿಸಿತು. ಇದರಿಂದ, ಎರಡು ತಿಂಗಳ ಹೆಚ್ಚುವರಿ ಬಿಲ್ ಜೂನ್‌ನಲ್ಲಿ ಸೇರಿತು.

2 ಜತೆಗೆ, ಈ ಮೊದಲು ನಾಲ್ಕು ಸ್ಲ್ಯಾಬ್‌ಗಳಿದ್ದವು. ಅದನ್ನು ಕೆಇಆರ್‌ಸಿ ಎರಡು ಸ್ಲ್ಯಾಬ್‌ಗೆ ಬದಲಿಸಿತು. ಹಳೆ ಸ್ಲ್ಯಾಬ್‌ಗಳ ಅನ್ವಯ 0ದಿಂದ 50 ಯೂನಿಟ್‌ಗೆ ₹4.15, 50ರಿಂದ 100ವರೆಗೆ ₹5.60, 100ರಿಂದ 200 ಯೂನಿಟ್‌ವರೆಗೆ ₹7.15 ಹಾಗೂ 250 ಯೂನಿಟ್‌ಗೂ ಹೆಚ್ಚು ಇದ್ದರೆ ₹8.20 ನಿಗದಿಪಡಿಸಲಾಗಿತ್ತು. ಆದರೆ, ಹೊಸ ಸ್ಲ್ಯಾಬ್ ಅನ್ವಯ 0–100 ಯೂನಿಟ್‌ಗೆ ₹4.75, 101 ಯೂನಿಟ್‌ಗೆ ಮೇಲ್ಪಟ್ಟು ಎಷ್ಟೇ ಬಳಕೆ ಮಾಡಿದರೂ ಪ್ರತಿಯೂನಿಟ್‌ಗೆ ₹7 ನಿಗದಿಪಡಿಸಲಾಯಿತು.

3 ಕೇಂದ್ರ ವಿದ್ಯುತ್ ಸಚಿವಾಲಯ ನೀಡಿದ್ದ ಆದೇಶದ ಅನ್ವಯ ಎಫ್‌ಪಿಪಿಸಿಎ ಅನ್ನು ಡಿಸೆಂಬರ್‌ನಿಂದಲೇ ವಸೂಲಿ ಮಾಡುವಂತೆ ಎಸ್ಕಾಂಗಳಿಗೆ ಸೂಚಿಸಲಾಗಿತ್ತು. ಆದರೆ, ರಾಜಕೀಯ ಕಾರಣಗಳಿಗಾಗಿ ವಿಧಾನಸಭೆ ಚುನಾವಣೆ ಮುಗಿಯುವವರೆಗೆ ಮುಂದೂಡಿಕೆಯಾಯಿತು. ಈ ಮೊತ್ತ ಮಾರ್ಚ್‌ನಿಂದ ಅನ್ವಯವಾಗುವಂತೆ ಜಾರಿಗೊಳಿಸಿತು. ಈ ಮೂರು ತಿಂಗಳ ಹೆಚ್ಚುವರಿ ಶುಲ್ಕ ಸಹ ಜೂನ್‌ನಲ್ಲಿ ಸೇರಿಕೊಂಡಿತು.



4 ತಾಂತ್ರಿಕ ಸಮಸ್ಯೆ: ಬಿಲ್ಲಿಂಗ್‌ಗಾಗಿ ಅಳವಡಿಸಿಕೊಂಡಿರುವ ಸಾಫ್ಟ್‌ವೇರ್ 12 ವರ್ಷ ಹಳೆಯದು. ದರ ಪರಿಷ್ಕರಣೆಯನ್ನು ಈ ಸಾಫ್ಟ್‌ವೇರ್‌ನಲ್ಲಿ ಅಳವಡಿಸುವುದು ವಿಳಂಬವಾಯಿತು.

ಸೌರಶಕ್ತಿ ಸಬ್ಸಿಡಿ ರದ್ದು

ಮನೆಗಳಿಗೆ ಸೌರಶಕ್ತಿ ಸಂಪರ್ಕ ಅಳವಡಿಸುವುದನ್ನು ಬಿಬಿಎಂಪಿ ಸೇರಿದಂತೆ ಸ್ಥಳೀಯ ಸಂಸ್ಥೆಗಳು ಕಡ್ಡಾಯಗೊಳಿಸಿರುವುದರಿಂದ ಗ್ರಾಹಕರಿಗೆ ನೀಡುತ್ತಿದ್ದ ಸಹಾಯಧನವನ್ನು ಕೆಇಆರ್‌ಸಿ ರದ್ದುಪಡಿಸಿದೆ.

ಜತೆಗೆ, ಕೇಂದ್ರ ಸರ್ಕಾರ ಸೌರ ಛಾವಣಿ ಅಳವಡಿಸಲು ಶೇ 30ರಷ್ಟು ಸಹಾಯಧನ ನೀಡುತ್ತದೆ. ಹೀಗಾಗಿ, ಕೆಇಆರ್‌ಸಿ ಈ ಕ್ರಮಕೈಗೊಂಡಿದೆ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ದರ ಕಡಿತದ ಅಧಿಕಾರ ನ್ಯಾಯಮಂಡಳಿಗಷ್ಟೆ

ವಿದ್ಯುತ್ ದರ ಕಡಿತಗೊಳಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ. ದೆಹಲಿಯಲ್ಲಿರುವ ವಿದ್ಯುತ್ ಮೇಲ್ಮನವಿ ನ್ಯಾಯಮಂಡಳಿಗೆ (ಎಟಿಇ) ಈ ಸಂಬಂಧ ಮೇಲ್ಮನವಿ ಸಲ್ಲಿಸಬಹುದು ಎಂದು ತಜ್ಞರು ಹೇಳುತ್ತಾರೆ.

ಪ್ರತಿ ನವೆಂಬರ್‌ನಲ್ಲಿ ವಿದ್ಯುತ್ ದರ ಪರಿಷ್ಕರಣೆಗೆ ಸಂಬಂಧಿಸಿದಂತೆ ಎಲ್ಲ ಎಸ್ಕಾಂಗಳು ಪ್ರಸ್ತಾವಗಳನ್ನು ಸಲ್ಲಿಸುತ್ತವೆ. ನಂತರ, ಗ್ರಾಹಕರು, ಉದ್ಯಮಿಗಳು, ಎಸ್ಕಾಂಗಳು, ದೊಡ್ಡ ಬಳಕೆದಾರರು ಸೇರಿದಂತೆ ವಿವಿಧ ವಲಯದ ಅಭಿಪ್ರಾಯಗಳನ್ನು ಕೆಇಆರ್‌ಸಿ ಪಡೆಯುತ್ತದೆ. ನಂತರ, ಅದು ನೀಡುವ ಆದೇಶವನ್ನು ಎಲ್ಲ ಎಸ್ಕಾಂಗಳು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ.

' ಸೆಕ್ಷನ್ 111 ಅಡಿಯಲ್ಲಿ ವಿದ್ಯುತ್ ದರ ಪರಿಷ್ಕರಣೆಯನ್ನು ಪ್ರಶ್ನಿಸಿ ನ್ಯಾಯಮಂಡಳಿಯಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಯಾವುದೇ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ನಲ್ಲೂ ಅರ್ಜಿ ಹಾಕಲು ಅವಕಾಶ ಇಲ್ಲ' ಎಂದು ಕೆಇಆರ್‌ಸಿ ಸಲಹಾ ಸಮಿತಿಯ ಮಾಜಿ ಸದಸ್ಯ ಎಂ.ಜಿ. ಪ್ರಭಾಕರ್ ಹೇಳುತ್ತಾರೆ.

ಬೈಡನ್‌ಗೆ ಮೈಸೂರಿನ ಶ್ರೀಗಂಧ ಪೆಟ್ಟಿಗೆ ಕಾಣಿಕೆ ನೀಡಿದ ಪ್ರಧಾನಿ

ಮೋದಿಗೆ ಅಮೆರಿಕ ಅಧ್ಯಕ್ಷರಿಂದ ಭರ್ಜರಿ ಔತಣಕೂಟ

ವಾಷಿಂಗ್ಟನ್ (ಪಿಟಿಐ): ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರಿಗೆ ಮುಂದಿನ ತಿಂಗಳು 80 ವರ್ಷ ಎಂಟು ತಿಂಗಳು ತುಂಬಲಿವೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಅವರು ಬೈಡನ್ ದಂಪತಿಗೆ ಭಾರತೀಯ ಪರಂಪರೆಯನ್ನು ಸಾರುವ ವಿಶಿಷ್ಟ ಉಡುಗೊರೆಗಳನ್ನು ಬುಧವಾರ ನೀಡಿದ್ದಾರೆ.

ಭಾರತೀಯ ಶಾಸ್ತ್ರಗಳ ಪ್ರಕಾರ, 80 ವರ್ಷ 8 ತಿಂಗಳು ತುಂಬಿದ ವ್ಯಕ್ತಿಯು ಸಾವಿರ ಬಾರಿ ಹುಣ್ಣಿಮೆ ಚಂದ್ರನನ್ನು ನೋಡಿರುತ್ತಾರೆ. ಹಿಂದೂಗಳ ಜೀವನದಲ್ಲಿ ಈ ವಿದ್ಯಮಾನ ಮಹತ್ವದ ಮೈಲಿಗಲ್ಲು. ಈ ಹಿನ್ನೆಲೆಯಲ್ಲಿ ಬೈಡನ್ ಅವರಿಗೆ ಮೋದಿ ಅವರು ವಿಶೇಷ ಉಡುಗೊರೆ ನೀಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೈಸೂರಿನ ಶ್ರೀಗಂಧದಿಂದ ಮಾಡಿದ ಪೆಟ್ಟಿಗೆ, ಇಂಗ್ಲಿಷ್‌ಗೆ ಅನುವಾದಿತ ಉಪನಿಷತ್‌ನ ಪ್ರತಿಯನ್ನು ಬೈಡನ್ ಅವರಿಗೆ ಕಾಣಿಕೆ ಕೊಟ್ಟಿದ್ದಾರೆ.

11ನೇ ಪುಟ ನೋಡಿ



ಪ್ರಧಾನಿ ನರೇಂದ್ರ ಮೋದಿ ಅವರು ತಾವು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರಿಗೆ ಕಾಣಿಕೆಯಾಗಿ ನೀಡಿದ ಮೈಸೂರಿನ ಶ್ರೀಗಂಧದಿಂದ ಮಾಡಿದ ಪೆಟ್ಟಿಗೆಯ ವೈಶಿಷ್ಟ್ಯದ ಬಗ್ಗೆ ವಿವರಿಸಿದರು –ಪಿಟಿಐ ಚಿತ್ರ

ಬೆಂಗಳೂರಿನಲ್ಲಿ ಕಾನ್ಸುಲೇಟ್ ಕಚೇರಿ

ವಾಷಿಂಗ್ಟನ್ (ಪಿಟಿಐ): 'ಬೆಂಗಳೂರು ಮತ್ತು ಅಹಮದಾಬಾದ್‌ನಲ್ಲಿ ಅಮೆರಿಕದ ಕಾನ್ಸುಲೇಟ್ ಕಚೇರಿಗಳನ್ನು ಆರಂಭಿಸಲು ಉದ್ದೇಶಿಸಲಾಗಿದೆ. ಅದೇ ರೀತಿ ಭಾರತವು ಸಿಯಾಟಲ್‌ನಲ್ಲಿ ತನ್ನ ರಾಜತಾಂತ್ರಿಕ ಕಚೇರಿ ಆರಂಭಿಸಲಿದೆ' ಎಂದು ಶ್ವೇತಭವನದ ಹಿರಿಯ ಅಧಿಕಾರಿ ಗುರುವಾರ ತಿಳಿಸಿದ್ದಾರೆ.

11ನೇ ಪುಟ ನೋಡಿ

ಇನ್ನೊಂದು ಸುದ್ದಿ 5B

ಉದ್ಯಮ ಭಾಗಶಃ ಬಂದ್

ಪ್ರಜಾವಾಣಿ ವಾರ್ತೆ

ವಿದ್ಯುತ್ ದರ ಏರಿಕೆಗೆ ವಿರೋಧ

ಹುಬ್ಬಳ್ಳಿ/ಕಲಬುರಗಿ/ದಾವಣಗೆರೆ/ಮೈಸೂರು: ವಿದ್ಯುತ್ ದರ ಏರಿಕೆ ಖಂಡಿಸಿ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ (ಕೆಸಿಸಿಐ) ಗುರುವಾರ ನೀಡಿದ್ದ ಬಂದ್ ಕರೆಗೆ ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ ಮತ್ತು ಮಧ್ಯ ಕರ್ನಾಟಕದ ಜಿಲ್ಲೆಗಳಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು. ಉದ್ಯಮಿಗಳು, ವ್ಯಾಪಾರಸ್ಥರು ವಹಿವಾಟು, ಉದ್ಯಮವನ್ನು ಭಾಗಶಃ ಬಂದ್ ಮಾಡಿ ಬೆಂಬಲ ವ್ಯಕ್ತಪಡಿಸಿದರು. ಕೆಲ ಕಡೆ ಪ್ರತಿಭಟನಾ ಮೆರವಣಿಗೆಗಳು ನಡೆದವು.

ಬೆಳಗಾವಿ ಹಾಗೂ ಕಾರವಾರದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾದರೆ, ವಿಜಯಪುರದಲ್ಲಿ ಪ್ರತಿಭಟನೆ ನಡೆಯಿತು. ಗದಗದಲ್ಲಿ ಮಿಶ್ರ ಪ್ರತಿಕ್ರಿಯೆ ಕಂಡು ಬಂದರೆ, ಹಾವೇರಿ ಮತ್ತು ಬಾಗಲಕೋಟೆಯಲ್ಲಿ ನೀರಸ ಪ್ರತಿಕ್ರಿಯೆ ಇತ್ತು.

ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು.

7ನೇ ಪುಟ ನೋಡಿ

'ಕೇಂದ್ರಕ್ಕೆ ಕರ್ನಾಟಕ ಅಷ್ಟೇ ಮುಖ್ಯವಲ್ಲ'

ಕಲಬುರಗಿ: ಭಾರತೀಯ ಆಹಾರ ನಿಗಮವು ರಾಜ್ಯಕ್ಕೆ ಅಗತ್ಯವಾದ ಅಕ್ಕಿ ಪೂರೈಕೆ ನಿರಾಕರಿಸಿರುವುದರ ಕುರಿತು ಗುರುವಾರ ಇಲ್ಲಿ ಪ್ರತಿಕ್ರಿಯೆ ನೀಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, 'ಕೇಂದ್ರಕ್ಕೆ ಕರ್ನಾಟಕವೊಂದೇ ಮುಖ್ಯವಲ್ಲ. ಇತರೆ ರಾಜ್ಯಗಳಿಗೆ ಅಕ್ಕಿ ಪೂರೈಸುವ ಜವಾಬ್ದಾರಿಯೂ ಇದೆ' ಎಂದರು.



7ನೇ ಪುಟ ನೋಡಿ

ದಿನನಿತ್ಯ ಓಡಾಡಲು ಪ್ರಯಾಣಿಕರ ಪರದಾಟ

ದಾಸರಹಳ್ಳಿ: ತಂಗುದಾಣಗಳೇ ಇಲ್ಲ!

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಕ್ಷೇತ್ರದ ಪೀಣ್ಯ 2ನೇ ಹಂತ, ಜಾಲಹಳ್ಳಿ ಕ್ರಾಸ್, ದಾಸರಹಳ್ಳಿ ಬಸ್ ನಿಲ್ದಾಣ, ವಿಡಿಯಾ ಸ್ಕೂಲ್ ಬಸ್ ನಿಲ್ದಾಣ ಇನ್ನು ಮುಂತಾದ ಕಡೆಗಳಲ್ಲಿ ಪ್ರಯಾಣಿಕರಿಗೆ ತಂಗುದಾಣಗಳಿಲ್ಲದೆ ಬಿಸಿಲು ಮಳೆಯಲ್ಲಿ ನಿಲ್ಲುವ ಪರಿಸ್ಥಿತಿ ಎದುರಾಗಿದೆ. ನೂತನ ಶಾಸಕರು ಈ ಸಮಸ್ಯೆಗಳನ್ನು ಸರಿಪಡಿಸಬೇಕು ಎಂಬುದು ಸ್ಥಳೀಯರ ಒತ್ತಾಯವಾಗಿದೆ.

ಪೀಣ್ಯ 2ನೇ ಹಂತದ ವೃತ್ತದಲ್ಲಿ ಬಸ್‌ಗಾಗಿ ಕಾಯುವ ಪ್ರಯಾಣಿಕರಿಗೆ ತಂಗುದಾಣವಿಲ್ಲದೆ ಪರದಾಡುತ್ತಿದ್ದಾರೆ. ಇನ್ನು ಜಾಲಹಳ್ಳಿ ಕ್ರಾಸ್ ಮತ್ತು ದಾಸರಹಳ್ಳಿ ಬಸ್ ನಿಲ್ದಾಣಗಳಲ್ಲಿ ದೂರದ ಊರುಗಳಿಗೆ ತೆರಳುವ ಪ್ರಯಾಣಿಕರು ಬಿಸಿಲಲ್ಲಿ ನಿಂತು ಹೈರಾಣ ಆಗುತ್ತಿದ್ದಾರೆ.

ದಾಸರಹಳ್ಳಿ ಬಸ್ ನಿಲ್ದಾಣದಿಂದ ಸುಮಾರು 22 ಜಿಲ್ಲೆಗಳಿಗೆ ಜನರು ಪ್ರಯಾಣಿಸುತ್ತಾರೆ. ಅವರಿಗೆ ನಿಲ್ಲಲು ತಂಗುದಾಣಗಳಿಲ್ಲ, ಸರ್ವಿಸ್ ರಸ್ತೆಯಲ್ಲಿ ಹೋಟೆಲ್ ಮತ್ತು ಅಂಗಡಿಗಳಿವೆ. ಅಲ್ಲಿ ನಿಲ್ಲಲೂ ಜಾಗವಿಲ್ಲ.

ನಗರಕ್ಕೆ ಹೆಬ್ಬಾಗಿಲಾಗಿರುವ ದಾಸರಹಳ್ಳಿ ಕ್ಷೇತ್ರವು ದುಡಿಯುವ ಮಹಿಳೆಯರು, ಕಾರ್ಮಿಕರು, ವಲಸಿಗರು ತುಂಬಿರುವ ಜನನಿಬಿಡ ಪ್ರದೇಶ. ನಿತ್ಯ ಸಾವಿರಾರು ಜನರು ಬಸ್ಸಿನಲ್ಲಿ ಪ್ರಯಾಣಿಸುತ್ತಾರೆ. ನೂತನ ಶಾಸಕ ಮುನಿರಾಜು ಅವರು ಪ್ರಯಾಣಿಕರಿಗೆ ತಂಗುದಾಣ ನಿರ್ಮಿಸಲಿ' ಎಂದು ದಾಸರಹಳ್ಳಿ ನಿವಾಸಿ ವೈ.ಬಿ.ಎಚ್. ಜಯದೇವ್ ತಿಳಿಸಿದರು.

'ದಾಸರಹಳ್ಳಿ ಕ್ಷೇತ್ರವು ಐದು ವರ್ಷಗಳಲ್ಲಿ ಏನು ಅಭಿವೃದ್ಧಿ ಕಾಣಲಿಲ್ಲ, ಮಾಜಿ ಶಾಸಕರು ಗುರುತಿಸುವಂತಹ ಕೆಲಸಗಳನ್ನು ಮಾಡಲಿಲ್ಲ. ಶಾಸಕ ಮುನಿರಾಜು ಅವರು ಈ ಎಲ್ಲಾ ಸಮಸ್ಯೆಗಳಿಗೆ ಸ್ಪಂದನೆ ನೀಡಬೇಕು. ದಾಸರಹಳ್ಳಿ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡಬೇಕು' ಎಂದು ಚೊಕ್ಕಸಂದ್ರ ನಿವಾಸಿ ವಿಜಯ್ ಕುಮಾರ್ ಆಶಿಸಿದರು.



ದಾಸರಹಳ್ಳಿ ಬಸ್ ನಿಲ್ದಾಣದಲ್ಲಿ ಬಿಸಿಲಿನಲ್ಲಿ ಬಸ್ಸಿಗಾಗಿ ಕಾಯುತ್ತಿರುವ ಪ್ರಯಾಣಿಕರು

ಮುಖ್ಯಾಂಶಗಳು

- ಪೀಣ್ಯ 2ನೇ ಹಂತದ ವೃತ್ತದಲ್ಲಿ ಸಮಸ್ಯೆ
- ತಂಗುದಾಣ ನಿರ್ಮಾಣಕ್ಕೆ ಒತ್ತಾಯ

ನವೀಕರಣಕ್ಕೆ ಪ್ರಸ್ತಾವನೆ ಸಿದ್ಧಪಡಿಸಲು ಮುಂದಾದ ಸಂಸ್ಕೃತಿ ಇಲಾಖೆ

ಕಲಾಕ್ಷೇತ್ರ ಬಾಡಿಗೆ ಹೆಚ್ಚಳಕ್ಕೆ ಆಕ್ಷೇಪ

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜಧಾನಿಯ ಸಾಂಸ್ಕೃತಿಕ ಚಟುವಟಿಕೆಗಳ ಪ್ರಮುಖ ತಾಣವಾಗಿರುವ ರವೀಂದ್ರ ಕಲಾಕ್ಷೇತ್ರದ ನವೀಕರಣ ಹಾಗೂ ಶೇ 5 ರಷ್ಟು ಬಾಡಿಗೆ ಹೆಚ್ಚಳಕ್ಕೆ ಸಾಂಸ್ಕೃತಿಕ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿದೆ.

ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರವು 830 ಆಸನ ಹೊಂದಿದೆ. ಇಲ್ಲಿನ ಹೆಚ್ಚಿನ ಸಂಘ–ಸಂಸ್ಥೆಗಳು ಇದೇ ರಂಗಮಂದಿರವನ್ನು ಅವಲಂಬಿಸಿವೆ. ಈ ರಂಗಮಂದಿರದ ಆಸನ, ಧ್ವನಿ–ಬೆಳಕಿನ ವ್ಯವಸ್ಥೆ ನವೀಕರಣಕ್ಕೆ ಸಂಬಂಧಿಸಿದಂತೆ ಪ್ರಸ್ತಾವ ಸಿದ್ಧಪಡಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಂದಾಗಿದೆ. ಇಲಾಖೆಯ ಈ ಕ್ರಮಕ್ಕೆ ರಂಗಕರ್ಮಿಗಳು ಹಾಗೂ ಕಲಾವಿದರಿಂದ ವಿರೋಧ ವ್ಯಕ್ತವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಲೋಕೋಪಯೋಗಿ ಇಲಾಖೆಯ ಸಹಯೋಗದಲ್ಲಿ, 2018ರಲ್ಲಿ ₹ 2.24 ಕೋಟಿ ವೆಚ್ಚದಲ್ಲಿ ರವೀಂದ್ರ ಕಲಾಕ್ಷೇತ್ರದ ನವೀಕರಣ ಕಾಮಗಾರಿ ಪೂರ್ಣಗೊಳಿಸಿತ್ತು. ಆಗ ಹೊಸದಾಗಿ ಧ್ವನಿ–ಬೆಳಕಿನ ವ್ಯವಸ್ಥೆಯನ್ನು ಅಳವಡಿಸಲಾಗುತ್ತು. ಈಗ ಮತ್ತೆ ಈ ವ್ಯವಸ್ಥೆಯ ನವೀಕರಣಕ್ಕೆ ಇಲಾಖೆ ಮುಂದಾಗಿದೆ.

'1963ರಿಂದ ಕಲಾ ಪ್ರದರ್ಶನಕ್ಕೆ ವೇದಿಕೆ ಕಲ್ಪಿಸಿರುವ ರವೀಂದ್ರ ಕಲಾಕ್ಷೇತ್ರದ ಸಾಂಪ್ರದಾಯಿಕತೆ ಕಾಪಾಡಿ, ಅಗತ್ಯ ಮೂಲಸೌಕರ್ಯವನ್ನು ಒದಗಿಸಬೇಕು. ಆಧುನಿಕತೆಯ ಹೆಸರಿನಲ್ಲಿನವೀಕರಣದಅಗತ್ಯವಿಲ್ಲ.ಬದಲಾಗಿ ಸೂಕ್ತವಾಗಿ ನಿರ್ವಹಿಸಬೇಕು' ಎಂದು ರಂಗಕರ್ಮಿಗಳು ಅಭಿಪ್ರಾಯಪಟ್ಟಿದ್ದಾರೆ.

ಪ್ರತಿ ವರ್ಷ ಬಾಡಿಗೆ ಹೆಚ್ಚಳ: ಸರ್ಕಾರಿ ಆದೇಶದ ಅನ್ವಯ ರವೀಂದ್ರ ಕಲಾಕ್ಷೇತ್ರದ ಬಾಡಿಗೆಯನ್ನು ಶೇ 5ರಷ್ಟು ಹೆಚ್ಚಳ ಮಾಡಲಾಗಿದೆ. 2022ರಲ್ಲಿ ರಂಗ ಮಂದಿರಗಳ ಬಾಡಿಗೆಯನ್ನು ಪರಿಷ್ಕರಿಸಿ ಆದೇಶ ಹೊರಡಿಸಿದ್ದ ಸಂಸ್ಕೃತಿ ಇಲಾಖೆ, ಪ್ರತಿ ವರ್ಷ ಬಾಡಿಗೆ ದರವನ್ನು ಶೇ5ರಷ್ಟು ಏರಿಕೆ ಮಾಡಬೇಕೆಂದು ತಿಳಿಸಿತ್ತು.

ಈಗ ರವೀಂದ್ರ ಕಲಾಕ್ಷೇತ್ರದ ಬಾಡಿಗೆ ಹೆಚ್ಚಳ ಮಾಡಲಾಗಿದೆ. ಒಂದು ಪಾಳಿಗೆ ₹5 ಸಾವಿರ ಠೇವಣಿ ಹಾಗೂ ಜಿಎಸ್‌ಟಿ ಸಹಿತ ₹12,080 ಇದ್ದ ಬಾಡಿಗೆ ದರ, ಈಗ ₹12,434ಕ್ಕೆ ಏರಿಕೆಯಾಗಿದೆ. ಠೇವಣಿ ಹಣವನ್ನು ಮರಳಿಸಲಾಗುತ್ತದೆ. ಇಲಾಖೆಯ ಈ ಕ್ರಮಕ್ಕೂ ಸಾಂಸ್ಕೃತಿಕ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿದೆ. ರವೀಂದ್ರ ಕಲಾಕ್ಷೇತ್ರದ ಎಡಭಾಗದಲ್ಲಿ ತಿಂಡಿ–ಊಟ ವಿತರಣೆಯನ್ನು ನಿಷೇಧಿಸಲಾಗಿದ್ದು, ಕ್ಯಾಂಟೀನ್ ಬಳಿಯೇ ವಿತರಿಸಲು ಅಧಿಕಾರಿಗಳು ಸೂಚಿಸಿದ್ದಾರೆ. ಈ ಕ್ರಮದಿಂದ ಕಲಾ ಪ್ರದರ್ಶನಕ್ಕೆ ಸಮಸ್ಯೆಯಾಗುತ್ತದೆ ಎಂಬ ಅಸಮಾಧಾನ ವ್ಯಕ್ತವಾಗಿದೆ.

'ರವೀಂದ್ರ ಕಲಾಕ್ಷೇತ್ರದ ನವೀಕರಣಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆ ನೀಡುವಂತೆ ಸಚಿವರು ಸೂಚಿಸಿದ್ದಾರೆ. ಧ್ವನಿ–ಬೆಳಕು ಸೇರಿ ಕೆಲವೊಂದು ವ್ಯವಸ್ಥೆಯನ್ನು ಮೇಲ್ದರ್ಜೆಗೆ ಏರಿಸಬೇಕಾಗಿದೆ. ರವೀಂದ್ರ ಕಲಾ ಕ್ಷೇತ್ರದ ಬಾಡಿಗೆ ಕೊಂಚ ಏರಿಸಿದರೂ ಕಲೆಗೆ ಪ್ರೋತ್ಸಾಹಿಸಲು ಕಡಿಮೆ ಬಾಡಿಗೆಯನ್ನೇ ನಿಗದಿ ಮಾಡಲಾಗಿದೆ. ಸರ್ಕಾರಿ ಆದೇಶವನ್ನು ಪಾಲಿಸಲಾಗಿದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಸರ್ಕಾರಿ ಆದೇಶದಂತೆ ಶೇ5ರಷ್ಟು ಮಾತ್ರ ಬಾಡಿಗೆ ಹೆಚ್ಚಳ ಮಾಡಲಾಗಿದೆ. ವಿದ್ಯುತ್ ಸೇರಿ ಬೇರೆ ವೆಚ್ಚವನ್ನು ಕಲಾ ತಂಡಗಳಿಗೆ ವಿಧಿಸುತ್ತಿಲ್ಲ. ಕಲಾಕ್ಷೇತ್ರದ ಎಡಭಾಗದಲ್ಲಿ ಕನ್ನಡ ಭವನವಿದ್ದು, ಅಲ್ಲಿ ತಿಂಡಿ–ಊಟ ವಿತರಿಸಬಾರದೆಂದು ಸರ್ಕಾರದ ಆದೇಶವೇ ಇದೆ' ಎಂದು ರವೀಂದ್ರ ಕಲಾಕ್ಷೇತ್ರದ ವ್ಯವಸ್ಥಾಪಕ ಎನ್. ನರೇಂದ್ರ ಬಾಬು ಸ್ಪಷ್ಟಪಡಿಸಿದರು.



ಪ್ರದರ್ಶನದ ಖಚಿತತೆ ಇಲ್ಲ

ಸಂಸ್ಕೃತಿ ಇಲಾಖೆಯು ರವೀಂದ್ರ ಕಲಾಕ್ಷೇತ್ರ ಒಳಗೊಂಡಂತೆ ನಗರದ ಏಳು ರಂಗ ಮಂದಿರಗಳನ್ನು ನಿರ್ವಹಣೆ ಮಾಡುತ್ತಿದೆ. ಇವುಗಳಲ್ಲಿ ಎರಡು ಬಯಲು ರಂಗಮಂದಿರಗಳೂ ಸೇರಿವೆ. ನಗರದ ಹೃದಯ ಭಾಗದಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ನಾಟಕಗಳಿಗೆ ಆದ್ಯತೆ ನೀಡಲಾಗುತ್ತಿದೆಯಾದರೂ ರಂಗ ತಂಡಗಳು ಪ್ರದರ್ಶನ ನೀಡಲು ಎರಡು ಮೂರು ತಿಂಗಳು ಮುಂಚಿತವಾಗಿ ಕಾಯ್ದಿರಿಸಿ, ಕಾಯಬೇಕಾದ ಪರಿಸ್ಥಿತಿಯಿದೆ. ಅದು ಕೂಡ ಸರ್ಕಾರಿ ಕಾರ್ಯಕ್ರಮಗಳು ತುರ್ತಾಗಿ ನಿಗದಿಯಾದಲ್ಲಿ ಕಾಯ್ದಿರಿಸಿದ ದಿನಾಂಕವನ್ನು ಬಿಟ್ಟುಕೊಡಬೇಕಾಗುತ್ತದೆ. ಹೀಗಾಗಿ, ಪ್ರದರ್ಶನದ ದಿನದವರೆಗೂ ರಂಗಮಂದಿರ ಸಿಗುವ ಖಚಿತತೆ ಇಲ್ಲದಂತಾಗಿದೆ.

ಮುಂಚಿತವಾಗಿ ಕಾಯ್ದಿರಿಸುವ ವ್ಯವಸ್ಥೆಯ ಬಗ್ಗೆಯೂ ಕಲಾವಿದರು ಹಾಗೂ ಸಂಘ–ಸಂಸ್ಥೆಗಳಿಂದ ಆಕ್ಷೇಪ ವ್ಯಕ್ತವಾಗಿವೆ. 'ಸಂಘ–ಸಂಸ್ಥೆಗಳ ಹೆಸರಿನ ಬದಲು ಮುಖ್ಯಸ್ಥರ ಹೆಸರಿನಲ್ಲಿ ಕಾಯ್ದಿರಿಸಬೇಕಿದೆ. ಇದರಿಂದ ಸಾಂಸ್ಕೃತಿಕವಲ್ಲದ ಸಂಘ–ಸಂಸ್ಥೆಗಳೂ ರಂಗಮಂದಿರ ಕಾಯ್ದಿರಿಸುತ್ತಿವೆ' ಎಂದು ಕಲಾ ಸಂಘಟಕರು ಆರೋಪಿಸಿದ್ದಾರೆ.




ಕಲಾವಿದರ ನೆಮ್ಮದಿ ಕೆಡಿಸುವ ಕೆಲಸವನ್ನು ಇಲಾಖೆ ಮಾಡಬಾರದು. ಇರುವ ರಂಗಮಂದಿರಕ್ಕೆ ಸೂಕ್ತ ಮೂಲಸೌಕರ್ಯ ಒದಗಿಸಿ, ನಿರ್ವಹಣೆ ಮಾಡಬೇಕು.

ಶಶಿಧರ್ ಭಾರೀಘಾಟ್
ರಂಗಕರ್ಮಿ



ಹಿಂದಿನ ಸರ್ಕಾರ ಹೊರಡಿಸಿದ ಆದೇಶದಂತೆ ಕಲಾಕ್ಷೇತ್ರದ ಬಾಡಿಗೆ ಹೆಚ್ಚಳವಾಗಿದೆ. ಕಲಾವಿದರೊಂದಿಗೆ ಸಮಾಲೋಚಿಸಿದ ಬಳಿಕ ನವೀಕರಣಕ್ಕೆ ಕ್ರಮವಹಿಸಲಾಗುವುದು.

ಶಿವರಾಜ್ ತಂಗಡಗಿ
ಕನ್ನಡ ಮತ್ತು ಸಂಸ್ಕೃತಿ ಸಚಿವ



ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ, ತಿಂಗಳಾನುಗಟ್ಟಲೆ ರಂಗಮಂದಿರದ ಬಾಗಿಲು ಮುಚ್ಚುವ ಕಾರ್ಯಕ್ರಮ. ವ್ಯವಸ್ಥೆಯಲ್ಲಿನ ಲೋಪ ಸರಿಪಡಿಸಿ, ಬಾಡಿಗೆ ಹೆಚ್ಚಳ ಕೈಬಿಡಬೇಕು.

ಜೆ. ಲೋಕೇಶ್, ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ

ಗೃಹ ಜ್ಯೋತಿ: 20.10 ಲಕ್ಷ ನೋಂದಣಿ

ಬೆಂಗಳೂರು: 'ಗೃಹ ಜ್ಯೋತಿ' ಯೋಜನೆಗೆ ಗುರುವಾರ ಸಂಜೆಯವರೆಗೆ ಒಟ್ಟು 20.10 ಲಕ್ಷ ಗ್ರಾಹಕರು ಸೇವಾ ಸಿಂಧು ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ.

ಜೂನ್ 18ರಂದು ನೋಂದಣಿ ಪ್ರಾರಂಭವಾಗಿತ್ತು. ಅಂದು 96,305, ಸೋಮವಾರ 3,34,845, ಮಂಗಳವಾರ 4,64,225, ಬುಧವಾರ 5,25,953 ಗ್ರಾಹಕರು ನೋಂದಣಿ ಮಾಡಿದ್ದರು. ಗುರುವಾರ ಸಂಜೆಯ ವೇಳೆಗೆ 5,89,158 ಲಕ್ಷ ಗ್ರಾಹಕರು ಕರ್ನಾಟಕ ಒನ್, ಬೆಂಗಳೂರು ಒನ್ ಹಾಗೂ ಗ್ರಾಮ ಒನ್ ಸೇರಿ ಇತರೆಡೆ ನೋಂದಣಿ ಮಾಡಿಕೊಂಡಿದ್ದಾರೆ.

ರಾಜ್ಯದ ಎಲ್ಲ ವಿದ್ಯುತ್ ಕಚೇರಿಗಳಲ್ಲಿ ಸಾರ್ವಜನಿಕರಿಗೆ ನೋಂದಣಿ ಮಾಡಲು ಪ್ರತ್ಯೇಕ ಲಾಗಿನ್ ಐಡಿ, ಪ್ರತ್ಯೇಕ ಲಿಂಕ್ ಅನ್ನು ನೀಡಲಾಗಿದೆ. ರಾಜ್ಯದ 2,000 ವಿದ್ಯುಚ್ಛಕ್ತಿ ಕಚೇರಿಗಳು, ಗ್ರಾಮ ಪಂಚಾಯಿತಿಗಳು ಹಾಗೂ ನಾಡ ಕಚೇರಿಗಳಲ್ಲಿ ಪ್ರತ್ಯೇಕ ಲಿಂಕ್ ಮೂಲಕ ಗೃಹ ಜ್ಯೋತಿ ನೋಂದಣಿ ಪ್ರಕ್ರಿಯೆ ನಡೆಯಲಿದೆ.ಸೇವಾ ಸಿಂಧು ಪೋರ್ಟಲ್ https://sevasindhugs.karnataka.gov.in ಮೂಲಕ ನೋಂದಾಯಿಸಬಹುದು.

'ಮಹಿಳೆಯರಿಗಾಗಿಯೇ ಪ್ರತ್ಯೇಕ ಬೈಕ್ ರೈಡಿಂಗ್ ಕ್ಲಬ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರಿಗಾಗಿಯೇ ಪ್ರತ್ಯೇಕ ಬೈಕ್ ರೈಡಿಂಗ್ ಕ್ಲಬ್ ಸ್ಥಾಪಿಸಿ ಎಲ್ಲ ರೀತಿಯ ರಕ್ಷಣೆ, ಸುರಕ್ಷತೆ ಕಲ್ಪಿಸಿ ಈ ವಲಯದಲ್ಲಿ ಹೊಸ ಅಧ್ಯಾಯ ಆರಂಭಿಸಲಾಗುವುದು ಎಂದು ಬೈಕ್ ರೈಡರ್, ಬಾಲಿವುಡ್ ನಟ ವಿವೇಕ್ ಒಬೆರಾಯ್ ತಿಳಿಸಿದರು.

ಎಲ್ಲೊ ಹ್ಯಾಟ್ ರೈಡರ್ಸ್ ಕ್ಲಬ್ ಹಾಗೂ ರೆಡಿ ಅಸಿಸ್ಟ್ ಸಂಸ್ಥೆಯ ಸಹಯೋಗದಲ್ಲಿ ಮೊದಲ ಬಾರಿಗೆ ಬೆಂಗಳೂರಿನಲ್ಲಿ ನಡೆದ ದೇಶದ ಪ್ರಮುಖ ಬೈಕ್ ರೈಡರ್‌ಗಳ ಸಮಾವೇಶದಲ್ಲಿ ಅವರು ಮಾತನಾಡಿದರು.

ಬೈಕ್ ರೈಡರ್‌ಗಳನ್ನು ಉತ್ತೇಜಿಸಲು ದೊಡ್ಡ ಮಟ್ಟದ ವೇದಿಕೆ ಕಲ್ಪಿಸಲಾಗಿದೆ. ಬೈಕ್ ರೈಡಿಂಗ್ ಅದ್ಭುತ ಅನುಭವವಷ್ಟೇ ಅಲ್ಲ, ಜೀವನ ಕ್ರಮವೂ ಆಗಿದೆ. ಬೈಕ್ ರೈಡರ್‌ಗಳಿಗೆ ಸಕಲ ವ್ಯವಸ್ಥೆ ಹೊಂದಿರುವ ಪರಿಸರ ಸ್ನೇಹಿ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಇನ್ನೊಂದು ವರ್ಷದಲ್ಲಿ 29 ರಾಜ್ಯಗಳಲ್ಲೂ ಬೈಕ್ ರೈಡಿಂಗ್ ಕ್ಲಬ್‌ಗಳನ್ನು ವಿಸ್ತರಿಸಲಾಗುವುದು ಎಂದರು.

ಕರ್ನಾಟಕ ಪ್ರವಾಸೋದ್ಯಮಕ್ಕೆ ಖ್ಯಾತಿ ಪಡೆದಿದ್ದು, ಬೈಕ್ ರೈಡಿಂಗ್ ಮೂಲಕ ವಿಶಿಷ್ಟ ತಾಣಗಳನ್ನು ಅನ್ವೇಷಣೆ ಮಾಡಬೇಕು ಎಂದು ತಿಳಿಸಿದರು.

ಕನಕಪುರ ರಸ್ತೆಯ ಬಿ.ಎಲ್. ಆರ್. ಬ್ರೇವಿಂಗ್ ರೆಸಾರ್ಟ್‌ನಲ್ಲಿ ಬೈಕ್ ರೈಡರ್‌ಗಳು ರೋಮಾಂಚಕಾರಿ ಸಾಹಸ ಪ್ರದರ್ಶನ ಮಾಡಿದರು. ಅವರಿಗೆ ಎಲ್ಲೋ ಹ್ಯಾಟ್ ರೈಡರ್ಸ್ ಕ್ಲಬ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ರೆಡಿಅಸಿಸ್ಟ್ ನ ಸಂಸ್ಥಾಪಕ ಮತ್ತು ಸಿಇಒ ಎಸ್.ವಿ. ವಿಮಲ್ ಸಿಂಗ್ ಇದ್ದರು. ರೆಡಿ ಅಸಿಸ್ಟ್ ಸಂಸ್ಥೆ ಈ ಕಾರ್ಯಕ್ರಮದ ಮೂಲಕ 36 ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಾಯೋಜಕತ್ವವನ್ನು ವಹಿಸಿಕೊಂಡಿತು.



ಎಲ್ಲೊ ಹ್ಯಾಟ್ ರೈಡರ್ಸ್ ಕ್ಲಬ್ ಹಾಗೂ ರೆಡಿ ಅಸಿಸ್ಟ್ ಸಂಸ್ಥೆಯ ಸಹಯೋಗದಲ್ಲಿ ಬೆಂಗಳೂರಿನಲ್ಲಿ ನಡೆದ ದೇಶದ ಪ್ರಮುಖ ಬೈಕ್ ರೈಡರ್‌ಗಳ ಸಮಾವೇಶದಲ್ಲಿ ಬೈಕ್ ರೈಡರ್, ಬಾಲಿವುಡ್ ನಟ ವಿವೇಕ್ ಒಬೆರಾಯ್ ಭಾಗವಹಿಸಿದರು



ಅಡಾಪ್ಟಿವ್ ಲರ್ನಿಂಗ್ 2023ಕ್ಕೆ ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ. ಶ್ಯಾಮರಾಜು ಚಾಲನೆ ನೀಡಿದರು. ಕುಲಪತಿ ಎಂ.ಧನಂಜಯ, ಟ್ರಸ್ಟಿ ಉಮೇಶ್ ಎಸ್.ರಾಜು ಇದ್ದರು.

ರೇವಾ ವಿವಿ-ಅಡಾಪ್ಟಿವ್ ಲರ್ನಿಂಗ್ 2023ಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ರೇವಾ ವಿಶ್ವವಿದ್ಯಾಲಯದಲ್ಲಿ 'ಅಡಾಪ್ಟಿವ್ ಲರ್ನಿಂಗ್-2023' ಎಂಬ ನೂತನ ಕಾರ್ಯಕ್ರಮಕ್ಕೆ ಬುಧವಾರ ಚಾಲನೆ ನೀಡಲಾಯಿತು.

ಅಡಾಪ್ಟಿವ್ ಕಲಿಕಾ ಮತ್ತು ಬೋಧನೆ ಶೈಕ್ಷಣಿಕ ಜಗತ್ತಿನಲ್ಲಿ ಹೊಸ ಮನ್ವಂತರವನ್ನು ಸೃಷ್ಟಿಸಿದೆ. 2023ರ ಶೈಕ್ಷಣಿಕ ವರ್ಷದಿಂದ ಹಲವು ಕೋರ್ಸ್‌ಗಳು ನಾವೀನ್ಯ ಮಾರ್ಗಗಳಿಗೆ ಒಡ್ಡಿಕೊಳ್ಳುತ್ತಿವೆ. ಈ ನೂತನ ಪ್ರಯೋಗವು ವಿದ್ಯಾರ್ಥಿಗಳ ಪರಿಣಾಮಕಾರಿ ಕಲಿಕೆಗೆ ಸಹಾಯಕವಾಗಲಿದೆ. ಯುವಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ಚಲನಚಿತ್ರ, ವಿಜ್ಞಾನ, ಕೃಷಿ ಎಂಜಿನಿಯರಿಂಗ್, ಡಿಸೈನ್ ಹಾಗೂ ಕ್ರೀಡೆಗಳ ಬಗೆಗಿನ ಅಧ್ಯಯನದ ಮೂಲಕ ಹೊಸರೀತಿಯ ಶಿಕ್ಷಣ ನೀಡಲು ವಿಶ್ವವಿದ್ಯಾಲಯವು ಬದ್ಧವಾಗಿದೆ ಎಂದು ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಪಿ. ಶ್ಯಾಮರಾಜು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕುಲಪತಿ ಎಂ.ಧನಂಜಯ, ಕುಲಸಚಿವ ಎನ್.ರಮೇಶ್, ಟ್ರಸ್ಟಿ ಉಮೇಶ್ ಎಸ್.ರಾಜು ಇದ್ದರು.

ಪಿಯು:ದಂಡ ಶುಲ್ಕವಿಲ್ಲದೇ ಪ್ರವೇಶಕ್ಕೆ ಮನವಿ

ಬೆಂಗಳೂರು: 2023–24ನೇ ಸಾಲಿನ ಪ್ರಥಮ ಪಿಯು ಪ್ರವೇಶಕ್ಕೆ ದಂಡ ಶುಲ್ಕವಿಲ್ಲದೇ ಜೂನ್ 27ರವರೆಗೆ ಅವಕಾಶ ನೀಡಬೇಕು ಎಂದು

ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷ ಎ.ಎಚ್. ನಿಂಗೇಗೌಡ, ಪ್ರಮುಖರಾದ ಎಸ್. ಆರ್.ವೆಂಕಟೇಶ್, ಶಿವರಾಮ ಬಿ.ಮಾಲೀಪಾಟೀಲ, ಎಂ.ಜಯಣ್ಣ ಇಲಾಖೆಯ ನಿರ್ದೇಶಕರಿಗೆ ಮನವಿ ಮಾಡಿದ್ದಾರೆ.

ನಗರದಲ್ಲಿ ಇಂದು

'ಲಲಿತ ಸಹಸ್ರನಾಮ' ಪೂಜಾ ಕಾರ್ಯಕ್ರಮ: ಸಾನ್ನಿಧ್ಯ: ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಅತಿಥಿಗಳು: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶೋಭಾ ಕರಂದ್ಲಾಜೆ, ತೇಜಸ್ವಿ ಸೂರ್ಯ, ಸಿ.ಕೆ. ರಾಮಮೂರ್ತಿ, ಹರಿಪ್ರಿಯ ವಶಿಷ್ಠ ಸಿಂಹ, ಚಂದ್ರಶೇಖರ್ ರಾಜು, ಆಯೋಜನೆ: ಜಯನಗರ ಮಹಿಳಾ ಸಮಾಜ, ಸ್ಥಳ: ಚಂದ್ರಗುಪ್ತ ಮೌರ್ಯ ಆಟದ ಮೈದಾನ, ಜಯನಗರ, ಬೆಳಿಗ್ಗೆ 9ರಿಂದ

ತಿಮ್ಮಣ್ಣ ಭಟ್ ಅವರ 'ಕರ್ನಾಟ ಕೇಸರಿ ಜಗನ್ನಾಥ ರಾವ್ ಜೋಶಿ' ಅವರ ಪುಸ್ತಕ ಬಿಡುಗಡೆ: ಅತಿಥಿಗಳು: ಎಂ. ಶಂಕರಪ್ಪ, ದು.ಗು. ಲಕ್ಷ್ಮಣ, ಪಿ. ರಾಜೀವ್, ಸ್ಥಳ: ಜಗನ್ನಾಥ ಭವನ, ಮಲ್ಲೇಶ್ವರ, ಬೆಳಿಗ್ಗೆ 10.30

ಮುಟ್ಟಿನ ಆರೋಗ್ಯ ಮತ್ತು ನೈರ್ಮಲ್ಯ ನಿರ್ವಹಣೆ: ಅತಿಥಿಗಳು: ಡಾ. ಶರಣಪ್ರಕಾಶ್ ಆರ್. ಪಾಟೀಲ, ರೂಪಾಲಿ ಗಂಗೂಲಿ, ಅಕ್ಕೈ ಪದ್ಮಶಾಲಿ, ಬಿ.ಬಿ. ಕಾವೇರಿ, ಆಯೋಜನೆ ಮತ್ತು ಸ್ಥಳ: ಅಮ್ರಿತಾ ವಿಶ್ವ ವಿದ್ಯಾಪೀಠ, ಕಸವನಹಳ್ಳಿ, ಬೆಳಿಗ್ಗೆ 10.30

ಎಸ್‌ಒಎಸ್ ದಿನದ ಸಮಾರಂಭ: ಅತಿಥಿಗಳು: ರಾಮಲಿಂಗಾರೆಡ್ಡಿ, ಬಿ. ಶಿವಣ್ಣ, ಸೌಮ್ಯ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಎಸ್‌ಒಎಸ್ ಚಿಲ್ಡ್ರನ್ಸ್ ವಿಲೇಜ್ ಇಂಡಿಯಾ, ಹುಳಿಮಾವು ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 10.45

ಛಾಯಾಗ್ರಹಣ ಉಪಕರಣಗಳ ವಸ್ತು ಪ್ರದರ್ಶನ, ಮಾರಾಟ ಮೇಳ: ಅತಿಥಿಗಳು: ಎನ್.ಎಸ್. ಬೋಸರಾಜು, ಮಂಜುನಾಥ ರೇವಣ್ಣ, ಆಯೋಜನೆ: ತ್ರಿಪುರವಾಸಿನಿ ಅರಮನೆ ಮೈದಾನ, ಬೆಳಿಗ್ಗೆ 11

ಡಾ.ಬಿ.ಆರ್. ಅಂಬೇಡ್ಕರ್ ಜನ್ಮದಿನಾಚರಣೆ: ಉದ್ಘಾಟನೆ: ವಿ. ಅನ್ಬುಕುಮಾರ್, ಅತಿಥಿಗಳು: ಎಂ.ವಿ. ವೆಂಕಟೇಶ್, ವೈ.ಎಸ್. ಪಾಟೀಲ್, ಬಿ.ವೈ. ಶ್ರೀನಿವಾಸ್, ಜಿ.ಟಿ. ಪುತ್ರ, ಶಿವಸುಂದರ್, ಸನ್ಮಾನ: ಅಮೃತ ಮಹಾಲಿಂಗ ನಾಯ್ಕ, ವಿ. ನರಸಿಂಹಯ್ಯ, ಅಧ್ಯಕ್ಷತೆ: ಎ. ಪದ್ಮಯ ನಾಯ್ಕ, ಆಯೋಜನೆ: ಕೃಷಿ ಇಲಾಖೆ, ಕರ್ನಾಟಕ ರಾಜ್ಯ ಕೃಷಿ ಇಲಾಖೆ ಪರಿಶಿಷ್ಟ ಜಾತಿ ಮತ್ತು ವರ್ಗದ ನೌಕರರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಸಂಗಮ ಸಭಾಂಗಣ, ಕೃಷಿ ಆಯುಕ್ತಾಲಯ, ಶೇಷಾದ್ರಿ ರಸ್ತೆ, ಬೆಳಿಗ್ಗೆ 11

ಸಂಕ್ಷಿಪ್ತ ಸುದ್ದಿ

ಸಕ್ಕರೆ ಉದ್ಯಮದ ಕರಾಳ ಮುಖ ಬಯಲು; ಕಡಾಡಿ

ಬೆಂಗಳೂರು: ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಮತ್ತು ಸರ್ಕಾರಕ್ಕೆ ಏನೂ ಲಾಭ ಆಗುತ್ತಿಲ್ಲ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ಅವರು ಹೇಳಿರುವುದು ಸಕ್ಕರೆ ಉದ್ಯಮದ ಕರಾಳ ಮುಖಕ್ಕೆ ಸಾಕ್ಷಿ ಎಂದು ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಹಾಗೂ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಹೇಳಿದ್ದಾರೆ.

ಕಬ್ಬು ಬೆಳೆಗಾರರಿಗೆ ವಿವಿಧ ಸಕ್ಕರೆ ಕಾರ್ಖಾನೆಗಳಿಂದ ₹400 ಕೋಟಿ ಬಾಕಿ ನೀಡಬೇಕಾಗಿದೆ. ಇದು ಕಬ್ಬು ಬೆಳೆಗಾರರ ಶೋಷಣೆಯಾಗಿದೆ. ರೈತರು ಕಬ್ಬು ನೀಡುವ ಸಂದರ್ಭದಲ್ಲಿ ಕಾರ್ಖಾನೆಗಳು ತೂಕದಲ್ಲಿ ಮೋಸ ಮಾಡುತ್ತಿವೆ. ಸರಿಯಾದ ಲೆಕ್ಕ ಪತ್ರ ಇಡದೇ ಸಕ್ಕರೆ ಮತ್ತು ಅದರ ಉಪ ಉತ್ಪನ್ನಗಳಲ್ಲಿ ಬಂದ ಲಾಭದಲ್ಲಿ ರೈತರಿಗೆ ಪಾಲು ಸಿಗುತ್ತಿಲ್ಲ ಎಂದು ಕಡಾಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಕ್ಕರೆ ಕಾರ್ಖಾನೆ ಮಾಲೀಕರು ಕೇವಲ ಕಾರ್ಖಾನೆ ಮಾಲೀಕರನ್ನಾಗಿ ನೋಡಬೇಕೇ ಹೊರತು, ಯಾವುದೇ ಪಕ್ಷ ಅಥವಾ ಸರ್ಕಾರ ಅವರ ಬೆನ್ನಿಗೆ ನಿಲ್ಲಬಾರದು. ರೈತರ ಪರವಾಗಿ ನಿಲ್ಲಬೇಕು ಎಂದು ಒತ್ತಾಯಿಸಿದರು.

‘ಬೆಂಗಳೂರಲ್ಲಿ ರಾಯಭಾರ ಕಚೇರಿ ಆರಂಭಿಸಿ’

ಬೆಂಗಳೂರು: ಅಮೆರಿಕದ ರಾಯಭಾರ ಕಚೇರಿಯನ್ನು ಬೆಂಗಳೂರಿನಲ್ಲೂ ತೆರೆಯಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಂಸದ ಪಿ.ಸಿ. ಮೋಹನ್ ಮನವಿ ಮಾಡಿದ್ದಾರೆ.

‘ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಪ್ರವಾಸದಲ್ಲಿರುವ ವೇಳೆ ಬೆಂಗಳೂರು ಮತ್ತು ಅಹಮದಾಬಾದ್‌ನಲ್ಲಿ ಅಮೆರಿಕ ಹೊಸ ಕಾನ್ಸುಲೇಟ್ ಕಚೇರಿಗಳನ್ನು ತೆರೆಯಲಿದೆ ಎಂದು ಶ್ವೇತಭವನದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಇದು ನಮ್ಮ ದೇಶಕ್ಕೆ ಹೆಮ್ಮೆಯ ಸಂಗತಿ’ ಎಂದಿದ್ದಾರೆ.

‘ಕರ್ನಾಟಕದ ಜನತೆ ಇದುವರೆಗೂ ಅಮೆರಿಕ ಪ್ರವಾಸ ಕೈಗೊಳ್ಳಲು ವೀಸಾ ಪಡೆಯಲು ಚೆನ್ನೈ ಅಥವಾ ಹೈದರಾಬಾದ್‌ಗೆ ತೆರಳುವುದು ಅನಿವಾರ್ಯವಾಗಿತ್ತು. ಇದೀಗ ಬೆಂಗಳೂರಿನಲ್ಲೂ ಅಮೆರಿಕದ ರಾಯಭಾರ ಕಚೇರಿ ತೆರೆದರೆ ಪ್ರಯಾಣಿಕರು ಇತರ ರಾಜ್ಯಗಳಿಗೆ ಹೋಗುವ ಅನಿವಾರ್ಯತೆ ಇರುವುದಿಲ್ಲ’ ಎಂದಿದ್ದಾರೆ.

ಗ್ಲೋಬಲ್ ಮಾಲ್ ಡಿವೈನಿಟಿ ಉದ್ಘಾಟನೆ ನಾಳೆ

ಬೆಂಗಳೂರು: ನಗರದ ಮೈಸೂರು ರಸ್ತೆಯಲ್ಲಿ ಪಂತರಪಾಳ್ಯದಲ್ಲಿ (ನಾಯಂಡಹಳ್ಳಿ ಮೆಟ್ರೋ ನಿಲ್ದಾಣದ ಬಳಿ) ವಿಶ್ವದರ್ಜೆಯ ‘ಗ್ಲೋಬಲ್ ಡಿವೈನಿಟಿ ಮಾಲ್’ ಇದೇ 24ರಂದು ಸಂಜೆ 5.30ಕ್ಕೆ ಅನಾವರಣಗೊಳ್ಳಲಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಿನಿಮಾ ನಟರಾದ ಕಿಚ್ಚ ಸುದೀಪ್, ಕ್ರೇಜಿ ಸ್ಟಾರ್ ರವಿಚಂದ್ರನ್ ಮತ್ತು ನಿರ್ಮಾಪಕಿ ಅಶ್ವಿನಿ ಪುನೀತ್ ರಾಜಕುಮಾರ್ ಅವರು ಉದ್ಘಾಟನೆಯ ವೇಳೆ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಸಮುದಾಯದ ಅವಶ್ಯಕತೆ ಗಳನ್ನು ಪೂರೈಸಲು ಪೂರಕವಾಗುವಂತೆ ಆಕರ್ಷಕವಾಗಿ ಈ ಮಾಲ್ ನಿರ್ಮಾಣಗೊಂಡಿದೆ.

ಭಾರತೀಯ ವಿಸ್ತರಣಾ ಶಿಕ್ಷಣ ಸಂಸ್ಥೆಯ ರಾಷ್ಟ್ರೀಯ ಸಮ್ಮೇಳನದಲ್ಲಿ ಕೇಂದ್ರ ಸಚಿವೆ ಶೋಭಾ

‘ಕೃಷಿ ನೀತಿಯ ಲೋಪ ಸರಿಪಡಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ನೀತಿ ನಿಯಮಗಳಲ್ಲಿ ಕೆಲವು ಲೋಪಗಳಿವೆ. ಸರ್ಕಾರ, ರೈತರು, ವಿಶ್ವವಿದ್ಯಾಲಯಗಳು ಒಟ್ಟಿಗೆ ಕುಳಿತು ಚರ್ಚಿಸಿ ಈ ಲೋಪಗಳನ್ನು ಸರಿಪಡಿಸಬೇಕು. ಸಣ್ಣ ಸಣ್ಣ ರೈತರೂ ಜಾಗತಿಕ ಮಾರುಕಟ್ಟೆಯಲ್ಲಿ ಪೈಪೋಟಿ ಮಾಡುವಂತಾಗಬೇಕು ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯ, ಭಾರತೀಯ ವಿಸ್ತರಣಾ ಶಿಕ್ಷಣ ಸಂಸ್ಥೆ, ಅದರ ಕರ್ನಾಟಕದ ವಿಭಾಗದ ಆಶ್ರಯದಲ್ಲಿ ಕೃಷಿ ವಿಶ್ವವಿದ್ಯಾಲ ಯದಲ್ಲಿ ಮೂರು ದಿನ ನಡೆಯುವ ‘ಭಾರತೀಯ ವಿಸ್ತರಣಾ ಶಿಕ್ಷಣ ಸಂಸ್ಥೆಯ ರಾಷ್ಟ್ರೀಯ ಸಮ್ಮೇಳನ’ವನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ, ತೋಟಗಾರಿಕೆ ಹೀಗೆ ರೈತರಿಗೆ ಸಂಬಂಧಿಸಿದ ವಿವಿಧ ವಿಶ್ವವಿದ್ಯಾಲಯಗಳ ನಡುವೆ ಸಂವಹನದ ಕೊರತೆ ಇದೆ. ಇದರಿಂದ ರೈತರಿಗೆ ಪ್ರಯೋಜನವಾಗುತ್ತಿಲ್ಲ. ಕೃಷಿ ಸಂಬಂಧಿ ಎಲ್ಲ ವಿಶ್ವವಿದ್ಯಾಲಯಗಳನ್ನು ಒಂದೇ ಸೂರಿನಡಿ ತರಬೇಕು. ಸಮಗ್ರ ಕೃಷಿ ವಿಶ್ವವಿದ್ಯಾಲಯ ಮಾಡಬೇಕು ಎಂಬ ಗುರಿ ಇದೆ ಎಂದು ತಿಳಿಸಿದರು.

ಕೃಷಿ ಉತ್ಪಾದನೆಯಷ್ಟೇ ಒತ್ತನ್ನು ಸಂಸ್ಕರಣೆ, ಮಾರುಕಟ್ಟೆಗೆ ನೀಡಬೇಕು. ಉತ್ಪಾದನೆ, ಸಂರಕ್ಷಣೆ, ಹವಾಮಾನ ವೈಪರೀತ್ಯಕ್ಕೆ ಹೊಂದಿಕೊಳ್ಳುವ ಪದ್ಧತಿ, ಮಣ್ಣಿನ ಗುಣಮಟ್ಟ ಸುಧಾರಿಸುವ ವಿಧಾನಗಳನ್ನು ಕೃಷಿಕರು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈಗ ರಫ್ತು ಮಾಡುತ್ತಿರುವ ಕೈಗಾರಿಕಾ ವಲಯವು ಕೃಷಿ ಉತ್ಪನ್ನ ಗಳಿಗೆ ಒತ್ತು ನೀಡುತ್ತಿಲ್ಲ. ತಂತ್ರಜ್ಞಾನ, ಆಟೊಮೊಬೈಲ್‌ಗಳಿಗಷ್ಟೇ ಪ್ರಾಮುಖ್ಯ ನೀಡುತ್ತಿದೆ. ಅದಕ್ಕಾಗಿ ಕೃಷಿ, ತೋಟಗಾರಿಕೆ ಇಲಾಖೆಯಡಿ ಕೃಷಿ ಉತ್ಪನ್ನಗಳ ರಫ್ತು ಕೂಡ ಬರಬೇಕು ಎಂದು ಆಶಿಸಿದರು.

ರಾಷ್ಟ್ರೀಯ ಮಳೆಯಾಶ್ರಿತ ಪ್ರದೇಶ ಪ್ರಾಧಿಕಾರದ ಸಿಇಒ ಅಶೋಕ್ ಎಂ., ‘ಮುಖ್ಯಕೃಷಿ ಜತೆಗೆ ಎರಡನೇ ಕೃಷಿಗೆ ಮಾರುಕಟ್ಟೆ ಕಲ್ಪಿಸದ, ಕೃಷಿ ಉದ್ದಿಮೆ ದಾರರನ್ನಾಗಿ ಮಾಡದ ಹೊರತು ಕಾರ್ಯಕ್ರಮ ಯಶಸ್ವಿಯಾಗುವುದು ಕಷ್ಟ. ಈ ನಿಟ್ಟಿನಲ್ಲಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಮಗ್ರ ರೂಪುರೇಷೆ ಮಾಡುವುದು ಅಗತ್ಯ’ ಎಂದು ತಿಳಿಸಿದರು.

‘ಮ್ಯಾನೇಜ್’ ಹೈದರಾಬಾದ್ ಮಹಾನಿರ್ದೇಶಕ ಪಿ. ಚಂದ್ರಶೇಖರ್, ಭಾರತೀಯ ವಿಸ್ತರಣಾ ಶಿಕ್ಷಣ ಸಂಸ್ಥೆಯ ಮುಖ್ಯ ವಿಜ್ಞಾನಿ ರಶ್ಮಿ ಸಿಂಗ್, ಭಾರತೀಯ ವಿಸ್ತರಣಾ ಶಿಕ್ಷಣ ಸಂಸ್ಥೆ (ಕರ್ನಾಟಕ ಚಾಪ್ಟರ್) ಅಧ್ಯಕ್ಷ ಜಿ. ಈಶ್ವರಪ್ಪ, ಪ್ರಾಧ್ಯಾಪಕ ವೈ.ಎನ್. ಶಿವಲಿಂಗಯ್ಯ, ಇದ್ದರು.

ಕೃಷಿ ವಿಸ್ತರಣೆಯಲ್ಲಿ ಅತ್ಯುತ್ತಮ ಸಾಧನೆಗಾಗಿ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ, ನಿವೃತ್ತ ಕುಲಸಚಿವ ಕೆ.ಎಂ. ಜಯರಾಮಯ್ಯ, ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಉಪಮಹಾ ನಿರ್ದೇಶಕ ಯು.ಎಸ್. ಗೌತಮ್‌ಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ದೇಶದ ವಿವಿಧ ಭಾಗಗಳಿಂದ ವಿದ್ಯಾರ್ಥಿಗಳು, ಕೃಷಿ ವಿಶ್ವವಿದ್ಯಾಲಯ, ಭಾರತೀಯ ಕೃಷಿ ಅನುಸಂಧಾನ ಪರಿಷತ್ತು, ಕೃಷಿ ವಿಜ್ಞಾನ ಕೇಂದ್ರ, ಸಂಶೋಧನಾ ಸಂಸ್ಥೆಗಳ ವಿಜ್ಞಾನಿಗಳು ಮತ್ತು ಅಭಿವೃದ್ಧಿ ಇಲಾಖೆಗಳ ವಿಸ್ತರಣಾಧಿಕಾರಿಗಳು, ಉದ್ದಿಮೆದಾರರು, ರೈತ ಉತ್ಪಾದಕರ ಸಂಸ್ಥೆಯ ಮುಖಂಡರು ಭಾಗವಹಿಸಿದ್ದರು.



ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಮೂರು ದಿನ ನಡೆಯುವ ‘ಭಾರತೀಯ ವಿಸ್ತರಣಾ ಶಿಕ್ಷಣ ಸಂಸ್ಥೆಯ ರಾಷ್ಟ್ರೀಯ ಸಮ್ಮೇಳನ’ದಲ್ಲಿ ಹಾಕಿದ್ದ ಮಳಿಗೆಗಳಲ್ಲಿ ಉತ್ಪನ್ನಗಳನ್ನು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವೆ ಶೋಭಾ ಕರಂದ್ಲಾಜೆ ವೀಕ್ಷಿಸಿದರು. ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಉಪಮಹಾನಿರ್ದೇಶಕ ಯು.ಎಸ್.ಗೌತಮ್, ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ.ಸುರೇಶ ಇದ್ದರು —ಪ್ರಜಾವಾಣಿ ಚಿತ್ರ

ಜಾಹೀರಾತು ದಂತಕಥೆ, ಅಮುಲ್ ಹುಡುಗಿಯ ಕರ್ತೃವಿಗೆ ನಮನಗಳು...

‘ವೈ20’ ಸಮಾಲೋಚನೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಇದೇ ಶುಕ್ರವಾರ ಹಾಗೂ ಶನಿವಾರ ‘ವೈ20’ ಸಮಾಲೋಚನೆ ಹಮ್ಮಿಕೊಂಡಿದ್ದು, ಯುವಜನರ ಆರೋಗ್ಯ ಹಾಗೂ ಯೋಗಕ್ಷೇಮದ ಬಗ್ಗೆ ವಿಷಯ ತಜ್ಞರು ಚರ್ಚಿಸಲಿದ್ದಾರೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, ‘ನಿಮ್ಹಾನ್ಸ್ ಸಮ್ಮೇಳನ ಸಭಾಂಗಣದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಶುಕ್ರವಾರ ಸಂಜೆ 4.30ಕ್ಕೆ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಆರ್. ಪಾಟೀಲ ಉದ್ಘಾಟಿಸಲಿ ದ್ದಾರೆ. ‘ಆರೋಗ್ಯ, ಯೋಗಕ್ಷೇಮ ಮತ್ತು ಕ್ರೀಡೆ: ಯುವಜನರಿಗೆ ಕಾರ್ಯಸೂಚಿ’ ಈ ವಿಷಯದ ಮೇಲೆ ಕಾರ್ಯಕ್ರಮ ಕೇಂದ್ರೀಕೃತವಾಗಿರುತ್ತದೆ. ಯುವ ಸಬಲೀಕರಣಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಯುವ ಮುಖಂಡರು, ನೀತಿ ನಿರೂಪಕರು, ತಜ್ಞರು ಪಾಲ್ಗೊಳ್ಳುತ್ತಾರೆ’ ಎಂದು ಹೇಳಿದರು.

‘ಯುವಜನರ ಆರೋಗ್ಯ, ಯೋಗಕ್ಷೇಮ ಮತ್ತು ಕ್ರೀಡೆಗಳಿಗೆ ಸಂಬಂಧಿಸಿದ ನೀತಿಗಳು ಹಾಗೂ ಕಾರ್ಯಕ್ರಮಗಳ ಬಗ್ಗೆ ಶಿಫಾರಸು ಮಾಡಲಾಗುತ್ತದೆ. ಇವುಗಳ ವಿವಿಧ ಆಯಾಮ ಪಸರಿಸಲು ಉಪಕ್ರಮಗಳನ್ನು ಅನ್ವೇಷಿಸಲಾಗುವುದು. ಸಾಂಪ್ರದಾಯಿಕ ಔಷಧಗಳು ಮತ್ತು ಯೋಗದ ಮೂಲಕ ದೈಹಿಕ, ಮಾನಸಿಕ ಸೇರಿ ಸಮಗ್ರ ಆರೋಗ್ಯ ರಕ್ಷಣೆಯ ಬಗ್ಗೆಯೂ ವಿವರಿಸ ಲಾಗುತ್ತದೆ. ಮಾದಕ ವ್ಯಸನ ನಿಯಂತ್ರಣ, ಆರೋಗ್ಯಕರ ಜೀವನ ವಿಧಾನದ ಬಗ್ಗೆಯೂ ಚರ್ಚೆ ನಡೆಯಲಿವೆ’ ಎಂದರು.

‘ಯುವಜನರ ನಡವಳಿಕೆ ಹಾಗೂ ಮಾನಸಿಕ ಆರೋಗ್ಯ, ರಸ್ತೆ ಸುರಕ್ಷತೆ ಮತ್ತು ಯುವಜನರು ಸೇರಿ ವಿವಿಧ ವಿಷಯಗಳ ಮೇಲೆ ಶನಿವಾರ ಬೆಳಿಗ್ಗೆ 9ರಿಂದ ಸಂಜೆ 6 ಗಂಟೆಯವರೆಗೆ ವಿಚಾರ ಸಂಕಿರಣ ನಡೆಯಲಿದೆ’ ಎಂದು ತಿಳಿಸಿದರು. ನಿಮ್ಹಾನ್ಸ್ ಪ್ರಾಧ್ಯಾಪಕರಾದ ಡಾ.ಬಿ.ಎಸ್.ಪ್ರದೀಪ್, ಡಾ.ಕೆ.ಎಸ್.ಮೀನಾ ಇದ್ದರು.

27ರಂದು ಕೆಂಪೇಗೌಡ ಜಯಂತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ತಾಲ್ಲೂಕುಗಳಲ್ಲೂ ಜೂನ್ 27ರಂದು ಕೆಂಪೇಗೌಡ ಜಯಂತಿ ಆಚರಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನಸೌಧದಲ್ಲಿ ಗುರುವಾರ ಕೆಂಪೇಗೌಡ ಜಯಂತಿ ಕುರಿತು ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಬೆಂಗಳೂರಿನಲ್ಲಿ ಜೂನ್ 27ರ ಬೆಳಗ್ಗೆ 9ಕ್ಕೆ ಕೆಂಪೇಗೌಡರ ನಾಲ್ಕು ಗೋಪುರಗಳ ಬಳಿ ಹಾಗೂ ಮಾಗಡಿಯಲ್ಲಿ ಜ್ಯೋತಿ ಯಾತ್ರೆಗೆ ಚಾಲನೆ ನೀಡಲಾಗುವುದು. ಈ ಕಾರ್ಯಕ್ರಮಕ್ಕೆ ಐವರು ಸಚಿವರನ್ನು ನಿಯೋಜಿಸಲಾಗಿದೆ. ಮಧ್ಯಾಹ್ನ 12ಕ್ಕೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ರಾಜ್ಯಮಟ್ಟದ ಕಾರ್ಯಕ್ರಮ ನಡೆಯಲಿದೆ. ಪ್ರಶಸ್ತಿ ಕಾರ್ಯಕ್ರಮ ನಡೆಯಲಿದೆ. ಮಾಜಿ ಸಚಿವ ಬಿ.ಎಲ್. ಶಂಕರ್ ನೇತೃತ್ವದ ಸಮಿತಿ ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡಲಿದೆ ಎಂದು ಮಾಹಿತಿ ನೀಡಿದರು.

ಬಿಬಿಎಂಪಿಯ ಪ್ರತಿ ವಾರ್ಡ್‌ನಲ್ಲೂ ಕಾರ್ಯಕ್ರಮ ನಡೆಯಲಿದೆ. ಬೆಂಗಳೂರು ಅಭಿವೃದ್ಧಿಗೆ ಸೇವೆ ಸಲ್ಲಿಸಿದವರನ್ನು ಗುರುತಿಸಿ ಜುಲೈ 9ರಂದು ಕೆಂಪೇಗೌಡ ಬೆಂಗಳೂರು ನಗರ ಪ್ರಶಸ್ತಿ ನೀಡಲಾಗುವುದು. ಜೂನ್ 28ರಿಂದ ಜುಲೈ 5ರವರೆಗೆ 28 ವಿಧಾನಸಭಾ ಕ್ಷೇತ್ರಗಳಲ್ಲೂ ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಆಚರಿಸಲು ತೀರ್ಮಾನಿಸಲಾಗಿದೆ. ಹಿಂದಿನ ಸರ್ಕಾರದ ತೆಗೆದುಕೊಂಡಿದ್ದ ನಿರ್ಧಾರದಂತೆ ಹಾಸನದಲ್ಲೂ ರಾಜ್ಯಮಟ್ಟದ ಕಾರ್ಯಕ್ರಮ ಆಯೋಜಿಸಲಾಗುವುದು ಎಂದರು.

28 ವಿಧಾನಸಭೆ ಕ್ಷೇತ್ರಗಳಲ್ಲಿ ದಿನಾಚರಣೆ

ಬೆಂಗಳೂರು: ನಗರದ 28 ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಜೂನ್ 28ರಿಂದ ನಾಡಪ್ರಭು ಕೆಂಪೇಗೌಡ ದಿನ ಆಚರಿಸಲಾಗುತ್ತದೆ. ಜುಲೈ 9ರಂದು ಸಮಾರೋಪ ಸಮಾರಂಭ ವಿಧಾನಸೌಧದ ಮುಂಭಾಗ ನಡೆಯಲಿದೆ.

ವಿಧಾನಸಭೆ ಕ್ಷೇತ್ರಗಳಲ್ಲಿ ಅಲ್ಲಿನ ಅನುಕೂಲಕ್ಕೆ ತಕ್ಕಂತೆ ಜೂನ್ 28ರಿಂದ ಜುಲೈ 8ರವರೆಗೆ ಯಾವುದಾದರೂ ಒಂದು ದಿನ ಆಚರಣೆ ಮಾಡಬಹುದು. ಅದಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ವಲಯಗಳ ಆಯುಕ್ತರು ಹಾಗೂ ಅಧಿಕಾರಿಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚನೆ ನೀಡಿದ್ದಾರೆ.

ಆಯಾ ವಲಯ ಆಯುಕ್ತರು, ವಲಯ ಜಂಟಿ ಆಯುಕ್ತರು ವಿಧಾನಸಭಾ ಕ್ಷೇತ್ರದ ಶಾಸಕರ ಸಮಯ ಪಡೆದು ಅದರಂತೆ ಕೆಂಪೇಗೌಡ ದಿನ ಆಚರಿಸುವ ದಿನ, ಸಮಯ ನಿಗದಿಪಡಿಸಿಕೊಳ್ಳಬೇಕು ಎಂದು ಸಭೆಯಲ್ಲಿ ಹೇಳಿದರು.

ವಿಧಾನಸೌಧ ಆವರಣದಲ್ಲಿ ಜೂನ್ 27ರಂದು ರಾಜ್ಯಮಟ್ಟದ ದಿನ ಆಚರಿಸಲಾಗುತ್ತಿದ್ದು, ಕೆಂಪೇಗೌಡರ 4 ಗೋಪುರ ಹಾಗೂ ಮಾಗಡಿಯಲ್ಲಿರುವ ನಾಡಪ್ರಭು ಕೆಂಪೇಗೌಡರ ಸಮಾಧಿ ಬಳಿಯಿಂದ ದಿವ್ಯ ಜ್ಯೋತಿಯ ಮೂಲಕ ಬೆಳಿಗ್ಗೆ 9ಕ್ಕೆ ಮೆರವಣಿಗೆ ಆರಂಭವಾಗಲಿದೆ. ಗೋಪುರಗಳಿಂದ ಹೊರಡುವ ಮೆರವಣಿಗೆಗೆ ಬೆಂಗಳೂರು ನಗರ ಪ್ರತಿನಿಧಿಸುವ ಸಚಿವರು ಚಾಲನೆ ನೀಡಲಿದ್ದು, ಶಾಸಕರ ಸಮ್ಮುಖದಲ್ಲಿ ಗೋಪುರಗಳಿಂದ ವಿಧಾನಸೌಧಧ ಆವರಣಕ್ಕೆ ದಿವ್ಯ ಜ್ಯೋತಿಯನ್ನು ಮೆರವಣಿಗೆಯ ಮೂಲಕ ತರಬೇಕು. ಅದಕ್ಕೆ ಬೇಕಾದಂತಹ ಸಿದ್ಧತೆಗಳನ್ನು ಮಾಡಿಕೊಳ್ಳಲು ದಕ್ಷಿಣ, ಪೂರ್ವ, ಪಶ್ಚಿಮ ಹಾಗೂ ಆರ್.ಆರ್. ನಗರ ವಲಯದ ಆಯುಕ್ತರಿಗೆ ಸೂಚನೆ ನೀಡಿದರು.

‘ತ್ಯಾಜ್ಯರಹಿತ ಸಮಾರಂಭ’ದತ್ತ ಒಲವು ಹೆಚ್ಚಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಕ ಬಳಕೆ ಪ್ಲಾಸ್ಟಿಕ್ ವಸ್ತುಗಳನ್ನು ಸಮಾರಂಭ ಗಳಲ್ಲಿ ಬಳಸಬಾರದು. ‘ತ್ಯಾಜ್ಯರಹಿತ ಸಮಾರಂಭ’ ಆಯೋಜಿಸುವತ್ತ ಎಲ್ಲರ ಒಲವು ಇರಬೇಕು ಎಂದು ಬಿಬಿಎಂಪಿ ದಕ್ಷಿಣ ವಲಯದ ಆಯುಕ್ತ ಜಯರಾಮ್ ರಾಯಪುರ ಹೇಳಿದರು.

ಏಕ ಬಳಕೆ ಪ್ಲಾಸ್ಟಿಕ್ ಬಳಕೆಯನ್ನು ಸ್ಥಗಿತಗೊಳಿಸುವ ನಿಟ್ಟಿನಲ್ಲಿ ಬಿ.ಎಂ.ಎಸ್ ತಾಂತ್ರಿಕ ಮಹಾವಿದ್ಯಾಲಯ ಹಾಗೂ ಎಸ್.ಡಬ್ಲ್ಯೂ.ಎಂ.ಆರ್‌ಟಿ ಸಹಯೋಗದೊಂದಿಗೆ ‘ತ್ಯಾಜ್ಯ ರಹಿತ ಸಮಾರಂಭಗಳ’ ಕುರಿತ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕಳೆದ ವರ್ಷದಿಂದ ಬೆಂಗಳೂರು ನಗರದಲ್ಲಿ ಸುಮಾರು ನಾಲ್ಕು ಸಾವಿರ ಟನ್‌ನಷ್ಟು ತ್ಯಾಜ್ಯ ಶೇಖರಣೆಯಾಗುತ್ತಿದೆ. ಅದರಲ್ಲಿ ಬಹುತೇಕ ಪ್ಲಾಸ್ಟಿಕ್ ತ್ಯಾಜ್ಯ ಇದೆ. ಪ್ಲಾಸ್ಟಿಕ್ ತ್ಯಾಜ್ಯದಿಂದ ವಾಯು ಮಾಲಿನ್ಯ ಉಂಟಾಗಲಿದ್ದು, ನಾಗರಿಕರಿಗೆ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತದೆ. ಆದ್ದರಿಂದ ನಗರದಲ್ಲಿ ದಿನನಿತ್ಯ ನಡೆಯುವ ವಿವಿಧ ಸಮಾರಂಭಗಳಲ್ಲಿ ಏಕ ಬಳಕೆ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಲು ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕಲ್ಯಾಣಮಂಟಪ, ಪಾರ್ಟಿಹಾಲ್, ಕ್ಯಾಟರಿಂಗ್ ಉದ್ದಿಮೆಗಳ ಮಾಲೀಕರಿಗೆ ಸೂಚಿಸಿದರು.

ಏಕಬಳಕೆ ಪ್ಲಾಸ್ಟಿಕ್ ಉಪಯೋಗಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಿ ಅದರ ಬದಲಾಗಿ ಅಡಿಕೆ ಪಟ್ಟೆ, ಬಾಳೆ ಎಲೆ ಹಾಗೂ ಮರುಬಳಸಬಹುದಾದಂತಹ ಉಕ್ಕಿನ ವಸ್ತುಗಳನ್ನು ಬಳಸಬಹುದು ಎಂದರು.

ಬಿಬಿಎಂಪಿ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರ, ಬಯೋ ಗ್ಯಾಸ್ ಘಟಕ, ಥರ್ಮಕೋಲ್ ರಿಸೈಕ್ಲಿಂಗ್ ಕೇಂದ್ರಗಳನ್ನು ತೆರೆಯಲಾಗಿದ್ದು, ಮುಂದಿನ ದಿನಗಳಲ್ಲಿ ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ಹೆಚ್ಚಿನ ಕೇಂದ್ರಗಳನ್ನು ತೆರೆಯಲಾಗುವದು ಎಂದರು.

ಅದಮ್ಯ ಚೇತನ ಫೌಂಡೇಷನ್ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್, ಸ್ತ್ರೀ ರೋಗ ತಜ್ಞ ಡಾ.ಮೀನಾಕ್ಷಿ ಭರತ್, ಬಿಬಿಎಂಪಿ ದಕ್ಷಿಣ ವಲಯದ ಜಂಟಿ ಆಯುಕ್ತ ಡಾ. ಕೆ.ಜಗದೀಶ್ ನಾಯಕ್ ಉಪಸ್ಥಿತರಿದ್ದರು.




‘ತ್ಯಾಜ್ಯ ರಹಿತ ಸಮಾರಂಭಗಳ’ ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಬಿಬಿಎಂಪಿ ದಕ್ಷಿಣ ವಲಯ ಆಯುಕ್ತ ಜಯರಾಮ್ ರಾಯಪುರ ಅವರು ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಬಳಸಬಹುದಾದ ವಸ್ತುಗಳನ್ನು ವೀಕ್ಷಿಸಿದರು

24 ಗಂಟೆಯೂ ಹೋಟೆಲ್ ತೆರೆಯಲು ಅವಕಾಶ ನೀಡಿ; ಡಿಸಿಎಂಗೆ ಮನವಿ

ಬೆಂಗಳೂರು: ಹೋಟೆಲ್‌ಗಳನ್ನು 24 ಗಂಟೆಯೂ ತೆರೆಯಲು ಅವಕಾಶ ನೀಡಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘ ಒತ್ತಾಯಿಸಿದೆ.

ಹೋಟೆಲ್ ವಲಯವನ್ನು ಕೈಗಾರಿಕೆ ಎಂದು ಮಾನ್ಯತೆ ನೀಡಬೇಕು. ಏಕ ಗವಾಕ್ಷಿ ವ್ಯವಸ್ಥೆ ಜಾರಿಗೊಳಿಸ ಬೇಕೆಂಬ ಬೇಡಿಕೆ ಈಡೇರಿಸುವುದರ ಜತೆಗೆ ಪ್ರವಾ ಸೋದ್ಯಮಕ್ಕೆ ಹೆಚ್ಚಿನ ಉತ್ತೇಜನ ನೀಡಬೇಕು ಎಂದು ಒತ್ತಾಯಿಸಿದರು.

ಹೋಟೆಲ್ ಸಂಘದ ಮನವಿಗೆ ಸಕರಾತ್ಮಕವಾಗಿ ಡಿ.ಕೆ.ಶಿವಕುಮಾರ್ ಅವರು ಸ್ಪಂದಿಸಿದ್ದಾರೆ ಎಂದು ಸಂಘದ ಅಧ್ಯಕ್ಷ ಪಿ.ಸಿ. ರಾವ್ ತಿಳಿಸಿದ್ದಾರೆ.



ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಪದಾಧಿಕಾರಿಗಳು ಡಿಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು. ಸಂಘದ ಅಧ್ಯಕ್ಷ ಪಿ.ಸಿ. ರಾವ್, ಕಾರ್ಯದರ್ಶಿ ವಿರೇಂದ್ರ ಕಾಮತ್, ಸಂತೋಷ್ ಪೈ ಇದ್ದರು

ಶಾಸಕಿ ಕರೆಮ್ಮಗೆ ‘ಯಶೋಧರಮ್ಮ ದಾಸಪ್ಪ ಸಮಾಜರತ್ನ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ



ಕರೆಮ್ಮ ಜಿ. ನಾಯಕ್

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರ ನೀಡುವ ‘ಯಶೋಧರಮ್ಮ ದಾಸಪ್ಪ ಸಮಾಜರತ್ನ ಪ್ರಶಸ್ತಿ’ಗೆ ದೇವದುರ್ಗ ಕ್ಷೇತ್ರದ ಜೆಡಿಎಸ್ ಶಾಸಕಿ ಕರೆಮ್ಮ ಜಿ.ನಾಯಕ್ ಆಯ್ಕೆಯಾಗಿ ದ್ದಾರೆ.

ಪ್ರಶಸ್ತಿಯು ₹ 10 ಸಾವಿರ ನಗದು ಒಳಗೊಂಡಿದೆ. ಯಶೋಧರಮ್ಮ ದಾಸಪ್ಪ ಅವರ ಜೀವನಾದರ್ಶನ ಪಾಲಿಸಿಕೊಂಡು ಬರುತ್ತಿರುವ ಮಹಿಳೆಯೊಬ್ಬರಿಗೆ ಪ್ರತಿ ವರ್ಷ ಈ ಪ್ರಶಸ್ತಿ ನೀಡಲಾಗುತ್ತಿದೆ.

ಕೇಂದ್ರವು ಇದೇ 26ರಂದು ಬೆಂಗಳೂರಿನ ನಯನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಂಡಿದೆ. ಲೇಖಕಿ ಹಾಗೂ ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ತಿಳಿಸಿದ್ದಾರೆ.

‘ವಲಸೆ ತಿಳಿಯಲು ತಜ್ಞರ ಸಮಿತಿ ರಚಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರಕ್ಕೆ ಹೊರ ರಾಜ್ಯದವರ ವಲಸೆ ತಿಳಿಯಲು ತಜ್ಞರ ಸಮಿತಿ ರಚಿಸಬೇಕು ಎಂದು ಕನ್ನಡ ಗೆಳೆಯರ ಬಳಗ ಹಾಗೂ ಕರ್ನಾಟಕ ವಿಕಾಸ ರಂಗ ಜಂಟಿಯಾಗಿ ಸರ್ಕಾರಕ್ಕೆ ಆಗ್ರಹಿಸಿವೆ.

ಈ ಬಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿವೆ. ‘ಬೆಂಗಳೂರಿನಲ್ಲಿ ಕನ್ನಡಿಗರಿಗೆ ಕೆಲಸ ಸಿಗುತ್ತಿಲ್ಲ. ಅದರಲ್ಲೂ ಖಾಸಗಿ ವಲಯದಲ್ಲಿ ಪರ ರಾಜ್ಯದವರೇ ತುಂಬಿದ್ದಾರೆ. ವ್ಯಾಪಾರ, ವಾಣಿಜ್ಯ ಕ್ಷೇತ್ರವೂ ವಲಸಿಗರ ಪಾಲಾಗಿದೆ. ಎಷ್ಟೋ ವಸತಿ ಸಮುಚ್ಚಯಗಳಲ್ಲಿ ಕನ್ನಡಿಗರಿಗೆ ಮನೆ ಸಿಗುವುದಿಲ್ಲ. 2011ರ ಜನಗಣತಿಯಂತೆ ಬೆಂಗಳೂರಿನಲ್ಲಿ ಕನ್ನಡಿಗರ ಸಂಖ್ಯೆ ಶೇ 38 ರಷ್ಟು ಮಾತ್ರ. ಪ್ರಸ್ತುತ ಕನ್ನಡಿಗರ ಸಂಖ್ಯೆ ಇನ್ನಷ್ಟು ಇಳಿದಿರುವ ಬಗ್ಗೆ ಕಳವಳ ವ್ಯಕ್ತವಾಗಿದೆ. ಹೊರ ರಾಜ್ಯದವರ ವಲಸೆಯು ಕನ್ನಡ ಭಾಷೆ, ಸಂಸ್ಕೃತಿಗಳ ಮೇಲೂ ಸವಾರಿ ನಡೆಸುತ್ತಿದೆ’ ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಹಾಗೂ ವಿಕಾಸರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಕಳವಳ ವ್ಯಕ್ತಪಡಿಸಿದ್ದಾರೆ.

‘ಹೊರ ರಾಜ್ಯದ ವಲಸೆಯ ಪರಿಣಾಮ ತಿಳಿದರೆ ಕನ್ನಡ ವಾತಾವರಣ ಸೃಷ್ಟಿಗೆ ಏನು ಮಾಡಬಹುದು ಎಂಬುದನ್ನು ತಿಳಿಯಲು ಸಹಾಯವಾಗುತ್ತದೆ. ಆದ್ದರಿಂದ ಒಂದು ತಜ್ಞರ ಸಮಿತಿಯನ್ನು ರಚಿಸಬೇಕು. ‘ಕನ್ನಡ ಬೆಂಗಳೂರು-ಸುಂದರ ಬೆಂಗಳೂರು’ ಎಂಬ ವಿಶೇಷ ಕಾರ್ಯಕ್ರಮ ರೂಪಿಸುವ ಅಗತ್ಯವಿದೆ’ ಎಂದು ಹೇಳಿದ್ದಾರೆ.

ಸಮುದ್ರ ಸೌತೆ ವಶ

ಚೆನ್ನೈ (ಪಿಟಿಐ): ರಾಮನಾಥಪುರಂ ಜಿಲ್ಲೆಯ ಮಂಡಪಂನಿಂದ ₹5.11 ಕೋಟಿ ಮೌಲ್ಯದ 1,137 ಕೆ.ಜಿ. ಸಮುದ್ರ ಸೌತೆಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಭಾರತೀಯ ಕರಾವಳಿ ರಕ್ಷಣಾ ಪಡೆ ಗುರುವಾರ ಮಾಹಿತಿ ನೀಡಿದೆ.

ಸಮುದ್ರ ಸೌತೆಯನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ.

ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ: ಅಪಘಾತ ತಡೆಗಿಲ್ಲ ಕ್ರಮ

ಒಂಬತ್ತು ತಿಂಗಳಲ್ಲಿ 158 ಸಾವು

• ಓದೇಶ ಸಕಲೇಶಪುರ

ರಾಮನಗರ: ಬೆಂಗಳೂರು–ಮೈಸೂರು ದಶಪಥ ಹೆದ್ದಾರಿಯಲ್ಲಿ 9 ತಿಂಗಳಲ್ಲಿ 595 ಅಪಘಾತಗಳು ಸಂಭವಿಸಿವೆ. 158 ಮಂದಿ ಜೀವ ಕಳೆದುಕೊಂಡಿದ್ದು, 538 ಜನ ಗಾಯಗೊಂಡಿದ್ದಾರೆ.

ಎರಡೂ ನಗರಗಳ ನಡುವಣ ಮೂರು ತಾಸಿನ ಪ್ರಯಾಣದ ಅವಧಿಯನ್ನು 90 ನಿಮಿಷಕ್ಕೆ ಇಳಿಸುವ ಹೆದ್ದಾರಿಯಿಂದ ಪ್ರಯಾಣಿಕರ ಪ್ರಾಣಕ್ಕೂ ಅಷ್ಟೇ ವೇಗವಾಗಿ ಕುತ್ತು ಬರುತ್ತಿದೆ. ಅಪಘಾತ ತಡೆಗೆ ಹೆದ್ದಾರಿ ಪ್ರಾಧಿಕಾರ ಕ್ರಮ ಕೈಗೊಳ್ಳುತ್ತಿಲ್ಲ ಎಂಬ ಆರೋಪ ಸಾರ್ವಜನಿಕರು ಹಾಗೂ ಪೊಲೀಸರಿಂದ ಕೇಳಿ ಬರುತ್ತಿದೆ.

ಕುಂಬಳಗೋಡಿನಿಂದ ಆರಂಭವಾಗುವ 118 ಕಿ.ಮೀ ಹೆದ್ದಾರಿಯು ರಾಮನಗರ ಜಿಲ್ಲೆಯಲ್ಲಿ 55 ಕಿ.ಮೀ, ಮಂಡ್ಯದಲ್ಲಿ 58 ಕಿ.ಮೀ ಹಾಗೂ ಮೈಸೂರು ಜಿಲ್ಲೆಯಲ್ಲಿ 5 ಕಿ.ಮೀ ಹಾದು ಹೋಗುತ್ತದೆ.

ವೇಗಕ್ಕಿಲ್ಲ ಮಿತಿ: 'ಹೆದ್ದಾರಿಯಲ್ಲಿ ವೇಗಕ್ಕೆ ಮಿತಿಯೇ ಇಲ್ಲವಾಗಿದೆ. ಬಹುತೇಕ ವಾಹನಗಳು 120–140 ಕಿ.ಮೀ ವೇಗದಲ್ಲಿ ಸಂಚರಿಸುವುದು ಸಾಮಾನ್ಯವಾಗಿದೆ. ಅಪಘಾತಕ್ಕೆ ಇದುವೇ ಮುಖ್ಯ ಕಾರಣ' ಎಂದು ಸಂಚಾರ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಒಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.



ಅಪಘಾತಕ್ಕೆ ಕಾರಣವಾಗಿರುವ ಅಂಶಗಳು ಹಾಗೂ ಅವುಗಳ ಪರಿಹಾರಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಪಟ್ಟಿಯನ್ನು ಹೆದ್ದಾರಿ ಪ್ರಾಧಿಕಾರಕ್ಕೆ ಕೊಟ್ಟಿದ್ದೇವೆ.
ಕಾರ್ತಿಕ್ ರೆಡ್ಡಿ
ಪೊಲೀಸ್ ವರಿಷ್ಠಾಧಿಕಾರಿ, ರಾಮನಗರ


'ಬಹುತೇಕ ಹೆದ್ದಾರಿಗಳಲ್ಲಿ ಪೊಲೀಸರು ವೇಗ ಅಳತೆ ವಾಹನದೊಂದಿಗೆ (ಇಂಟರ್‌ಸೆಪ್ಟರ್), ವಾಹನಗಳ ಮೇಲೆ ನಿಗಾ ಇಡುತ್ತಾರೆ. ದಶಪಥ ಹೆದ್ದಾರಿಯಲ್ಲಿ ಅದಕ್ಕೆ ಅವಕಾಶವಿಲ್ಲ' ಎಂದು ಹೇಳಿದರು.

ಸೂಚನಾ ಫಲಕ, ಗಸ್ತು ಇಲ್ಲ: 'ಹೆದ್ದಾರಿಯಲ್ಲಿ ಸೂಚನಾ ಫಲಕಗಳನ್ನೇ ಸರಿಯಾಗಿ ಹಾಕಿಲ್ಲ. ಅಪಾಯಕಾರಿ ತಿರುವು, ಏರಿಳಿತ ಹಾಗೂ ಸರ್ವೀಸ್ ರಸ್ತೆ ಮಾರ್ಗಗಳ ಬಗ್ಗೆ ಅರಿವಿಲ್ಲದ ಸವಾರರು ವೇಗವಾಗಿ ಬರುವುದರಿಂದಲೇ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿವೆ. ಇಂತಹ ಹಲವು ಅಪಘಾತದ ಸ್ಥಳಗಳು ಹೆದ್ದಾರಿಯುದ್ದಕ್ಕೂ ಇವೆ' ಎನ್ನುತ್ತಾರೆ ಸಂಚಾರ ಕಾನ್‌ಸ್ಟೆಬಲ್ ಒಬ್ಬರು.

'ಅತಿ ವೇಗದಿಂದಾಗಿ ವಾಹನದ ನಿಯಂತ್ರಣ ಕಳೆದುಕೊಂಡು ಸ್ವಯಂ ಆಗಿ ಸಂಭವಿಸುವ ಅಪಘಾತಗಳು ಸಾಮಾನ್ಯವಾಗಿವೆ. ಹೆದ್ದಾರಿಯಲ್ಲಿ ನಿರಂತರವಾಗಿ ಗಸ್ತು ವ್ಯವಸ್ಥೆ ಇಲ್ಲದಿರುವುದರಿಂದ ಚಾಲಕರಿಗೆ ಭಯವಿಲ್ಲದಂತಾಗಿದೆ' ಎಂದು ಸಮಸ್ಯೆಗಳನ್ನು ಬಿಚ್ಚಿಟ್ಟರು.

ಅಪಘಾತ ತಡೆಗೆ ಪೊಲೀಸರ ಸಲಹೆ

- ಇದುವರೆಗಿನ ಅಪಘಾತಗಳನ್ನು ಆಧರಿಸಿ ಅಂತಹ ಅಪಘಾತದ ಸ್ಥಳಗಳನ್ನು ಗುರುತಿಸಬೇಕು
- ಅಪಘಾತವಾದ ತಕ್ಷಣ ಸ್ಥಳಕ್ಕೆ ತೆರಳಲು ಟೋಯಿಂಗ್ ವಾಹನ ವ್ಯವಸ್ಥೆ ಮಾಡಬೇಕು. ತುರ್ತು ಸಂದರ್ಭದಲ್ಲಿ ಪೊಲೀಸ್ ವಾಹನಗಳ ಪ್ರವೇಶಕ್ಕೆ ಟೋಲ್‌ನಲ್ಲಿ ಅವಕಾಶ ಕಲ್ಪಿಸಬೇಕು
- ತಿರುವು, ಏರಿಳಿತ, ಸರ್ವೀಸ್ ರಸ್ತೆ ಇರುವೆಡೆ ಸೂಚನಾ ಫಲಕ ಹಾಕಬೇಕು. ಜನರು ರಸ್ತೆ ದಾಟಲು ಸ್ಕೈವಾಕ್ ನಿರ್ಮಿಸಬೇಕು
- ಹಿಟ್ ಆ್ಯಂಡ್ ರನ್ ಅಪಘಾತ ಪತ್ತೆಗೆ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು. ಮಳೆ ನೀರು ನಿಲ್ಲುವ ತಗ್ಗು ಪ್ರದೇಶಗಳನ್ನು ಸರಿಪಡಿಸಬೇಕು
- ರಸ್ತೆಯಲ್ಲಿ ವಾಹನಗಳು ಜಾರದಂತೆ ತಡೆಯಲು ಮರಳು ಮಿಶ್ರಿತ ಮಣ್ಣನ್ನು ಆಗಾಗ ಸ್ವಚ್ಛಗೊಳಿಸಬೇಕು
- ಸರ್ವೀಸ್ ರಸ್ತೆ ತಿರುವು ಇರುವೆಡೆ ಸಿಗ್ನಲ್, ಅಳವಡಿಕೆ ಹೆದ್ದಾರಿಯುದ್ದಕ್ಕೂ ವಿದ್ಯುತ್ ದೀಪದ ವ್ಯವಸ್ಥೆ ಮಾಡಬೇಕು
- ಇಳಿಜಾರು ಇರುವೆಡೆ ವೇಗ ನಿಯಂತ್ರಿಸಲು ರಸ್ತೆ ಉಬ್ಬು ಹಾಕಬೇಕು. ಕಿತ್ತು ಹೋಗಿರುವ ಹೆದ್ದಾರಿ ತಂತಿ ಬೇಲಿಗಳನ್ನು ದುರಸ್ತಿ ಮಾಡಬೇಕು



ಜಿಲ್ಲೆ	ಅಪಘಾತ	ಸಾವು	ಗಾಯ
ರಾಮನಗರ	283	87	297
ಮಂಡ್ಯ	282	63	210
ಮೈಸೂರು	30	8	31

(2022ರ ಸೆಪ್ಟೆಂಬರ್‌ನಿಂದ 2023ರ ಜೂನ್ 20ರವರೆಗೆ)

ಸುದ್ದಿ 2 ನಿಮಿಷ

'ಹಳಿ ತಪ್ಪಿದ ವಿದ್ಯುತ್ ವ್ಯವಸ್ಥೆ'

ಬೆಂಗಳೂರು: ರಾಜ್ಯ ಸರ್ಕಾರದ ವಿದ್ಯುತ್ ನೀತಿ ಖಂಡಿಸಿ ಮೊದಲ ಬಾರಿಗೆ ಕೈಗಾರಿಕೋದ್ಯಮಿಗಳು ಮುಷ್ಕರ ನಡೆಸಿರುವುದು ರಾಜ್ಯದಲ್ಲಿ ವಿದ್ಯುತ್ ವ್ಯವಸ್ಥೆ ಹಳಿ ತಪ್ಪಿರುವುದಕ್ಕೆ ಸಾಕ್ಷಿ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಬೊಮ್ಮಾಯಿ, ಮುಂದಿನ ದಿನಗಳಲ್ಲಿ ಸಾಮಾನ್ಯ ಜನರಿಂದ ಹಿಡಿದು ಕೈಗಾರಿಕೆಗಳಿಗೂ ವಿದ್ಯುತ್ ಕ್ಷಾಮ ತಲೆದೋರುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.



ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ಬೇಕಾಗಿರುವ ಹಣಕಾಸನ್ನು ಬಿಡುಗಡೆ ಮಾಡಬೇಕು ಮತ್ತು ವಿದ್ಯುತ್ ಬಳಕೆದಾರರ ಮೇಲೆ ಹೊರೆ ಕಡಿಮೆ ಮಾಡಬೇಕು. ಪೂರ್ವ ತಯಾರಿ ಇಲ್ಲದೆ ಗ್ಯಾರಂಟಿ ಜಾರಿ ಮಾಡಿದರೆ ಅದರ ಎಲ್ಲ ಭಾರವೂ ಜನ ಸಾಮಾನ್ಯರ ಮೇಲೆ ಬೀಳುತ್ತದೆ. ಇದನ್ನು ತಪ್ಪಿಸಬೇಕು. ಈಗಿರುವ ಲೋಪವನ್ನು ಸರಿಪಡಿಸಲಿ ಎಂದು ಅವರು ತಿಳಿಸಿದ್ದಾರೆ.

ಕರ್ನಾಟಕವು ಕೈಗಾರಿಕೆಯಲ್ಲಿ ಅತ್ಯಂತ ಮುಂದುವರೆದ ರಾಜ್ಯ. ಇಲ್ಲಿ ಸಣ್ಣ ಉದ್ಯಮಗಳಿಂದ ಹಿಡಿದು ಬೃಹತ್ ಕೈಗಾರಿಕೆಗಳು ಕಾರ್ಯ ನಿರ್ವಹಿಸುತ್ತಿವೆ. ರಾಜ್ಯ ಕಾಂಗ್ರೆಸ್ ಸರ್ಕಾರದ ವಿದ್ಯುತ್ ನೀತಿ ಸಾಮಾನ್ಯ ಗ್ರಾಹಕರು ಮತ್ತು ಕೈಗಾರಿಕೋದ್ಯಮಿಗಳಿಗೆ ಮಾರಕವಾಗಿರುವುದು ದುರ್ದೈವ ಎಂದು ಬಸವರಾಜ ಬೊಮ್ಮಾಯಿ ಅವರು ಹೇಳಿದ್ದಾರೆ

ವಿದ್ಯುತ್ ತೆರಿಗೆ ಕಡಿತಕ್ಕೆ ಕುಮಾರಸ್ವಾಮಿ ಆಗ್ರಹ

ಬೆಂಗಳೂರು: ವಿದ್ಯುತ್ ಮೇಲೆ ವಿಧಿಸಿರುವ ಶೇ 9ರಷ್ಟು ತೆರಿಗೆಯನ್ನು ಕಡಿತಗೊಳಿಸಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಒತ್ತಾಯಿಸಿದರು.

ಮಾಹಿತಿ ತಂತ್ರಜ್ಞಾನ ಮತ್ತು ಎಲೆಕ್ಟ್ರಾನಿಕ್ಸ್ ಉಪಕರಣಗಳ ಉತ್ಪಾದನಾ ಘಟಕಗಳ (ಐಟಿ ಆ್ಯಂಡ್ ಇಎಸ್‌ಡಿಎಂ) ಮುಖ್ಯಸ್ಥರಿಂದ ಗುರುವಾರ ಅಹವಾಲು ಸ್ವೀಕರಿಸಿದ ನಂತರ ಅವರು ಮಾತನಾಡಿದರು.

ದುಬಾರಿ ವಿದ್ಯುತ್ ಶುಲ್ಕದಿಂದ ಕೈಗಾರಿಕಾ ವಲಯ ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ಕೈಗಾರಿಕೋದ್ಯಮಿಗಳು ತಮ್ಮ ಸಮಸ್ಯೆ ಹೇಳಿಕೊಳ್ಳಲು ಮುಖ್ಯಮಂತ್ರಿ ಬಳಿ ಹೋದರೆ ಭೇಟಿಯ ಅವಕಾಶವನ್ನೆ ನೀಡಿಲ್ಲ. ರಾಜ್ಯದ ಆರ್ಥಿಕತೆಗೆ ಸಣ್ಣ ಕೈಗಾರಿಕೆಗಳು ದೊಡ್ಡ ಕೊಡುಗೆ ನೀಡುತ್ತಿವೆ. ಸರ್ಕಾರದ ಕೈಗಾರಿಕಾ ವಿರೋಧಿ ಕ್ರಮಗಳಿಂದಾಗಿ ಉದ್ಯೋಗ ಸೃಷ್ಟಿ, ಹೂಡಿಕೆ ಮೇಲೆ ಪರಿಣಾಮ ಬೀರುತ್ತದೆ ಎಂದು ಎಚ್ಚರಿಸಿದರು.

ತಕ್ಷಣ ವಿದ್ಯುತ್ ತೆರಿಗೆಯನ್ನು ಶೇ 3ರಿಂದ 4ರಷ್ಟು ಕಡಿಮೆ ಮಾಡಬೇಕು. ಬಡವರ ಮನೆಗಳಲ್ಲಿ 'ಗೃಹ ಜ್ಯೋತಿ' ಬೆಳಗಿಸುವ ನಾಟಕವಾಡುತ್ತಿರುವ ಕಾಂಗ್ರೆಸ್, ಬೆಲೆ ಏರಿಕೆಯ ಬರೆ ಎಳೆಯುತ್ತಿದೆ. ಎರಡು, ಮೂರುಪಟ್ಟು ಅಧಿಕ ವಿದ್ಯುತ್ ಶುಲ್ಕ ವಿಧಿಸಿದೆ. ಇದು 'ಸುಡು ಜ್ಯೋತಿ' ಎಂದು ಟೀಕಿಸಿದರು.

ವಿದ್ಯುತ್ ಶುಲ್ಕದ ವಿಚಾರದಲ್ಲಿ ಎರಡೂ ರಾಷ್ಟ್ರೀಯ ಪಕ್ಷಗಳು ಆಟ ಆಡುತ್ತಿವೆ. ಕಾಂಗ್ರೆಸ್, ಬಿಜೆಪಿ ಹೆಚ್ಚಳದ ಹೊಣೆ ಕುರಿತು ಆರೋಪ–ಪ್ರತ್ಯಾರೋಪದಲ್ಲಿ ತೊಡಗಿವೆ. ಜವಾಬ್ದಾರಿಯಿಂದ ಪಲಾಯನ ಮಾಡುತ್ತಿವೆ. ಸರ್ಕಾರ ಒಪ್ಪಿಗೆ ನೀಡದೆ ಕೆಇಆರ್‌ಸಿ ಶುಲ್ಕ ಹೆಚ್ಚಳ ಮಾಡುವುದಿಲ್ಲ. ಆಗ ಅನುಮತಿ ಕೊಟ್ಟ ಬಿಜೆಪಿ ಈಗ ನಾಟಕವಾಡುತ್ತಿದೆ ಎಂದರು.

ಮಾಧ್ಯಮ ನಿರ್ಬಂಧ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಕಲಾಪದ ನಡಾವಳಿಗಳನ್ನು ಮಾಧ್ಯಮಗಳು ವಿಡಿಯೊ ಮತ್ತು ಛಾಯಾ ಚಿತ್ರ ತೆಗೆಯಲು ಹಿಂದಿನ ಸರ್ಕಾರ ವಿಧಿಸಿದ್ದ ನಿರ್ಬಂಧ ಮುಂದುವರಿಯಲಿದೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿದ್ದ ನಿರ್ಬಂಧವನ್ನು ಕಾಂಗ್ರೆಸ್ ಸರ್ಕಾರ ತೆಗೆಯಬಹುದೆಂಬ ನಿರೀಕ್ಷೆ ಹುಸಿಯಾಗಿದೆ. ರಾಜ್ಯಪಾಲರ ಭಾಷಣ ಮತ್ತು ಬಜೆಟ್ ಅಧಿವೇಶನಕ್ಕೆ ತಯಾರಿ ಕುರಿತಂತೆ ಗುರುವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಈ ಹಿಂದೆ ಯಾವ ನಿಯಮ ಪಾಲಿಸಲಾಗುತ್ತಿತ್ತೋ ಅದನ್ನೇ ಮುಂದುವರಿಸಿಕೊಂಡು ಹೋಗಬೇಕು, ಯಾವುದೇ ಬದಲಾವಣೆ ಬೇಡ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಸಭೆಯಲ್ಲಿ ಸೂಚಿಸಿದರು ಎಂದು ಮೂಲಗಳು ಹೇಳಿವೆ.

ಹಿಂದಿನ ಸರ್ಕಾರದಲ್ಲಿ ಅಂದಿನ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ವಿಧಾನಸಭೆಯೊಳಗೆ ಕಲಾಪದ ನೇರ ಪ್ರಸಾರಕ್ಕೆ ಖಾಸಗಿ ಸುದ್ದಿವಾಹಿನಿಗಳು ಮತ್ತು ಪತ್ರಿಕೆಗಳ ಛಾಯಾಗ್ರಾಹಕರಿಗೆ ನಿರ್ಬಂಧ ವಿಧಿಸಿದ್ದರು. ಆ ಸಂದರ್ಭದಲ್ಲಿ ಸಿದ್ದರಾಮಯ್ಯ ಸೇರಿ ಕಾಂಗ್ರೆಸ್‌ನ ಪ್ರಮುಖ ನಾಯಕರು ಕಾಗೇರಿಯವರ ಕ್ರಮವನ್ನು ಕಟುವಾಗಿ ಟೀಕಿಸಿದ್ದರು. ಈಗ ಸಚಿವರಾಗಿರುವ ಪ್ರಿಯಾಂಕ್ ಖರ್ಗೆ ಅವರು ಹಿಂದಿನ ಸರ್ಕಾರದ ಅವಧಿಯ ಕಲಾಪದ ವೇಳೆ, ಮಾಧ್ಯಮವನ್ನು ಹತ್ತಿಕ್ಕಲಾಗುತ್ತಿದೆ ಎಂದು ಪದೇ ಪದೇ ಹರಿಹಾಯ್ದಿದ್ದರು.

ಆದರೆ, ವಿಧಾನಪರಿಷತ್ತಿನಲ್ಲಿ ವಿಡಿಯೊ ಚಿತ್ರೀಕರಣ ಮತ್ತು ಛಾಯಾಚಿತ್ರ ಸೆರೆ ಹಿಡಿಯಲು ಯಾವುದೇ ನಿರ್ಬಂಧ ವಿಧಿಸಿಲ್ಲ. ವಿಧಾನಸಭೆಯಲ್ಲಿ ಕಲಾಪದ ದೃಶ್ಯಾವಳಿಯ ಲಿಂಕ್ ಅನ್ನು ಸುದ್ದಿವಾಹಿನಿಗಳಿಗೆ ನೀಡಲಾಗುತ್ತಿತ್ತು. ಈ ವ್ಯವಸ್ಥೆ ಮುಂದುವರಿಯಲಿದೆ.

'ಹಳೇ ಪದ್ಧತಿಯೇ ಮುಂದುವರಿಯುತ್ತದೆ'

'ಅಧಿವೇಶನದಲ್ಲಿ ಮಾಧ್ಯಮಗಳ ನಿರ್ಬಂಧಕ್ಕೆ ಸಂಬಂಧಿಸಿದಂತೆ ಈ ಹಿಂದಿನ ಪದ್ಧತಿಯೇ ಮುಂದುವರಿಯಲಿದೆ' ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ವಿಚಾರದ ಬಗ್ಗೆ ವಿಧಾನಸಭೆ ಕಲಾಪ ಸಲಹಾ ಸಮಿತಿಯಲ್ಲಿ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಇದು ಸರ್ಕಾರಕ್ಕೆ ಬಿಟ್ಟ ವಿಚಾರ' ಎಂದು ಹೇಳಿದರು.



ಯು.ಟಿ ಖಾದರ್

10 ದಿನಗಳಲ್ಲಿ ಶಾಲೆಗಳಿಗೆ ತಿದ್ದುಪಡಿ ಕೈಪಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನ ಸರ್ಕಾರದ ಅವಧಿಯ ಪಠ್ಯಗಳಲ್ಲಿನ ಕೆಲ ಪಾಠಗಳನ್ನು ಕೈಬಿಟ್ಟು ಮಾಡಿರುವ ತಿದ್ದುಪಡಿ ಕೈಪಿಡಿಯನ್ನು 10 ದಿನಗಳ ಒಳಗೆ ಶಾಲೆಗೆ ತಲುಪಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

ಬದಲಿಸಲಾದ ಪಾಠಗಳು, ಪರಿಷ್ಕರಣೆಗೆ ಒಳಗಾದ ಕೆಲ ಪಾಠಗಳಲ್ಲಿನ ತಿದ್ದುಪಡಿ ಸೇರಿ 150 ಪುಟಗಳಾಗಬಹುದು. ಸುಮಾರು ₹ 20 ಲಕ್ಷ ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿದೆ. ಮುಂದಿನ ಶೈಕ್ಷಣಿಕ ವರ್ಷದ ಪಠ್ಯಪರಿಷ್ಕರಣೆಗಾಗಿ ಸಮಿತಿ ರಚಿಸುವ ಕುರಿತು ಚರ್ಚೆಗಳು ನಡೆದಿವೆ. ಸಮಿತಿಯ ನೀಡುವ ವರದಿ ನಂತರ ಪಠ್ಯ-ಪರಿಷ್ಕರಣೆಯ ನಿಯಮಗಳನ್ನು ರೂಪಿಸಲಾಗುವುದು. 1ರಿಂದ 12ನೇ ತರಗತಿಯವರೆಗೂ ಮಕ್ಕಳ ಕಲಿಕೆಗೆ ಪೂರಕವಾಗಿ ರಾಜ್ಯ ಶಿಕ್ಷಣ ನೀತಿ ರೂಪಿಸಲಾಗುವುದು ಎಂದರು.

ಶಾಲಾ ಮಕ್ಕಳಿಗೆ ಲಿಖಿತ ಪರೀಕ್ಷೆಗಿಂತ ಆಂತರಿಕ ಅಂಕಗಳ ಆಧಾರದ ಮೇಲೆ ಮಕ್ಕಳ ಕಲಿಕೆಯ ಮೌಲ್ಯಮಾಪನಕ್ಕೆ ಹೆಚ್ಚು ಒತ್ತು ನೀಡುವ ಚಿಂತನೆ ನಡೆದಿದೆ. ಪರೀಕ್ಷೆಗಳಿರುವುದು ಮಕ್ಕಳನ್ನು ಅನುತ್ತೀರ್ಣ ಮಾಡಲು ಅಲ್ಲ, ಅವರ ಬುದ್ಧಿಮಟ್ಟ ಪರೀಕ್ಷಿಸಲು. ಹಾಗಾಗಿ, ಆಂತರಿಕ ಅಂಕಗಳಿಗೆ ಹೆಚ್ಚು ಒತ್ತು ನೀಡುವ ಕುರಿತು ಚರ್ಚೆ ನಡೆದಿದೆ ಎಂದರು.

ನಗರಪ್ರದೇಶಕ್ಕೂ ವೈದ್ಯರ ಕಡ್ಡಾಯ ಸೇವೆ: ಮಸೂದೆ ಮಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಡ್ಡಾಯ ಗ್ರಾಮೀಣ ಸೇವೆಯಲ್ಲಿರುವ ಎಂಬಿಬಿಎಸ್ ವೈದ್ಯರನ್ನು ನಗರ ಪ್ರದೇಶಗಳಿಗೂ ಬಳಸಿಕೊಳ್ಳಲು ಅವಕಾಶ ಆಗುವಂತೆ ಕಾಯ್ದೆ ತಿದ್ದುಪಡಿಗೆ ಈ ಬಾರಿಯ ಅಧಿವೇಶನದಲ್ಲಿ ಮಸೂದೆ ಮಂಡಿಸಲು ರಾಜ್ಯ ಸರ್ಕಾರ ಮುಂದಾಗಿದೆ.



ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಟಿ.ಎಂ. ವಿಜಯ್ ಭಾಸ್ಕರ್ ಅವರು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರನ್ನು ಗುರುವಾರ ಭೇಟಿ ಮಾಡಿ ಆರೋಗ್ಯ ಸೇವೆ ಸುಧಾರಣೆಗೆ ಸಂಬಂಧಿಸಿದಂತೆ ಪ್ರಮುಖ 21 ಅಂಶಗಳನ್ನು ಒಳಗೊಂಡ ವರದಿ ಸಲ್ಲಿಸಿದರು.

ಈ ವೇಳೆ ಈ ವಿಷಯ ತಿಳಿಸಿದ ಸಚಿವರು, '2–3 ಹಂತಗಳಲ್ಲಿ ಆಯೋಗದ ಶಿಫಾರಸುಗಳನ್ನು ಅನುಷ್ಠಾನಗೊಳಿಸುವ ಭರವಸೆ ನೀಡಿದರು. ಕೆಲವು ಶಿಫಾರಸುಗಳನ್ನು ಈ ಬಾರಿಯ ಬಜೆಟ್‌ನಲ್ಲೇ ಅನುಷ್ಠಾನಗೊಳಿಸಲಾಗುವುದು' ಎಂದರು.

'ಸರ್ಕಾರಿ ಆಸ್ಪತ್ರೆಗಳಲ್ಲಿ ನರ್ಸಿಂಗ್ ಕೋರ್ಸ್ ಆರಂಭಿಸುವ ಭಾಗವಾಗಿ, ಈಗಾಗಲೇ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಆರಂಭವಾಗಿದೆ. ತಾಲ್ಲೂಕು ಮಟ್ಟದ ಪ್ರಮುಖ ಆಸ್ಪತ್ರೆಗಳಲ್ಲಿ ನರ್ಸಿಂಗ್ ಕೋರ್ಸ್ ಆರಂಭಿಸಲಾಗುವುದು' ಎಂದೂ ಹೇಳಿದರು.

ಆಯೋಗದ ಪ್ರಮುಖ ಶಿಫಾರಸುಗಳು

- ನರ್ಸಿಂಗ್ ನಿರ್ದೇಶನಾಲಯ ಸ್ಥಾಪಿಸಬೇಕು
- ಕಡ್ಡಾಯ ಗ್ರಾಮೀಣ ಸೇವೆಯಲ್ಲಿರುವ ಎಂಬಿಬಿಎಸ್ ವೈದ್ಯರನ್ನು ನಗರಪ್ರದೇಶಗಳಲ್ಲೂ ಬಳಸಬೇಕು
- ಸರ್ಕಾರಿ ವೈದ್ಯರ ಖಾಸಗಿ ಕಾರ್ಯನಿರ್ವಹಣೆ ನಿಷೇಧಿಸಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಜೆ ಒಪಿಡಿ ಆರಂಭಿಸಬೇಕು
- ಕೆಲಸದ ಹೊರೆ ಇರುವ ತಾಲ್ಲೂಕು ಆಸ್ಪತ್ರೆಗಳಿಗೆ 50 ಹಾಸಿಗೆಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಬೇಕು
- ನಗರ ಪಿಎಚ್‌ಸಿಗಳಲ್ಲಿ ವಾರಕ್ಕೊಮ್ಮೆ ಗಂಟೆ ಆಧಾರದಲ್ಲಿ ಸ್ತ್ರೀರೋಗ ತಜ್ಞರು, ಮಕ್ಕಳ ವೈದ್ಯರು, ಅರಿವಳಿಕೆ ತಜ್ಞರು, ದಂತ ಶಸ್ತ್ರಚಿಕಿತ್ಸಕರು, ತಿಂಗಳಿಗೊಮ್ಮೆ ಗಂಟೆ ಆಧಾರದಲ್ಲಿ ಮೂಳೆಚಿಕಿತ್ಸಕರು, ಮನೋವೈದ್ಯರು, ಫಿಸಿಯೋಥೆರಪಿಸ್ಟ್, ಜೆರಿಯಾಟ್ರೀಶಿಯನ್ ತಜ್ಞರ ಸೇವೆಗಳನ್ನು ಪಡೆಯಲು ಹಣ ಒದಗಿಸಬಹುದು
- ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ 'ಆಸ್ಪತ್ರೆ ವ್ಯವಸ್ಥಾಪಕ' ಹುದ್ದೆ ಸೃಜಿಸಬೇಕು
- ಎಎನ್‌ಎಂ ಮತ್ತು ಪುರುಷ ಆರೋಗ್ಯ ಕಾರ್ಯಕರ್ತರು ದ್ವಿ-ಚಕ್ರ ವಾಹನ ಖರೀದಿಸಲು ಶೇ 50ಷ್ಟು ಸಹಾಯಧನ ನೀಡಬೇಕು
- 100 ಹಾಸಿಗೆಗಳ ಸಾಮರ್ಥ್ಯದ ತಾಲ್ಲೂಕು ಆಸ್ಪತ್ರೆಗಳಲ್ಲಿ ಜಿಎನ್‌ಎಂ ಅಥವಾ ಬಿ.ಎಸ್‌ಸಿ ನರ್ಸಿಂಗ್ ಕೋರ್ಸ್‌ಗಳ 20 ಸೀಟ್‌ಗಳೊಂದಿಗೆ ನರ್ಸಿಂಗ್ ಕಾಲೇಜು ಹಾಗೂ 10 ಸೀಟುಗಳೊಂದಿಗೆ ಪ್ಯಾರಾ ಮೆಡಿಕಲ್ ಕೋರ್ಸ್ ಆರಂಭಿಸಬೇಕು
- ಪ್ರತಿ ಬುಧವಾರ ತಾಯಿಯ ಆರೋಗ್ಯ, ಮರಣ ಪ್ರಮಾಣ ಕುರಿತು ಪರಿಶೀಲಿಸಬೇಕು
- ಸಮುದಾಯ ಆರೋಗ್ಯ ಕೇಂದ್ರಗಳು, ತಾಲ್ಲೂಕು, ಜಿಲ್ಲಾ ಆಸ್ಪತ್ರೆಗಳಲ್ಲಿ ಸಂಜೆ ಕ್ಲಿನಿಕ್ ತೆರೆಯಲು ಪ್ರಸ್ತಾವನೆ
- ಆರೋಗ್ಯ ಕರ್ನಾಟಕ– ಆಯುಷ್ಮಾನ್ ಭಾರತ್ ಆರೋಗ್ಯ ವಿಮೆ ಯೋಜನೆಯಡಿ ಅಂಗವಿಕಲರಿಗೆ ಚಿಕಿತ್ಸೆ ನೀಡಬೇಕು
- ಪುರುಷ ಆರೋಗ್ಯ ಕಾರ್ಯಕರ್ತರಿಗೆ ವಸ್ತ್ರ ಸಂಹಿತೆ ಕಡ್ಡಾಯಗೊಳಿಸಬೇಕು

ರಾಯರಡ್ಡಿ ಜನ ಸಂಪರ್ಕ ಸಭೆ ವೇಳೆ ಗಲಾಟೆ

ಪ್ರಜಾವಾಣಿ ವಾರ್ತೆ

ಕುಕನೂರು: ತಾಲ್ಲೂಕಿನ ಬಟಪನಹಳ್ಳಿ ಗ್ರಾಮದಲ್ಲಿ ಗುರುವಾರ ನಡೆದ ಜನ ಸಂಪರ್ಕ ಸಭೆ ವೇಳೆ ಶಾಸಕ ಬಸವರಾಜ ರಾಯರಡ್ಡಿ ಅವರ ಜತೆ, ಸಾರ್ವಜನಿಕ ಶೌಚಾಲಯ ವಿಚಾರವಾಗಿ ಗಲಾಟೆ ಮಾಡಿದ ಏಳು ಜನರನ್ನು ಕುಕನೂರು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಶಾಸಕರು, ಸಾರ್ವಜನಿಕ ಶೌಚಾಲಯ ಕಟ್ಟಿಸುವುದಿಲ್ಲ. ವೈಯಕ್ತಿಕ ಶೌಚಾಲಯ ನಿರ್ಮಾಣ ಮಾಡಿಕೊಳ್ಳಿ ಎಂದು ಹೇಳಿದಾಗ ಕೆಲವು ಗ್ರಾಮಸ್ಥರು ಅದನ್ನು ವಿರೋಧಿಸಿ ಶಾಸಕರ ಕಾರಿಗೆ ಗುದ್ದಿದರು. ಆಗ ಶಾಸಕರು ಮತ್ತು ಗ್ರಾಮದ ಕೆಲ ಯುವಕರ ನಡುವೆ ವಾಗ್ವಾದ ನಡೆಯಿತು.

ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಏಳು ಜನ ಯುವಕರನ್ನು ವಶಕ್ಕೆ ಪಡೆದಿದ್ದು, ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಈ ಕುರಿತು ಪ್ರಕರಣ ದಾಖಲಾಗಿದೆ.

ಮೂವರ ಅಮಾನತು: ಘಟನೆ ಕುರಿತು ಪ್ರತಿಕ್ರಿಯಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ, 'ಶಾಸಕರ ಜನಸಂಪರ್ಕ ಸಭೆಗೆ ತೆರಳದೇ ಕರ್ತವ್ಯ ಲೋಪವೆಸಗಿದ ಎಎಸ್‌ಐ ವಿರೂಪಯ್ಯ, ಪೊಲೀಸ್ ಸಿಬ್ಬಂದಿ ವಿಶ್ವನಾಥ ಹಾಗೂ ಹನುಮಂತ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ' ಎಂದು ತಿಳಿಸಿದರು.

'ಗ್ಯಾರಂಟಿಗಳನ್ನು ಈಡೇರಿಸದಿದ್ದರೆ ಹೋರಾಟ'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ರಾಜ್ಯ ಸರ್ಕಾರವು ಬಜೆಟ್ ಅಧಿವೇಶನಕ್ಕೆ ಮೊದಲೇ ಯಾವುದೇ ಷರತ್ತಿಲ್ಲದೇ 5 ಗ್ಯಾರಂಟಿಗಳನ್ನು ಈಡೇರಿಸಬೇಕು. ಇಲ್ಲದಿದ್ದರೆ ಸದನದೊಳಗೆ ಹಾಗೂ ಹೊರಗೆ ಹೋರಾಟ ನಡೆಸಲಾಗುವುದು' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ಎಚ್ಚರಿಸಿದರು.

ದಾವಣಗೆರೆಯಲ್ಲಿ ಗುರುವಾರ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, 'ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಿದ್ದು ಬಿಟ್ಟರೆ, ಉಳಿದ ಗ್ಯಾರಂಟಿಗಳನ್ನು ಜಾರಿಗೊಳಿಸಿಲ್ಲ. ಚುನಾವಣೆ ಪೂರ್ವದಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸಬೇಕು. ಇಲ್ಲದಿದ್ದರೆ ಜುಲೈ 4ರಂದು ರಾಜ್ಯಪಾಲರ ಭಾಷಣ ಮುಗಿದ ಬಳಿಕ ಬೆಂಗಳೂರಿನ ಗಾಂಧಿ ಪ್ರತಿಮೆಯ ಮುಂದೆ ಸತ್ಯಾಗ್ರಹ ಆರಂಭಿಸಲಾಗುವುದು. ವಿಧಾನಸಭೆ ಹಾಗೂ ವಿಧಾನಪರಿಷತ್‌ನಲ್ಲಿ ಶಾಸಕರು ಹೋರಾಟ ನಡೆಸಲಿದ್ದಾರೆ. ಭರವಸೆ ಈಡೇರಿಸುವ ತನಕ ಸತ್ಯಾಗ್ರಹ ನಿಲ್ಲಿಸುವುದಿಲ್ಲ ಎಂದರು.



ಯಡಿಯೂರಪ್ಪ

'ಜನರನ್ನು ಮರುಳು ಮಾಡಲು ಕಾಂಗ್ರೆಸ್ ದಿನಕ್ಕೊಂದು ನಾಟಕವಾಡುತ್ತಿದೆ. ಕೇಂದ್ರವನ್ನು ಕೇಳಿ ಅಕ್ಕಿ ನೀಡುವ ಭರವಸೆ ನೀಡಿಲ್ಲ. ಕೇಂದ್ರ ಸರ್ಕಾರ ಈಗಾಗಲೇ 5 ಕೆ.ಜಿ ಅಕ್ಕಿ ನೀಡುತ್ತಿದೆ. ಅವರೇ ಭರವಸೆ ನೀಡಿದಂತೆ 10 ಕೆ.ಜಿ ಸೇರಿಸಿ ಒಟ್ಟು 15 ಕೆ.ಜಿ ಅಕ್ಕಿ ನೀಡಬೇಕು. ಇಲ್ಲದಿದ್ದರೆ ಅಧಿಕಾರ ಬಿಟ್ಟು ತೊಲಗಲಿ' ಎಂದು ವಾಗ್ದಾಳಿ ನಡೆಸಿದರು.

ಮುನಿಯಪ್ಪ ಭೇಟಿಗೆ ಮೂರು ದಿನ ಸತಾಯಿಸಿದ ಪೀಯೂಷ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಅನ್ನಭಾಗ್ಯ ಯೋಜನೆಗೆ ಅಕ್ಕಿ ಒದಗಿಸುವ ಕುರಿತು ಚರ್ಚಿಸಲು ಕೇಂದ್ರ ಆಹಾರ ಸಚಿವರನ್ನು ಭೇಟಿಯಾಗಲು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಮೂರು ದಿನಗಳಿಂದ ಪ್ರಯತ್ನ ನಡೆಸಿದರೂ ಯಶಸ್ಸು ಸಿಗಲಿಲ್ಲ.

ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಭೇಟಿಯಾಗಲು ಮುನಿಯಪ್ಪ ಅವರಿಗೆ ಕೇಂದ್ರ ಸಚಿವರು ಕಾಲಾವಕಾಶ ನೀಡಿದ್ದಾರೆ.

ಅನ್ನ ಭಾಗ್ಯ ಯೋಜನೆಗೆ ಭಾರತ ಆಹಾರ ನಿಗಮದ ಮುಕ್ತ ಮಾರುಕಟ್ಟೆ ವ್ಯಾಪಾರ ಯೋಜನೆಯಡಿ ಅಕ್ಕಿ ಖರೀದಿಸಲು ಕರ್ನಾಟಕ ಸರ್ಕಾರ ತೀರ್ಮಾನಿಸಿತ್ತು. ಆದರೆ, ಈಶಾನ್ಯ ರಾಜ್ಯಗಳು ಹಾಗೂ ನೈಸರ್ಗಿಕ ವಿಕೋಪ ಎದುರಿಸುತ್ತಿರುವ ರಾಜ್ಯಗಳಿಗೆ ಹೊರತುಪಡಿಸಿ ಉಳಿದ ರಾಜ್ಯಗಳಿಗೆ ಮುಕ್ತ ಮಾರುಕಟ್ಟೆ ಮಾರಾಟ ಯೋಜನೆಯಡಿ ಅಕ್ಕಿ ಹಾಗೂ ಗೋಧಿ ಮಾರಾಟವನ್ನು ಜೂನ್ 13ರಂದು ಕೇಂದ್ರ ಸರ್ಕಾರ ಸ್ಥಗಿತಗೊಳಿಸಿತು.


'ಕೇಂದ್ರ ಆಹಾರ ಸಚಿವ ಪೀಯೂಷ್ ಗೋಯಲ್ ಅವರನ್ನು ಭೇಟಿ ಮಾಡಲು ಮೂರು ದಿನಗಳಿಂದ ಪ್ರಯತ್ನ ನಡೆದಿದೆ. ಅವರು ಭೇಟಿಗೆ ಕಾಲಾವಕಾಶ ಕೊಟ್ಟಿಲ್ಲ' ಎಂದು ಮುನಿಯಪ್ಪ ಬೇಸರ ವ್ಯಕ್ತಪಡಿಸಿದ್ದರು.

'ಆಹಾರ ಖಾತೆಯ ರಾಜ್ಯ ಸಚಿವರನ್ನು ಗುರುವಾರ ಬೆಳಿಗ್ಗೆ 10 ಗಂಟೆಗೆ ಭೇಟಿ ಮಾಡಲು ಕಾಲಾವಕಾಶ ಕೇಳಿದ್ದೆ. ಅವರು ಒಪ್ಪಿದ್ದರು. ಬಳಿಕ ನಿಲುವು ಬದಲಿಸಿದರು. ಅನ್ನ ಭಾಗ್ಯದ ವಿಷಯದಲ್ಲಿ ಕೇಂದ್ರ ಸರ್ಕಾರ ರಾಜಕೀಯ ಮಾಡುತ್ತಿರುವುದು ಸ್ಪಷ್ಟಗೊಂಡಿದೆ' ಎಂದರು.

'ಅಕ್ಕಿ ವಿತರಣೆಯಲ್ಲಿ ರಾಜಕೀಯ ಬೇಡ'

ಅಕ್ಕಿ ವಿತರಣೆ ಬಗ್ಗೆ ರಾಜಕೀಯ ಅಥವಾ ದ್ವೇಷದ ರಾಜಕಾರಣ ಮಾಡುವುದು ಬೇಡ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ತಿಳಿಸಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಪತ್ರಕರ್ತರ ಜತೆಗೆ ಮಾತನಾಡಿದ ಅವರು, 'ಅಮಿತ್ ಶಾ ಅವರನ್ನು ಬುಧವಾರ ರಾತ್ರಿ ಭೇಟಿ ಮಾಡಿ ಚರ್ಚೆ ನಡೆಸಿದ್ದೇನೆ. ರಾಜ್ಯಕ್ಕೆ ಅಕ್ಕಿ ಒದಗಿಸುವುದಾಗಿ ಭಾರತೀಯ ಆಹಾರ ನಿಗಮವು ಒಪ್ಪಿಗೆ ಪತ್ರ ನೀಡಿತ್ತು. ಮರುದಿನವೇ ನಿಲುವು ಬದಲಿಸಿ ರಾಜ್ಯಗಳಿಗೆ ಅಕ್ಕಿ ಕೊಡುವುದಿಲ್ಲ ಎಂದು ಹೇಳಿತ್ತು. ಈ ವಿಚಾರವನ್ನು ಅಮಿತ್ ಶಾ ಗಮನಕ್ಕೆ ತರಲಾಗಿದೆ' ಎಂದು ಹೇಳಿದರು.



ಸಿದ್ದರಾಮಯ್ಯ

ಮರಳು ದಂಧೆಕೋರರ ವಿರುದ್ಧ ಆರೋಪ

ಬೆದರಿಕೆ: ಶಾಸಕಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ದೇವದುರ್ಗ: 'ಮರಳು ಅಕ್ರಮ ಸಾಗಣೆ ಮಾಡುತ್ತಿದ್ದ ವಾಹನಗಳ ಚಾಲಕರು ತಮಗೆ ಜೀವ ಬೆದರಿಕೆ ಹಾಕಿದ್ದಾರೆ' ಎಂದು ಆರೋಪಿಸಿ ದೇವದುರ್ಗ ಶಾಸಕಿ ಕರೆಮ್ಮ ನಾಯಕ ಗುರುವಾರ ರಾತ್ರಿ ವಾಹನಗಳ ಎದುರೇ ಪ್ರತಿಭಟಿಸಿದರು.

ಜಾಲಹಳ್ಳಿಯಲ್ಲಿ ಜೆಡಿಎಸ್ ಕಾರ್ಯಕರ್ತರು ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಂಡು ಶಾಸಕಿ ಕರೆಮ್ಮ ನಾಯಕ ಅವರು ದೇವದುರ್ಗಕ್ಕೆ ಬರುತ್ತಿದ್ದರು. ಈ ವೇಳೆ ಮರಳು ಸಾಗಣೆ ವಾಹನಗಳು ಶಾಸಕಿ ಅವರ ವಾಹನಕ್ಕೆ ದಾರಿ ಬಿಡಲಿಲ್ಲ ಎನ್ನಲಾಗಿದೆ.

ಗನ್‌ಮ್ಯಾನ್ ಜೊತೆಗೆ ವಾಹನದಿಂದ ಹೊರಗೆ ಬಂದ ಶಾಸಕಿ, ದಾರಿ ಬಿಡುವಂತೆ ಕೇಳಿದ್ದಾರೆ. ಈ ವೇಳೆ, 'ನೀವೇ ದಾರಿ ಬಿಡಿ, ಇಲ್ಲದಿದ್ದರೆ ನಿಮ್ಮ ಮೇಲೆಯೇ ಲಾರಿ ಹತ್ತಿಸಿಕೊಂಡು ಹೋಗುತ್ತೇವೆ ಎಂದು ಲಾರಿ ಚಾಲಕರು ನನಗೆ ಬೆದರಿಕೆ ಹಾಕಿದರು' ಎಂದು ಕರೆಮ್ಮ ಆರೋಪಿಸಿದ್ದಾರೆ.

ಈ ಬಗ್ಗೆ ತಮ್ಮ ಫೇಸ್‌ಬುಕ್ ಖಾತೆಯಿಂದ 'ಲೈವ್' ನೀಡಿ, ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಶಾಸಕಿ, 'ರಕ್ಷಣೆ ನೀಡುವಂತೆ ಜಾಲಹಳ್ಳಿ ಹಾಗೂ ದೇವದುರ್ಗ ಪೊಲೀಸರನ್ನು ಕೇಳಿದಾಗ, 'ನಮ್ಮ ವ್ಯಾಪ್ತಿಗೆ ಬರೋದಿಲ್ಲ' ಎಂದು ಹೇಳಿದರು. ನಾನು ಗೆದ್ದ ನಂತರ ಇದು ನನ್ನ ಮೇಲೆ ನಡೆಯುತ್ತಿರುವ ನಾಲ್ಕನೇ ಹಲ್ಲೆ ಪ್ರಯತ್ನ. ಜನ ಆಶೀರ್ವಾದ ಮಾಡಿದ್ದಾರೆ. ನಾನು ಸಾಯೋದಕ್ಕೂ ಸಿದ್ಧ' ಎಂದರು.

'ಮಾಜಿ ಶಾಸಕರ ಬೆಂಬಲದೊಂದಿಗೆ ಪಿಐ ಹೊಸಕೇರಪ್ಪ ಕೋಳೂರು ಶಾಮೀಲಾಗಿ, ನನ್ನನ್ನು ಕೊಲೆ ಮಾಡಲು ಅಕ್ರಮ ಮರಳು ದಂಧೆಕೋರರಿಗೆ ಸಹಕರಿಸುತ್ತಿದ್ದಾರೆ. ಇವರಿಗೆ ಬೆಂಬಲವಾಗಿ ದೇವದುರ್ಗ ತಹಶೀಲ್ದಾರ್ ಕೆ.ವೈ. ಬಿದರಿ ಕೂಡ ನಿಂತಿದ್ದಾರೆ. ಕಳೆದ ವಾರ ನಿಲವಂಜಿ ಗ್ರಾಮದಲ್ಲಿ ಛತ್ತೀಸಗಢ ಕಾರ್ಮಿಕರ ಸಾವಿಗೆ ನೇರವಾಗಿ ಇವರೇ ಕಾರಣ. ಈ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಮನಕ್ಕೆ ಹಲವು ಬಾರಿ ತಂದರೂ ಪ್ರಯೋಜನವಾಗಿಲ್ಲ. ನಾನು ಹೆದರುವುದಿಲ್ಲ. ಅಹೋರಾತ್ರಿ ಇಲ್ಲೇ ಪ್ರತಿಭಟಿಸುತ್ತೇನೆ' ಎಂದು ತಿಳಿಸಿದರು.



ದೇವದುರ್ಗ ತಾಲ್ಲೂಕಿನ ನಿಲವಂಜಿ ಹತ್ತಿರದ ಹೇರುಂಡಿ ಗ್ರಾಮದಲ್ಲಿ ಮರಳು ದಂಧೆಕೋರರ ವಿರುದ್ಧ ಶಾಸಕಿ ಕರೆಮ್ಮ ನಾಯಕ ಮತ್ತು ಬೆಂಬಲಿಗರು ಗುರುವಾರ ರಾತ್ರಿ ಪ್ರತಿಭಟನೆ ಮಾಡಿದರು

> **ಶಾಸಕಿ ಕರೆಮ್ಮ ಕರೆ ಮಾಡಿ ಮಾಹಿತಿ ನೀಡಿದ ತಕ್ಷಣವೇ ಸ್ಥಳಕ್ಕೆ ಪೊಲೀಸರನ್ನು ಕಳುಹಿಸಿ ಕೊಟ್ಟಿದ್ದೇವೆ. ಅವರ ದೂರನ್ನು ಪರಿಶೀಲಿಸಿ ಕ್ರಮಕೈಗೊಳ್ಳುತ್ತೇವೆ**
> **ಬಿ.ನಿಖಿಲ್,** ಎಸ್ಪಿ

ಇ–ರುಪಿ ಜಾರಿಗೆ ಪ್ರಸ್ತಾವನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಪುರಸ್ಕೃತ ಯೋಜನೆಯಾದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನದ ಸಮರ್ಪಕ ಅನುಷ್ಠಾನಕ್ಕೆ ಇ–ರುಪಿ (E Rupi) ಜಾರಿ ಮಾಡುವುದು ಸೂಕ್ತ. ಅದನ್ನು ಕರ್ನಾಟಕ ರಾಜ್ಯದಲ್ಲಿ ಪ್ರಾಯೋಗಿಕವಾಗಿ ಜಾರಿ ಮಾಡುವಂತೆ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ತಿಳಿಸಿದರು.

ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಈ ಕಾರ್ಯಕ್ರಮವನ್ನು 60: 40 ಅನುಪಾತದಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. 2021–22ರಿಂದ ಕೇಂದ್ರ ಸರ್ಕಾರವು ತನ್ನ ಪಾಲಿನ ಶೇ 60ರಷ್ಟು ಮೊತ್ತವನ್ನು ವಿದ್ಯಾರ್ಥಿಗಳ ಖಾತೆಗೆ ಜಮೆ ಮಾಡುತ್ತಿದೆ. ಕೆಲವು ವಿದ್ಯಾರ್ಥಿಗಳು ಶಿಕ್ಷಣ ಸಂಸ್ಥೆಗಳಿಗೆ ಶುಲ್ಕ ಮರುಪಾವತಿ ಮಾಡುತ್ತಿಲ್ಲ ಎಂಬ ದೂರುಗಳು ಬಂದಿವೆ' ಎಂದರು.

'2021–22ಕ್ಕೆ ಮೊದಲು, ವಿದ್ಯಾರ್ಥಿ ವೇತನಕ್ಕೆ ಅರ್ಹತೆ ಪಡೆದ ಪರಿಶಿಷ್ಟ ಜಾತಿಯ ಎಲ್ಲ ವಿದ್ಯಾರ್ಥಿಗಳಿಗೂ ನೇರವಾಗಿ ಇಲಾಖೆಯಿಂದಲೇ ಶುಲ್ಕ ಮರುಪಾವತಿ ಮಾಡಲಾಗುತ್ತಿತ್ತು. ಈಗ ವಿದ್ಯಾರ್ಥಿ ವೇತನ ಮೊತ್ತ ವಿದ್ಯಾರ್ಥಿಗಳ ಖಾತೆಗೆ ಜಮೆಯಾಗುತ್ತಿರುವುದರಿಂದ ಸಮಸ್ಯೆಯಾಗಿದೆ' ಎಂದರು.

'ದಾಖಲಾತಿ ಸಮಯದಲ್ಲಿ ಶುಲ್ಕ ಪಾವತಿಗೆ ವಿದ್ಯಾರ್ಥಿಗಳಿಗೆ ಒತ್ತಾಯ ಮಾಡಬಾರದು ಎಂದು ಸಮಾಜ ಕಲ್ಯಾಣ ಹಾಗೂ ಉನ್ನತ ಶಿಕ್ಷಣ ಇಲಾಖೆಗಳು ಕೆಲವು ವರ್ಷಗಳ ಹಿಂದೆಯೇ ಸುತ್ತೋಲೆ ಹೊರಡಿಸಿವೆ. ಅದರ ಪ್ರಕಾರ, ವಿದ್ಯಾರ್ಥಿಗಳಿಂದ ಶುಲ್ಕ ವಸೂಲಿ ಮಾಡದೆ ಕಾಲೇಜುಗಳು ಪ್ರವೇಶ ನೀಡಿದ್ದವು. ಆದರೆ, ಈಗ ವಿದ್ಯಾರ್ಥಿಗಳ ಖಾತೆಗೆ ವಿದ್ಯಾರ್ಥಿ ವೇತನದ ಮೊತ್ತ ಜಮೆ ಆಗುತ್ತಿದೆ. ಈ ಕಾರಣಕ್ಕೆ ದಾಖಲಾತಿ ಸಮಯದಲ್ಲೇ ಶುಲ್ಕ ಪಾವತಿಸುವಂತೆ ಶಿಕ್ಷಣ ಸಂಸ್ಥೆಗಳು ಒತ್ತಾಯ ಮಾಡುತ್ತಿವೆ. ಇದರಿಂದಾಗಿ, ಪರಿಶಿಷ್ಟ ಜಾತಿಯ ಬಡ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ' ಎಂದರು.

ಏಷ್ಯಾ ವಿ.ವಿ.ಗಳಲ್ಲಿ ಬೆಂಗಳೂರಿನ ಐಐಎಸ್‌ಸಿಗೆ 48ನೇ ಸ್ಥಾನ

ಲಂಡನ್ (ಪಿಟಿಐ): 'ಟೈಮ್ಸ್ ಹೈಯರ್ ಎಜುಕೇಷನ್' (ಟಿಎಚ್‌ಇ) ಏಷ್ಯಾ ವಿಶ್ವವಿದ್ಯಾಲಯ ಶ್ರೇಯಾಂಕ– 2023' ಅನ್ನು ಗುರುವಾರ ಬಿಡುಗಡೆ ಮಾಡಿದ್ದು, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯು (ಐಐಎಸ್‌ಸಿ) ದೇಶದಲ್ಲೇ ಉನ್ನತ ಸ್ಥಾನ ಪಡೆದಿದೆ.

ಐಐಎಸ್ಸಿ 48ನೇ ರ‍್ಯಾಂಕ್ ಪಡೆದಿದ್ದರೆ, ಭಾರತದ ಎರಡನೇ ಅತಿ ಹೆಚ್ಚು ಶ್ರೇಯಾಂಕಿತ ವಿಶ್ವವಿದ್ಯಾಲಯವಾಗಿ ಸ್ಥಾನ ಪಡೆದಿರುವ ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ 68ನೇ ರ‍್ಯಾಂಕ್ ಗಿಟ್ಟಿಸಿದೆ. ಈ ಮೂಲಕ ಏಷ್ಯಾದ ಅತ್ಯುತ್ತಮ ವಿಶ್ವವಿದ್ಯಾಲಯಗಳಲ್ಲಿ ಕರ್ನಾಟಕದ ಎರಡು ವಿಶ್ವವಿದ್ಯಾಲಯಗಳು ಸ್ಥಾನ ಪಡೆದಿವೆ.

ಏಷ್ಯಾದ ವಿಶ್ವವಿದ್ಯಾಲಯಗಳಲ್ಲಿ ಚೀನಾದ ಟಿಸಿಂಗುವಾ ವಿಶ್ವವಿದ್ಯಾಲಯ ಮತ್ತು ಪೆಕಿಂಗ್ ವಿಶ್ವವಿದ್ಯಾಲಯ ಕ್ರಮವಾಗಿ ಮೊದಲೆರಡು ರ‍್ಯಾಂಕ್‌ಗಳು ಹಾಗೂ ಸಿಂಗಪುರದ ರಾಷ್ಟ್ರೀಯ ವಿಶ್ವವಿದ್ಯಾಲಯ 3ನೇ ರ‍್ಯಾಂಕ್ ಪಡೆದುಕೊಂಡಿವೆ. ಏಷ್ಯಾದ ಅಗ್ರ 50 ವಿಶ್ವವಿದ್ಯಾಲಯಗಳಲ್ಲಿ ದೇಶದ ಒಂದು ವಿ.ವಿ (ಬೆಂಗಳೂರಿನ ಐಐಎಸ್‌ಸಿ) ಮತ್ತು ಅಗ್ರ ನೂರು ವಿ.ವಿಗಳಲ್ಲಿ ದೇಶದ ನಾಲ್ಕು ವಿವಿಗಳು ಹಾಗೂ ಅಗ್ರ 200 ವಿ.ವಿಗಳಲ್ಲಿ ದೇಶದ 18 ವಿವಿಗಳು ಸ್ಥಾನ ಪಡೆದಿವೆ.

ಸೈಬರ್ ದಾಳಿ ಬೇಹುಗಾರಿಕೆ ತಂತ್ರಜ್ಞಾನಕ್ಕೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೈಬರ್ ಕ್ಷೇತ್ರದಿಂದ ಬರುವ ಅಪಾಯಗಳ ಮೇಲೆ ಕಣ್ಗಾವಲಿಡುವ, ಬೇಹುಗಾರಿಕೆ ಪತ್ತೆ ಮಾಡುವ ಮತ್ತು ಬೇಹುಗಾರಿಕೆ ನಡೆಸುವ ತಂತ್ರಜ್ಞಾನ ಅಭಿವೃದ್ಧಿಪಡಿಸುವ ಯೋಜನೆ ಕೈಗೆತ್ತಿಕೊಳ್ಳಲು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ ಪ್ಯಾರಡೈಮ್ ಸಂಸ್ಥೆಗೆ (ಸಿಎಸ್‌ಐಆರ್ 4 ಪಿಐ) ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ.

ಇದಕ್ಕಾಗಿ ರೂಪಿಸಿರುವ ದೂರದರ್ಶಕ ಜಾಲದ ಯೋಜನೆಯ ಪರಿಕಲ್ಪನೆಯ ಪ್ರಾತ್ಯಕ್ಷಿಕೆಯನ್ನು ಪಿಐ ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ ಅಧಿಕಾರಿಗಳಿಗೆ ನೀಡಲಾಗಿದೆ. ಈ ತಂತ್ರಜ್ಞಾನ ಅಭಿವೃದ್ಧಿಪಡಿಸಲು ₹3 ಕೋಟಿ ಅಗತ್ಯವಿದ್ದು, ಅದಕ್ಕೆ ಅನುಮತಿ ನೀಡಲಾಗಿದೆ.

ದೂರದರ್ಶಕ ಜಾಲ ವ್ಯವಸ್ಥೆಯು ದುರುದ್ದೇಶಪೂರಿತ ಅಂತರ್ಜಾಲ ಮಾಹಿತಿಯ ಹರಿದಾಟದ ಮೇಲೆ ನಿಗಾ ಇಡುವುದಲ್ಲದೇ, ಅದನ್ನು ದಾಖಲಿಸಿಕೊಳ್ಳುತ್ತದೆ. ಅತ್ಯಂತ ಸಂಕೀರ್ಣ ವ್ಯೂಹಾತ್ಮಕ ಮಾಹಿತಿಗಳ ಮೇಲೆ ನಿಗಾ ಇಡುತ್ತದೆ ಎಂದು ಸಿಎಸ್‌ಐಆರ್–4 ಪಿಐನ ಪ್ರಧಾನ ವಿಜ್ಞಾನಿ ವಿ.ಅನಿಲ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಇದನ್ನು ದೇಶದ ಭದ್ರತಾ ವ್ಯವಸ್ಥೆಗಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಇದರಿಂದ ವಿಶೇಷವಾಗಿ ಸೈಬರ್ ದಾಳಿಗಳನ್ನು ತಡೆಯಲು ಅನುಕೂಲವಾಗುತ್ತದೆ' ಎಂದರು.

ಬಿಬಿಎಂಪಿ ಮಹದೇವಪುರ ವಲಯ: ನಲಪಾಡ್, ಬಾಗ್ಮನೆ–ಪುರ್ವಂಕರ ಸೇರಿದಂತೆ ಹಲವರಿಂದ ಒತ್ತುವರಿ

ಪ್ರತಿಷ್ಠಿತರ ಒತ್ತುವರಿ: ತಡೆಯೂ ಇಲ್ಲ ತೆರವೂ ಇಲ್ಲ

• ಆರ್. ಮಂಜುನಾಥ್

ಬೆಂಗಳೂರು: ರಾಜಕಾಲುವೆ ಒತ್ತುವರಿ ಮಾಡಿರುವ ಪ್ರತಿಷ್ಠಿತರ ಕಟ್ಟಡ ಗಳನ್ನು ತೆರವುಗೊಳಿಸಲು ನ್ಯಾಯಾಲಯ ದಲ್ಲಿದ್ದ ಪ್ರಕರಣಗಳು ಬಗೆಹರಿದಿದ್ದರೂ, ಕಾರ್ಯಾಚರಣೆಗೆ ಬಿಬಿಎಂಪಿ ಮೀನಮೇಷ ಎಣಿಸುತ್ತಿದೆ.

ಕಳೆದ ವರ್ಷ ಭಾರಿ ಮಳೆಗೆ 'ಮುಳುಗಿದ ಬೆಂಗಳೂರು ಪೂರ್ವ' ಎಂದು ಕಳಂಕ ಕ್ಕೀಡಾಗಿದ್ದ ಮಹದೇವಪುರ ವಲಯದಲ್ಲಿ ನಲಪಾಡ್, ಬಾಗ್ಮನೆ- ಪುರ್ವಂಕರ, ರೈನ್‌ಬೊ ಡ್ರೈವ್ ಲೇಔಟ್ ಮುಂತಾದ ಪ್ರತಿಷ್ಠಿತ ಬಡಾವಣೆಗಳಲ್ಲಿ ರಾಜ ಕಾಲುವೆಗಳನ್ನು ಒತ್ತುವರಿ ಮಾಡಿಕೊಳ್ಳ ಲಾಗಿದೆ ಎಂದು ಆರೋಪಿಸ ಲಾಗಿತ್ತು. ಈ ಮೊದಲು ತೆರವಿಗೆ ಮುಂದಾದಾಗ ನ್ಯಾಯಾಲಯದಿಂದ ತಡೆಯಾಜ್ಞೆ ತರಲಾಗಿತ್ತು. ಇದೀಗ ತಡೆಯಾಜ್ಞೆ ತೆರವಾಗಿದ್ದರೂ ಬಿಬಿಎಂಪಿ ಅಧಿಕಾರಿಗಳು ತೆರವಿಗೆ ಮುಂದಾಗುತ್ತಿಲ್ಲ.

ಬಿಬಿಎಂಪಿ ಮಾಹಿತಿ ಪ್ರಕಾರ, 2016ರಲ್ಲಿ ರಾಜಕಾಲುವೆಯ 2,951 ಒತ್ತುವರಿ ಪ್ರಕರಣ ಗಳಿದ್ದವು. ಕಾಲಕಾಲಕ್ಕೆ ತೆರವುಗೊಳಿಸಿ ಆ ಸಂಖ್ಯೆ ಇದೀಗ 784ಕ್ಕೆ ಬಂದಿದೆ. ನ್ಯಾಯಾ ಲಯದಲ್ಲಿರುವ ಪ್ರಕರಣಗಳು, ಬಿಬಿಎಂಪಿಯೇ ಒತ್ತುವರಿ ಮಾಡಿ ಕೊಂಡಿರುವ ಸ್ಥಳಗಳು, ಕಾಲುವೆ ಮಾರ್ಗ ಬದಲಾದ ಪ್ರದೇಶಗಳನ್ನು ಹೊರತುಪಡಿಸಿದರೆ 607 ಪ್ರಕರಣ ಗಳಲ್ಲಿ ಈಗ ಒತ್ತುವರಿಯಾಗಿದೆ. ಇದರಲ್ಲಿ 119 ಸ್ಥಳಗಳಲ್ಲಿ ತೆರವಿಗೆ ತಹಶೀಲ್ದಾರ್ ಕೂಡ ಆದೇಶ ನೀಡಿದ್ದಾರೆ.

ಚಲ್ಲಘಟ್ಟದಲ್ಲಿ ನಲಪಾಡ್ ಅಕಾಡೆಮಿ ಎಂಬೆಸ್ಸಿ ಒತ್ತುವರಿಗೆ ಸಂಬಂಧಿಸಿದಂತೆ, ನ್ಯಾಯಾಲಯ ದಲ್ಲಿ ಪ್ರಕರಣ ಇತ್ಯರ್ಥವಾಗಿದೆ. ಜತೆಗೆ ಸರ್ವೆ ನಡೆಸಿದ ತಹಶೀಲ್ದಾರ್ ಅವರಿಂದ ನೋಟಿಸ್ ಜಾರಿ ಹಾಗೂ ತೆರವಿಗೆ ಆದೇಶವಾಗಿದ್ದರೂ ಕಾರ್ಯಾಚರಣೆ ಮಾತ್ರ ನಡೆದಿಲ್ಲ. ಇದೇ ರೀತಿ, ಹಾಲನಾಯಕಹಳ್ಳಿಯಲ್ಲಿ ಆರ್‌ಬಿಡಿ (ರೈನ್‌ಬೊ ಡ್ರೈವ್) ಲೇಔಟ್, ಜುನ್ನಸಂದ್ರ, ಮುನ್ನೇಕೊಳಾಲು, ದೊಡ್ಡನೆಕ್ಕುಂದಿಯಲ್ಲಿ ಫೆರ್ನ್ ಸಿಟಿ, ಕಾಡುಬಿಸನಹಳ್ಳಿಯಲ್ಲಿ ಉಮಿಯಾ ಬ್ಯುಸಿನೆಸ್‌ಗಳ ಒತ್ತುವರಿ ತೆರವಿನ ಆದೇಶ ಅಧಿಕಾರಿಗಳ ಕೈಯಲ್ಲೇ ಇದ್ದರೂ ಕಾರ್ಯಾಚರಣೆ ಕೈಗೊಳ್ಳಲು ಸಿಬ್ಬಂದಿಗೆ ಸೂಚನೆ ನೀಡಿಲ್ಲ.

ಇಂತಹ ನೂರಕ್ಕೂ ಹೆಚ್ಚು ಪ್ರಕರಣ-ಗಳಲ್ಲಿ, 'ಮೊಕದ್ದಮೆ ಇತ್ಯರ್ಥ, ತೆರವು ಕಾರ್ಯಾಚರಣೆ ಕೈಗೊಳ್ಳಬೇಕಿದೆ' ಎಂದು ಬಿಬಿಎಂಪಿ ದಾಖಲೆಯಲ್ಲಿ ಷರಾ ಬರೆಯಲಾಗಿದೆ. ಹಲವು ಪ್ರಕರಣಗ ಳಲ್ಲಿ ತೆರವಿಗೆ ತಹಶೀಲ್ದಾರ್ ಆದೇಶವಿದೆ. ಇನ್ನುಳಿದಕ್ಕೆ, ಆದೇಶ ನೀಡಲು ತಹಶೀಲ್ದಾರ್‌ಗಳು ಸಾಕಷ್ಟು ವಿಳಂಬ ನೀತಿ ಅನುಸರಿಸುತ್ತಿದ್ದಾರೆ ಎಂದು ಬಿಬಿಎಂಪಿ ಅಧಿಕಾರಿಗಳೇ ದೂರುತ್ತಾರೆ.



ಮುನ್ನೇಕೊಳಾಲುವಿನಲ್ಲಿ ಬಿಬಿಎಂಪಿ ಸಿಬ್ಬಂದಿ ಜೂನ್ 17ರಂದು ಶೆಡ್ ತೆರವುಗೊಳಿಸಿದರು

ಎಲ್ಲವೂ ತೆರವು...

'ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆ ಪ್ರತಿದಿನವೂ ನಡೆಯುತ್ತಿದೆ. ಯಾವ ಒತ್ತುವರಿಯನ್ನೂ ಬಿಡುವುದಿಲ್ಲ. ಒಂದು ದಿನ ದೊಡ್ಡ ಕಟ್ಟಡ ತೆರವಾದಾಗ ಎಲ್ಲರಿಗೂ ಗೊತ್ತಾಗುತ್ತದೆ. ಕೆಲವು ಬಾರಿ ಕಾಂಪೌಂಡ್, ಶೆಡ್ ತೆರವಾದಾಗ ದೊಡ್ಡ ಸುದ್ದಿ ಆಗುವುದಿಲ್ಲ ಅಷ್ಟೇ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಪ್ರಜಾವಾಣಿ ವಿಶೇಷ

784 ಒಟ್ಟು ಒತ್ತುವರಿ ಪ್ರಕರಣಗಳು | **118** ನ್ಯಾಯಾಲಯ ದಲ್ಲಿರುವ ಪ್ರಕರಣಗಳು | **607** ತೆರವಿಗೆ ಬಾಕಿ | **119** ತಹಶೀಲ್ದಾರ್ ಆದೇಶ ನೀಡಿರುವ ಪ್ರಕರಣಗಳು

ರಾಜಕಾಲುವೆ ಒತ್ತುವರಿ ವಿವರ

*'ಮೊಕದ್ದಮೆ ಇತ್ಯರ್ಥ, ತೆರವು ಕಾರ್ಯಾಚರಣೆ ಕೈಗೊಳ್ಳಬೇಕಿದೆ' ಎಂದು ಬಿಬಿಎಂಪಿ ಷರಾ ಬರೆದಿರುವ ಪ್ರಕರಣಗಳು

ಸ್ಥಳ	ಸರ್ವೆ ನಂ	ಒತ್ತುವರಿ
ಅಮಾನಿ ಬೆಳ್ಳಂದೂರು ಖಾನೆ	224/2, 193/1,2, 223	ಕಟ್ಟಡ, ಕಾಂಪೌಂಡ್
ಚಲ್ಲಘಟ್ಟ	70/14, 70/15	ನಲಪಾಡ್ ಅಕಾಡೆಮಿ ಎಂಬೆಸ್ಸಿ– 10 ಗುಂಟೆ
ಕಾಡುಗೋಡಿ	264/2	ಕಟ್ಟಡ– 17 ಗುಂಟೆ
ಕಾಡುಗೋಡಿ	226, 212/1, 212/2, 230, 231, 266/2, 269/1, 268	ಕಾಂಪೌಂಡ್, ಕಟ್ಟಡ– 2 ಎಕರೆ 4 ಗುಂಟೆ
ಚಿನ್ನಪ್ಪನಹಳ್ಳಿ	4, 5, 6, 7, 8, 9, 10, 11, 12, 13, 14	ಕಟ್ಟಡ– 23 ಗುಂಟೆ
ಚಿನ್ನಪ್ಪನಹಳ್ಳಿ	42, 43	ರಸ್ತೆ, ಕಾಂಪೌಂಡ್– 4 ಗುಂಟೆ
ಹಾಲನಾಯಕನಹಳ್ಳಿ	16/3ಎ, 16/3ಬಿ	ಆರ್‌ಬಿಡಿ (ರೈನ್‌ಬೊ ಡ್ರೈವ್) ಲೇಔಟ್
ಹಾಲನಾಯಕನಹಳ್ಳಿ	16, 18, 19, 20	ಉಮಾ ಮಹೇಶ್ವರ
ಮುನ್ನೇಕೊಳಾಲು	27, 32, 26, 28, 31, 33	ಸ್ಪೈಸ್ ಗಾರ್ಡನ್– ಕಟ್ಟಡ, ಕಾಂಪೌಂಡ್– 16 ಗುಂಟೆ
ಮುನ್ನೇಕೊಳಾಲು	87	ರಂಜಿತ ಕುಮಾರ್, ಸಂಜಿಬ್‌ಕುಮಾರ್ ಭಟ್ಟಾಚಾರ್ಯ
ಕಾಡುಬಿಸನಹಳ್ಳಿ	10	ಉಮಿಯಾ ಬ್ಯುಸಿನೆಸ್
ಮಹದೇವಪುರ	32/2 , 33/3, 35/2, 34/2, 34/3, 38/1, 38/3	ಬಾಗ್ಮನೆ– ಪುರ್ವಂಕರ
ದೊಡ್ಡನೆಕ್ಕುಂದಿ	24/1, 24/4, 24/5, 24/6	ಫೆರ್ನ್ ಸಿಟಿ–ಶೆಡ್, ಹೋಟೆಲ್– 3 ಕಟ್ಟಡ
ಬಸವನ ನಗರ	181/4	ಮಹಾವೀರ್ ಅಪಾರ್ಟ್‌ಮೆಂಟ್
ಕೊತ್ತನೂರು	14	ಕೆ.ಆರ್. ಕೃಷ್ಣಮೂರ್ತಿ
ಕಲ್ಕೆರೆ	343, 344, 345, 346, 347, 349, 352/1, 2	6 ಕಟ್ಟಡ, ಕಾಂಪೌಂಡ್–14.5 ಗುಂಟೆ

ಹಣ ನೀಡದಿದ್ದಕ್ಕೆ ಜಗಳ: ಬಾರ್ ಎದುರು ಕೊಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಶ್ರೀಗಂಧಕಾವಲು ಬಳಿಯ ಚಾಮುಂಡೇಶ್ವರಿ ಬಾರ್ ಎದುರು ವಿಜಯ್‌ಕುಮಾರ್ (38) ಎನ್ನುವವರ ತಲೆ ಮೇಲೆ ಸಿಮೆಂಟ್ ಹಾಲೊಬ್ರಿಕ್ಸ್ ಎತ್ತಿ ಹಾಕಿ ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಇಬ್ಬರು ಸ್ನೇಹಿತರನ್ನು ಅನ್ನಪೂರ್ಣೇಶ್ವರಿನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

'ಕುಣಿಗಲ್‌ನ ವಿಜಯ್‌ಕುಮಾರ್ ಅವರನ್ನು ಬುಧವಾರ ರಾತ್ರಿ ಕೊಲೆ ಮಾಡಲಾಗಿದೆ. ಬಾರ್ ಕ್ಯಾಷಿಯರ್ ಲಕ್ಕಣ್ಣಗೌಡ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿ-ಕೊಳ್ಳಲಾಗಿದೆ. ಆರೋಪಿಗಳಾದ ಚಂದ್ರಶೇಖರ್ ಬಡಾವಣೆಯ ಗಿರೀಶ್ ಹಾಗೂ ಲೋಕೇಶ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ವಿಜಯಕುಮಾರ್, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. 2022ರಲ್ಲಿ ಶ್ರೀಗಂಧಕಾವಲು ಬಳಿಯ ಚಾಮುಂಡೇಶ್ವರಿ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಕೆಲಸಕ್ಕೆ ಸೇರಿದ್ದರು. ನಂತರ, ಅಲ್ಲಿಯ ಕೆಲಸ ಬಿಟ್ಟಿದ್ದರು. ಬೇರೆಡೆ ಕೆಲಸಕ್ಕೆ ಸೇರಿದ್ದರು. ಅಷ್ಟಾದರೂ ವಿಜಯ್, ಆಗಾಗ ಚಾಮುಂಡೇಶ್ವರಿ ಬಾರ್‌ಗೆ ಬಂದು ಮದ್ಯ ಕುಡಿದು ಹೋಗುತ್ತಿದ್ದರು. ಇದೇ ವೇಳೆ, ಗಿರೀಶ್ ಹಾಗೂ ಲೋಕೇಶ್ ಸ್ನೇಹಿತ-ರಾಗಿದ್ದರು' ಎಂದು ತಿಳಿಸಿದರು.

ಮದ್ಯ ಖರೀದಿಗೆ ಹಣ ಕೇಳಿದ್ದ ಆರೋಪಿಗಳು: 'ವಿಜಯ್ ಬುಧವಾರ ರಾತ್ರಿ ಬಾರ್‌ಗೆ ಬಂದಿದ್ದರು. ಅದೇ ಸಮಯಕ್ಕೆ ಬಾರ್‌ಗೆ ಬಂದಿದ್ದ ಆರೋಪಿಗಳು, 'ಮದ್ಯ ಖರೀದಿಗೆ ಹಣ ಕೊಡು' ಎಂದಿದ್ದರು. ತಮ್ಮ ಬಳಿ ಹಣವಿಲ್ಲವೆಂದು ವಿಜಯ್ ಹೇಳಿದ್ದರು. ಅಷ್ಟಕ್ಕೆ ಜಗಳ ಆರಂಭವಾಗಿತ್ತು' ಎಂದು ಪೊಲೀಸರು ಹೇಳಿದರು.

'ಬಾರ್‌ನಿಂದ ಹೊರಬಂದಿದ್ದ ವಿಜಯ್ ಹಾಗೂ ಆರೋಪಿಗಳು, ರಸ್ತೆಯಲ್ಲಿ ಜಗಳ ಮುಂದುವರಿಸಿದ್ದರು. ವಿಜಯ್ ಅವರನ್ನು ತಳ್ಳಿ ನೆಲಕ್ಕೆ ಬೀಳಿಸಿದ್ದ ಆರೋಪಿಗಳು, ತಲೆ ಮೇಲೆ ಸಿಮೆಂಟ್ ಹಾಲೊಬ್ರಿಕ್ಸ್ ಎತ್ತಿ ಹಾಕಿ ಪರಾರಿಯಾಗಿದ್ದರು. ವಿಜಯ್ ಸ್ಥಳದಲ್ಲೇ ಮೃತಪಟ್ಟಿ-ದ್ದರು. ಬಾರ್ ಸಿಬ್ಬಂದಿ ಮಾಹಿತಿ ನೀಡುತ್ತಿದ್ದಂತೆ ಸ್ಥಳಕ್ಕೆ ಹೋಗಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಯಿತು' ಎಂದು ತಿಳಿಸಿದರು.

'ಪ್ರಕರಣ ದಾಖಲಾದ ಕೆಲ ಗಂಟೆಗಳಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಸದ್ಯ ಅವರಿಬ್ಬರು ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಹೇಳಿದರು.

ಜನತಂತ್ರದ ಮೌಲ್ಯ ಸಾರಿದ ಮೋದಿ

ಉಭಯ ದೇಶಗಳ ನಡುವಿನ ಬಾಂಧವ್ಯಕ್ಕೆ ಆಕಾಶವೂ ಮಿತಿ ಅಲ್ಲ: ಬಣ್ಣನೆ

ವಾಷಿಂಗ್ಟನ್ (ಪಿಟಿಐ): ಭಾರತದಲ್ಲಿ ಧಾರ್ಮಿಕ ಅಸಹಿಷ್ಣುತೆ ಹೆಚ್ಚುತ್ತಿದ್ದು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಡೆ-ಗಣಿಸಲಾಗುತ್ತಿದೆ ಎಂಬ ಅಮೆರಿಕದ ಸಂಸದರು, ಕಾನೂನು ತಜ್ಞರ ಆರೋಪದ ಬೆನ್ನಲ್ಲೇ ಪ್ರಧಾನಿ ಮೋದಿ ಅವರು, ಉಭಯ ದೇಶಗಳ ನಡುವಣ ಜನತಂತ್ರದ ಮೌಲ್ಯಗಳು ಮತ್ತು ವೈವಿಧ್ಯದ ಮೇಲೆ ಬೆಳಕು ಚೆಲ್ಲಿದರು.

ವೈಟ್‌ಹೌಸ್‌ನಲ್ಲಿ ಗುರುವಾರ ಅಧ್ಯಕ್ಷ ಜೋ ಬೈಡನ್ ಜೊತೆ ಜಂಟಿ ಸುದ್ದಿ-ಗೋಷ್ಠಿಯಲ್ಲಿ ಮಾತನಾಡಿದ ಅವರು, 'ಭಾರತ ಮತ್ತು ಅಮೆರಿಕ ವಿಶ್ವದ ಎರಡು ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳಾಗಿವೆ. ಇಬ್ಬರ ನಡುವಣ ಬಾಂಧವ್ಯಕ್ಕೆ ಆಕಾಶ ಕೂಡ ಮಿತಿ ಅಲ್ಲ' ಎಂದು ಬಣ್ಣಿಸಿದರು.

ಎರಡು ದೇಶಗಳಲ್ಲಿರುವ ಸೊಸೈಟಿಗಳು ಮತ್ತು ಸಂಸ್ಥೆಗಳು ಪ್ರಜಾಸತ್ತಾತ್ಮಕ ಮೌಲ್ಯಗಳ ತಳಹದಿ ಮೇಲೆ ಕಾರ್ಯ ನಿರ್ವಹಿಸುತ್ತಿವೆ. ಇದು ಹೆಮ್ಮೆಯ ಸಂಗತಿ ಎಂದರು.

ಉಭಯ ರಾಷ್ಟ್ರಗಳ ಸಂವಿಧಾನದ ಪ್ರಸ್ತಾವನೆಯ ಆರಂಭವು ಮೂರು ಪದಗಳಿಂದ (ವಿ ದ ಪೀಪಲ್) ಆರಂಭ ವಾಗುತ್ತದೆ. ಇಂಥ ವೈವಿಧ್ಯಕ್ಕೆ ಹೆಮ್ಮೆಪಡಬೇಕಿದೆ ಎಂದ ಅವರು, 'ಜಾಗತಿಕ ಶಾಂತಿ, ನೆಮ್ಮದಿ, ಸ್ಥಿರತೆ ಮತ್ತು ಸಮೃದ್ಧಿಗೆ ಎರಡೂ ದೇಶಗಳು ಒಟ್ಟಾಗಿ ಕೆಲಸ ಮಾಡಲಿವೆ' ಎಂದು ಘೋಷಿಸಿದರು.

ಇಬ್ಬರೂ ನಂಬಿಕಸ್ಥ ಪಾಲುದಾರ-ರಾಗಿದ್ದೇವೆ. ಹಾಗಾಗಿ, ಜಾಗತಿಕ ಅನಿಶ್ಚಿತತೆಗೆ ಪರಿಹಾರ ಹುಡುಕಲು ಸಂಪರ್ಕ ಕೊಂಡಿಯಾಗಿ ಕೆಲಸ ಮಾಡಲಿದ್ದೇವೆ ಎಂದರು.

ಉಭಯ ದೇಶಗಳು ಭಯೋತ್ಪಾದನೆ ಮತ್ತು ಮೂಲಭೂತವಾದದ ವಿರುದ್ಧ ಹೆಗಲಿಗೆ ಹೆಗಲುಕೊಟ್ಟು ಹೋರಾಟ ನಡೆಸುತ್ತವೆ. ಈ ಬಗ್ಗೆ ಬೈಡನ್ ಜೊತೆಗೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಎಂದ ಅವರು, 40 ಲಕ್ಷಕ್ಕೂ ಹೆಚ್ಚು ಭಾರತೀಯರು ಅಮೆರಿಕದ ಅಭಿವೃದ್ಧಿಗೆ ಕೊಡುಗೆ ನೀಡುತ್ತಿದ್ದಾರೆ ಎಂದು ಹೇಳಿದರು.

ಭಾರತೀಯ ಸಮುದಾಯ-ದವರಿಗೆ ವೈಟ್‌ಹೌಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಿದ್ದಕ್ಕೆ ಮೋದಿ, ಬೈಡನ್ ಅವರಿಗೆ ಅಭಿನಂದನೆ ಸಲ್ಲಿಸಿದರು. 2016ರಲ್ಲಿ ಅಧ್ಯಕ್ಷರಾಗಿದ್ದ ಬರಾಕ್ ಒಬಾಮ ಅವರ ಆಹ್ವಾನದ ಮೇರೆಗೆ ವೈಟ್‌ಹೌಸ್‌ಗೆ ಮೋದಿ ಭೇಟಿ ನೀಡಿದ್ದರು.

'ನಮ್ಮ ಡಿಎನ್‌ಎಯಲ್ಲೇ ಪ್ರಜಾಪ್ರಭುತ್ವವಿದೆ'


ಬೈಡನ್ ದಂಪತಿಯ ಔತಣ ಸ್ವೀಕರಿಸಿದ ಬಳಿಕ ವೈಟ್‌ಹೌಸ್‌ಗೆ ಬಂದ ಮೋದಿ ಅವರಿಗೆ ಅದ್ದೂರಿ ಸ್ವಾಗತ ಕೋರಲಾಯಿತು. ಅಲ್ಲಿನ ಹುಲ್ಲುಹಾಸಿನ ಮೇಲೆ ನೆರೆದಿದ್ದವರಿಂದ ಮೋದಿ... ಮೋದಿ... ಎಂದು ಘೋಷಣೆ ಮಾರ್ದನಿಸಿತು.

'ಮತ್ತೆ ವೈಟ್‌ಹೌಸ್‌ಗೆ ಮೋದಿಗೆ ಸ್ವಾಗತ' ಎಂದು ಅಧ್ಯಕ್ಷ ಜೋ ಬೈಡನ್ ಸ್ವಾಗತಿಸಿದರು. ಬಳಿಕ ಇಬ್ಬರೂ ನಾಯಕರು ಉಭಯ ದೇಶಗಳ ನಡುವಣ ರಕ್ಷಣೆ, ವ್ಯಾಪಾರ ಮತ್ತು ಸಹಕಾರ ಕುರಿತು ಪರಿಸ್ಪರ ಒಪ್ಪಂದಕ್ಕೆ ಸಹಿ ಹಾಕಿದರು.

ಬಳಿಕ ಮಾತು ಮುಂದುವರಿಸಿದ ಬೈಡನ್, 'ನಾವು ಚೀನಾಕ್ಕಿಂತ ಭಿನ್ನವಾಗಿದ್ದೇವೆ. ಎರಡು ದೇಶಗಳ ಡಿಎನ್‌ಎನಲ್ಲಿ ಪ್ರಜಾಪ್ರಭುತ್ವ ಅಡಕವಾಗಿದೆ' ಎಂದರು.

'21ನೇ ಶತಮಾನದಲ್ಲಿ ಉಭಯ ದೇಶಗಳು ಜಗತ್ತಿನ ಶ್ರೇಷ್ಠ ರಾಷ್ಟ್ರಗಳಾಗಿದ್ದು, ಒಳ್ಳೆಯ ಸ್ನೇಹಿತರೂ ಆಗಿದ್ದೇವೆ. ವಿಶ್ವದ ಶಕ್ತಿಯುತ ರಾಷ್ಟ್ರಗಳಾಗಿವೆ' ಎಂದು ವ್ಯಾಖ್ಯಾನಿಸಿದರು.

'ವಿಶ್ವ ಎದುರಿಸುತ್ತಿರುವ ಸವಾಲುಗಳನ್ನು ಮೆಟ್ಟಿ ನಿಲ್ಲಲು ಎರಡೂ ದೇಶಗಳು ಜೊತೆಯಾಗಿ ಕೆಲಸ ನಿರ್ವಹಿಸಬೇಕು. ಈ ನಿಟ್ಟಿನಲ್ಲಿ ಒಪ್ಪಂದಕ್ಕೆ ಸಹಿ ಹಾಕಿರುವುದು ಮಹತ್ವ ಪೂರ್ಣವಾಗಿದೆ' ಎಂದರು.



ವೈಟ್‌ಹೌಸ್‌ನಲ್ಲಿ ಗುರುವಾರ ಜಂಟಿ ಸುದ್ದಿಗೋಷ್ಠಿ ಉದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಮಾತನಾಡಿದರು. ಅಮೆರಿಕದ ಅಧ್ಯಕ್ಷ ಜೋ ಬೈಡನ್ ಇದ್ದರು

–ಎಎಫ್‌ಪಿ ಚಿತ್ರ

'ಧಾರ್ಮಿಕ ತಾರತಮ್ಯ ಇಲ್ಲ'

ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳ ಸುಧಾರಣೆಗಾಗಿ ಭಾರತ ಯಾವ ಕ್ರಮಕೈಗೊಳ್ಳುತ್ತದೆ? ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಮೋದಿ, 'ನಿಮ್ಮ ಪ್ರಶ್ನೆಯಿಂದ ನನಗೆ ಅಚ್ಚರಿಯಾಗಿದೆ. ನಮ್ಮದು ಪ್ರಜಾಪ್ರ-ಭುತ್ವ ರಾಷ್ಟ್ರ. ಅದು ನಮಗೆ ಸ್ಫೂ-ರ್ತಿಯಾಗಿದ್ದು, ನಮ್ಮ ರಕ್ತದಲ್ಲಿಯೇ ಇದೆ. ಅದನ್ನೇ ಉಸಿರಾಡುತ್ತಾ ಬದುಕುತ್ತಿದ್ದೇವೆ' ಎಂದರು.

'ನಾವು ಪ್ರಜಾಪ್ರಭುತ್ವ ವ್ಯವಸ್ಥೆ ಯಲ್ಲಿ ಬದುಕುತ್ತಿರುವಾಗ ತಾರತಮ್ಯದ ಪ್ರಶ್ನೆ ಉದ್ಭವಿಸು ವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ತನಿಖಾ ಸಮಿತಿ ರದ್ದು

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಮತ್ತು ಸಾಂಸ್ಕೃತಿಕ ಸಂಘವು ಮಂಡಳಿಗೆ ಮಂಜೂರಾಗಿದ್ದ ಅನುದಾನದಲ್ಲಿ ನೀಡಿದ್ದ ₹ 200 ಕೋಟಿಯನ್ನು ಸಮರ್ಪಕವಾಗಿ ಖರ್ಚು ಮಾಡಿದೆಯೇ ಇಲ್ಲವೇ ಎಂಬ ಬಗ್ಗೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಕಾರ್ಯದರ್ಶಿ ನೇಮಿಸಿದ್ದ ತನಿಖಾ ತಂಡ ಹಾಗೂ ತನಿಖೆಯನ್ನು ಸರ್ಕಾರ ಗುರುವಾರ ರದ್ದುಪಡಿಸಿದೆ.

ಮಂಡಳಿಯು ತನಿಖಾ ತಂಡ ನೇಮಿಸಿದ ಹಿನ್ನೆಲೆಯಲ್ಲಿ ಸಂಘದ ಕಾರ್ಯದರ್ಶಿ ಭೀಮಾಶಂಕರ ತೆಗ್ಗೆಳ್ಳಿ (ಪ್ರಸ್ತುತ ಸಚಿವ ಪ್ರಿಯಾಂಕ್ ಖರ್ಗೆ ಅವರ ಆಪ್ತ ಕಾರ್ಯದರ್ಶಿ) ಅವರು ಸರ್ಕಾರಕ್ಕೆ ಪತ್ರ ಬರೆದು, ಮಂಡಳಿ ಕಾರ್ಯದರ್ಶಿ ರಚಿಸಿರುವ ತನಿಖಾ ತಂಡಕ್ಕೆ ಮಾಹಿತಿ ಹಾಗೂ ದಾಖಲೆಗಳನ್ನು ಒದಗಿಸುವ ಬಗ್ಗೆ ಹಾಗೂ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಬಗ್ಗೆ ಮಂಡಳಿಯ ಅನುಮೋದನೆ ಪಡೆಯದ ಬಗ್ಗೆ ಸಂಘದಿಂದ ವಿವರಣೆ ನೀಡುವ ಕುರಿತು ನಿರ್ದೇಶನ ಕೋರಿದ್ದರು.

ಈ ಪತ್ರದ ಹಿನ್ನೆಲೆಯಲ್ಲಿ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು, ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘಕ್ಕೆ ಆಯಾ ಆರ್ಥಿಕ ವರ್ಷದಲ್ಲಿ ಆರ್ಥಿಕ ಇಲಾಖೆಯ ಆದೇಶದಂತೆ ತಲಾ ₹ 100 ಕೋಟಿಯಂತೆ ಒಟ್ಟು ₹ 300 ಕೋಟಿ ಅನುದಾನ ಬಿಡುಗಡೆ ಯಾಗಿದೆ. ಈ ಅನುದಾನವನ್ನು ಮಂಡಳಿಯಿಂದಲೇ ಸಂಘಕ್ಕೆ ನೀಡಲಾಗಿದೆ ಎಂದು ತಪ್ಪಾಗಿ ಭಾವಿಸಿ ತನಿಖೆಗೆ ಆದೇಶ ನೀಡಿದ್ದಾರೆ. ತನಿಖಾ ತಂಡ ರಚಿಸುವ ಮುನ್ನ ಸರ್ಕಾರದ ಅನುಮತಿ ಪಡೆದಿಲ್ಲ. ಹೀಗಾಗಿ, ತನಿಖಾ ತಂಡವನ್ನು ಹಾಗೂ ಕೈಗೊಂಡಿರುವ ತನಿಖೆಯನ್ನು ರದ್ದುಪಡಿಸಿ ಆದೇಶ ಹೊರಡಿಸಿದ್ದಾರೆ.

ಆದೇಶ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಕೆಕೆಆರ್‌ಡಿಬಿ ಕಾರ್ಯದರ್ಶಿ ಅನಿರುದ್ಧ ಶ್ರವಣ್ ಪಿ., 'ತನಿಖಾ ಸಮಿತಿ ರದ್ದುಗೊಳಿ ಸಿದ ಮಾಹಿತಿ ಬಂದಿದೆ. ಮುಂದೆ ಏನು ಮಾಡಬೇಕು ಎಂಬ ಬಗ್ಗೆ ಕಾನೂನು ತಜ್ಞರೊಂದಿಗೆ ಚರ್ಚಿಸುತ್ತೇವೆ' ಎಂದರು.

ಚಿನ್ನಾಭರಣ ಕದ್ದೊಯ್ದ ಮಹಿಳೆ: ಠಾಣೆ ಮೆಟ್ಟಿಲೇರಿದ ವೃದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೆಜೆಸ್ಟಿಕ್‌ನಲ್ಲಿ ಪರಿಚಯವಾಗಿದ್ದ ಮಹಿಳೆ, ಸಿನಿಮಾ ನೋಡಲು ಕರೆದೊಯ್ದು ₹ 3 ಲಕ್ಷ ಮೌಲ್ಯದ ಚಿನ್ನಾಭರಣ ಕದ್ದೊಯ್ದಿದ್ದಾಳೆ' ಎಂದು ಆರೋಪಿಸಿ ನಟರಾಜ್ (70) ಅವರು ಮಲ್ಲೇಶ್ವರ ಠಾಣೆಗೆ ದೂರು ನೀಡಿದ್ದಾರೆ.

'ಕಂಪನಿಯೊಂದರ ನಿವೃತ್ತ ಉದ್ಯೋಗಿ ನಟರಾಜ್ ಈಚೆಗೆ ದೂರು ನೀಡಿದ್ದಾರೆ. ಮಹಿಳೆಯೊಬ್ಬರ ವಿರುದ್ಧ ಪ್ರಕರಣ ದಾಖಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದೂರಿನ ವಿವರ: 'ಜೂನ್ 12ರ ಮಧ್ಯಾಹ್ನ ಮೆಜೆಸ್ಟಿಕ್ ಬಳಿ ಹೋಗಿದ್ದೆ. ಅಲ್ಲಿಯೇ ಮಹಿಳೆಯೊಬ್ಬರ ಪರಿಚಯವಾಗಿತ್ತು. ನನ್ನ ಜೊತೆ ಸಲುಗೆಯಿಂದ ಮಾತನಾಡಿದ್ದಳು. ಹಣ ಕೊಟ್ಟರೆ ನನ್ನೊಂದಿಗೆ ಬರುವುದಾಗಿ ಹೇಳಿದ್ದಳು' ಎಂದು ವೃದ್ಧ ದೂರಿನಲ್ಲಿ ತಿಳಿಸಿದ್ದಾರೆ.

'ಇಬ್ಬರೂ ಸಿನಿಮಾ ನೋಡಲು ಮಂತ್ರಿ ಮಾಲ್‌ಗೆ ಹೋಗಿದ್ದೆವು. ನನ್ನ ಮೈ ಮೇಲೆ ಚಿನ್ನಾಭರಣವಿತ್ತು. ಮತ್ತು ಬರುವ ಔಷಧಿ ಬೆರೆಸಿದ್ದ ಪಾನೀಯವನ್ನು ಮಹಿಳೆ ನನಗೆ ಕುಡಿಸಿದ್ದಳು. ಇದಾದ ನಂತರ, ಚಿನ್ನಾಭರಣ ಬಿಚ್ಚಿಕೊಂಡು ಪರಾರಿಯಾಗಿದ್ದಾಳೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ವೃದ್ಧನ ಮೇಲೆ ಅನುಮಾನ: 'ಮಂತ್ರಿ ಮಾಲ್ ಸಿನಿಮಂದಿರದಲ್ಲಿರುವ ಸಿ.ಸಿ. ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಗಿದೆ. ದೂರುದಾರ ಹಾಗೂ ಮಹಿಳೆ, ಖುಷಿಯಿಂದ ಚಿತ್ರಮಂದಿರದೊಳಗೆ ಹೋಗಿದ್ದರು. ಸಿನಿಮಾ ಮುಗಿದ ನಂತರವೂ ಖುಷಿಯಿಂದಲೇ ಹೊರಗೆ ಬಂದಿದ್ದಾರೆ. ಹೀಗಾಗಿ, ವೃದ್ಧನ ಮೇಲೆಯೇ ಅನುಮಾನ ಬಂದಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಚಿತ್ರಮಂದಿರದಲ್ಲಿ ಚಿನ್ನಾಭರಣ ಕಳವಾಗಿರುವುದಾಗಿ ವೃದ್ಧ ಹೇಳುತ್ತಿದ್ದಾರೆ. ಪುರಾವೆ ಇಲ್ಲ. ಬೇರೆ ಕಡೆ ಕಳವಾಗಿರಬಹುದು. ಅಥವಾ ವೃದ್ಧನೇ ಮಹಿಳೆಗೆ ನೀಡಿ, ಮನೆಯಲ್ಲಿ ವಿಷಯ ಗೊತ್ತಾದ ಮೇಲೆ ದೂರು ನೀಡಿರಬಹುದು. ಹೀಗಾಗಿ, ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸ-ಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಚಾಕು ಇರಿತ: ಆರೋಪಿ ಬಂಧನ

ಬೆಂಗಳೂರು: ಆರ್.ಟಿ. ನಗರದ ಎಂಎಲ್‌ಎ ಬಡಾವಣೆಯ ಮನೆಯೊಂದರ ಭದ್ರತಾ ಸಿಬ್ಬಂದಿ ಮುಖಕ್ಕೆ ಚಾಕುವಿನಿಂದ ಇರಿದು ಪರಾರಿಯಾಗಿದ್ದ ಆರೋಪಿ ತೌಸಿಫ್ ಖಾನ್‌ನನ್ನು (22) ಪೊಲೀಸರು ಬಂಧಿಸಿದ್ದಾರೆ.

'ದೇವರ ಜೀವನಹಳ್ಳಿ (ಡಿ.ಜೆ.ಹಳ್ಳಿ) ನಿವಾಸಿ ತೌಸಿಫ್, ಜೂನ್ 18ರಂದು ಭದ್ರತಾ ಸಿಬ್ಬಂದಿ ಆಲ್ಬರ್ಟ್‌ಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದ. ಇದೀಗ, ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ತೌಸಿಫ್, ಅಪರಾಧ ಹಿನ್ನೆಲೆಯುಳ್ಳವ. ಹಲ ವರ್ಷದ ಹಿಂದೆಯೇ ಮನೆ ತೊರೆದಿದ್ದ ಈತ, ಚಿಂದಿ ಆಯುತ್ತಿದ್ದ. ಅದರಿಂದ ಬಂದ ಹಣವನ್ನು ದುಶ್ಚಟಗಳಿಗೆ ಖರ್ಚು ಮಾಡುತ್ತಿದ್ದ. ಬಸ್ ನಿಲ್ದಾಣ, ರೈಲು ನಿಲ್ದಾಣ ಹಾಗೂ ರಸ್ತೆಬದಿಗಳಲ್ಲಿ ಮಲಗುತ್ತಿದ್ದ. ರಾತ್ರಿ ಹೊತ್ತು ವೈಟ್ನರ್ ಅಮಲು ಏರಿಸಿಕೊಂಡು ಸುತ್ತಾಡಿ, ಹಲವರ ಮೇಲೆ ಸುಖಾಸುಮ್ಮನೇ ಹಲ್ಲೆ ನಡೆಸುತ್ತಿದ್ದ' ಎಂದರು.

'ಸದಾಶಿವನಗರ ಠಾಣೆ ವ್ಯಾಪ್ತಿಯಲ್ಲಿ 2022ರಲ್ಲಿ ವ್ಯಕ್ತಿಯೊಬ್ಬರನ್ನು ಸುಲಿಗೆ ಮಾಡಿದ್ದ ತೌಸಿಫ್, ಐದು ತಿಂಗಳು ಜೈಲಿನಲ್ಲಿದ್ದ. ಇತ್ತೀಚೆಗಷ್ಟೇ ಜಾಮಿನು ಮೇಲೆ ಹೊರಬಂದಿದ್ದ. ರಾಮಮೂರ್ತಿನಗರ, ಸಂಜಯನಗರ ಠಾಣೆ ವ್ಯಾಪ್ತಿಯಲ್ಲೂ ಇಬ್ಬರಿಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದ. ಕೆ.ಜಿ. ಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಮಹಿಳೆಯೊಬ್ಬರ ಮೇಲೆ ಹಲ್ಲೆ ಮಾಡಿದ್ದ. ಈ ಸಂಬಂಧ ಆಯಾ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿದ್ದವು' ಎಂದು ಹೇಳಿದರು.

'ಜೂನ್ 18ರಂದು ವೈಟ್ನರ್ ಅಮಲು ಏರಿಸಿಕೊಂಡಿದ್ದ ಆರೋಪಿ, ಎಂಎಲ್‌ಎ ಬಡಾವಣೆಗೆ ಬಂದಿದ್ದ. ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಿವಾಸದ ಸಮೀಪದಲ್ಲಿರುವ ಮನೆಯೊಂದರ ಎದುರು ಕುರ್ಚಿಯಲ್ಲಿ ಕುಳಿತಿದ್ದ ಆಲ್ಬರ್ಟ್ ಬಳಿ ಹೋಗಿ, ಅವರ ಮುಖಕ್ಕೆ ಚಾಕುವಿನಿಂದ ಇರಿದು ಪರಾರಿಯಾಗಿದ್ದ' ಎಂದು ತಿಳಿಸಿದರು.

ದ್ವಿಚಕ್ರ ವಾಹನಕ್ಕೆ ಬೆಂಕಿ ಹಚ್ಚಿಲ್ಲ: ಎಸ್.ಪಿ

ಮುಳಬಾಗಿಲು: ಡಿಸಿಸಿ ಬ್ಯಾಂಕ್ ಸಾಲ ವಸೂಲಾತಿ ವಿಚಾರದಲ್ಲಿ ಮಹಿಳೆಯರು ಸಾಲ ವಸೂಲಿ ಮಾಡಲು ಬಂದ ಸಹಕಾರ ಸಂಘದ ಸಿಬ್ಬಂದಿ ದ್ವಿಚಕ್ರ ವಾಹನಕ್ಕೆ ಬೆಂಕಿ ಹಚ್ಚಿದ್ದಾರೆ ಎಂಬ ಸುದ್ದಿ ಗುರುವಾರ ಹರಿದಾಡಿದೆ.

ಸಾಲ ವಸೂಲಿಗೆಂದು ಗೂಕುಂಟೆ ಸಹಕಾರ ಸಂಘದ ಸಿಬ್ಬಂದಿ ಜೋಸೆಫ್, ಬಿಸ್ನಹಳ್ಳಿಗೆ ಹೋದಾಗ ಮಹಿಳೆಯರು ಮುಖ್ಯಮಂತ್ರಿ ಸಿದ್ದರಾಮಯ್ಯ ಚುನಾವಣೆಗೂ ಮುನ್ನ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಸಾಲ ಮನ್ನಾದ ಭರವಸೆ ನೀಡಿದ್ದಾರೆ. ಆದ್ದರಿಂದ ಸಾಲ ಕಟ್ಟುವುದಿಲ್ಲ ಎಂದು ವಾಗ್ವಾದ ನಡೆಸಿದರು.

ಇದೇ ಸಂದರ್ಭ ಗ್ರಾಮದಲ್ಲಿ ದ್ವಿಚಕ್ರ ವಾಹನವೊಂದಕ್ಕೆ ಬೆಂಕಿ ಬಿದ್ದು ಸುಡುತ್ತಿ-ರುವುದನ್ನು ನೋಡಿ ಕೆಲವರು ವಿಡಿಯೊ ಮಾಡಿ ಡಿಸಿಸಿ ಬ್ಯಾಂಕ್ ಸಾಲ ಕಟ್ಟುವುದಿಲ್ಲ ಎಂದು ಮಹಿಳೆಯರು ಬ್ಯಾಂಕ್ ಸಿಬ್ಬಂದಿ ದ್ವಿಚಕ್ರ ವಾಹನಕ್ಕೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದ್ದಾರೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿಯ ಬಿಟ್ಟಿದ್ದಾರೆ.

ಈ ಕುರಿತು ಪ್ರತಿಕಾ ಪ್ರಕಟಣೆ ಹೊರಡಿಸಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ, 'ಸಾಲ ವಸೂಲಿಗೆಂದು ಹೋಗಿದ್ದ ಸಿಬ್ಬಂದಿ ವಾಹನಕ್ಕೆ ಯಾರೂ ಬೆಂಕಿ ಹಚ್ಚಿಲ್ಲ. ಬದಲಾಗಿ, ಅದೇ ಗ್ರಾಮದ ಮಂಜು ಎಂಬುವವರು ತಮ್ಮ ದ್ವಿಚಕ್ರ ವಾಹನಕ್ಕೆ ತಾನೇ ಬೆಂಕಿ ಹಚ್ಚಿ ಅದನ್ನು ವಿಡಿಯೊ ಮಾಡಿ ಸಾಲ ವಸೂಲಿಗೆ ಬಂದ ಸಿಬ್ಬಂದಿ ದ್ವಿಚಕ್ರ ವಾಹನಕ್ಕೆ ಬೆಂಕಿ ಹಚ್ಚಲಾಗಿದೆ ಎಂಬಂತೆ ಘಟನೆಯನ್ನು ಬೇರೆ ರೀತಿಯಲ್ಲಿ ತಿರುಚಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಯ ಬಿಟ್ಟಿದ್ದಾರೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಸ್ ನಿಲ್ಲಿಸದ್ದಕ್ಕೆ ವಾಗ್ವಾದ: ಕಂಡಕ್ಟರ್ ಮೇಲೆ ಹಲ್ಲೆ

ಚಳ್ಳಕೆರೆ (ಚಿತ್ರದುರ್ಗ): ಕೇಳಿದಲ್ಲಿ ಬಸ್ ನಿಲ್ಲಿಸದೆ, ವಾಗ್ವಾದ ನಡೆಸಿದ್ದಾರೆ ಎಂಬ ಕಾರಣಕ್ಕೆ ಕೆಎಸ್‌ಆರ್‌ಟಿಸಿ ಬಸ್ ಕಂಡಕ್ಟರ್ ಒಬ್ಬರನ್ನು ಥಳಿಸಿದ ಆರೋಪದ ಮೇಲೆ ಮಹಿಳೆಯೊಬ್ಬರು ಸೇರಿದಂತೆ ನಾಲ್ವರು ಆರೋಪಿಗಳನ್ನು ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಚಳ್ಳಕೆರೆಯ ಚಂದ್ರಿಕಾ, ಮಲ್ಲಿಕಾರ್ಜುನ, ಶಿವರಾಜ, ನವೀನ್ ಬಂಧಿತರು. ಬಸ್ ಕಂಡಕ್ಟರ್ ಚಂದ್ರೇಗೌಡ ಹಲ್ಲೆಗೊಳಗಾದವರು.

ಚಳ್ಳಕೆರೆ ಘಟಕಕ್ಕೆ ಸೇರಿದ ಕೆಎಸ್‌ಆರ್‌ಟಿಸಿ ಬಸ್ ಬೆಂಗಳೂರು– ರಾಯದುರ್ಗ ಮಾರ್ಗದಲ್ಲಿ ಸಂಚರಿಸು-ತ್ತಿದ್ದಾಗ ಈ ಘಟನೆ ನಡೆದಿದೆ.

ಬೆಂಗಳೂರಿಗೆ ತೆರಳಲು ಮಹಿಳೆಯೊಬ್ಬರು ಬುಧವಾರ ರಾಯದುರ್ಗದಿಂದ ಹೊರಟಿದ್ದ ಈ ಬಸ್ ಏರಿದ್ದರು. ದಾಬಸ್‌ಪೇಟೆಯಲ್ಲಿ ಬಸ್ ನಿಲುಗಡೆ ಮಾಡುವಂತೆ ಮಹಿಳೆ ಕೋರಿದ್ದರು. ವೇಗದೂತ ಬಸ್ ಆಗಿರುವ ಕಾರಣಕ್ಕೆ ಮಹಿಳೆ ಕೇಳಿದ ಕಡೆ ನಿಲುಗಡೆಗೆ ಕಂಡಕ್ಟರ್ ಒಪ್ಪಿರಲಿಲ್ಲ. ನಂತರ ಇದೇ ವಿಚಾರವಾಗಿ ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಮಹಿಳೆ ಹಾಗೂ ಕಂಡಕ್ಟರ್ ಮಧ್ಯೆ ತೀವ್ರ ವಾಗ್ವಾದ ನಡೆದಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಭಾಗ್ಯಜ್ಯೋತಿ ಸಂಪರ್ಕದ ಮನೆಗೆ ₹1.03 ಲಕ್ಷ ಬಿಲ್ ಕೊಟ್ಟ ಜೆಸ್ಕಾಂ ಸಿಬ್ಬಂದಿ!

ಕೊಪ್ಪಳ: ಭಾಗ್ಯಜ್ಯೋತಿ ಯೋಜನೆಯಡಿ ಮನೆಗೆ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದ ಇಲ್ಲಿನ ಭಾಗ್ಯನಗರದ ನಿವಾಸಿ ಗಿರಿಜಮ್ಮ ಚಿಂತಪಲ್ಲಿ ಅವರಿಗೆ ಜೆಸ್ಕಾಂ ಸಿಬ್ಬಂದಿ ಜೂನ್‌ನಲ್ಲಿ ₹1,03,315 ಬಿಲ್ ನೀಡಿದ್ದರಿಂದ ಅಜ್ಜಿ ತಬ್ಬಿಬ್ಬು-ಗೊಂಡಿದ್ದರು.

ಮನೆಯಲ್ಲಿ ಎರಡು ಬಲ್ಬ್ ಮಾತ್ರ ಇದ್ದು, ಇಷ್ಟೊಂದು ದೊಡ್ಡಮೊತ್ತದ ಬಿಲ್ ಬಂದಿದ್ದನ್ನು ನೋಡಿ 90 ವರ್ಷದ ಗಿರಿಜಮ್ಮ ಗಾಬರಿಗೆ ಒಳಗಾದರು. ಜೆಸ್ಕಾಂ ಸಿಬ್ಬಂದಿ ಆರು ತಿಂಗಳಿನಿಂದ ಬಿಲ್ ನೀಡುತ್ತಿದ್ದು, ಪ್ರತಿ ತಿಂಗಳಿನಿಂದ ತಿಂಗಳಿಗೆ ಬಿಲ್ ಮೊತ್ತ ಹೆಚ್ಚಾಗುತ್ತಿತ್ತು.

ಮೈಸೂರು ರೇಸ್

ಗ್ಯಾಮ ಗೆಲ್ಲುವ ನಿರೀಕ್ಷೆ

ಡಾ.ಎಂ.ಎಂ.ಶ್ರೀನಿವಾಸ್ ಮೆಮೋರಿಯಲ್ ಟ್ರೋಫಿ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗ್ಯಾಮ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಫೆಲಿಸಿಟಾ 4, ಸಿಟಿ ಆಫ್ ಹಸ್ಲ್ 1, ವಿಜಯ ಸುರಭಿ 11

2ನೇ ರೇಸ್: ಸ್ವಿಸ್ ಟೈಗ್ರೆಸ್ 3, ರಾಯ್ಝ್ 2, ಕೂರ್ಗ್ ಜನರಲ್ 7

3ನೇ ರೇಸ್: ಜನ್ಯೈರೊ 12, ಶೀಭಾ 15, ನ್ಯಾಚುರಲ್ ಹಂಟರ್ 13

4ನೇ ರೇಸ್: ಆಂಟಿನೊರಿ 8, ಕುಶಾಖ್ 1, ಕೊಯೊಟೆ ಗರ್ಲ್ 2

5ನೇ ರೇಸ್: ಗ್ಯಾಮ 15, ಮೌಂಟೇನ್ ಲಯನ್ 8, ಅಬರ್ಲರ್ 6

6ನೇ ರೇಸ್: ಹೀರೋಯಿಸ್ಮ್ 1, ಸಾಂತೊರಿಣಿ 4, ವಿವಾ ಲಾ ವಿಡ 7

7ನೇ ರೇಸ್: ಮಾರ್ಚ್ ಟು ವಿಕ್ಟರಿ 1, ವಿಂಡ್ ವಿಸ್ಲರ್ 8, ನ್ಯಾಚುರಲ್ ಒನ್ 7

ಉತ್ತಮ ಬೆಟ್: ಜನ್ಯೈರೊ

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	4,5,6,7	2,3,4	5.6,7

ಟೈಟಾನ್ ನೌಕೆ ಅವಶೇಷ ಪತ್ತೆ

ನ್ಯೂಯಾರ್ಕ್ (ರಾಯಟರ್ಸ್): ಟೈಟಾನಿಕ್ ಹಡಗಿನ ಅವಶೇಷಗಳ ವೀಕ್ಷಣೆಗೆ ಅಟ್ಲಾಂಟಿಕ್ ಸಾಗರದೊಳಗೆ ತೆರಳಿದ್ದ ವೇಳೆ ನಾಪತ್ತೆಯಾಗಿರುವ 'ಟೈಟಾನ್' ಎಂಬ ಸಬ್‌ಮರ್ಸಿಬಲ್ ನೌಕೆಯ ಅವಶೇಷವನ್ನು ಗುರುವಾರ ಪತ್ತೆ ಹಚ್ಚಲಾಗಿದೆ ಎಂದು ಅಮೆರಿಕದ ಕರಾವಳಿ ಪಡೆ ತಿಳಿಸಿದೆ.

ಓಷನ್‌ಗೇಟ್ ಕಂಪನಿ ಅಭಿವೃದ್ಧಿ ಪಡಿಸಿರುವ ಈ ಸಬ್‌ಮರ್ಸಿಬಲ್ ನೌಕೆ ಐವರನ್ನು ಕರೆದೊಯ್ಯುತ್ತಿದ್ದಾಗ ನಾಪತ್ತೆಯಾಗಿತ್ತು.

ಆಳ ಸಮುದ್ರದಲ್ಲಿ ರೋಬೋಟಿಕ್ ತಂತ್ರಜ್ಞಾನದ ಮೂಲಕ ನೌಕೆಯನ್ನು ಪತ್ತೆ ಹಚ್ಚುವ ಕಾರ್ಯ ನಡೆದಿತ್ತು. ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಟೈಟಾನ್ ನೌಕೆಯಲ್ಲಿ 96 ಗಂಟೆಗೆ ಸಾಕಾಗುವಷ್ಟು ಆಮ್ಲಜನಕದ ಸಂಗ್ರಹವಿದೆ ಎಂದು ಕಂಪನಿ ಹೇಳಿದೆ. ಹಾಗಾಗಿ, ಗುರುವಾರ ಬೆಳಿಗ್ಗೆ ವೇಳೆಗೆ ಆಮ್ಲಜನಕದ ಪ್ರಮಾಣ ಕಡಿಮೆಯಾಗಿರುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೌಕೆಯಲ್ಲಿದ್ದ ಪ್ರಯಾಣಿಕರು ಮೃತಪಟ್ಟಿರಬಹುದು ಎಂದು ಪ್ರವಾಸ ಏರ್ಪಡಿಸಿದ್ದ ಓಪನ್ ಗೇಟ್ ಕಂಪನಿ ಶಂಕೆ ವ್ಯಕ್ತಪಡಿಸಿದೆ.

ಪ್ರೀತಿಸಿ ಮದುವೆಯಾಗಿದ್ದ ದಂಪತಿ

'ಡ್ರಗ್ಸ್ ವ್ಯಸನಿ ಅಳಿಯ: ಹಿಂಸಿಸಿ ಮಗಳ ಕೊಲೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣೂರು ಠಾಣೆ ವ್ಯಾಪ್ತಿಯಲ್ಲಿ ನಂದಿನಿ (24) ಎಂಬುವವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದ ಪ್ರಕರಣ ಸಂಬಂಧ ಅವರ ತಾಯಿ ಪೊಲೀಸರಿಗೆ ದೂರು ನೀಡಿದ್ದು, 'ಡ್ರಗ್ಸ್ ವ್ಯಸನಿಯಾದ ಅಳಿಯ ಗೌತಮ್, ಮಗಳಿಗೆ ಚಿತ್ರಹಿಂಸೆ ನೀಡಿ ಕೊಲೆ ಮಾಡಿದ್ದಾನೆ' ಎಂದು ಆರೋಪಿಸಿದ್ದಾರೆ.

ಹೆಣ್ಣೂರು ಸೊನ್ನಪ್ಪ ಲೇಔಟ್‌ನ ಗೌತಮ್ ಹಾಗೂ ಗುಡ್ಡದಹಳ್ಳಿಯ ನಂದಿನಿ, ಪರಸ್ಪರ ಪ್ರೀತಿಸಿ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಏಪ್ರಿಲ್ 6ರಂದು ನೇಣು ಬಿಗಿದ ಸ್ಥಿತಿಯಲ್ಲಿ ನಂದಿನಿ ಮೃತದೇಹ ಪತ್ತೆಯಾಗಿತ್ತು.

ಸಾವಿನ ಬಗ್ಗೆ ದೂರು ನೀಡಿರುವ ನಂದಿನಿ ತಾಯಿ, 'ನನ್ನ ಒಬ್ಬಳೇ ಮಗಳು ನಂದಿನಿ. ಕಷ್ಟಪಟ್ಟು ಸಾಕಿದ್ದೆ. ಐದು ವರ್ಷದ ಹಿಂದೆಯಷ್ಟೇ ನಂದಿನಿ, ಗೌತಮ್‌ನನ್ನು ಪ್ರೀತಿಸಿ ಮದುವೆಯಾಗಿದ್ದಳು. ಕೆಲ ತಿಂಗಳ ನಂತರ ಅಳಿಯ ಮದ್ಯ ಕುಡಿದು ಬಂದು ಮಗಳಿಗೆ ಹೊಡೆಯುತ್ತಿದ್ದ. ಡ್ರಗ್ಸ್ ವ್ಯಸನಿಯಾಗಿದ್ದ ಅಳಿಯ, ನಿತ್ಯವೂ ಮಗಳಿಗೆ ಕಿರುಕುಳ ನೀಡುತ್ತಿದ್ದ' ಎಂದಿದ್ದಾರೆ.



ನಂದಿನಿ ಜೊತೆ ಪತಿ ಗೌತಮ್

'ಪತಿ ನೀಡುತ್ತಿದ್ದ ಕಿರುಕುಳದ ಬಗ್ಗೆ ನಂದಿನಿ ಹಲವು ಬಾರಿ ನನಗೆ ಹೇಳಿದ್ದಳು. ಏಪ್ರಿಲ್ 6ರಂದು ಕರೆ ಮಾಡಿದ್ದ ಅಳಿಯ, 'ನಂದಿನಿ ನೇಣು ಹಾಕಿಕೊಂಡಿದ್ದು, ಆಕೆಯನ್ನು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದೇವೆ' ಎಂದಿದ್ದ. ಆಸ್ಪತ್ರೆಗೆ ಹೋದಾಗ, ಮಗಳು ಮೃತಪಟ್ಟಿದ್ದು ಗೊತ್ತಾಗಿತ್ತು. ಬೇರೊಬ್ಬ ಮಹಿಳೆ ಜೊತೆ ಅಕ್ರಮ ಸಂಬಂಧ-ವಿಟ್ಟುಕೊಂಡಿದ್ದ ಅಳಿಯ, ಮಗಳ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಿ ಚಿತ್ರಹಿಂಸೆ ನೀಡುತ್ತಿದ್ದ. ಆತನೇ ಮಗಳನ್ನು ಕೊಲೆ ಮಾಡಿ ಆತ್ಮಹತ್ಯೆ ನಾಟಕವಾಗುತ್ತಿರುವ ಅನುಮಾನವಿದೆ' ಎಂದು ತಾಯಿ ದೂರಿದ್ದಾರೆ.

'ಮಗಳ ಕುತ್ತಿಗೆಯಲ್ಲಿ ಗಾಯದ ಗುರುತು ಇದೆ. ಕೊಲೆ ಎಂಬುದಾಗಿ ಹೇಳಿದರೂ ಪೊಲೀಸರು ಸೂಕ್ತ ತನಿಖೆ ನಡೆಸುತ್ತಿಲ್ಲ. ಈ ಹಿಂದೆ ಮನೆಯಲ್ಲಿ ಗಲಾಟೆ ಆಗಿದ್ದಾಗ ಠಾಣೆಗೆ ದೂರು ನೀಡಿದ್ದ ಮಗಳು, 'ನನಗೆ ಏನಾದರೂ ತೊಂದರೆಯಾದರೆ, ಪತಿ ಗೌತಮ್ ಹಾಗೂ ಆತನ ಮನೆಯವರು ಕಾರಣ' ಎಂದಿದ್ದರು. ಇದಾದ ನಂತರವೇ ಮಗಳ ಕೊಲೆಯಾಗಿದೆ. ಹಿರಿಯ ಪೊಲೀಸ್ ಅಧಿಕಾರಿಗಳು ನನಗೆ ನ್ಯಾಯ ಒದಗಿಸಬೇಕು' ಎಂದೂ ತಾಯಿ ಕೋರಿದ್ದಾರೆ.

ಹೆಣ್ಣೂರು ಪೊಲೀಸರು, 'ನಂದಿನಿ ಸಾವಿನ ಬಗ್ಗೆ ತನಿಖೆ ಮುಂದುವರಿಸಲಾಗಿದೆ. ಪತಿ ಗೌತಮ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ. ಮರಣಪತ್ರ ಹಾಗೂ ಇತರೆ ಸಾಕ್ಷ್ಯ-ಗಳನ್ನು ಪರೀಕ್ಷೆಗೆಂದು ವಿಧಿವಿಜ್ಞಾನ ಪ್ರಯೋಗಾಲ ಯಕ್ಕೆ ಕಳುಹಿಸಲಾಗಿದೆ. ಅದರ ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದರು.

ಕ್ಯಾಬ್ ಚಾಲಕನ ಅಸಭ್ಯ ವರ್ತನೆ: ಯುವತಿ ದೂರು

ಬೆಂಗಳೂರು: 'ಉಬರ್ ಕ್ಯಾಬ್ ಚಾಲಕನೊಬ್ಬ ಪ್ರಯಾಣದ ವೇಳೆ ನನ್ನ ಎದುರು ಅಸಭ್ಯವಾಗಿ ವರ್ತಿಸಿದ್ದಾನೆ' ಎಂದು ಆರೋಪಿಸಿ ಯುವತಿಯೊಬ್ಬರು ಲಿಂಕ್ಡ್‌ಇನ್ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಪ್ರಕಟಿಸಿದ್ದಾರೆ.

ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಬೆಂಗಳೂರು ಪೊಲೀಸರು, 'ಸಂಬಂಧಪಟ್ಟ ಠಾಣೆಗೆ ನಿಮ್ಮ ದೂರು ತಿಳಿಸಲಾಗಿದೆ. ಪೊಲೀಸರ ಎದುರು ಹೇಳಿಕೆ ನೀಡಿ, ಕ್ರಮ ಕೈಗೊಳ್ಳುತ್ತಾರೆ' ಎಂದಿದ್ದಾರೆ. ಆದರೆ, ಗುರುವಾರ ಸಂಜೆಯವರೆಗೂ ಯುವತಿ ಪೊಲೀಸರ ಸಂಪರ್ಕಕ್ಕೆ ಸಿಕ್ಕಿಲ್ಲ.

ಯುವತಿಯ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಉಬರ್ ಕಂಪನಿ ಪ್ರತಿನಿಧಿ, 'ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ತಪ್ಪಿತಸ್ಥ ಚಾಲಕನನ್ನು ಪತ್ತೆ ಮಾಡಿ ಕ್ರಮ ಕೈಗೊಳ್ಳಲಾಗುವುದು. ಪ್ರಯಾಣಿಕರ ಸುರಕ್ಷತೆಗೆ ಕ್ರಮ ತೆಗೆದುಕೊಂಡಿದ್ದೇವೆ' ಎಂದಿದ್ದಾರೆ.

ಆಗಿದ್ದೇನು: 'ಬಿಟಿಎಂ ಎರಡನೇ ಹಂತದಿಂದ ಜೆ.ಪಿ. ನಗರ ಮೆಟ್ರೊ ನಿಲ್ದಾಣಕ್ಕೆ ಹೋಗಲು ಕ್ಯಾಬ್ ಕಾಯ್ದಿರಿಸಿದ್ದೆ. ಸ್ಥಳಕ್ಕೆ ಬಂದಿದ್ದ ಚಾಲಕ, ಕ್ಯಾಬ್‌ನಲ್ಲಿ ಹತ್ತಿಸಿಕೊಂಡು ಜೆ.ಪಿ. ನಗರದತ್ತ ಹೊರಟಿದ್ದ. ಮಾರ್ಗಮಧ್ಯೆ ಚಾಲಕ ಅಸಭ್ಯವಾಗಿ ವರ್ತಿಸಿದ್ದ' ಎಂದು ಯುವತಿ ಪೋಸ್ಟ್‌ನಲ್ಲಿ ಬರೆದಿದ್ದಾರೆ.

'ಚಾಲಕನ ವರ್ತನೆಯಿಂದ ಗಾಬರಿಯಾದೆ. ನಿಗದಿತ ಸ್ಥಳಕ್ಕೆ ಬಿಡುವಂತೆ ಚಾಲಕನನ್ನು ಒತ್ತಾಯಿಸಿದೆ. ಆತ, ನಿಗದಿತ ಸ್ಥಳಕ್ಕೆ ಹೋಗಿ ಕ್ಯಾಬ್ ನಿಲ್ಲಿಸಿದ. ಹಣ ನೀಡಲು ಹೋದಾಗ, ಚಾಲಕ ತನ್ನ ಖಾಸಗಿ ಅಂಗಾಂಗ ತೋರಿಸಿ ಅಸಭ್ಯವಾಗಿ ವರ್ತಿಸಲಾರಂಭಿಸಿದ್ದ. ಮತ್ತಷ್ಟು ಹೆದರಿ, ಸ್ಥಳದಿಂದ ಓಡಿಬಂದೆ' ಎಂದು ಯುವತಿ ಉಲ್ಲೇಖಿಸಿದ್ದಾರೆ.

ಸಿನಿಮಾ ಪುರವಣಿ

ಭಾವುಕತೆಯ ಗುಂಗು, ಪಾರ್ಟ್ 2 ಹಂಗು




ಸಪ್ತ ಸಾಗರದಾಚೆ ಎಲ್ಲೋ
ರಕ್ಷಿತ್ ಶೆಟ್ಟಿ, ರುಕ್ಮಿಣಿ ವಸಂತ್

ಅಭಿಲಾಷ್ ಪಿ.ಎಸ್.

ಸಿನಿಮಾಗಳು ಪ್ರೀಕ್ವೆಲ್(ಹಿಂದಿನ ಕಥೆ) ಸೀಕ್ವೆಲ್(ಮುಂದಿನ ಕಥೆ) ಆಗಿ ಸರಣಿ ರೂಪದಲ್ಲಿ ತೆರೆ ಕಾಣುವುದು ಸಾಮಾನ್ಯ. ಇಂತಹ ಸಂದರ್ಭದಲ್ಲಿ ಮೊದಲ ಸಿನಿಮಾದ ಯಶಸ್ಸು ಮುಂದಿನ ಭಾಗದ ಭವಿಷ್ಯವನ್ನು ರೂಪಿಸುತ್ತದೆ. ಜೊತೆಗೆ ಮೊದಲ ಸಿನಿಮಾ ಬಿಡುಗಡೆಯಾಗಿ ಹಲವು ತಿಂಗಳುಗಳು ಅಥವಾ ವರ್ಷದ ಬಳಿಕ ಎರಡನೇ ಭಾಗ ಬರುತ್ತದೆ. ಈ ಸಿದ್ಧಮಾದರಿಯನ್ನು ದಾಟಿ 'ಹೊಸ ಸ್ಪೇಸ್'ಗೆ ಕಾಲಿಟ್ಟಿದ್ದಾರೆ ನಿರ್ದೇಶಕ ಹೇಮಂತ್ ಎಂ.ರಾವ್. ಕೇವಲ 50 ದಿನಗಳ ಅಂತರದಲ್ಲಿ ತಮ್ಮ **'ಸಪ್ತ ಸಾಗರದಾಚೆ ಎಲ್ಲೋ'** ಸಿನಿಮಾದ ಎರಡೂ ಬದಿಗಳನ್ನು(ಸೈಡ್ಸ್) ಪ್ರೇಕ್ಷಕರೆದುರು ಇಡಲಿದ್ದಾರೆ ಹೇಮಂತ್. ಚಿತ್ರೋದ್ಯಮದಲ್ಲಿ ಇದೊಂದು ಹೊಸ ಪ್ರಯೋಗ. ಈ ಮಾದರಿಯು ಅನುಕೂಲಕರವಾದೀತೆ ಎನ್ನುವ ಪ್ರಶ್ನೆ ಸ್ವತಃ ಹೇಮಂತ್ ಅವರಲ್ಲೂ ಇದೆ. ಇವೆಲ್ಲದರ ಬಗ್ಗೆ ಅವರೊಂದಿಗೆ ಒಂದು ಮಾತುಕತೆ...

ಭಾವುಕತೆಯ ಗುಂಗಿನ (ಎಮೋಷನಲ್ ಹ್ಯಾಂಗ್‌ಓವರ್) ಲೆಕ್ಕಾಚಾರ!: 'ಈ ಸಿನಿಮಾ 2010 ಹಾಗೂ 2020, ಹೀಗೆ ಎರಡು ಅವಧಿಯಲ್ಲಿ ನಡೆಯುವ ಕಥೆಯನ್ನು ಹೊಂದಿದೆ. ಒಂದೇ ಸಿನಿಮಾ ಮಾಡುವ ಉದ್ದೇಶದಿಂದಲೇ ಶೂಟಿಂಗ್ ಆರಂಭವಾಗಿತ್ತು. 2010ರ ಕಥೆಯ ಎಳೆಯಿಟ್ಟುಕೊಂಡು ಶಿವಮೊಗ್ಗದಲ್ಲಿ ಚಿತ್ರೀಕರಣ ನಡೆಸುವ ಸಂದರ್ಭದಲ್ಲಿ, 'ಎರಡು ಭಾಗಗಳಲ್ಲಿ ಸಿನಿಮಾ ಬಂದರೆ ಚೆನ್ನಾಗಿರುತ್ತದೆ' ಎನ್ನುವ ನನ್ನ ಅಭಿಪ್ರಾಯವನ್ನು ರಕ್ಷಿತ್ ಶೆಟ್ಟಿ ಅವರ ಮುಂದಿಟ್ಟೆ. ಈ ಸಂದರ್ಭದಲ್ಲಿ ಮೊದಲಿಗೆ ಬಜೆಟ್ ವಿಷಯದಲ್ಲಿ ಆಗುವ ಬದಲಾವಣೆಗಳ ಬಗ್ಗೆ ಚರ್ಚೆಯಾಯಿತು. ನಂತರ ಎರಡು ಭಾಗ ಎಂದು ಮಾಡುವುದಿದ್ದರೆ ಅದಕ್ಕೆ ಇನ್ನೆಷ್ಟು ದಿನಗಳ ಚಿತ್ರೀಕರಣದ ಅಗತ್ಯವಿದೆ ಎಂದು ಮಾತುಕತೆ ನಡೆಸಿದೆವು. ಆರಂಭದಲ್ಲಿ 90 ದಿನಗಳಲ್ಲಿ ಇಡೀ ಸಿನಿಮಾದ ಶೂಟಿಂಗ್ ಪೂರ್ಣಗೊಳಿಸುವ ಯೋಜನೆ ಹಾಕಿಕೊಂಡಿದ್ದೆವು. ಎರಡು ಭಾಗಗಳಾಗಿ ವಿಂಗಡಿಸಿದ ಕಾರಣ ಇನ್ನೂ 25-30 ದಿನ ಚಿತ್ರೀಕರಣ ಬೇಕು ಅನ್ನಿಸಿತು. ಅದಕ್ಕೆ ತಕ್ಕಹಾಗೆ ಶೂಟಿಂಗ್ ಮುಂದುವರಿಸಿದೆವು' ಎನ್ನುತ್ತಾರೆ ಹೇಮಂತ್.

'ಒಂದೇ ಸಿನಿಮಾದಲ್ಲಿ ಇಡೀ ಕಥೆಯನ್ನು ಹೇಳಲು ಸಾಧ್ಯವಾದರೆ ಹಾಗೆಯೇ ಮಾಡೋಣ ಎಂದು ನಿರ್ಮಾಪಕನ ದೃಷ್ಟಿಯಿಂದ ರಕ್ಷಿತ್ ಕೇಳಿದ್ದರು. ಆದರೆ ಈ ಸಿನಿಮಾವನ್ನು ಎರಡು ಭಾಗಗಳಲ್ಲಿ ನೋಡಿದರೆ ಪ್ರೇಕ್ಷಕರಿಗೂ ತೃಪ್ತಿಯಾದೀತು ಎನ್ನುವ ನಂಬಿಕೆಯನ್ನು ನಾನು ಹೊಂದಿದ್ದೆ. ಇದು ನಿರ್ಧಾರವಾದ ಬಳಿಕ ಬಹಳಷ್ಟು ಚರ್ಚೆಯಾಯಿತು. ಎರಡು ಭಾಗಗಳ ಬಿಡುಗಡೆ ನಡುವೆ ಬಹಳ ಸಮಯ ನೀಡಲು 'ಸಪ್ತ ಸಾಗರ...' 'ಬಾಹುಬಲಿ', 'ಕೆ.ಜಿ.ಎಫ್.', 'ಪೊನ್ನಿಯಿನ್ ಸೆಲ್ವನ್' ರೀತಿಯ ಕಥೆ ಹೊಂದಿಲ್ಲ. ಇದೊಂದು ತೀವ್ರ ಪ್ರೇಮಕಥಾ ಚಿತ್ರ. ಚಿತ್ರಮಂದಿರದೊಳಗೆ ಬರುವ ಪ್ರೇಕ್ಷಕನಿಗೆ ಭಾವುಕತೆಯ ಗುಂಗು (Emotional Hangover) ಹತ್ತಿಸುತ್ತೇವೆ. ಅದೇ ಗುಂಗಿನಲ್ಲಿ ಆತ ಎರಡನೇ ಭಾಗ ನೋಡಲು ಮತ್ತೆ ಚಿತ್ರಮಂದಿರಕ್ಕೆ ಬರಬೇಕು. ಎಷ್ಟು ದಿನ ಪ್ರೇಕ್ಷಕನೊಬ್ಬನನ್ನು ಇದೇ ಗುಂಗಿನಲ್ಲಿ ಹಿಡಿದಿಟ್ಟುಕೊಳ್ಳಬಹುದು ಎಂದು ಲೆಕ್ಕಾಚಾರ ಹಾಕಿದೆವು. ಈ ಪ್ರಕಾರ ಆರೇಳು ವಾರ ಆತನಲ್ಲಿ ಆ ಚಿತ್ರದ ಪರಿಣಾಮ, ಕಾತರ ಇರುತ್ತದೆ ಎನ್ನುವ ಲೆಕ್ಕಾಚಾರ ಇಟ್ಟುಕೊಂಡು ಸೆ.1ರಂದು ಸೈಡ್-A ಹಾಗೂ ಅ.20ರಂದು ಸೈಡ್-B ಬಿಡುಗಡೆಗೆ ನಿರ್ಧರಿಸಿದೆವು. ಈ ಮಾದರಿ ನಮಗೆ ಸಂಪೂರ್ಣ ಹೊಸದು. ಇದು ಯಾವ ರೀತಿಯ ಫಲ ಕೊಟ್ಟೀತು ಎಂಬುವುದನ್ನು ಕಾದುನೋಡಬೇಕು' ಎಂದರು ಹೇಮಂತ್.



ಹೇಮಂತ್ ಎಂ.ರಾವ್

ಕಥೆಯ ವಿಸ್ತರಣೆ: '12 ವರ್ಷಗಳ ಹಿಂದೆ ಈ ಕಥೆ ಬರೆದಿದ್ದೆ. ಅಲ್ಲಿಂದ ಚಿತ್ರೀಕರಣಕ್ಕೆ ಹೆಜ್ಜೆ ಇಡುವ ಕ್ಷಣದವರೆಗೂ ಮುಖ್ಯ ಅಂಶಗಳನ್ನು ಬಿಟ್ಟು ಕಥೆಯಲ್ಲಿ ಬಹಳ ಬದಲಾವಣೆ ಆಗಿದೆ. ಮುಖ್ಯವಾಗಿ ನಾನೇ ಬದಲಾಗಿದ್ದೇನೆ. ಪ್ರಪಂಚವನ್ನು ನಾನು ನೋಡುವ ದೃಷ್ಟಿಕೋನ ಬದಲಾಗಿದೆ. ಪ್ರಪಂಚದ ದೃಷ್ಟಿಕೋನವೂ ಬದಲಾಗಿದೆ. ನನ್ನ ಬರವಣಿಗೆಯೂ ಬಹಳಷ್ಟು ಬದಲಾವಣೆ ಕಂಡಿದೆ. ಎರಡು ಸಿನಿಮಾಗಳ ಅನುಭವವೂ ಇಲ್ಲಿ ಪರಿಣಾಮ ಬೀರಿದೆ. ತಂತ್ರಜ್ಞಾನ ಬದಲಾಗಿದೆ. ಸಂವಹನ ಇಂದು ಸರಳವಾಗಿದೆ. ಸಮಾಜವೂ ಹೊಸ ಬದಲಾವಣೆಗಳಿಗೆ ಒಗ್ಗಿಕೊಳ್ಳುತ್ತಿದೆ. ಇವೆಲ್ಲವೂ ಕಥೆಯ ಮೇಲೂ ಪರಿಣಾಮ ಬೀರಿದೆ. ಒಂದು ಸಿನಿಮಾ ಕಥೆ ಹೇಳುವ ಸಂದರ್ಭದಲ್ಲಿ ಈ ಪ್ರೀತಿ ಸರಿ, ಆ ಪ್ರೀತಿ ತಪ್ಪು ಎಂದು ಹೇಳುವ ಹಕ್ಕು ಯಾರಿಗೂ ಇಲ್ಲ. ಅವೆಲ್ಲವೂ ಅವರವರಿಗೆ ಬಿಟ್ಟದ್ದು. ಪ್ರೀತಿ ಕುರಿತ ಯಾವ ಸಂದೇಶವನ್ನೂ ಸಿನಿಮಾ ಹೊತ್ತಿಲ್ಲ. ಪ್ರೇಮಕಥೆಯೆಂದರೆ ತೆರೆಯ ಮೇಲೆ ಕಾಣಿಸುವ ಆ ಪ್ರೀತಿಯನ್ನು ಪ್ರೇಕ್ಷಕ ಅನುಭವಿಸಬೇಕು. ಬಹಳ ಶ್ರಮಪಟ್ಟು ಇದನ್ನು ಈ ಸಿನಿಮಾದಲ್ಲಿ ಸೃಷ್ಟಿಸಿದ್ದೇವೆ' ಎಂದು ಹೇಮಂತ್ ತಮ್ಮ ಕಥಾ ವಿಸ್ತರಣೆಯ ಸೂಕ್ಷ್ಮವನ್ನು ಮೆಲುಕು ಹಾಕಿದರು.



ಧೂಮಂ
ಫಹಾದ್

'ಲೂಸಿಯಾ', 'ಯುಟರ್ನ್' ಖ್ಯಾತಿಯ ನಿರ್ದೇಶಕ ಪವನ್ ಕುಮಾರ್ ಅವರ 'ಧೂಮಂ' ಸಿನಿಮಾ ಇಂದು(ಜೂನ್ 23) ಮಲಯಾಳಂ ಮತ್ತು ಕನ್ನಡದಲ್ಲಿ ತೆರೆ ಕಾಣುತ್ತಿದೆ. ಬಹು ಬೇಡಿಕೆಯ ನಟ ಎನಿಸಿರುವ ಫಹಾದ್ ಫಾಸಿಲ್ ಪವನ್‌ಗೆ ಸಿಕ್ಕಿದ್ದು ಹೇಗೆ? ಇದಕ್ಕೆ ಹೊಂಬಾಳೆ ಜೊತೆಯಾಗಿದ್ದು ಏಕೆ? ಎಂಬಿತ್ಯಾದಿ ವಿಷಯಗಳ ಕುರಿತು ಪವನ್ ಕುಮಾರ್ ಮಾತನಾಡಿದ್ದಾರೆ...

ಆ ನಿಕೋಟಿನ್ನೇ ಈ 'ಧೂಮಂ'

ವಿನಾಯಕ ಕೆ.ಎಸ್.

- **ಇದು ದಶಕಗಳ ಹಳೆಯ ಕನಸಿನ ಕಥೆಯೇ? ಇದಕ್ಕೆ ಫಹಾದ್ ಜೊತೆಯಾಗಿದ್ದು ಹೇಗೆ?**

ಹೌದು. 2008ರಲ್ಲಿ ಬರೆದ ಕಥೆ ಇದು. ಇದನ್ನು 'ನಿಕೋಟಿನ್' ಎಂಬ ಸಿನಿಮಾ ಮಾಡಬೇಕೆಂದು ಎರಡು ಮೂರು ಸಲ ಪ್ರಯತ್ನಿಸಿದೆ. 2014ರಲ್ಲಿ ಇನ್ನೊಂದಷ್ಟು ಬದಲಾವಣೆಗಳನ್ನು ಮಾಡಿಕೊಂಡು ಸಿನಿಮಾ ಮಾಡಲು ಸಿದ್ಧನಾದೆ. ಕಾಲ ಕೂಡಿ ಬರಲಿಲ್ಲ. ಆಗಾಗ ಕುಳಿತುಕೊಂಡು ಸ್ಕ್ರಿಪ್ಟ್ ಅಪ್‌ಗ್ರೇಡ್ ಮಾಡುತ್ತಿದ್ದೆ. ತಂಬಾಕಿನ ಕುರಿತಾದ ಕಥೆಯಿದು. 2008ರಲ್ಲಿಯೂ ತಂಬಾಕು ಇತ್ತು. ಈಗಲೂ ಇದೆ. ತಂಬಾಕು ಇರುವವರೆಗೂ ಈ ಕಥೆ ಜೀವಂತವಾಗಿರುತ್ತದೆ.

- **ಈ ಯೋಜನೆಗೆ ಫಹಾದ್ ಬಂದಿದ್ದು ಹೇಗೆ?**

ಈ ಸಿನಿಮಾಕ್ಕೆ ಫಹಾದ್ ಪ್ರವೇಶವಾಗಿದ್ದು 2022ರಲ್ಲಿ. ಹೊಂಬಾಳೆ ಫಿಲ್ಮ್ಸ್ ಮಲಯಾಳಂನಲ್ಲಿ ಸಿನಿಮಾ ಮಾಡಬೇಕೆಂದು ಸ್ಕ್ರಿಪ್ಟ್ ಹುಡುಕುತ್ತಿತ್ತು. ಆಗ ನನ್ನ ಕಥೆ ಅಲ್ಲಿಗೆ ಹೋಯಿತು. ನಾನು ಕೂಡ ಕಥೆಗೆ ಸೂಕ್ತವಾಗಬಲ್ಲ ನಾಯಕ ಮತ್ತು ಒಳ್ಳೆಯ ನಿರ್ಮಾಣ ಸಂಸ್ಥೆಯನ್ನು ಹುಡುಕುತ್ತಿದ್ದೆ. ಫಹಾದ್ ಕಥೆ ಕೇಳಿ ಇಷ್ಟಪಟ್ಟರು. ನಿರ್ಮಾಣ ಸಂಸ್ಥೆ ಕೈಜೋಡಿಸಿತು. ನಂತರ ಮುಂದಿನ ಕೆಲಸಗಳು ಪ್ರಾರಂಭಗೊಂಡವು.

- **ಪುನೀತ್ ಅವರಿಗೆ ಮಾಡಬೇಕಿದ್ದ 'ದ್ವಿತ್ವ'ವೇ 'ಧೂಮಂ' ಆಯಿತಾ, ಅಥವಾ ಆ ಕಥೆಯನ್ನು ಬೇರೆ ನಟರಿಗೆ ಮಾಡುತ್ತೀರಾ?**

ಇಲ್ಲ ಅದೇ ಬೇರೆ ಕಥೆ, ಇದೇ ಬೇರೆ. ನಾನೇ ಒಂದು ಸಂದರ್ಶನದಲ್ಲಿ 'ದ್ವಿತ್ವ'ವನ್ನು ಮಲಯಾಳಂನಲ್ಲಿ ಮಾಡುವುದಿದ್ದರೆ ಫಹಾದ್ ಮಾಡಬಹುದು ಎಂದಿದ್ದೆ. ಹಾಗಾಗಿ 'ದ್ವಿತ್ವ' ಕನ್ನಡ, ತೆಲುಗಿನಲ್ಲಿ ಪುನೀತ್, ಮಲಯಾಳಂ, ತಮಿಳಿನಲ್ಲಿ ಫಹಾದ್ ಮಾಡುತ್ತಾರೆ ಎಂಬ ಮಾತು ಕೇಳಿಬಂದಿದ್ದು. ಆದರೆ ಆ ಯೋಜನೆ ಮುಂದುವರಿಯಲಿಲ್ಲ. ಸದ್ಯಕ್ಕೆ ಆ ಕಥೆಯನ್ನು ಬೇರೆಯವರಿಗೆ ಮಾಡುವ ಕುರಿತು ಆಲೋಚನೆ ಮಾಡಿಲ್ಲ.

- **ಕನ್ನಡದ ನಿರ್ದೇಶಕರಾಗಿ ಮಲಯಾಳಂನಲ್ಲಿ ಎದುರಾದ ಸವಾಲುಗಳು ಯಾವುವು?**

ಅಷ್ಟೇನೂ ಕಷ್ಟವಾಗಲಿಲ್ಲ. ಪ್ರಾರಂಭದಿಂದ ಕನ್ನಡ ಮತ್ತು ಮಲಯಾಳಂ ಎರಡೂ ಗೊತ್ತಿರುವ ಸಹಾಯಕರನ್ನು ಇಟ್ಟುಕೊಂಡಿದ್ದೆ. ಮೊದಲೆರಡು ದಿನ ಸೆಟ್‌ನಲ್ಲಿ ನನಗೆ ಗೊಂದಲವಿದ್ದರೆ ಅವರು ಭಾಷಾಂತರ ಮಾಡಿ ಹೇಳುತ್ತಿದ್ದರು. ನಟರ ಭಾವನೆ ಮತ್ತು ಧ್ವನಿ ಗೊತ್ತಾಗುತ್ತಿತ್ತು. ನಿರ್ದೇಶಕನಿಗೆ ಅಷ್ಟು ಗೊತ್ತಾದರೆ ಸಾಕು. ಸೆಟ್‌ನಲ್ಲಿ ಎಲ್ಲರಿಗೂ ಇಂಗ್ಲಿಷ್ ಗೊತ್ತಿತ್ತು. ಹೀಗಾಗಿ ನಮ್ಮ ಸಂವಹನ ಇಂಗ್ಲಿಷ್‌ನಲ್ಲಿ ನಡೆದು, ಭಾಷೆಯ ಸಮಸ್ಯೆ ಬರಲಿಲ್ಲ.

- **ಫಹಾದ್ ಅವರಂತಹ ನಟರಿಗೆ ನಿರ್ದೇಶನ ಎಷ್ಟು ಕಷ್ಟ ಮತ್ತು ಎಷ್ಟು ಸುಲಭ?**

'ಫಹಾದ್ ಬೇರೆ ರೀತಿಯ ನಟ. ಹೆಚ್ಚಾಗಿ ಅವರು ನಟಿಸುವಾಗ ಇದ್ಯಾಕೆ ಹೀಗೆ ಅಂತ ಪ್ರಶ್ನಿಸುತ್ತಾರಂತೆ. ಎರಡು ಮೂರು ದಿನ ಆದ ನಂತರ ಸಮಾಧಾನವಿಲ್ಲದೆ ಹಳೆಯದನ್ನು ಮರು ಚಿತ್ರೀಕರಣ ಮಾಡಿಸುತ್ತಾರಂತೆ' ಎಂಬೆಲ್ಲ ಅಭಿಪ್ರಾಯವಿತ್ತು. ಆದರೆ ನಮ್ಮ ಸೆಟ್‌ನಲ್ಲಿ ಯಾವ ದೃಶ್ಯವೂ ಮರು ಚಿತ್ರೀಕರಣಗೊಳ್ಳಲಿಲ್ಲ. ಸ್ಕ್ರಿಪ್ಟ್ ನೀಟಾಗಿ ಮಾಡಿಕೊಂಡಿದ್ದೆವು. ಎರಡು ತಿಂಗಳು ಪ್ರೀಪ್ರೊಡಕ್ಷನ್ ಮಾಡಿ ಸರಿಯಾಗಿ ಪ್ಲಾನಿಂಗ್ ಮಾಡಿಕೊಂಡಿದ್ದೆವು. ಒಟ್ಟಾರೆ 46 ದಿನಗಳಲ್ಲಿ ಚಿತ್ರೀಕರಣ ಮುಗಿಯಿತು. 2022ರ ಸೆಪ್ಟೆಂಬರ್‌ನಲ್ಲಿ ಚಿತ್ರದ ಕೆಲಸ ಪ್ರಾರಂಭವಾದದ್ದು. ಒಂಬತ್ತು ತಿಂಗಳಲ್ಲಿ ತೆರೆಗೆ ಬಂದಿದ್ದೇವೆ.



ಪವನ್ ಕುಮಾರ್

- **ಸತತ ಹಿಟ್ ಕೊಟ್ಟರೂ ಬಹಳ ಸಮಯ ತೆಗೆದುಕೊಂಡು ಸಿನಿಮಾ ಮಾಡುವುದು ಏಕೆ?**

ನನಗೆ ಬಾಕ್ಸ್ ಆಫೀಸ್‌ನಲ್ಲಿ ವರ್ಕ್ ಆಗುವ ರೀತಿ ಕೆಲಸ ಮಾಡಲು ಬರುವುದಿಲ್ಲ. ಹೀಗಾಗಿ ಹಿಂದಿನ ಚಿತ್ರದ ಫಲಿತಾಂಶ ಮರೆತು ಬಿಡುತ್ತೇನೆ. ಪ್ರತಿ ಸಿನಿಮಾವನ್ನು ಮೊದಲ ಸಿನಿಮಾವೆಂದು ಯೋಚಿಸುತ್ತೀನಿ. ಇದನ್ನು ಪ್ರೇಕ್ಷಕರು ಒಪ್ಪಿಕೊಳ್ಳುತ್ತಾರಾ, ಇಲ್ಲವಾ? ನಾನು ಹೇಳುತ್ತಿರುವುದು ಸರಿಯಾಗಿದೆಯಾ, ಇಲ್ಲವೋ? ಎಂಬ ಭಯ ಯಾವಾಗಲೂ ನನ್ನೊಳಗೆ ಇರುತ್ತದೆ. ಪ್ರತಿ ಸಿನಿಮಾ ಬಿಡುಗಡೆ ಹೇಗೆ ಆಗಬಹುದೆಂದು ಕಾತರವಿರುತ್ತದೆ. ಹೀಗಾಗಿ ಕೆಲವು ಸಲ ಬರವಣಿಗೆಗೆ ಸಮಯ ಹೋಗುತ್ತದೆ. ಇನ್ನು ಕೆಲವು ಸಲ ಬೇಗ ಬರೆದಿರುತ್ತೇನೆ. ಬೇರೆ ಕೆಲಸಗಳು ತಡವಾಗುತ್ತವೆ. ಜೊತೆಗೆ ದೊಡ್ಡ ಬಜೆಟ್ ಬೇಡುವ ಸಿನಿಮಾಗಳನ್ನು ರಿಕವರ್ ಮಾಡಿಕೊಡಬಲ್ಲ ಬೆರಳೆಣಿಕೆಯಷ್ಟು ನಾಯಕರು ಮಾತ್ರ ಕನ್ನಡದಲ್ಲಿ ಇರುವುದು. ಅವರಿಗೆ ಅವರದ್ದೇ ಆದ ಅಭಿಮಾನಿಗಳು ಇರುತ್ತಾರೆ. ಅವರ ನಿರೀಕ್ಷೆಗೆ ತಕ್ಕಂತೆ ಸ್ಕ್ರಿಪ್ಟ್ ಬರೆಯಲು ಬರುವುದಿಲ್ಲ. ಬರೆದಿದ್ದನ್ನು ದೊಡ್ಡ ನಟರಿಗೆ ಸರಿ ಹೊಂದಿಸುವಾಗ ಸಮಯವಾಗುತ್ತದೆ.

- **ಕನ್ನಡದಲ್ಲಿ ಸಿನಿಮಾಗಳನ್ನು ಮಾಡುವ ಆಲೋಚನೆ ಇಲ್ಲವೇ? 'ಧೂಮಂ' ಯಶಸ್ವಿಯಾದರೆ ಮಲಯಾಳಂನತ್ತಲೇ ಮುಖ ಮಾಡುವಿರಾ?**

ಹಾಗೇನಿಲ್ಲ. ಸದ್ಯಕ್ಕೆ ಈ ಸಿನಿಮಾ ಮಾಡಿರುವೆ. ಇದರ ಬಿಡುಗಡೆ ಪ್ರಕ್ರಿಯೆಯೆಲ್ಲ ಮುಗಿದು ಸಾಮಾನ್ಯ ಬದುಕಿಗೆ ಮರಳಲು ನನಗೆ ಒಂದು ತಿಂಗಳು ಬೇಕು. ನಂತರ ಮುಂದಿನ ಯೋಚನೆ. ಅಲ್ಲಿವರೆಗೆ ಮುಂದಿನದರ ಕುರಿತು ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ.

- **ಸಣ್ಣ ಸಿನಿಮಾಗಳನ್ನು ಪ್ರಸ್ತುತಪಡಿಸಿ ಒಳ್ಳೆಯ ತಂಡಗಳ ಬೆನ್ನುತಟ್ಟುವುದನ್ನು ನಿಲ್ಲಿಸಿದ್ರಾ?**

ಒಂದು ಸಿನಿಮಾ ಪ್ರಸ್ತುತಪಡಿಸಿ, ಬಿಡುಗಡೆ ಮಾಡುವುದರ ಹಿಂದೆ ಸಾಕಷ್ಟು ಶ್ರಮವಿದೆ. ಜೊತೆಗೆ ಬಹಳ ಸಮಯ ಬೇಕು. ಅಷ್ಟು ಸಮಯ ಕೊಡಲು ಸಾಧ್ಯವಿಲ್ಲ ಎನ್ನಿಸಿತು. ಜೊತೆಗೆ ಇವತ್ತು ಸಾಕಷ್ಟು ಬೇರೆ ತಂಡಗಳು ಈ ಕೆಲಸ ಮಾಡುತ್ತಿವೆ. ಅವೇ ಚೆನ್ನಾಗಿ ಮಾಡುತ್ತಿವೆ. ಹೀಗಾಗಿ ಆ ಬಗ್ಗೆ ಗಮನಹರಿಸಿಲ್ಲ.

ಪ್ರಜಾವಾಣಿ ನೋಡಿಯೊ
ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಿರುತೆರೆಯಲ್ಲಿ ಭುವನ್ 'ನಂದನ'ಯಾನ

ಎ.ಪಿ.ಎಸ್.

ಎಂಜಿನಿಯರಿಂಗ್ ಓದಿ ಸಿನಿಮಾದತ್ತ ಹೆಜ್ಜೆ ಇಟ್ಟವರು ಸ್ಯಾಂಡಲ್‌ವುಡ್‌ನಲ್ಲಿ ಹಲವರಿದ್ದಾರೆ. ಸದ್ಯ ಇದೇ ಕನಸು ಹೊತ್ತು ಹೆಜ್ಜೆ ಇಡುತ್ತಿದ್ದಾರೆ ಭುವನ್. ಕಿರುತೆರೆಯಲ್ಲಿ 'ನಂದನ್' ಎಂದೇ ಖ್ಯಾತಿ ಪಡೆದಿರುವ ಭುವನ್ ಸದ್ಯ ಬೆಂಗಳೂರಿನ ದಯಾನಂದ ಸಾಗರ್ ಕಾಲೇಜಿನಲ್ಲಿ ಅಂತಿಮ ವರ್ಷದ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಸಿನಿಮಾದ ಗೀಳು ಇಟ್ಟುಕೊಂಡೇ ಬೆಳೆದು, ರಂಗಭೂಮಿಯ ನಂಟು, ನೃತ್ಯ ನಿರ್ದೇಶನದ ಅನುಭವದಿಂದಲೇ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡು ಬಣ್ಣದ ಲೋಕಕ್ಕೆ ಹೆಜ್ಜೆ ಇಟ್ಟವರು ಇವರು. ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ಪುಣ್ಯವತಿ' ಧಾರಾವಾಹಿಯಲ್ಲಿ 'ನಂದನ್' ಎಂಬ ಪಾತ್ರದ ಮುಖಾಂತರ ಕಿರುತೆರೆ ಪಯಣ ಆರಂಭಿಸಿರುವ ಭುವನ್ ಸಿನಿಮಾ ನಿರ್ದೇಶನದ ಕನಸು ಹೊತ್ತಿದ್ದಾರೆ. ಅವರೊಂದಿಗೆ ಒಂದು ಪುಟ್ಟ ಮಾತುಕತೆ...

'ನನ್ನ ಹುಟ್ಟೂರು ಬೆಂಗಳೂರು. ತಂದೆ ತಾಯಿ ಹಾಸನದವರು. ಬೆಂಗಳೂರಿನಲ್ಲಿ ಹುಟ್ಟಿ ಬೆಳೆದರೂ, ಹೊರಗಡೆ ಓಡಾಡುವ ಹುಚ್ಚು ಇರಲಿಲ್ಲ. ಬದಲಾಗಿ ಸಿನಿಮಾ ನೋಡುವ ರೂಢಿ ಜಾಸ್ತಿ. ಹೀಗಾಗಿ ಅನುಭವಗಳು ಹಾಗೂ ಸಿನಿಮಾಗಳ ಮೂಲಕವೇ ನನ್ನ ವ್ಯಕ್ತಿತ್ವ ರೂಪುಗೊಳ್ಳುತ್ತಾ ಬಂದಿದೆ. ಇದುವೇ ಬಣ್ಣದ ಲೋಕದತ್ತ ನನ್ನನ್ನು ಮತ್ತಷ್ಟು ಸೆಳೆಯಿತು. ಕನ್ನಡ ಹಾಡುಗಳ ಬಗ್ಗೆ ನನಗೆ ಎಲ್ಲಿಲ್ಲದ ಆಸಕ್ತಿ. ನೃತ್ಯದಲ್ಲಿ ಆಸಕ್ತಿ ಇದ್ದ ಕಾರಣ ಎಂಟನೇ ತರಗತಿಯಲ್ಲಿ ನೃತ್ಯ ತರಬೇತಿಗೆ ಸೇರಿದ್ದೆ. ಶಾಲಾ ವಾರ್ಷಿಕೋತ್ಸವಗಳಲ್ಲಿ ಎಲ್ಲರೂ ಹಿಂದಿ ಹಾಡಿಗೆ ಡ್ಯಾನ್ಸ್ ಮಾಡುವುದನ್ನು ಕಂಡು, ಒಂದು ತಂಡ ಕಟ್ಟಿ ಕೇವಲ ಕನ್ನಡ ಹಾಡುಗಳನ್ನೇ ಆಯ್ದುಕೊಂಡು ಒಂದು ಪ್ರದರ್ಶನ ನೀಡಿದ್ದೆ. ಇದು ಎಲ್ಲರಿಗೂ ಇಷ್ಟವಾಯಿತು. ಇದೇ ಮಾದರಿ ಪ್ರದರ್ಶನವನ್ನು ಕಾಲೇಜಿನಲ್ಲಿ, ಸದ್ಯ ಓದುತ್ತಿರುವ ಎಂಜಿನಿಯರಿಂಗ್ ಕಾಲೇಜಿನಲ್ಲೂ ನೀಡಿದೆ. ಯೂಟ್ಯೂಬ್ ಚಾನೆಲ್ ಕೂಡ ಪ್ರಾರಂಭಿಸಿದೆ'... ಹೀಗೆ ಬಣ್ಣದ ಲೋಕದ ಆರಂಭಿಕ ಹೆಜ್ಜೆಗಳನ್ನು ಭುವನ್ ಮೆಲುಕು ಹಾಕಿದರು.

'ಎಂಜಿನಿಯರಿಂಗ್ ಓದುತ್ತಿರುವ ಸಂದರ್ಭದಲ್ಲಿ ವಿದ್ಯಾಪೀಠದಲ್ಲಿರುವ ರಂಗಾಂತರ್ಯ ಎಂಬ ನಾಟಕ ತಂಡ ಸೇರಿಕೊಂಡೆ. ರಂಗಭೂಮಿಯ ನಂಟು ಇಲ್ಲಿಂದ ಆರಂಭ. ಕಿರುತೆರೆ ಅಥವಾ ಸಿನಿಮಾ ಕ್ಷೇತ್ರಕ್ಕೆ ಕಾಲಿಡಬೇಕು ಎನ್ನುವ ಆಸೆ ಇದ್ದರೂ ಎಂಜಿನಿಯರಿಂಗ್ ಮುಗಿಯಲಿ ಎಂದು ಕಾಯುತ್ತಿದ್ದೆ. ಆದರೂ ಕೆಲವರ ಒತ್ತಡದ ಕಾರಣ ಫೋಟೊಶೂಟ್ ಮಾಡಿಸಿಕೊಂಡು ಆಡಿಷನ್‌ಗಳಿಗೆ ಕಳುಹಿಸಿದ್ದೆ. ಅಂದು ಕಾಲೇಜಿನಲ್ಲಿ ಕ್ಯಾಂಪಸ್ ಇಂಟರ್‌ವ್ಯೂ ಇತ್ತು. ಒಂದು ಕಂಪನಿಯಲ್ಲಿ ಕೆಲಸಕ್ಕೆ ನಾನು ಆಯ್ಕೆಯಾಗಿದ್ದೆ. ಅದೇ ದಿನ 'ಪುಣ್ಯವತಿ' ಧಾರಾವಾಹಿಗೆ ಆಯ್ಕೆಯಾದ ಮಾಹಿತಿಯೂ ಸಿಕ್ಕಿತು. ಗುರಿ ಸ್ಪಷ್ಟವಾಗಿದ್ದ ಕಾರಣ ಬಣ್ಣದ ಲೋಕವನ್ನೇ ಆಯ್ದುಕೊಂಡೆ. ಶೂಟಿಂಗ್ ಆರಂಭವಾದಾಗ ಯಾವುದೇ ತರಬೇತಿ ಇರಲಿಲ್ಲ. ಏಕೆಂದರೆ ಕೇವಲ 15 ದಿನಗಳಲ್ಲಿ ಈ ಧಾರಾವಾಹಿ ಪ್ರಸಾರವಾಗಬೇಕಿತ್ತು. ಅದಕ್ಕಾಗಿ ಕಂತುಗಳ ಬ್ಯಾಂಕಿಂಗ್ ಅಗತ್ಯವಿತ್ತು. ಹೀಗಾಗಿ ನೇರವಾಗಿ ಚಿತ್ರೀಕರಣಕ್ಕೆ ಇಳಿದಿದ್ದೆವು. ಮೊದಲಿಗೆ ಕ್ಯಾಮೆರಾ ಮುಂದಿನ ನಟನೆಗೆ ಹೊಂದಿಕೊಳ್ಳುವುದು ಸವಾಲಾಗಿತ್ತು. ಈ ಸಂದರ್ಭದಲ್ಲಿ ಇಡೀ ತಂಡ ಜೊತೆಯಾಗಿ ನನ್ನ ಬೆನ್ನಿಗೆ ನಿಂತಿತ್ತು. ಧಾರಾವಾಹಿ ನಿರ್ದೇಶಕರು, ನಿರ್ಮಾಪಕರು ನೀಡಿದ ಬೆಂಬಲದಿಂದ ಇಂದು 'ನಂದನ್' ಆಗಿ ಮನೆಮನ ತಲುಪಿದ್ದೇನೆ' ಎನ್ನುತ್ತಾರೆ ಭುವನ್.

'ಸಿನಿಮಾರಂಗಕ್ಕೂ ಹೆಜ್ಜೆ ಇಡುವ ಕನಸಿದೆ. ಕೇವಲ ನಟನಾಗಿ ಅಲ್ಲದೆ, ಒಳ್ಳೆಯ ಕಥೆಗಳನ್ನು ಬರೆದು ಈ ಕ್ಷೇತ್ರಕ್ಕೆ ಒಳ್ಳೆಯ ಕಂಟೆಂಟ್‌ಗಳನ್ನು ಕೊಡಬೇಕು ಎನ್ನುವ ಹಂಬಲ ನನ್ನದು' ಎನ್ನುತ್ತಾ ಭುವನ್ ಚಂದನವನದಲ್ಲಿ ನಡೆದಾಡುವ ಕನಸು ಬಿಚ್ಚಿಟ್ಟರು.



ಭುವನ್

'ಅಗ್ರಸೇನಾ', 'ರೋಡ್‌ಕಿಂಗ್' ಇಂದು ತೆರೆಗೆ

2023ರ ಮೊದಲಾರ್ಧ ಕೊನೆಗೊಳ್ಳುತ್ತಿದ್ದು, ಈ ವರ್ಷ ಹೊಸಬರ ಹಲವು ಸಿನಿಮಾಗಳು ತೆರೆಕಂಡಿವೆ. ಈ ಪಟ್ಟಿಗೆ ಇಂದು(ಜೂನ್ 23) ಮತ್ತಷ್ಟು ಸಿನಿಮಾಗಳು ಸೇರ್ಪಡೆಯಾಗುತ್ತಿವೆ.

ಅಗ್ರಸೇನಾ: ಮುರುಗೇಶ್ ಕಣ್ಣಪ್ಪ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಚಿತ್ರ ಇದಾಗಿದೆ. ಮಮತಾ ಜಯರಾಮರೆಡ್ಡಿ ಹಾಗೂ ಜಯರಾಮರೆಡ್ಡಿ ನಿರ್ಮಾಣ ಮಾಡಿರುವ ಈ ಚಿತ್ರವು, ಹಳ್ಳಿ ಹಾಗೂ ನಗರದಲ್ಲಿ ಸಾಗುವ ಕಥಾಹಂದರ ಹೊಂದಿದೆ. ತಂದೆ-ಮಗನ ಸಂಬಂಧದ ಕಥೆ ಒಂದೆಡೆಯಾದರೆ, ನಾಯಕ ತನ್ನ ಪ್ರೀತಿಯನ್ನು ಉಳಿಸಿಕೊಳ್ಳಲು ಹೇಗೆ ಹೋರಾಡುತ್ತಾನೆ ಎನ್ನುವುದು ಮತ್ತೊಂದು ಟ್ರ್ಯಾಕ್‌ನಲ್ಲಿ ಸಾಗುತ್ತದೆ ಎಂದಿದೆ ಚಿತ್ರತಂಡ.

ಪ್ರೀತಿ, ಆ್ಯಕ್ಷನ್, ಕೌಟುಂಬಿಕ ಜಾನರ್‌ನ ಸಿನಿಮಾ ಇದಾಗಿದ್ದು, ಚಿತ್ರದಲ್ಲಿ ಅಮರ್ ವಿರಾಜ್ ಹಾಗೂ ಅಗಸ್ತ್ಯ ಬೆಳಗೆರೆ ನಾಯಕರಾಗಿ ನಟಿಸಿದ್ದಾರೆ. ರಚನಾ ದಶರಥ್, ಭಾರತಿ ಹೆಗಡೆ ನಾಯಕಿಯರಾಗಿ ನಟಿಸಿದ್ದಾರೆ. ನಟ ರಾಮಕೃಷ್ಣ ಅವರು ಗ್ರಾಮದ ಮುಖಂಡ 'ಸೂರಪ್ಪ' ಹಾಗೂ ನಾಯಕನ ತಂದೆಯ ಪಾತ್ರ ನಿರ್ವಹಿಸಿದ್ದು, ಇದು ಅವರ 200ನೇ ಚಿತ್ರ ಎನ್ನುವುದು ವಿಶೇಷ. ಎಂ.ಎಸ್. ತ್ಯಾಗರಾಜ್ ಸಂಗೀತ ನಿರ್ದೇಶನ, ಆರ್. ಪಿ.ರೆಡ್ಡಿ ಅವರ ಛಾಯಾಚಿತ್ರಗ್ರಹಣ,ವಿಜಯ್ ಎಂ. ಕುಮಾರ್ ಅವರ ಸಂಕಲನ ಈ ಚಿತ್ರಕ್ಕಿದೆ.

ರೋಡ್‌ಕಿಂಗ್: ಹಾಲಿವುಡ್ ನಿರ್ದೇಶಕ ರ್‍ಯಾಂಡಿ ಕೆಂಟ್ ಸ್ಕೈಪ್ ಮೂಲಕ ನಿರ್ದೇಶಿಸಿರುವ 'ರೋಡ್ ಕಿಂಗ್' ಚಿತ್ರ ಇಂದು ತೆರೆಕಂಡಿದೆ. ಇದು ಸ್ಕೈಪ್‌ನಲ್ಲಿ ನಿರ್ದೇಶಿಸಲಾದ ಮೊದಲ ಚಿತ್ರ ಎಂದು ಚಿತ್ರತಂಡ ಹೇಳಿದೆ. ಕನ್ನಡಿಗ ಮತೀನ್ ಹುಸೇನ್ ಈ ಚಿತ್ರದ ಕಥೆ ಬರೆದು, ನಾಯಕರಾಗಿ ನಟಿಸಿದ್ದಾರೆ. ವೈದ್ಯರಾಗಿರುವ ಡಾ.ಲೀಲಾ ಮೋಹನ್, ಹರೀಶ್ ಕುಮಾರ್ ಹಾಗೂ ಭುವನ್ ರಾಜ್ ಮೊದಲಾದವರು ಚಿತ್ರದಲ್ಲಿದ್ದಾರೆ. 'ರನ್ ಆಂಟೋನಿ' ಖ್ಯಾತಿಯ ರುಕ್ಷಾರ್ ಈ ಚಿತ್ರದ ನಾಯಕಿ. ದಿಲೀಪ್ ಕುಮಾರ್ ಚಿತ್ರ ನಿರ್ಮಾಣ ಮಾಡಿದ್ದಾರೆ.

ಮೊದಲಮಳೆ: ಕುರೂಪಿಯಾದ ಹುಡುಗನೊಬ್ಬ ಮದುವೆಯಾಗಲು ಹೊರಟಾಗ ಏನೇನಾಯಿತು ಎಂಬುದನ್ನು ಹಾಸ್ಯಮಯವಾಗಿ ಹೇಳುವಂಥ ಕಥಾಹಂದರ ಹೊಂದಿರುವ ಚಿತ್ರ 'ಮೊದಲಮಳೆ'. ಮರ್ಡರ್ ಮಿಸ್ಟ್ರಿ, ಕಾಮಿಡಿ, ಹಾರರ್ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ರಾಜಾನರಸಿಂಹ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಮಮತಾಗೌಡ, ಸಾಹಿತ್ಯ, ಉಷಾ, ಪ್ರಿಯಾಶೆಟ್ಟಿ, ಸೇರಿದಂತೆ ಒಂಬತ್ತು ನಾಯಕಿಯರು ಚಿತ್ರದಲ್ಲಿದ್ದು, ಚಿತ್ರಕ್ಕೆ ರಾಜಶರಣ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.



ಅಗ್ರಸೇನಾ
ಅಮರ್, ರಚನಾ

ಬೆಳಗಾವಿ, ಕಾರವಾರ, ವಿಜಯನಗರದಲ್ಲಿ ಧಾರಾಕಾರ ಮಳೆ

ಸೊಗಲದ ಜಲಪಾತಕ್ಕೆ ಜೀವಕಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿ, ಕಾರವಾರ, ವಿಜಯನಗರ ಸೇರಿದಂತೆ ರಾಜ್ಯದ ವಿವಿಧೆಡೆ ಗುರುವಾರ ಧಾರಾಕಾರ ಮಳೆ ಸುರಿದಿದೆ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಮುರಗೋಡ, ಸೊಗಲ, ಕಾರಿಮನಿ, ಹೊಸೂರ ಗ್ರಾಮಗಳ ಸುತ್ತಮುತ್ತ ತಾಸಿಗೂ ಹೆಚ್ಚು ಸಮಯ ಸುರಿದ ಮಳೆಯಿಂದ ಹಳ್ಳ, ಕಾಲುವೆ, ಚರಂಡಿಗಳು ತುಂಬಿ ಹರಿದವು.

ದಕ್ಷಿಣ ಕಾಶಿ ಎಂದೇ ಹೆಸರಾದ ‘ಸೊಗಲ ಸೋಮೇಶ್ವರ’ ಕ್ಷೇತ್ರದ ಎರಡು ಜಲಪಾತಗಳಿಗೆ ಮಳೆಯಿಂದಾಗಿ ಮತ್ತೆ ಜೀವಕಳೆ ಬಂದಿದೆ. ದೇವಸ್ಥಾನದ ಕಿರು ಕಾಲುವೆಗಳೂ ತುಂಬಿದವು. ಕೆಲ ಗ್ರಾಮಗಳಲ್ಲಿ ಬಿರುಗಾಳಿಗೆ ಹಲವು ಕಡೆ ವಿದ್ಯುತ್ ಕಂಬಗಳ ವಾಲಿದವು. ಜಮೀನುಗಳಲ್ಲಿ ಮಳೆ ನೀರು ನಿಂತು ಒಡ್ಡು ಒಡೆದವು.

ಕಾರವಾರ ಜಿಲ್ಲೆಯ ಕರಾವಳಿಯೂ ಸೇರಿದಂತೆ ಮಲೆನಾಡಿನ ಕೆಲ ಭಾಗಗಳಲ್ಲಿ ಸಾಧಾರಣ ಮಳೆಯಾಗಿದೆ. ಕಾರವಾರ, ಕುಮಟಾ, ಹೊನ್ನಾವರದಲ್ಲಿ ಮಧ್ಯಾಹ್ನದ ಹೊತ್ತಿಗೆ ಎಡೆಬಿಡದೆ ಕೆಲ ಹೊತ್ತು ಮಳೆ ಸುರಿಯಿತು. ಯಲ್ಲಾಪುರ ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿಯೂ ಮಳೆ ಆಗಿದೆ.

ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಚೋರನೂರು ಹೋಬಳಿಯಲ್ಲಿ ಬುಧವಾರ ರಾತ್ರಿ ಉತ್ತಮ ಮಳೆಯಾಗಿದೆ. ಮಳೆಯ ಅಬ್ಬರಕ್ಕೆ ಕೆರೆಕಟ್ಟೆಗಳೆಲ್ಲ ತುಂಬಿವೆ. ಚೋರನೂರು ಗ್ರಾಮ, ಜಿಗೇನಹಳ್ಳಿ ಗ್ರಾಮಗಳಲ್ಲಿ ಎರಡು ಮನೆ ಕುಸಿದಿವೆ. ವಿಜಯನಗರ ಜಿಲ್ಲೆಯ ಹರಪನಹಳ್ಳಿಯ ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ಗುರುವಾರ ಸಂಜೆ ಧಾರಾಕಾರ ಮಳೆಯಾಗಿದೆ.

ಮೈದುಂಬಿದ ತೇಗದ ಹಳ್ಳ: ವಿಜಯನಗರ ಜಿಲ್ಲೆಯ ಚಿರಸ್ತಹಳ್ಳಿ, ನೀಲಗುಂದ, ಇಟ್ಟಿಗುಡಿ, ತೆಲಿಗಿ, ದಾದಾಪುರ, ಅರಸನಾಳ, ಕುಂಚೂರು, ಕಣವಿ, ಹಲುವಾಗಲು ವ್ಯಾಪ್ತಿಯಲ್ಲಿ ಧಾರಾಕಾರ ಮಳೆ ಸುರಿದಿದ್ದು ಗ್ರಾಮಕ್ಕೆ ಸಮೀಪದ ತೇಗದ ಹಳ್ಳ ಮೈದುಂಬಿ ಹರಿಯುತ್ತಿದೆ. ಹಳ್ಳಕ್ಕೆ ಹೊಂದಿಕೊಂಡಿರುವ ಜಮೀನುಗಳಿಗೆ ನೀರು ನುಗ್ಗಿದೆ.


ಸೊಗಲ ಸೋಮೇಶ್ವರ ಕ್ಷೇತ್ರದಲ್ಲಿ ಮಳೆಯಿಂದ ಜಲಪಾತ ಕಳೆಗಟ್ಟಿದೆ —ಪ್ರಜಾವಾಣಿ ಚಿತ್ರ/ ರವಿಕುಮಾರ ಹುಲಕುಂದ

ಮಡಿಕೇರಿ: ಬಿರುಸಿನ ಮಳೆ

ಮಡಿಕೇರಿ: ನಾಪೋಕ್ಲು ಸಮೀಪದ ಬಲ್ಲಮಾವಟಿಯಲ್ಲಿ ಗುರುವಾರ ಮಧ್ಯಾಹ್ನ ಅರ್ಧ ಗಂಟೆ ಗುಡುಗು ಸಹಿತ ಜೋರು ಮಳೆ ಸುರಿಯಿತು. ಮಳೆಯಿಂದ ತಗ್ಗು ಪ್ರದೇಶಗಳಲ್ಲಿ ನೀರು ಹರಿದಿದೆ. ಪೊನ್ನಂಪೇಟೆ, ಗೋಣಿಕೊಪ್ಪಲು ಭಾಗದಲ್ಲಿಯೂ ಉತ್ತಮ ಮಳೆ ಸುರಿಯಿತು.

ಮೂರು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವೆಡೆ ಶುಕ್ರವಾರ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಮೂರು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ಕರಾವಳಿಯ ಬಹುತೇಕ ಕಡೆ, ದಕ್ಷಿಣ ಒಳನಾಡಿನ ಹಲವೆಡೆ ಹಾಗೂ ಉತ್ತರ ಒಳನಾಡಿನ ಕೆಲವೆಡೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡಕ್ಕೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ.

ಕರಾವಳಿಯ ಎಲ್ಲ ಜಿಲ್ಲೆಗಳು ಹಾಗೂ ದಕ್ಷಿಣ ಒಳನಾಡಿನ ತುಮಕೂರು, ವಿಜಯನಗರ, ಬಳ್ಳಾರಿ, ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ಕೊಡಗು ಜಿಲ್ಲೆಯ ಒಂದೆರಡು ಕಡೆ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಕರಾವಳಿಯಲ್ಲಿ ಬಿರುಗಾಳಿಯು ಗಂಟೆಗೆ 40–45 ಕಿ.ಮೀ. ನಿಂದ 55 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ. ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ಸೂಚಿಸಿದೆ.

ಶನಿವಾರವೂ ಮೂರು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಮುಂದುವರಿಯಲಿದೆ. ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಹಲವೆಡೆ ಮುಂದಿನ ಐದು ದಿನಗಳು ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹೇಳಿದೆ.

ಗುರುವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಕಳೆದ 24 ಗಂಟೆಗಳಲ್ಲಿ ರಾಜ್ಯದ ವಿವಿಧೆಡೆ ಮಳೆಯಾಗಿದೆ. ತುಮಕೂರಿನ ಬುಕ್ಕಪಟ್ಟಣದಲ್ಲಿ ಗರಿಷ್ಠ (7 ಸೆಂ.ಮೀ.) ಮಳೆಯಾಗಿದೆ. ಕಲಬುರಗಿಯಲ್ಲಿ ಗರಿಷ್ಠ ಉಷ್ಣಾಂಶ (39.1 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ ಎಂದು ಇಲಾಖೆ ತಿಳಿಸಿದೆ.

ಅಸ್ಸಾಂ: ಪ್ರವಾಹ, ವ್ಯಕ್ತಿ ಸಾವು

ಗುವಾಹಟಿ / ಶಿಮ್ಲಾ / ಇಟಾನಗರ (ಪಿಟಿಐ): ಅಸ್ಸಾಂ, ಅರುಣಾಚಲ ಪ್ರದೇಶ ಹಾಗೂ ಹಿಮಾಚಲ ಪ್ರದೇಶದಲ್ಲಿ ಗುರುವಾರ ಭಾರಿ ಮಳೆಯಾಗಿದೆ. ಅಸ್ಸಾಂನಲ್ಲಿ ಮಳೆಯಿಂದಾಗಿ ಸಂಭವಿಸಿದ ಅವಘಡದಲ್ಲಿ ವ್ಯಕ್ತಿ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಸ್ಸಾಂನಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು, 5 ಲಕ್ಷ ಜನರು ತೊಂದರೆಗೆ ಒಳಗಾಗಿದ್ದಾರೆ. ಬರ್ಪೇಟಾ ಜಿಲ್ಲೆಯಲ್ಲಿ ಹೆಚ್ಚು ಹಾನಿಯಾಗಿದ್ದು, 3.25 ಲಕ್ಷ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ರಾಜ್ಯದ 1,366 ಗ್ರಾಮಗಳಿಗೆ ನೀರು ನುಗ್ಗಿದ್ದು, 14 ಸಾವಿರ ಹೆಕ್ಟೇರ್‌ನಲ್ಲಿನ ಬೆಳೆ ನಾಶವಾಗಿದೆ ಎಂದು ತಿಳಿಸಿದೆ.

ಅರುಣಾಚಲಪ್ರದೇಶದಲ್ಲಿ ಭಾರಿ ಮಳೆಯಿಂದಾಗಿ ಭೂಕುಸಿತ ಉಂಟಾಗಿದ್ದು, ಹಲವು ಜಿಲ್ಲೆಗಳಲ್ಲಿ ಸಂಪರ್ಕವೇ ಕಡಿದು ಹೋಗಿದೆ.

ಹಿಮಾಚಲಪ್ರದೇಶದಲ್ಲಿ ಮುಂಗಾರು ಪೂರ್ವ ಮಳೆ ಆರ್ಭಟ ಜೋರಾಗಿದ್ದು, ಹಲವೆಡೆ ಭಾರಿ ಮಳೆಯಾಗಿದೆ. ಭಾರತೀಯ ಹವಾಮಾನ ಇಲಾಖೆಯು ಜೂನ್ 25 ಮತ್ತು 26ರಂದು ಆರೇಂಜ್ ಅಲರ್ಟ್ ಘೋಷಿಸಿದೆ.


ಜಲಾವೃತವಾದ ನಲ್ಬರಿ ಜಿಲ್ಲೆಯ ಧಮ್ಮಧಾಮ ಗ್ರಾಮ–ಪಿಟಿಐ ಚಿತ್ರ

ಈ ಎರಡು ದಿನಗಳಂದು ಗುಡುಗು, ಸಿಡಿಲು ಸಹಿತ ಭಾರಿ ಮಳೆಯಾಗಲಿದ್ದು, ಗುಡ್ಡಗಾಡು ಪ್ರದೇಶಗಳಲ್ಲಿ ಹಿಮ ಬೀಳುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿದೆ.

ಮುಂಗಾರು ಮಳೆ ಒಡಿಶಾ ಪ್ರವೇಶಿಸಿದ್ದು, ರಾಜ್ಯದ ಹಲವೆಡೆ ಭಾರಿ ಮಳೆಯಾಗಿದೆ. ಮುಂದಿನ 4–5 ದಿನಗಳ ಕಾಲ ಭಾರಿ ಮಳೆ ಬೀಳಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ. ರಾಜಧಾನಿ ಭುವನೇಶ್ವರದಲ್ಲಿ 9 ಸೆಂ.ಮೀ. ಮಳೆಯಾಗಿದೆ ಎಂದು ತಿಳಿಸಿದೆ.

ಮಧ್ಯಪ್ರದೇಶದಲ್ಲಿ ಬುಧವಾರ ರಾತ್ರಿ ಭಾರಿ ಮಳೆ ಬಿದ್ದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿದ್ಯುತ್ ದರ: ಉದ್ಯಮ ಭಾಗಶಃ ಬಂದ್

ಒಂದನೇ ಪುಟದಿಂದ

ಹುಬ್ಬಳ್ಳಿಯ ಗೋಕುಲ ಕೈಗಾರಿಕಾ ಪ್ರದೇಶ, ತಾರಿಹಾಳ ಕೈಗಾರಿಕಾ ಪ್ರದೇಶ ಮತ್ತು ಅಮರಗೋಳ ಎಪಿಎಂಸಿ ಮಾರುಕಟ್ಟೆ ಸ್ತಬ್ಧವಾಗಿತ್ತು. ಕೆಲ ಅಂಗಡಿ, ಮಳಿಗೆ, ಹೋಟೆಲ್ ಮತ್ತು ಕೈಗಾರಿಕೆಗಳು ಬಂದ್ ಆಗಿದ್ದವು.

ಎಲೆಕ್ಟ್ರಿಕ್ ಬೈಕ್‌ನ ಅಣಕು ಶವಯಾತ್ರೆ: ಕೈಗಾರಿಕೋದ್ಯಮಿಗಳು ಮತ್ತು ವರ್ತಕರು ಬೆಳಗಾವಿಯಲ್ಲಿ ಎಲೆಕ್ಟ್ರಿಕ್ ಬೈಕ್‌ನ ಅಣಕು ಶವಯಾತ್ರೆ ನಡೆಸಿದರು. ಕೆಲವಡೆ ಉದ್ಯಮಿಗಳು ಸ್ವಯಂ ಪ್ರೇರಣೆಯಿಂದ ಕೈಗಾರಿಕೆಗಳನ್ನು ಮುಚ್ಚಿದರು. ಹೋಟೆಲ್, ಅಂಗಡಿಗಳು ತೆರೆಯಲಿಲ್ಲ.

ಕಾರವಾರದಲ್ಲಿ ಅಂಗಡಿ ಮುಂಗಟ್ಟುಗಳು, ಹೋಟೆಲ್ ಸೇರಿದಂತೆ ವಹಿವಾಟು ಸಂಪೂರ್ಣ ಸ್ಥಗಿತಗೊಂಡಿತ್ತು. ಬಳ್ಳಾರಿ ಹಾಗೂ ಹೊಸಪೇಟೆ ನಗರದಲ್ಲಿ ವರ್ತಕರಿಂದ ಭಾಗಶಃ ಬೆಂಬಲ ದೊರೆಯಿತು. ವಿಜಯಪುರದಲ್ಲಿ ಅಂಗಡಿ, ಮಳಿಗೆಗಳನ್ನು ಕೆಲ ಹೊತ್ತು ಬಂದ್ ಮಾಡಲಾಗಿತ್ತು.


ವಿದ್ಯುತ್ ದರ ಹೆಚ್ಚಳ ವಿರೋಧಿಸಿ ಬೆಳಗಾವಿಯಲ್ಲಿ ಗುರುವಾರ ನಡೆದ ಪ್ರತಿಭಟನೆಯಲ್ಲಿ ಉದ್ಯಮಿಗಳು ಎಲೆಕ್ಟ್ರಿಕಲ್ ಬೈಕ್‌ನ ಅಣಕು ಶವಯಾತ್ರೆ ನಡೆಸಿದರು —ಪ್ರಜಾವಾಣಿ ಚಿತ್ರ:ಏಕನಾಥ ಆಗಸಿಮನಿ

ಬಾಗಲಕೋಟೆಯ ಬಾದಾಮಿಯಲ್ಲಿ ಪ್ರತಿಭಟನೆ ನಡೆಯಿತು.

ಹಾವೇರಿ ಮತ್ತು ಗದಗದಲ್ಲಿ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯಿಂದ ಜಾಥಾ ನಡೆಯಿತು. ರಾಣೆಬೆನ್ನೂರಿನಲ್ಲಿ ವರ್ತಕರ ಸಂಘದಿಂದ ಪ್ರತಿಭಟನೆ ನಡೆದರೆ, ಮುಂಡರಗಿಯಲ್ಲಿ ಸರ್ವ ವ್ಯಾಪಾರಸ್ಥರ ಸಂಘದಿಂದ ಮಾನವ ಸರಪಳಿ ನಿರ್ಮಿಸಿದರು.

ಶಿವಮೊಗ್ಗದಲ್ಲಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘ ಮತ್ತು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿ ಕೈಗಾರಿಕೆ ಮತ್ತು ವಾಣಿಜ್ಯೋದ್ಯಮ ಸಂಘದಿಂದ ಪ್ರತಿಭಟನೆ ನಡೆಯಿತು.

> **ವಿದ್ಯುತ್ ದರ ಶೇ 40ರಿಂದ 60ರಷ್ಟು ಹೆಚ್ಚಿಸಲಾಗಿದ್ದು ತಕ್ಷಣ ಮುಖ್ಯಮಂತ್ರಿ ಮಧ್ಯಪ್ರವೇಶಿಸಿ, ವಿದ್ಯುತ್ ದರ ಏರಿಕೆಯನ್ನು ತಡೆಯಬೇಕು**
> **ವಿನಯ ಜವಳಿ ,** ಕೆಸಿಸಿಐ ಅಧ್ಯಕ್ಷ

ಕಲ್ಯಾಣ ಕರ್ನಾಟಕ ವಾಣಿಜ್ಯ ಹಾಗೂ ಕೈಗಾರಿಕಾ ಸಂಸ್ಥೆ (ಕೆಕೆಸಿಸಿಐ) ಕರೆ ನೀಡಿದ್ದರಿಂದ ಕಲಬುರಗಿಯ ಕೃಷಿ ಉತ್ಪನ್ನ ಮಾರುಕಟ್ಟೆ, ಬಂಬು ಬಜಾರ ಸೇರಿದಂತೆ ಬಹುತೇಕ ಕಡೆ ವಹಿವಾಟು ನಡೆಯಲಿಲ್ಲ. ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಿತು. 22 ಸಂಘಟನೆಯವರು ಪಾಲ್ಗೊಂಡಿದ್ದರು.

ಮೈಸೂರು ಮತ್ತು ಮಂಡ್ಯದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಯಿತು. ಎಪಿಎಂಸಿ, ಪೇಟೆ ಬೀದಿಗಳಲ್ಲಿ ಕೆಲ ಅಂಗಡಿಗಳು ಮುಚ್ಚಿದ್ದವು. ಚಾಮರಾಜನಗರ, ಹಾಸನ, ಕೊಡಗಿನಲ್ಲಿ ಸ್ಪಂದನೆ ಇರಲಿಲ್ಲ.

ಸ್ಪೀಕರ್ ಖಾದರ್ ನಡೆಗೆ ಆಕ್ಷೇಪ

ಒಂದನೇ ಪುಟದಿಂದ

ಪ್ರವಚನ ಬೇಡ: ಖಾದರ್‌ಗೆ ಪತ್ರ ಬರೆದಿರುವ ‘ಜಾಗೃತ ನಾಗರಿಕರು ಕರ್ನಾಟಕ’ದ ಕೆ. ಮರುಳಸಿದ್ದಪ್ಪ, ಜಿ. ರಾಮಕೃಷ್ಣ, ವಿಜಯಾ, ಎಸ್.ಜಿ. ಸಿದ್ದರಾಮಯ್ಯ, ರಾಜೇಂದ್ರ ಚೆನ್ನಿ, ಕೆ.ಎಸ್. ವಿಮಲಾ, ಬಿ. ಶ್ರೀಪಾದ ಭಟ್, ಟಿ. ಸುರೇಂದ್ರ ರಾವ್, ಬಂಜಗೆರೆ ಜಯಪ್ರಕಾಶ್, ವಿ.ಪಿ. ನಿರಂಜನಾರಾಧ್ಯ, ಮೀನಾಕ್ಷಿ ಬಾಳಿ, ಎನ್. ಗಾಯತ್ರಿ, ವಸುಂಧರಾ ಭೂಪತಿ, ‘ನೀವು ಆಹ್ವಾನಿಸಿರುವವರಲ್ಲಿ ಕೆಲವರು ಕೋಮುವಾದಿ ನೀತಿಗಳ ಸಮರ್ಥಕರು ಹಾಗೂ ಸ್ವಂತದ ವ್ಯವಹಾರಗಳಲ್ಲಿ ವಿವಾದಾಸ್ಪದರು. ಇಂಥವರ ಭಾಷಣಗಳು ಹೊಸ ಶಾಸಕರಿಗೆ ಯಾವ ಬಗೆಯ ಮಾದರಿಗಳನ್ನು ಒದಗಿಸಬಲ್ಲುದು ಎಂಬ ಬಗ್ಗೆ ನಾವು ಆತಂಕಿತರಾಗಿದ್ದೇವೆ. ಈ ಧಾರ್ಮಿಕ ಪ್ರತಿನಿಧಿಗಳ ಉಪನ್ಯಾಸಗಳನ್ನು ರದ್ದು ಮಾಡಬೇಕು’ ಎಂದು ಆಗ್ರಹಿಸಿದ್ದಾರೆ.

‘ಜಾತ್ಯತೀತತೆ ಮತ್ತು ಮತ ನಿರಪೇಕ್ಷತೆ ಎಂದರೆ ರಾಜಕೀಯದೊಡನೆ ಧರ್ಮವನ್ನು ಬೆರೆಸದೇ ದೂರ ಇಡುವುದು ಎಂಬುದನ್ನು ದಯವಿಟ್ಟು ಮನನ ಮಾಡಿಕೊಳ್ಳಬೇಕು. ಯಾರಾದರೂ ಶಾಸಕರು ವೈಯಕ್ತಿಕವಾಗಿ ಯಾವುದಾದರೊಂದು ಧಾರ್ಮಿಕ ಆಚರಣೆಯಲ್ಲಿ ಪಾಲ್ಗೊಳ್ಳುವುದು ಅವರ ವೈಯಕ್ತಿಕ ಆಯ್ಕೆ. ಆದರೆ, ಶಾಸನ ಸಭೆ ಪ್ರವೇಶಿಸುವ ಮೊದಲು ಅವರೆಲ್ಲ ಧಾರ್ಮಿಕ ಪ್ರೇರೇಪಣೆ ಪಡೆದು ಬರಬೇಕೆಂದು ಭಾವಿಸಿರುವುದು ಸಂವಿಧಾನದ ನಿಯಮಗಳಿಗೆ ವಿರುದ್ಧವಾಗಿದೆ’ ಎಂದೂ ಅಭಿಪ್ರಾಯಪಟ್ಟಿದ್ದಾರೆ.

‘ಶಿಬಿರಕ್ಕೆ ಆಯ್ಕೆ ಮಾಡಿರುವ ಸಂಪನ್ಮೂಲ ವ್ಯಕ್ತಿಗಳ ಕುರಿತು ಅನೇಕ ಭಿನ್ನಾಭಿಪ್ರಾಯಗಳು ವ್ಯಕ್ತವಾಗುತ್ತಿದ್ದು, ಸಂಸದೀಯ ವ್ಯವಸ್ಥೆಯ ಮೌಲ್ಯಗಳ ರಕ್ಷಣೆಯ ದೃಷ್ಟಿಯಿಂದ ಈ ವಿಚಾರವನ್ನು ಮರು ಪರಿಶೀಲಿಸಬೇಕು’ ಎಂದು ಆಗ್ರಹಿಸಿ ಖಾದರ್ ಅವರಿಗೆ ಕೆಪಿಸಿಸಿ ವಕ್ತಾರ ರಮೇಶ್ ಬಾಬು ಪತ್ರ ಬರೆದಿದ್ದಾರೆ.

‘ಶಿಬಿರಕ್ಕೆ ವಿವಾದಾತ್ಮಕ ವ್ಯಕ್ತಿಗಳನ್ನು ಆಯ್ಕೆ ಮಾಡಿರುವುದನ್ನು ಕೈಬಿಡಬೇಕು’ ಎಂದು ವಿಧಾನಸಭಾಧ್ಯಕ್ಷರಿಗೆ ಪತ್ರ ಬರೆದಿರುವ ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಯು. ಬಸವರಾಜ, ‘ವಿವಾದಾತ್ಮಕ ವ್ಯಕ್ತಿಗಳನ್ನು ಹೊಸ ಶಾಸಕರ ತರಬೇತಿಯಲ್ಲಿ ಭಾಗಿಯಾಗಲು ಕರೆದಿರುವುದು ಜಾತ್ಯತೀತ ಸ್ವರೂಪಕ್ಕೆ ಧಕ್ಕೆ’ ಎಂದೂ ಅಭಿಪ್ರಾಯಪಟ್ಟಿದ್ದಾರೆ.

‘ನಿಷ್ಠೆ ಧರ್ಮನಿರಪೇಕ್ಷ ಆಗಿರಲಿ’

‘ಸ್ಫೂರ್ತಿದಾಯಕ ಭಾಷಣ ಮಾಡಲು ರವಿಶಂಕರ ಗುರೂಜಿ, ಗುರುರಾಜ ಕರಜಗಿ, ಬ್ರಹ್ಮಕುಮಾರಿ ಆಶಾದೀದಿ, ವೀರೇಂದ್ರ ಹೆಗ್ಗಡೆ ಅವರನ್ನು ಆಹ್ವಾನಿಸಿರುವುದು ಸಮಂಜಸವಲ್ಲ. ಕರಜಗಿ ಅಪ್ಪಟ ಬಲಪಂಥೀಯ ಮತ್ತು ಕಾಂಗ್ರೆಸ್ ಕೊಟ್ಟ ಗ್ಯಾರಂಟಿಗಳನ್ನು ಬಿಟ್ಟಿ ಭಾಗ್ಯ ಎಂದು ಅಣಕಿಸಿ ಮಾತನಾಡಿದವರು. ರವಿಶಂಕರ ಗುರೂಜಿ ಮೇಲೆ ಭೂಕಬಳಿಕೆ ಆರೋಪವಿದೆ. ಬ್ರಹ್ಮಕುಮಾರಿ ಈಶ್ವರೀಯ ವಿದ್ಯಾಲಯದವರು ಅವೈಜ್ಞಾನಿಕ ವಿಚಾರಗಳನ್ನೇ ಜನರಲ್ಲಿ ಬಿತ್ತಿ ಸಮಸ್ಯೆಗಳನ್ನು ಸೃಷ್ಟಿಸುತ್ತಿದ್ದಾರೆ. ಮಹಮ್ಮದ್ ಕುಂಞ ಜಮಾತೆ ಇಸ್ಲಾಮಿ ಹಿಂದ್ ಸಂಘಟನೆಯವರು. ವೀರೇಂದ್ರ ಹೆಗ್ಗಡೆ ವಿಶ್ವಹಿಂದೂ ಪರಿಷತ್ತಿನ ಪದಾಧಿಕಾರಿ. ವಿಧಾನಸಭಾಧ್ಯಕ್ಷರ ನಿಷ್ಠೆ ಧರ್ಮನಿರಪೇಕ್ಷವಾಗಿರಲಿ. ಸಂವಿಧಾನಬದ್ಧವಾಗಿರಲಿ’ ಎಂದು ಕವಿಗಳಾದ ಮೂಡ್ನಾಕೂಡು ಚಿನ್ನಸ್ವಾಮಿ, ಅಲ್ಲಮಪ್ರಭು ಬೆಟ್ಟದೂರು, ಎಲ್.ಎನ್. ಮುಕುಂದರಾಜ್, ಬರಹಗಾರ ವೆಂಕಟಯ್ಯ ಅಪ್ಪಗೆರೆ, ಪತ್ರಕರ್ತ ಸನತ್ ಕುಮಾರ್ ಬೆಳಗಲಿ, ಸಂಘಟಕ ಈ. ಬಸವರಾಜು ಮತ್ತಿತರರು ಆಶಯ ವ್ಯಕ್ತಪಡಿಸಿದ್ದಾರೆ.

‘ಕೇಂದ್ರಕ್ಕೆ ಕರ್ನಾಟಕ ಅಷ್ಟೇ ಮುಖ್ಯವಲ್ಲ’

ಒಂದನೇ ಪುಟದಿಂದ

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್ ಸರ್ಕಾರ ಪ್ರತಿ ಬಡ ಕುಟುಂಬಗಳಿಗೆ 10 ಕೆ.ಜಿ ಉಚಿತ ಅಕ್ಕಿ ನೀಡುವ ಮುನ್ನ ಪ್ರಧಾನಿ ಅಥವಾ ಕೇಂದ್ರ ಆಹಾರ ಸಚಿವರೊಂದಿಗೆ ಚರ್ಚಿಸಿಲ್ಲ. ಹೀಗಾಗಿ ಅಕ್ಕಿ ಕೊಡುವ ಯೋಜನೆಗೆ ಬೇಕಾದ ಅಕ್ಕಿಯನ್ನು ಸರ್ಕಾರವೇ ಹೊಂದಿಸಿಕೊಳ್ಳಬೇಕು. ಕೇಂದ್ರವು ತನ್ನ ಪಾಲಿನ ಅಕ್ಕಿಯನ್ನು ಜನರಿಗೆ ವಿತರಿಸುತ್ತಿದೆ. ಕೋವಿಡ್ ಸಂದರ್ಭದಲ್ಲಿ 84 ಕೋಟಿ ಜನರಿಗೆ ಅಕ್ಕಿ ಪೂರೈಸಿದೆ’ ಎಂದರು.

‘ಕೇಂದ್ರ ಸರ್ಕಾರ ರಾಜ್ಯದೊಂದಿಗೆ ದ್ವೇಷದ ರಾಜಕಾರಣ ಮಾಡುತ್ತಿಲ್ಲ. ಬದಲಾಗಿ ಸಿದ್ದರಾಮಯ್ಯ ಅವರೇ ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ. ನಮ್ಮ ಸರ್ಕಾರ ಜಾರಿಗೊಳಿಸಿದ್ದ ಮತಾಂತರ ನಿಷೇಧ ಕಾಯ್ದೆ, ಗೋಹತ್ಯೆ ನಿಷೇಧ ಕಾಯ್ದೆ, ಪಠ್ಯಪುಸ್ತಕ ಪರಿಷ್ಕರಣೆಯನ್ನು ವಾಪಸ್ ಪಡೆದಿದ್ದಾರೆ. ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸುತ್ತಿದ್ದಾರೆ’ ಎಂದರು.

ಕೇಂದ್ರ ಆಹಾರ ಸಚಿವರು ರಾಜ್ಯದ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ಅವರ ಭೇಟಿಗೆ ಸಮಯ ನೀಡದಿರುವ ಬಗ್ಗೆ ಕಟೀಲ್ ಅವರು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in




ಸುಭಾಷಿತ

ಯಾವುದೂ ಪ್ರಶ್ನಾತೀತವಲ್ಲ, ಯಾವುದೂ ಕಟ್ಟಕಡೆಯ ಕಟ್ಟಲೆಯೂ ಅಲ್ಲ, ಪ್ರತಿಯೊಂದೂ ತನಿಖೆ ಮತ್ತು ಪರೀಕ್ಷೆಗೆ ಒಳಗಾಗಬೇಕು.

-ಡಾ.ಬಿ.ಆರ್. ಅಂಬೇಡ್ಕರ್

ಏಕರೂಪ ನಾಗರಿಕ ಸಂಹಿತೆ ಆತುರದ ನಿರ್ಧಾರ ಸಲ್ಲದು

ಏಕರೂಪ ನಾಗರಿಕ ಸಂಹಿತೆಯ ವಿಚಾರವು ರಾಷ್ಟ್ರ ಮಟ್ಟದಲ್ಲಿ ಆಗಾಗ ಮುನ್ನೆಲೆಗೆ ಬರುತ್ತದೆ ಮತ್ತು ತೀಕ್ಷ್ಣವಾದ ಚರ್ಚೆಯೂ ನಡೆಯುತ್ತದೆ. ಕಾನೂನು ಆಯೋಗ ಈ ಕುರಿತು ಸಮಾಲೋಚನಾ ಪ್ರಕ್ರಿಯೆಯನ್ನು ಆರಂಭಿಸಿದೆ ಮತ್ತು ಸಾರ್ವಜನಿಕರ ಅಭಿಪ್ರಾಯಗಳನ್ನು ಆಹ್ವಾನಿಸಿದೆ. ಏಕರೂಪ ನಾಗರಿಕ ಸಂಹಿತೆಯ ಕುರಿತು ಆಯೋಗದ ನಿಲುವು ಏನು ಎಂಬುದನ್ನು ಸರ್ಕಾರ ಕೇಳಿತ್ತು, ಹೀಗಾಗಿ, ಆಯೋಗವು ಸಮಾಲೋಚನಾ ಪ್ರಕ್ರಿಯೆಗೆ ಚಾಲನೆ ಕೊಟ್ಟಿದೆ. ಏಕರೂಪ ನಾಗರಿಕ ಸಂಹಿತೆಯು ಸರ್ಕಾರದ ನೀತಿಯ ನಿರ್ದೇಶನಾತ್ಮಕ ತತ್ವಗಳ ಭಾಗವಾಗಿದ್ದು ಸಂಹಿತೆಯನ್ನು ರೂಪಿಸಿ ಅನುಷ್ಠಾನ ಮಾಡುವುದು ತನ್ನ ಕರ್ತವ್ಯವಾಗಿದೆ ಎಂದು ಸುಪ್ರೀಂ ಕೋರ್ಟ್‌ಗೆ ಸರ್ಕಾರ ಕಳೆದ ವರ್ಷ ಹೇಳಿತ್ತು. ಈ ವಿಷಯದ ಕುರಿತು ತರಾತುರಿಯಲ್ಲಿ ಚರ್ಚೆ ನಡೆಸುವುದು ಸಮಂಜಸವಲ್ಲ. 'ಇದು ಮಹತ್ವದ ವಿಚಾರ. ಈ ಹಿಂದಿನ ಕಾನೂನು ಆಯೋಗವು ಸಮಾಲೋಚನೆಯನ್ನು ಆರಂಭಿಸಿತ್ತು. ಅದಾದ ಬಳಿಕ ಮೂರು ವರ್ಷಗಳು ಕಳೆದಿವೆ. ಈಗ ಹೊಸದಾಗಿ ಚರ್ಚೆ ಆರಂಭಿಸಬೇಕಾಗಿದೆ' ಎಂದು ಆಯೋಗ ಹೇಳಿದೆ. ಈ ಹಿಂದಿನ ಕಾನೂನು ಆಯೋಗವು ಏಕರೂಪ ನಾಗರಿಕ ಸಂಹಿತೆ ಕುರಿತು 2018ರಲ್ಲಿ ಅಧ್ಯಯನ ನಡೆಸಿತ್ತು. 'ಏಕರೂಪ ನಾಗರಿಕ ಸಂಹಿತೆಯು ಈ ಹಂತದಲ್ಲಿ ಅಪೇಕ್ಷಣೀಯವೂ ಅಲ್ಲ, ಅಗತ್ಯವೂ ಇಲ್ಲ' ಎಂದು ಹೇಳಿತ್ತು. ಈಗ ಹೊಸದಾಗಿ ಸಂಹಿತೆಯ ಕುರಿತು ಅಧ್ಯಯನ ನಡೆಸಬೇಕಾದಂತಹ ಬೆಳವಣಿಗೆಗಳು ಯಾವುವೂ ಈ ವರ್ಷಗಳಲ್ಲಿ ಆಗಿಲ್ಲ.



ಈ ವಿಚಾರದಲ್ಲಿ ಯಾವುದೇ ನಿರ್ಧಾರಕ್ಕೆ ಬರುವ ಮೊದಲು ಜನಸಮುದಾಯಗಳು, ಸಂಘಟನೆಗಳ ಜೊತೆಗೆ ವ್ಯಾಪಕವಾದ ಸಮಾಲೋಚನೆ ಅಗತ್ಯ ಇದೆ

ಏಕರೂಪ ನಾಗರಿಕ ಸಂಹಿತೆಯ ಜಾರಿಯು ತನ್ನ ಹೊಣೆಗಾರಿಕೆ ಎಂದು ಸರ್ಕಾರವು ಸುಪ್ರೀಂ ಕೋರ್ಟ್‌ಗೆ ನೀಡಿದ ಹೇಳಿಕೆಯು ತಪ್ಪು. ಏಕರೂಪ ನಾಗರಿಕ ಸಂಹಿತೆ ಎಂಬುದು ಸಾಂವಿಧಾನಿಕ ಆದರ್ಶ ಮತ್ತು ಇದನ್ನು ಸರ್ಕಾರವು ಜಾರಿಗೆ ತರಬಹುದು ಎಂದು ಸಂವಿಧಾನದ 44ನೇ ವಿಧಿ ಹೇಳುತ್ತದೆ. ಆದರೆ ಇದು ಕಡ್ಡಾಯವಲ್ಲ. ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರಲು ಸರ್ಕಾರ ಈಗ ಮುಂದಾಗಿರುವುದರ ಹಿಂದೆ ರಾಜಕೀಯ ಉದ್ದೇಶ ಇದ್ದಂತೆ ಕಾಣಿಸುತ್ತಿದೆ. ಇದು ಹೆಚ್ಚು ಸೂಕ್ಷ್ಮವಾದ ಮತ್ತು ವಿಭಜಕ ಎನಿಸುವಂತಹ ವಿಚಾರ. ಈ ಕುರಿತು ಚರ್ಚೆ ನಡೆದರೆ ಅಥವಾ ಏನಾದರೂ ಕ್ರಮಗಳನ್ನು ಕೈಗೊಂಡರೆ ಲೋಕಸಭೆಗೆ 2024ರಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಅನುಕೂಲ ಆದೀತು ಎಂಬ ಭಾವನೆ ಬಿಜೆಪಿಯಲ್ಲಿ ಇರಬಹುದು. ಕಾನೂನು ಆಯೋಗ ಕೊಟ್ಟ ವರದಿಯು ಕೈಯಲ್ಲಿದ್ದರೆ ಸರ್ಕಾರದ ಉದ್ದೇಶಕ್ಕೆ ಅದು ಪೂರಕ ಎನಿಸಬಹುದು.

ಏಕರೂಪ ನಾಗರಿಕ ಸಂಹಿತೆಗೆ ದೇಶದಾದ್ಯಂತ ವ್ಯಾಪಕ ಬೆಂಬಲ ಇರಬೇಕು ಮತ್ತು ದೇಶವು ಈ ಆದರ್ಶದತ್ತ ಸಾಗಬೇಕಿದೆ ಎಂಬುದೂ ನಿಜ. ಆದರೆ, ಇದು ರಾಜಕೀಯಗೊಳ್ಳಬಾರದು ಮತ್ತು ಕೋಮುವಾದಿ ದೃಷ್ಟಿಯಿಂದಲೂ ಇದನ್ನು ನೋಡಬಾರದು. ದೇಶದಲ್ಲಿ ಈಗ ಇರುವ ಸನ್ನಿವೇಶದಲ್ಲಿ ಏಕರೂಪ ನಾಗರಿಕ ಸಂಹಿತೆಗೆ ಸಂಬಂಧಿಸಿ ತೆಗೆದುಕೊಳ್ಳುವ ಯಾವುದೇ ಕ್ರಮವು ಬಹುಸಂಖ್ಯಾತರ ವಿಚಾರವನ್ನು ಇಡೀ ಸಮಾಜದ ಮೇಲೆ ಹೇರಲಾಗಿದೆ ಎಂಬ ಭಾವನೆಗೆ ಕಾರಣವಾಗಬಹುದು. ವೈಯಕ್ತಿಕ ಕಾನೂನುಗಳು ಧಾರ್ಮಿಕ ನಂಬಿಕೆಗಳ ಜೊತೆಗೆ ಮಿಳಿತವಾಗಿವೆ. ವಿಚ್ಛೇದನ, ಉತ್ತರಾಧಿಕಾರ, ದತ್ತು, ಪಾಲಕತ್ವ ಸೇರಿ ಹಲವು ವಿಚಾರಗಳು ಮತ್ತು ಪದ್ಧತಿಗಳನ್ನು ಇವು ಒಳಗೊಂಡಿವೆ. ಸ್ವಾತಂತ್ರ್ಯ ಅಥವಾ ಧರ್ಮ, ಲಿಂಗತ್ವ ಹಕ್ಕುಗಳು ಮತ್ತು ಆದಿವಾಸಿಗಳಂತಹ ಜನರ ಆಚರಣೆಗಳು ಮುಂತಾದವುಗಳಲ್ಲಿ ಹಸ್ತಕ್ಷೇಪ ನಡೆಸಿದಂತೆಯೂ ಆಗುತ್ತದೆ ಎಂಬ ವಿಚಾರಗಳೂ ಚರ್ಚೆಯಲ್ಲಿ ಇವೆ. ಈ ಎಲ್ಲ ವಿಚಾರಗಳಿಗೆ ಕಾನೂನು ಆಯೋಗದ ಒಂದು ವರದಿಯ ಮೂಲಕ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ. ಈ ವಿಚಾರದಲ್ಲಿ ಯಾವುದೇ ನಿರ್ಧಾರಕ್ಕೆ ಬರುವ ಮೊದಲು ಜನರು, ಜನಸಮುದಾಯಗಳು, ಸಂಘಟನೆಗಳ ಜೊತೆಗೆ ವ್ಯಾಪಕವಾದ ಸಮಾಲೋಚನೆ ಅಗತ್ಯ ಇದೆ. ರಾಜಕೀಯ ಪರಿಣಾಮವನ್ನು ಉಂಟು ಮಾಡುವುದು ಮಾತ್ರ ಈಗಿನ ಸರ್ಕಾರದ ಉದ್ದೇಶ ಇದ್ದಂತಿದೆ. ಆದರೆ, ಅದಕ್ಕಾಗಿ ಕಾನೂನು ಆಯೋಗವನ್ನು ದುರ್ಬಳಕೆ ಮಾಡಿಕೊಂಡಿರುವುದು ದುರದೃಷ್ಟಕರ.

ದಿನದ ಟ್ವೀಟ್

ನಕಲಿ ಸುದ್ದಿಗಳಿಗೆ ತಡೆ



ನಕಲಿ ಸುದ್ದಿಗಳನ್ನು ಹಾಗೂ ತಪ್ಪು ಮಾಹಿತಿಯನ್ನು ನಿಯಂತ್ರಿಸುವ ಕೆಲಸದಲ್ಲಿ ಇಂಟರ್ನೆಟ್ ಜಗತ್ತಿನ ದೈತ್ಯ ಕಂಪನಿಗಳನ್ನೂ ಜೊತೆಯಾಗಿಸಿಕೊಳ್ಳುವ ರಾಜ್ಯ ಸರ್ಕಾರದ ನಡೆ ಸ್ವಾಗತಾರ್ಹ. ಆದರೆ ಇದು ರಾಜಕೀಯ ವಿರೋಧಿಗಳು ಹಾಗೂ ಟೀಕಾಕಾರರನ್ನು ಮಾತ್ರ ಶಿಕ್ಷಿಸುವುದರಲ್ಲಿ ಕೊನೆಗೊಳ್ಳಬಾರದು.

ಗೌತಮ್ ಮಾಚಯ್ಯ, ಪತ್ರಕರ್ತ

ಕಿಡಿನುಡಿ



ಹೊಸದಾಗಿ ಆಯ್ಕೆಯಾದ ಶಾಸಕರಿಗೆ ಶಾಸನಸಭೆಯ ನಡಾವಳಿಗಳ ಬಗ್ಗೆ ತರಬೇತಿ ಕೊಡಲು ಆಯೋಜಿಸಿರುವ ಶಿಬಿರದಲ್ಲಿ ಧಾರ್ಮಿಕ ಅಥವಾ ಆಧ್ಯಾತ್ಮಿಕ ನಾಯಕರಿಗೆ ಏನು ಕೆಲಸ? ಅಲ್ಲಿ ಮಾತನಾಡಬೇಕಿರುವುದು ಪ್ರಜಾತಾಂತ್ರಿಕ ಮೌಲ್ಯಗಳನ್ನು ಎತ್ತಿಹಿಡಿಯುವ ಬಗ್ಗೆ, ಸಂವಿಧಾನಕ್ಕೆ ಬದ್ಧತೆ ತೋರುವ ಬಗ್ಗೆ ಮತ್ತು ನಿರ್ಭೀತ ಹಾಗೂ ನಿಷ್ಪಕ್ಷಪಾತ ಧೋರಣೆಯಿಂದ ಸೇವೆ ಸಲ್ಲಿಸುವ ಬಗ್ಗೆ.

ಅನುಷಾ ರವಿ ಸೂದ್, ಪತ್ರಕರ್ತೆ

25 ವರ್ಷಗಳ ಹಿಂದೆ

ಮಂಗಳವಾರ, 23-6-1998

• ಜಾತ್ಯತೀತ ಸರ್ಕಾರ ರಚನೆ: ಪಕ್ಷಗಳಿಗೆ ಶೇಖರ್ ಕರೆ

ನವದೆಹಲಿ, ಜೂನ್ 22 (ಪಿಟಿಐ)– ವಾಜಪೇಯಿ ನೇತೃತ್ವದ ಸರ್ಕಾರವನ್ನು ಅಧಿಕಾರದಿಂದ ಉಚ್ಚಾಟಿಸುವುದಕ್ಕಾಗಿ ಎಲ್ಲ ಜಾತ್ಯತೀತ ಪಕ್ಷಗಳನ್ನು ಒಗ್ಗೂಡಿಸಲು ಕಾಂಗ್ರೆಸ್ ಮುಂದಾಗಬೇಕು ಎಂದು ಮಾಜಿ ಪ್ರಧಾನಿ ಚಂದ್ರಶೇಖರ್ ಕರೆ ನೀಡಿದ್ದಾರೆ. ಏಳು ದಿನಗಳಲ್ಲಿಯೇ ಪರ್ಯಾಯ ಸರ್ಕಾರವನ್ನು ರಚಿಸಲು ಸಾಧ್ಯ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇಂದು ಇಲ್ಲಿ ಪತ್ರಕರ್ತರ ಜತೆ ಮಾತನಾಡಿದ ಅವರು, ಎಲ್ಲಾ ಕ್ಷೇತ್ರಗಳಲ್ಲಿ ವಾಜಪೇಯಿ ನೇತೃತ್ವದ ಕೇಂದ್ರ ಸರ್ಕಾರ ವಿಫಲವಾಗಿದೆ. ಈ ಸರ್ಕಾರವನ್ನು ಆದಷ್ಟು ಶೀಘ್ರ ಉಚ್ಚಾಟಿಸಬೇಕು ಎಂದು ಅವರು ಆಗ್ರಹಪಡಿಸಿದರು.

• ಶಿಮ್ಲಾ ಒಪ್ಪಂದವೇ ಪರಿಹಾರ: ವಾಜಪೇಯಿ

ಶಿಮ್ಲಾ, ಜೂನ್ 22 (ಪಿಟಿಐ)– ಕಾಶ್ಮೀರ ವಿಷಯವನ್ನು ಅಂತರರಾಷ್ಟ್ರೀಯ ವಿಷಯವನ್ನಾಗಿ ಮಾಡುವುದು ಸಲ್ಲ ಎಂದು ಪ್ರಧಾನಿ ವಾಜಪೇಯಿ ಅವರು ಇಂದು ಪಾಕಿಸ್ತಾನವನ್ನು ಎಚ್ಚರಿಸಿದರು.

ಇಲ್ಲಿ ಸುದ್ದಿಗಾರರ ಜೊತೆ ಮಾತನಾಡುತ್ತಿದ್ದ ಅವರು, 'ಉಪಖಂಡದಲ್ಲಿ ಎರಡೂ ದೇಶಗಳು ವಸಾಹತುಶಾಹಿ ಆಡಳಿತವನ್ನು ಸಮಾನವಾಗಿ ಅನುಭವಿಸಿದ ಹಿನ್ನೆಲೆಯನ್ನು ಪಾಕಿಸ್ತಾನ ಗಮನದಲ್ಲಿರಿಸಿಕೊಳ್ಳುವುದು ಅಗತ್ಯ. ಪಾಕಿಸ್ತಾನ ಈ ಬಗೆಯ ಯತ್ನವನ್ನು ಬಿಟ್ಟು ಅದರ ಬದಲು ಶಿಮ್ಲಾ ಒಪ್ಪಂದಕ್ಕೆ ಅನುಗುಣವಾಗಿ ನಮ್ಮ ಮಧ್ಯದ ಎಲ್ಲ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ದ್ವಿಪಕ್ಷೀಯ ಮಾತುಕತೆಗಳಲ್ಲಿ ತೊಡಗಿಸಿಕೊಳ್ಳಲಿ' ಎಂದು ಸಲಹೆ ಮಾಡಿದರು.

50 ವರ್ಷಗಳ ಹಿಂದೆ

ಶನಿವಾರ, 23-6-1973

• ಬಿಹಾರ ಸಂಪುಟದ 24 ಮಂದಿ ಸಚಿವರ ರಾಜೀನಾಮೆ

ಪಟ್ನಾ, ಜೂನ್ 22– ಬಿಹಾರ ರಾಜ್ಯದ ಮುಖ್ಯಮಂತ್ರಿ ಶ್ರೀ ಕೇದಾರ ಪಾಂಡೆ ಅವರ ಮಂತ್ರಿಮಂಡಲದ 40 ಮಂದಿ ಸದಸ್ಯರ ಪೈಕಿ 24 ಮಂದಿ ಭಿನ್ನಮತೀಯ ಸಚಿವರು ಇಂದು ತಮ್ಮ ಸಚಿವ ಸ್ಥಾನಕ್ಕೆ ಹಠಾತ್ತನೆ ರಾಜೀನಾಮೆ ನೀಡಿದ್ದರಿಂದ ಬಿಹಾರದ ರಾಜಕೀಯ ಪರಿಸ್ಥಿತಿ ಹೊಸ ತಿರುವು ಪಡೆಯಿತು.

ಪಕ್ಷದ ನಾಯಕತ್ವದಿಂದ ಶ್ರೀ ಕೇದಾರ ಪಾಂಡೆ ಅವರನ್ನು ಉಚ್ಚಾಟಿಸುವುದಕ್ಕೆ 'ಸ್ವತಂತ್ರ ಕಾಂಗ್ರೆಸ್ಸಿಗರಾಗಿ' ಶ್ರಮಿಸಲೂ ಭಿನ್ನಮತೀಯ ಸಚಿವರು ನಿರ್ಧರಿಸಿದರು.

• ಅಣ್ವಸ್ತ್ರ ತಡೆ: ಚರಿತ್ರಾರ್ಹ ಒಪ್ಪಂದಕ್ಕೆ ನಿಕ್ಸನ್– ಬ್ರೆಜ್ನೇವ್ ಸಹಿ

ವಾಷಿಂಗ್ಟನ್, ಜೂನ್ 22– ತಮ್ಮೆರಡು ರಾಷ್ಟ್ರಗಳ ಮಧ್ಯವೇ ಅಲ್ಲದೆ ಮೂರನೇ ರಾಷ್ಟ್ರಗಳ ಜತೆಯೂ ಸಹ ಅಣ್ವಸ್ತ್ರ ಯುದ್ಧ ಸಂಭವಗಳನ್ನು ತಡೆಯಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಕೈಗೊಳ್ಳಲು ಭರವಸೆ ನೀಡುವ ಒಪ್ಪಂದಕ್ಕೆ ರಷ್ಯಾ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಲಿಯೊನಿಡ್ ಬ್ರೆಜ್ನೇವ್ ಹಾಗೂ ಅಮೆರಿಕ ಅಧ್ಯಕ್ಷ ನಿಕ್ಸನ್ ಅವರು ಇಂದು ರಾತ್ರಿ ಸಹಿ ಹಾಕಿದರು.

ವಿಶ್ವದ ಯಾವ ಪ್ರದೇಶದಲ್ಲೇ ಆಗಲಿ, ಯಾವ ಸಮಯದಲ್ಲೇ ಆಗಲಿ ಅಣ್ವಸ್ತ್ರ ಸಮರದ ಸಂಭವ ತಲೆದೋರಿದಾಗ ಅದನ್ನು ತಪ್ಪಿಸಲು ಅಮೆರಿಕ ಮತ್ತು ರಷ್ಯಾ ದೇಶಗಳು ತುರ್ತು ಸಮಾಲೋಚನೆ ಕೈಗೊಳ್ಳುವುವೆಂದು ಎಂಟು ಅಂಶಗಳ ಆ ಒಪ್ಪಂದದಲ್ಲಿ ತಿಳಿಸಲಾಗಿದೆ.

ಸಿರಿಧಾನ್ಯಗಳನ್ನು ಮುಖ್ಯವಾಹಿನಿಗೆ ತರಲು ಹರಸಾಹಸಪಡುತ್ತಿದೆ ಭಾರತ

ಸಿರಿಧಾನ್ಯ ನಾಡಿನಲ್ಲೇ ಬೀಜಬ್ಯಾಂಕ್ ಬರ



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಪ್ರಸಕ್ತ ವರ್ಷವನ್ನು ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷ ಎಂದು ವಿಶ್ವದಾದ್ಯಂತ ಆಚರಿಸಲಾಗುತ್ತಿದೆ. ಅದಕ್ಕೆ ಅರ್ಥ ನೀಡಲು ರಾಜ್ಯ, ದೇಶ, ವಿಶ್ವ ಮಟ್ಟದಲ್ಲಿ ಸಮಾವೇಶ, ಪ್ರದರ್ಶನ, ವಿಚಾರ ಸಂಕಿರಣ, ಬೀಜ ಮೇಳಗಳೆಲ್ಲ ನಡೆಯುತ್ತಿವೆ. ಆಚರಣೆಯ ನೇತೃತ್ವ ವಹಿಸಿರುವ ಭಾರತ ತನ್ನ ಸಿರಿಧಾನ್ಯಗಳನ್ನು ಮುಖ್ಯವಾಹಿನಿಗೆ ತರಲು ಹರಸಾಹಸಪಡುತ್ತಿದೆ. ಇಪ್ಪತ್ತು ವರ್ಷಗಳ ಹಿಂದೆ ಕ್ರಿಯಾಶೀಲವಾಗಿದ್ದ ಸಮುದಾಯ ಬೀಜಬ್ಯಾಂಕುಗಳು ಈಗ ವಿಳಾಸ ಕಳೆದುಕೊಂಡಿವೆ. ಆಸಕ್ತಿ, ತಾಳ್ಮೆ ಇರುವ ಕೆಲ ಸಂಘ– ಸಂಸ್ಥೆಗಳು ಮತ್ತು ವ್ಯಕ್ತಿಗಳು ಸಿರಿಧಾನ್ಯ ಬೀಜಗಳ ಸಂರಕ್ಷಣೆಯಲ್ಲಿ ತೊಡಗಿಕೊಂಡಿದ್ದಾರೆ.


ಒಂದು ಕಾಲದಲ್ಲಿ ಒರಟು ಧಾನ್ಯಗಳೆಂಬ ಹಣೆಪಟ್ಟಿಯೊಂದಿಗೆ ಆಹಾರ ಕ್ರಮದ ಮುಖ್ಯವಾಹಿನಿಯಿಂದ ದೂರ ಸರಿದಿದ್ದ ರಾಗಿ, ನವಣೆ, ಸಾವೆ, ಸಜ್ಜೆ ಧಾನ್ಯಗಳೀಗ ಜನರ ಆಹಾರದ ಭಾಗವಾಗುತ್ತಿವೆ. ಕಡಿಮೆ ನೀರು– ಆರೈಕೆ ಬೇಡುವ, ಕೀಟ ಬಾಧೆಗಳಿಂದ ಮುಕ್ತವಾಗಿ ಅಪಾರ ಜೀವಸತ್ವದ ಗಣಿಗಳಂತಿರುವ ಸಿರಿಧಾನ್ಯಗಳು ಮಾನವನ ಆರೋಗ್ಯ ಕಾಪಾಡುವಲ್ಲಿ ಔಷಧಿಯಂತೆ ಕೆಲಸ ಮಾಡುತ್ತವೆ. ರಾಗಿ ಮುದ್ದೆ, ಅಂಬಲಿ, ಗಂಜಿ, ರೊಟ್ಟಿ ತಿಂದರೆ ಶುಗರ್ ಲೆವಲ್ ನಿಯಂತ್ರಣಕ್ಕೆ ಬರುತ್ತದೆ, ನವಣೆ ತಿಂದರೆ ಗಾಯ ಬೇಗ ವಾಸಿಯಾಗುತ್ತದೆ, ಸಜ್ಜೆಯಿಂದ ಮೈ ಬೊಜ್ಜು ಕರಗುತ್ತದೆ, ಸಾವೆ ತಿಂದರೆ ಕೀಲು ನೋವು ದೂರವಾಗುತ್ತದೆ ಎಂಬೆಲ್ಲ ಜ್ಞಾನ, ತಿಳಿವಳಿಕೆ ಪ್ರಾರಂಭವಾದಾಗಿನಿಂದ 'ಅಯ್ಯೋ, ನಾವೆಲ್ಲ ಇವುಗಳನ್ನು ತಿನ್ನುವುದನ್ನು ನಿಲ್ಲಿಸಿ ವರ್ಷಗಳೇ ಆಗಿವೆಯಲ್ಲ, ಇನ್ಮೇಲೆ ಅವನ್ನೇ ತಿಂದುಣ್ಣುತ್ತೇವೆ' ಎನ್ನುವವರ ಸಂಖ್ಯೆ ಜಾಸ್ತಿಯಾಗುತ್ತಿದೆ. ಕೋವಿಡ್ ಅಲೆ ಅಪ್ಪಳಿಸಿದ ನಂತರ ರೋಗನಿರೋಧಕ ಶಕ್ತಿ ಸಂಪಾದನೆಗೆ ಸಿರಿಧಾನ್ಯಗಳ ಬಳಕೆ ಹೆಚ್ಚಾಗಿದೆ.

ಕೀಟಬಾಧೆಗೆ ತುತ್ತಾಗದೆ ತಕ್ಕಮಟ್ಟಿಗೆ ಇಳುವರಿ ನೀಡುವ ಸಾಮೆ, ಬರಗ, ನವಣೆ, ಸಜ್ಜೆಯು ಒಣಭೂಮಿ ಬೇಸಾಯದ ರೈತರಿಗೆ ವರದಾನವೇ ಸರಿ. ಆದರೆ ಇಂದಿನ ದಿನಮಾನದಲ್ಲಿ ಸಿರಿಧಾನ್ಯ ಬೆಳೆಯುವ ಕೃಷಿ ಪ್ರದೇಶ ದೇಶದಾದ್ಯಂತ ಅರ್ಧಕ್ಕರ್ಧ ಕಡಿಮೆ ಆಗಿರುವುದು ಆತಂಕಕಾರಿಯಾಗಿದೆ. ಹತ್ತಿ, ಕಬ್ಬು, ಎಣ್ಣೆಕಾಳು, ಹಣ್ಣು, ತರಕಾರಿಗಳಂಥ ವಾಣಿಜ್ಯ ಬೆಳೆಗಳು ಸಿರಿಧಾನ್ಯಗಳ ಜಾಗದಲ್ಲಿ ಠಿಕಾಣಿ ಹೂಡಿವೆ. ಜೊತೆಗೆ ಅಕ್ಕಡಿ ಬೆಳೆಯ ಪದ್ಧತಿಯೂ ಕಣ್ಮರೆಯಾಗಿರುವುದು ಕೃಷಿಯ ದುರಂತವೇ ಸರಿ ಎನ್ನುವುದು ಹಲವು ತಜ್ಞರ ಅಭಿಮತ.

ದೇಸಿ ಬೀಜಗಳನ್ನು ಸಾಂಸ್ಥಿಕವಾಗಿ ರಕ್ಷಿಸುವ ಕೆಲಸ ನಿಂತುಹೋಗಿದೆ. ಸಮುದಾಯ ಬೀಜ ಬ್ಯಾಂಕುಗಳು ಮಾಡುತ್ತಿದ್ದ ಕೆಲಸಗಳನ್ನು ಈಗ ರೈತರೇ ಮಾಡುತ್ತಿದ್ದಾರೆ. ಕಿರುಗಾವಲಿನ ಸಯ್ಯದ್ ಘನಿಖಾನ್, ಮಂಡ್ಯದ ಬೋರೆಗೌಡ, ದಾವಣಗೆರೆಯ ಆಂಜನೇಯ, ಬೆಳ್ತಂಗಡಿಯ ದೇವರಾವ್, ಗಂಗಾವತಿಯ ಚಿಕ್ಕಜಂತಕಲ್ ಗ್ರಾಮದ ಮಹಾದೇವಿ, ಹಾವೇರಿಯ ಶ್ರೇಣಿತರಾಜು ಮುಂತಾದವರು ಬಿಡಿಬಿಡಿಯಾಗಿ ಬೀಜ ಸಂರಕ್ಷಕ ಕೆಲಸ ಮಾಡುತ್ತಿದ್ದಾರೆ. ರೈತರ ಪ್ರಯತ್ನಗಳನ್ನು ಕೊಂಡಾಡಲಾಗುತ್ತದೆಯಾದರೂ ಉತ್ಪಾದಿಸಿದ ದೇಸಿ ಬೀಜಗಳನ್ನು ಬೀಜ ಮಾರಾಟ ವ್ಯವಸ್ಥೆಯ ವ್ಯಾಪ್ತಿಗೆ ತರುವುದು ಸಾಧ್ಯವಾಗುತ್ತಿಲ್ಲ. ಏಕೆಂದರೆ ಅವುಗಳ ಗುಣಮಟ್ಟದ ಕುರಿತು ಯಾವ ಪ್ರಮಾಣ ಪತ್ರವೂ ಇಲ್ಲ.

'ಮಿಲೆಟ್ ನೆಟ್‌ವರ್ಕ್ ಆಫ್ ಇಂಡಿಯಾ' ನಮ್ಮ ರಾಜ್ಯದ ಬೈಫ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಮೂಲದ ಗ್ರೀನ್ ಫೌಂಡೇಷನ್, ಧಾನ್ಯ ಸಂಸ್ಥೆ, ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಸಹಜ ಸಮೃದ್ಧ, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಗ್ರಾಮೀಣ ಗೃಹ ವಿಜ್ಞಾನ ಕಾಲೇಜು, ರಾಣೆಬೆನ್ನೂರು ತಾಲ್ಲೂಕಿನ ಕಾಕೋಳಿನ ನೈಸರ್ಗಿಕ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಬ್ಯಾಡಗಿ ತಾಲ್ಲೂಕಿನ ಚಿನ್ನಿಕಟ್ಟೆಯ ಮಿಂಚು ಸಮುದಾಯ ಬೀಜಬ್ಯಾಂಕ್ ಸಿರಿಧಾನ್ಯಗಳ ತಳಿ ರಕ್ಷಿಸಿ ಮುಖ್ಯವಾಹಿನಿಗೆ ತರುವಲ್ಲಿ ಬಹಳಷ್ಟು ಶ್ರಮವಹಿಸಿದ್ದವು. ಧಾರವಾಡದ ತೀರ್ಥದಲ್ಲಿರುವ ಮಹಿಳೆಯರೇ ನಡೆಸುವ ಬೀಜ ಬ್ಯಾಂಕ್ ಗ್ರಾಮೀಣ ಪ್ರದೇಶಗಳಲ್ಲಿ ದೇಸಿ ತಳಿಗಳ ಬಗೆಗೆ ಹೆಚ್ಚಿನ ಆಸ್ಥೆ ಮೂಡಿಸಿದೆ. ರಾಜ್ಯದ ಮೂರ್ನಾಲ್ಕು ವಿಶ್ವವಿದ್ಯಾಲಯಗಳು ಈ ಕೆಲಸ ಮುಂದುವರಿಸಿವೆ. ಸಹಜ ಸಮೃದ್ಧ ನೇತೃತ್ವದ ಕೃಷ್ಣ ಪ್ರಸಾದ್ 'ಸರ್ಕಾರದ ಸರಿಯಾದ ಬೆಂಬಲ ಸಿಕ್ಕರೆ ಸ್ಥಳೀಯ ತಳಿಗಳ ಪುನರುತ್ಥಾನ ಸಾಧ್ಯ' ಎನ್ನುತ್ತಾರೆ.

ದೇಸಿ ಬೀಜಗಳನ್ನು ಸಂರಕ್ಷಿಸಿ ಮುಂದಿನ ತಲೆಮಾರಿಗೆ ವರ್ಗಾಯಿಸುವ ಕೆಲಸಗಳು ಒಡಿಶಾ ಮತ್ತು ಆಂಧ್ರ ಪ್ರದೇಶದಲ್ಲಿ ಸಮುದಾಯ ಬೀಜಬ್ಯಾಂಕ್‌ಗಳ ಮೂಲಕ ಚೆನ್ನಾಗಿ ನಡೆಯುತ್ತಿವೆ. ಅದಕ್ಕೆ ತೀರಾ ಇತ್ತೀಚೆಗೆ ಒಡಿಶಾ ರಾಜ್ಯದ ನಯಾಗಢ ಜಿಲ್ಲೆಯಲ್ಲಿ ನಡೆದ ಬಿಹಾನ್ ಮೇಳವೇ ಸಾಕ್ಷಿ. ದಾಸಪಲ್ಲಾ ತಾಲ್ಲೂಕಿನಲ್ಲಿ ಅಲ್ಲಿನ ಬುಡುಕಟ್ಟು ಡೊಂಗ್ರಿಯ ಅಕೊಂಡ್‌ನ ಮಹಿಳೆಯರು ಏರ್ಪಡಿಸಿದ್ದ ಬೀಜ ಮೇಳಕ್ಕೆ ತಾಲ್ಲೂಕಿನ ನಲವತ್ತು ಹಳ್ಳಿಗಳ ರೈತರು ಆಗಮಿಸಿದ್ದು ವಿಶೇಷವಾಗಿತ್ತು. ಬೇಸಿಗೆಯ ಹಂಗಾಮಿನಲ್ಲಿ ಅಪರೂಪದ ದೇಸಿ ಬೀಜಗಳನ್ನು ಹುಷಾರಾಗಿ ಸಂಗ್ರಹಿಸುವ ಹೆಣ್ಣುಮಕ್ಕಳು ಮಣ್ಣಿನ ಗಡಿಗೆಗಳಲ್ಲಿ ಸಂಗ್ರಹಿಸಿಟ್ಟುಕೊಂಡು 'ಬೀಜಜಾತ್ರೆ'ಗೆ ಕೊಂಡೊಯ್ದು ಪ್ರದರ್ಶನ ಮತ್ತು ಮಾರಾಟಕ್ಕಿಡುತ್ತಾರೆ. ಕೋವಿಡ್‌ನಿಂದಾಗಿ ಕಳೆದ ಎರಡು ವರ್ಷ ಜಾತ್ರೆ ನೆರೆದಿರಲಿಲ್ಲ ಎನ್ನುವ ಬಿಡಪಜು ಗ್ರಾಮದ ನಿರೋಲ ಜಾನಿ, 'ನಾನು ನಾಲ್ಕು ಬಗೆಯ ದೇಸಿ ಭತ್ತದ ಬೀಜಗಳನ್ನು ತಂದಿದ್ದೇನೆ, ನಮ್ಮ ಅರ್ಧ ಹೆಕ್ಟೇರ್ ಪ್ರದೇಶದಲ್ಲಿ ಇವನ್ನು ಬೆಳೆದಿದ್ದೇವೆ' ಎಂದು ಹೆಮ್ಮೆಯಿಂದ ಹೇಳುತ್ತಾಳೆ.




'ಬೀಜಜಾತ್ರೆ'ಯನ್ನು ಸಂಘಟಿಸಲು ನೆರವಾದ ಸರ್ಕಾರೇತರ ಸಂಸ್ಥೆ 'ನಿರ್ಮಾಣ್'ನ ಮುಖ್ಯಸ್ಥ ಕೈಲಾಸ್ ಸಾಹೂ 'ಇಲ್ಲಿನ ಜನ ಮಳೆಯಾಶ್ರಿತ ಬೇಸಾಯದವರು. ಹಸಿರು ಕ್ರಾಂತಿಯ ಫಲವಾಗಿ ದೇಸಿ ತಳಿಗಳಿಂದ ದೂರವಾಗಿದ್ದರು. ಪ್ರತಿವರ್ಷ ಒಂದಲ್ಲ ಒಂದು ಕಾರಣಕ್ಕೆ ಬೆಳೆ ವಿಫಲವಾದದ್ದರಿಂದ ಮರಳಿ ದೇಸಿ ಬೆಳೆಗಳ ಕಡೆ ಮುಖ ಮಾಡಿದ್ದಾರೆ. ಇವರು ದೊಡ್ಡ ಹಿಡುವಳಿದಾರರಲ್ಲ, ಹೆಚ್ಚೆಂದರೆ ಒಬ್ಬೊಬ್ಬರ ಬಳಿ ಒಂದು ಎಕರೆ ಜಮೀನಿರಬಹುದು. ದೇಸಿ ತಳಿಗಳು ವಾಯುಗುಣ ವೈಪರೀತ್ಯಗಳನ್ನು ಮೆಟ್ಟಿ ನಿಲ್ಲುತ್ತವೆ ಎಂದು ಗೊತ್ತಾಗಿದೆ. ಇನ್ನುಮುಂದೆ ನಮ್ಮ ಕೆಲಸ ಸುಲಭ' ಎನ್ನುತ್ತಾರೆ. ಬೆಟ್ಟದ ಮೇಲೆ ಕೃಷಿ ಮಾಡುವ ಡೊಂಗಾರ್ ಬುಡಕಟ್ಟಿನ ಜನ ಗೋಡಂಬಿ ಬೆಳೆಯಲು ಪ್ರಯತ್ನಿಸಿ ಕೀಟಬಾಧೆಯಿಂದಾಗಿ ಭಾರಿ ವೈಫಲ್ಯ ಅನುಭವಿಸಿದ್ದರು. ಬೀಜ ಹಬ್ಬದಲ್ಲಿ ಪಾಲ್ಗೊಂಡ ನಂತರ ದೇಸಿ ತಳಿಯ ಮಹತ್ವ ಅರಿತ ಅವರೂ ಸಹ ಸಿರಿಧಾನ್ಯ ಬೆಳೆಯಲು ಉತ್ಸುಕರಾಗಿದ್ದಾರೆ. ರಾಯಸಾರ್ ಗ್ರಾಮದ ಬೀಜಬ್ಯಾಂಕ್ ಅಲ್ಲಿನ ರೈತರಿಗೆ ನೆರವಾಗಿದ್ದು ಒಂದು ಕೆ.ಜಿ. ಬೀಜ ತೆಗೆದುಕೊಂಡು ಹೋಗುವ ರೈತರು ಮೊದಲ ವರ್ಷದ ಹಂಗಾಮಿನಲ್ಲೇ ಎರಡು ಪಟ್ಟು ಬೀಜ ಹಿಂದಿರುಗಿಸಬೇಕೆಂಬ ನಿಯಮ ಮಾಡಿದೆ.

ತೆಲಂಗಾಣದ ಮೇದಕ್ ಜಿಲ್ಲೆಯ ಹುಮನಾಪುರ ಗ್ರಾಮದ ಮಹಿಳೆ ಲಕ್ಷ್ಮಮ್ಮ, ನಲವತ್ತೈದು ವರ್ಷಗಳಿಂದ ಕೃಷಿ ಮಾಡುತ್ತಿದ್ದು ತೊಂಬತ್ತಕ್ಕೂ ಹೆಚ್ಚು ಬಗೆಯ ಬೇಳೆ, ಎಣ್ಣೆಕಾಳು ಮತ್ತು ಸಿರಿಧಾನ್ಯಗಳ ಬೀಜಗಳನ್ನು ಸಂರಕ್ಷಿಸಿದ್ದಾರೆ. ಹೊಸ ತಲೆಮಾರಿನವರಿಗೂ ಪಾರಂಪರಿಕ ಬೀಜ– ತಳಿ ಪರಿಚಯ ಮಾಡಿಸಲು ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿಯವರು ನಡೆಸುತ್ತಿರುವ ಅತ್ತೆ- ಸೊಸೆ ಕಾರ್ಯಕ್ರಮ ಯಶಸ್ಸು ಕಂಡಿದೆ. ಜಿಲ್ಲೆಯ 60 ಹಳ್ಳಿಗಳ ಹಿಂದುಳಿದ ವರ್ಗಗಳ ಮಹಿಳೆಯರನ್ನೇ ಒಳಗೊಂಡ ಬೀಜ ಬ್ಯಾಂಕ್ ಸ್ಥಾಪಿಸಿರುವ ಡಿಡಿಎಸ್, ದೇಸಿ ತಳಿಗಳ ಸಂರಕ್ಷಣೆಗೆ ಪ್ರತಿ ಹಳ್ಳಿಯ 30 ಎಕರೆ ಜಾಗದಲ್ಲಿ ಸಾಂಪ್ರದಾಯಿಕ ಬೆಳೆ ಬೆಳೆಯಲು ಪ್ರೇರೇಪಿಸಿ ಪ್ರತಿ ರೈತ ಮಹಿಳೆಗೆ ಬೀಜ, ಗೊಬ್ಬರ, ಉಳುಮೆ ಮತ್ತು ಕಳೆ ನಿವಾರಿಸಲು ₹ 2,500 ಕೊಡುತ್ತದೆ.

ಸಮುದಾಯ ಬೀಜಬ್ಯಾಂಕುಗಳು ಇಲ್ಲ ಎನ್ನುವುದಕ್ಕಿಂತ ಬೀಜಗಳನ್ನು ಕಾಪಿಡುವ ಸಮುದಾಯಗಳೆಲ್ಲಿವೆ ಎಂಬ ಪ್ರಶ್ನೆ ಎದ್ದಿದೆ. ಒಂದು ವೇಳೆ ತೃಣಧಾನ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಿದರೆ ತಿನ್ನುವ ಬಾಯಿಗಳೆಲ್ಲಿವೆ? ಕಳೆದ ಎರಡು ದಶಕಗಳಲ್ಲಿ ಜನಿಸಿರುವ ಬಹುಪಾಲು ಮಕ್ಕಳಿಗೆ ಸಿರಿಧಾನ್ಯಗಳ ಪರಿಚಯವೇ ಇಲ್ಲ. ಬೆಳೆದ ಅಷ್ಟಿಷ್ಟು ಬೆಳೆಯೂ ಹಕ್ಕಿಗಳಿಗೆ ಆಹಾರವಾದರೆ ಯಾರಿಗಾಗಿ ಬೆಳೆಯಬೇಕು ಎನ್ನುವುದು ರೈತರ ಪ್ರಶ್ನೆ. ಸಿರಿಧಾನ್ಯಗಳಿಗೆ ಇದ್ದ ಪ್ರಾಮುಖ್ಯವನ್ನು ಮರಳಿ ತರಬೇಕಾದರೆ ಅವುಗಳನ್ನು ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ ವಿತರಿಸುವುದು ಮೊದಲಾಗಬೇಕು. ಅದಕ್ಕೂ ಮುನ್ನ ಅಂಗನವಾಡಿಗಳ ಮೂಲಕ ಅದು ಎಳೆಯ ಮಕ್ಕಳ ಊಟದಲ್ಲಿ ಬೆರೆಯಬೇಕು.

ಚುರುಮುರಿ



ಅಕ್ಕಿ ಹಾರುತಿದೆ!

• ಬಿ.ಎನ್. ಮಲ್ಲೇಶ್

'ಅಕ್ಕಿ ಹಾರುತಿದೆ ನೋಡಿದಿರಾ?' ಎಂದ ಗುಡ್ಡೆ ಹರಟೆಕಟ್ಟೆಯಲ್ಲಿ.

'ಲೇಯ್, ಅದು ಅಕ್ಕಿಯಲ್ಲ, ಹಕ್ಕಿ...' ತಿದ್ದಿದ ದುಬ್ಬೀರ.

'ಗೊತ್ತು ಕಣಲೆ, ನಾನು ಬೇಕೂಂತ ಅಕ್ಕಿ ಅಂತಾನೇ ಅಂದೆ...'

'ನಿನ್ತಲಿ, ಅಕ್ಕಿ ಹೆಂಗೆ ಹಾರ್‍ತದಲೆ?'

'ಕೇಂದ್ರದಿಂದ ಹಾರಿ ಬರ್ಬೇಕಿತ್ತು, ಬರ್ಲಿಲ್ಲ... ಈಗ ಪಂಜಾಬಿಂದ ಹಾರಿ ಬರ್ತದೇನೋ ನೋಡ್ಬೇಕು'.

'ಓ... ಅನ್ನಭಾಗ್ಯ ಅಕ್ಕಿನಾ? ಅದು ಹಾರದಂಗೆ ಬಿಜೆಪಿಯೋರು ಪಂಜರದಾಗೆ ಕೂಡಿಹಾಕಿದಾರೆ ಅಂತ ಕಾಂಗ್ರೆಸ್‌ನೋರು ಹೇಳ್ತಿದ್ರಪ...' ತೆಪರೇಸಿ ನಕ್ಕ.

'ಅಲೆ ಇವ್ನ, ಅವರ ಅಕ್ಕಿ ಅವರು ಕೂಡಿಹಾಕಿದ್ರೆ ಇವರಿಗೇನ್ ಕಷ್ಟ?' ಕೊಟ್ರೇಶಿ ಕೊಕ್ಕೆ.

'ಲೇ ಕೊಟ್ರ, ಬಡವರಿಗೆ ಕೊಡೋದ್ರಲ್ಲಿ ರಾಜಕೀಯ ಮಾಡ್ಬಾರ್ದು ತಿಳ್ಕಾ. ಈಗ ಎಲ್ಲೂ ಅಕ್ಕಿ ಸಿಗ್ಲಿಲ್ಲ ಅಂದ್ರೆ ಅಕ್ಕಿ ರೇಟು ಆಕಾಶಕ್ಕೆ ಏರುತ್ತೆ, ಅಕ್ಕಿ ಹಕ್ಕಿ ತರ ಆಕಾಶದಲ್ಲಿ ಹಾರಾಡುತ್ತೋ ಇಲ್ಲೋ?' ಗುಡ್ಡೆ ವಾದಿಸಿದ.

'ಸರಿ ಅದಕ್ಕೇನ್ ಮಾಡ್ಬೇಕು ಈಗ? ಕೇಂದ್ರದೋರು ಕೊಡಲ್ಲ ಅಂತಾರಪ, ಮುಂದ?'

'ಮುಂದೇನೂ ಇಲ್ಲ, ಹಿಂದೇನೂ ಇಲ್ಲ... ನಾನಾಗಿದ್ರೆ ಅರ್ಧ ಗಂಟೇಲಿ ಈ ಸಮಸ್ಯೆ ಬಗೆಹರಿಸ್ತಿದ್ದೆ' ತೆಪರೇಸಿ ಹೇಳಿದ.

'ಲೇ ತೆಪರ, ನಿನ್ ಮನಿ ಸಮಸ್ಯಿ ಬಗಿಹರಿಸೋಕೇ ಆಗ್ತಿಲ್ಲ ನಿನ್ ಕೈಯಾಗೆ... ಇನ್ನು ದೇಶದ ಸಮಸ್ಯಿ ಹೆಂಗ್ ಬಗೆಹರಿಸ್ತೀಲೆ?' ದುಬ್ಬೀರ ನಕ್ಕ.

'ವೆರಿ ಸಿಂಪಲ್, ಅನ್ನ ತಿಂದ್ರೆ ಶುಗರ್ ಬರ್ತತಿ ಅಂತ ಹೇಳಿ ಉತ್ತರ ಕರ್ನಾಟಕದ ಮಂದಿಗೆ ಜೋಳ, ಮೈಸೂರು ಕರ್ನಾಟಕದೋರಿಗೆ ರಾಗಿ ಕೊಟ್ಟು ಕೈ ಮುಗೀತಿದ್ದೆ'.

'ಮತ್ತೆ ಮಧ್ಯ ಕರ್ನಾಟಕದೋರಿಗೆ?'

'ಅವರಿಗೆ ಐತಲ್ಲ, ದಾವಣಗೆರೆ ಬೆಣ್ಣೆ ದೋಸೆ!'

'ಅದ್ಕೂ ಅಕ್ಕಿ ಬೇಕಲ್ಲೋ ತೆಪರಾ?'

ಕೊಟ್ರೇಶಿ ಕೊಕ್ಕೆಗೆ ಹರಟೆಕಟ್ಟೆಯಲ್ಲಿ ನಗುವಿನ ಅಲೆ ತೇಲಿತು.

ಸಂಗತ

ಶಾಲಾಬ್ಯಾಗ್ ಭಾರ: ಇರಲಿ ಕಾಳಜಿ

ಮಕ್ಕಳ ಶಾಲಾಬ್ಯಾಗ್ ಭಾರ ತಗ್ಗಿಸಲು ಇಲ್ಲಿವೆ ಪರಿಹಾರೋಪಾಯಗಳು...

• ಡಾ. ಕೆ.ಎಸ್.ಚೈತ್ರಾ

ಪುಟ್ಟ ಮಕ್ಕಳು ಬಸ್ ಹತ್ತಲು ಸಾಲಾಗಿ ಕಾಯುತ್ತಾ ನಿಂತಿದ್ದರು. ಬಸ್ ಬಂದದ್ದೇ ಗಡಿಬಿಡಿ ಶುರುವಾಯಿತು. ಹತ್ತಲು ಕಷ್ಟಪಡುತ್ತಿದ್ದ ಪುಟಾಣಿಗೆ ಸಹಾಯ ಮಾಡೋಣ ಎಂದು ಸ್ಕೂಲ್ ಬ್ಯಾಗನ್ನು ಎತ್ತಿಕೊಡಲು ಹೋದೆ. ಎತ್ತಲಾಗಲಿಲ್ಲ. ಕನಿಷ್ಠ ಐದರಿಂದ ಆರು ಕೆ.ಜಿ ತೂಕವಿತ್ತು. ಪುಟಾಣಿ, 'ಆಗಲ್ವಾ ಆಂಟಿ' ಅಂತ ನಕ್ಕಿತು!

ಹಾಗೆ ನೋಡಿದರೆ, ಶಾಲೆಗೆ ಹೋಗುವ ಎಲ್ಲ ಮಕ್ಕಳು ಬೆನ್ನ ಮೇಲೆ ಭಾರ ಹೊತ್ತು ಪರ್ವತಾರೋಹಿಗಳಂತೆ ಕಾಣುವುದು ವಾಸ್ತವದ ಸಂಗತಿ. ಈ ರೀತಿಯ ಹೊರೆ ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವ ಬಗ್ಗೆ ಬಹಳಷ್ಟು ಚರ್ಚೆಗಳು ನಡೆಯುತ್ತಲೇ ಇವೆ. ಹೀಗಿರುವಾಗ ಶಿಕ್ಷಣ ಇಲಾಖೆ ಇದೀಗ ಒಂದರಿಂದ ಹತ್ತನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಶಾಲಾಬ್ಯಾಗ್ ತೂಕ ನಿಗದಿ ಮಾಡಿ ಶಾಲೆಗಳಿಗೆ ಸೂಚನೆ ನೀಡಿರುವುದು ನಿಜಕ್ಕೂ ಒಳ್ಳೆಯ ಕ್ರಮ.

ಶಿಕ್ಷಣ ನೀಡುವ ಶಾಲೆಯಲ್ಲಿ ಓದು- ಬರಹ ಕಡ್ಡಾಯ. ಓದಲು ಪಠ್ಯಪುಸ್ತಕಗಳು, ಬರೆಯಲು ನೋಟ್‌ಬುಕ್‌ಗಳನ್ನು ತೆಗೆದುಕೊಂಡು ಹೋಗಲೇಬೇಕು. ಹಾಗೆಯೇ ಪೆನ್, ಪೆನ್ಸಿಲ್, ರಬ್ಬರ್, ಸ್ಕೇಲ್ ಮತ್ತಿತರ ಸಾಮಗ್ರಿಗಳೂ ಅಗತ್ಯವೇ. ಏನೇ ಆದರೂ, ಸ್ಕೂಲ್ ಬ್ಯಾಗ್‌ನ ತೂಕ, ಮಗುವಿನ ತೂಕದ ಶೇಕಡ 10ರಷ್ಟು ಮಾತ್ರ ಇರಬೇಕು. ಅಂದರೆ 20 ಕೆ.ಜಿ. ತೂಕದ ಮಗು ಹೊರುವ ಬ್ಯಾಗ್‌ನ ಭಾರ ಎರಡು ಕೆ.ಜಿ. ಮೀರಬಾರದು. ಆದರೆ ಈಗ ಹೊರತ್ತಿರುವ ಭಾರ ಆರು ಕೆ.ಜಿಗಳಷ್ಟು. ಅಂದರೆ ಮೂರು ಪಟ್ಟು ಹೆಚ್ಚು. ಒಂದರಿಂದ ಹತ್ತನೇ ತರಗತಿಯವರೆಗೆ ಈ ರೀತಿಯ ಭಾರವನ್ನು ಹೊತ್ತ ಮಕ್ಕಳ ಗತಿ ಏನಾಗಬೇಕು?

ಶಾಲೆಗೆ ಹೋಗುವ ಮಕ್ಕಳ ಮೂಳೆಗಳು ಸಂಪೂರ್ಣವಾಗಿ ಬೆಳೆದಿರುವುದಿಲ್ಲ. ಹಾಗೆಯೇ ಮಾಂಸ ಖಂಡಗಳು ಕೂಡ ಸಂಪೂರ್ಣ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಹೀಗಿರುವಾಗ ಮಿತಿಮೀರಿ ಭಾರವನ್ನು ಬೆನ್ನ ಮೇಲೆ ಹಾಕಿದಾಗ ಮಾಂಸಖಂಡಗಳಿಗೆ ದಣಿವಾಗುತ್ತದೆ. ಇದೇ ಕಾರಣಕ್ಕೆ ಶಾಲೆಗೆ ಹೋಗುವ ಮಕ್ಕಳು ಕೆಲವೊಮ್ಮೆ ರಾತ್ರಿಯ ವೇಳೆ ಬೆನ್ನುನೋವು ಎಂದು ಅಳುತ್ತವೆ, ಆಗಾಗ್ಗೆ ಶಾಲೆ ತಪ್ಪಿಸುತ್ತವೆ. ಇದರೊಂದಿಗೆ ಸಹಜವಾಗಿ 'ಎಸ್' ಆಕಾರದಲ್ಲಿರುವ ಬೆನ್ನು ಮೂಳೆಯ ಮೇಲೆ ಒತ್ತಡ ಹೆಚ್ಚಾಗಿ ಅದು ಸರಿಯಾಗಿ ಬೆಳೆಯದೆ ವಕ್ರವಾಗುವ ಸಾಧ್ಯತೆಯೂ ಇದೆ.

ಭಾರವಾದ ಬ್ಯಾಗನ್ನು ಒಂದು ಭುಜಕ್ಕೆ ಹಾಕಿ ಕಾಲನ್ನು ಎಳೆಯುತ್ತಾ ಮಕ್ಕಳು ಶಾಲೆಗೆ ಹೋಗುವುದು ಎಲ್ಲೆಡೆ ಕಾಣುವ ದೃಶ್ಯ. ಬ್ಯಾಗಿನ ತೂಕ ಹೆಚ್ಚಿದಂತೆಲ್ಲ ಅದನ್ನು ಹೊತ್ತಿರುವ ಭುಜ ಕೆಳಗೆ ಮತ್ತು ಮುಂದಕ್ಕೆ ಬರುವುದು ಸಹಜ. ಇನ್ನೊಂದು ಭುಜ ಇದ್ದಲ್ಲೇ ಇರುತ್ತದೆ. ದಿನವೂ ಅದೇ ಭುಜದ ಮೇಲೆ ಭಾರ ಬೀಳುತ್ತಲೇ ಇದ್ದಾಗ ಭುಜದ ಜತೆ ಕತ್ತು ಮತ್ತು ಬೆನ್ನಿನ ಮಾಂಸಖಂಡಗಳು ದುರ್ಬಲವಾಗಿ ಅಲ್ಲಿಯೂ ಸಮಸ್ಯೆ ಶುರುವಾಗುತ್ತದೆ. ನಮ್ಮ ದೇಹದ ಭಾರವನ್ನು ಹೊರುವ ಮುಖ್ಯ ಅಂಗಗಳೆಂದರೆ ಕಾಲುಗಳು. ಬೆನ್ನಿನ ಮೇಲೆ ಭಾರ ಹೆಚ್ಚಾದಾಗ ದೇಹ ಮುಂದೆ ಬಾಗುತ್ತದೆ. ಕಾಲಿನ ಮೇಲೆ ವಿಪರೀತ ಒತ್ತಡ ಹೆಚ್ಚುತ್ತದೆ. ಇದೆಲ್ಲದರ ಪರಿಣಾಮವಾಗಿ ಮಕ್ಕಳಲ್ಲಿ ಮಂಡಿ ನೋವು, ಕತ್ತಿನ ಸೆಳೆತ, ಕೈಗಳಲ್ಲಿ ಮರಗಟ್ಟುವಿಕೆ, ತಲೆ ಸುತ್ತು ಆಗಾಗ್ಗೆ ಕಾಣಿಸಿಕೊಳ್ಳಬಹುದು. ಭಾರವಾದ ಶಾಲಾಬ್ಯಾಗ್‌ಗಳನ್ನು ಹೊರುವ ಮಕ್ಕಳಲ್ಲಿ ಈ ಎಲ್ಲಾ ಸಮಸ್ಯೆಗಳು ಕಾಣಿಸಿಕೊಳ್ಳುವುದರಿಂದ ಇದಕ್ಕೆ 'ಸ್ಕೂಲ್ ಬ್ಯಾಗ್ ಸಿಂಡ್ರೋಮ್' ಎಂದೇ ಕರೆಯಲಾಗುತ್ತದೆ. ಇದು ಮುಂದುವರಿದಲ್ಲಿ ದೇಹದ ಸಮತೋಲನದಲ್ಲಿಯೇ ವ್ಯತ್ಯಾಸ ಕಾಣಿಸಿಕೊಳ್ಳುವ ಸಾಧ್ಯತೆ ಇದೆ.

ಹಾಗಾದರೆ ಮಕ್ಕಳ ಈ ಭಾರ ತಗ್ಗಿಸಲು ಪರಿಹಾರವೇನು? ತಜ್ಞರ ಪ್ರಕಾರ ಒಂದೇ ಭುಜದ ಮೇಲೆ ಧರಿಸುವ ಕಿರಿದಾದ ಪಟ್ಟಿ ಇರುವ ಬ್ಯಾಗ್‌ಗಳು ಮಕ್ಕಳಿಗೆ ಸೂಕ್ತವಲ್ಲ. ಬದಲಿಗೆ ಬೆನ್ನಿನ ಮೇಲೆ ಧರಿಸುವಂತಹ ಎರಡು ಪಟ್ಟಿಗಳಿರುವ ಬ್ಯಾಕ್‌ಪ್ಯಾಕ್‌ಗಳು ಉತ್ತಮ ಆಯ್ಕೆ. ಇದರಿಂದ ಭಾರ ಸಮಾನವಾಗಿ ಹಂಚಿಕೆಯಾಗುತ್ತದೆ. ಹಗುರವಾದ, ಒಳ್ಳೆಯ ಗುಣಮಟ್ಟದ ವಸ್ತುವಿನಿಂದ ಮಾಡಿದ ಮತ್ತು ಪಟ್ಟಿಗಳು ಅಗಲವಾಗಿರುವ ಬ್ಯಾಗ್ ಆರಿಸಬೇಕು. ಬ್ಯಾಗಿನಲ್ಲಿ ಪುಸ್ತಕ, ಊಟದ ಡಬ್ಬಿ, ಪೆನ್ಸಿಲ್ ಬಾಕ್ಸ್... ಇವುಗಳನ್ನು ಇಡಲು ಪ್ರತ್ಯೇಕ ಭಾಗಗಳು ಇದ್ದರೆ ಒಳ್ಳೆಯದು.



ಮಕ್ಕಳು ಬ್ಯಾಗ್‌ನಲ್ಲಿ ಬೇಕಾದ ವಸ್ತುಗಳನ್ನು ಸರಿಯಾಗಿ ಜೋಡಿಸಿಟ್ಟುಕೊಳ್ಳುವುದೂ ಮುಖ್ಯ. ಹಿಂದಿನ ದಿನವೇ ವೇಳಾಪಟ್ಟಿಯ ಪ್ರಕಾರ ಬೇಕಾದ ಪುಸ್ತಕ, ಪೆನ್ಸಿಲ್ ಬಾಕ್ಸ್ ಮುಂತಾದವುಗಳನ್ನು ಸರಿಯಾದ ಜಾಗದಲ್ಲಿ ಇಟ್ಟಾಗ ಭಾರ ಎಲ್ಲ ಕಡೆ ಹರಡುತ್ತದೆ. ಹಿಂದಿನ ದಿನದ ಹತ್ತು ನಿಮಿಷದ ಪೂರ್ವ ತಯಾರಿ ಅದೆಷ್ಟೋ ಭಾರ ತಗ್ಗಿಸುತ್ತದೆ, ಶಿಸ್ತನ್ನೂ ಕಲಿಸುತ್ತದೆ. ಸ್ಕೂಲ್ ಬ್ಯಾಗ್‌ಗಳನ್ನು ಎತ್ತಿಕೊಂಡು ಹೋಗುವಾಗ ದೇಹದ ಭಂಗಿ ಮತ್ತು ಹೊರುವ ರೀತಿಯೂ ಮುಖ್ಯ. ಸೊಂಟಕ್ಕಿಂತ ಕೆಳಗೆ ನಾಲ್ಕು ಇಂಚಿನ ಒಳಗೆ ಬ್ಯಾಗ್ ಇರಬೇಕು. ಬ್ಯಾಗ್‌ಗಳನ್ನು ಎತ್ತಿಕೊಂಡು ಹೋಗುವಾಗ ಹಿಂದೆ ಅಥವಾ ಮುಂದೆ ಬಾಗುವುದರ ಬದಲು ಬೆನ್ನನ್ನು ನೇರವಾಗಿಟ್ಟು ನಡೆಯುವುದನ್ನು ರೂಢಿಸಿಕೊಳ್ಳಬೇಕು.

ಮಕ್ಕಳಿಗೆ ಪಠ್ಯಕ್ರಮ ಏನೇ ಇದ್ದರೂ ಅಟ್ಲಾಸ್, ಶಬ್ದಕೋಶ, ಗ್ರಾಫ್‌ಬುಕ್, ಗ್ರಾಮರ್‌ಬುಕ್ ಇವೆಲ್ಲವೂ ದಿನವೂ ಬೇಕಾಗುತ್ತದೆ. ಇವುಗಳನ್ನು ಇಟ್ಟುಕೊಳ್ಳಲು ಶಾಲೆಯಲ್ಲಿ ಸಾಧ್ಯವಾದಲ್ಲಿ ಲಾಕರ್ ವ್ಯವಸ್ಥೆಯನ್ನು ನೀಡುವುದು ಸೂಕ್ತ. ಇಲ್ಲದಿದ್ದಲ್ಲಿ ಇಂತಹ ಅವಶ್ಯ ವಸ್ತುಗಳನ್ನು ಎಲ್ಲರಿಗೂ ಅನುಕೂಲವಾಗುವ ಹಾಗೆ ಶಾಲೆಗಳಲ್ಲಿಯೇ ಇಡುವ ವ್ಯವಸ್ಥೆ ಕಲ್ಪಿಸಬಹುದು. ಹಾಗೆಯೇ ಬೆಳಗಿನಿಂದ ಸಂಜೆಯವರೆಗೆ ಶಾಲೆಯಲ್ಲಿ ಇರುವ ಮಕ್ಕಳಿಗೆ ಕುಡಿಯಲು ಸಾಕಷ್ಟು ನೀರು ಬೇಕು. ಅದಕ್ಕಾಗಿ ಇಟ್ಟುಕೊಳ್ಳುವ ದೊಡ್ಡ ನೀರಿನ ಬಾಟಲ್ ಬ್ಯಾಗಿನಲ್ಲಿ ಸಾಕಷ್ಟು ಜಾಗ ಆಕ್ರಮಿಸುವುದಲ್ಲದೆ ಭಾರವನ್ನೂ ಹೆಚ್ಚಿಸುತ್ತದೆ. ಶಾಲೆಯಲ್ಲಿಯೇ ಶುದ್ಧ ಸ್ವಚ್ಛ ಕುಡಿಯುವ ನೀರಿನ ವ್ಯವಸ್ಥೆ ಮಾಡಿದಲ್ಲಿ ಈ ಹೊರೆಯನ್ನು ತಗ್ಗಿಸಲು ಖಂಡಿತವಾಗಿ ಸಾಧ್ಯವಿದೆ.

ಒಟ್ಟಿನಲ್ಲಿ ಶಿಕ್ಷಣದ ಗುಣಮಟ್ಟ ಹೆಚ್ಚಿಸುತ್ತಾ, ಬ್ಯಾಗಿನ ಭಾರ ತಗ್ಗಿಸುವುದೂ ಪೋಷಕರು, ಶಿಕ್ಷಕರು ಮತ್ತು ಸರ್ಕಾರದ ಹೊಣೆ.

ವಾಚಕರ ವಾಣಿ

ಸಚಿವೆ ಸ್ಥಾನದ ಘನತೆ ಅರಿತು ಮಾತನಾಡಲಿ

'ಗ್ಯಾರಂಟಿಗಳ ಭರವಸೆ ನೀಡುವಾಗ ನಿಮ್ಮ ತಲೆಯಲ್ಲಿ ಮೆದುಳು ಇರಲಿಲ್ಲವೇ, ಸಗಣಿ ತುಂಬಿತ್ತೇ' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ತುಂಬಾ ಒರಟಾಗಿ ಮಾತನಾಡಿದ್ದಾರೆ (ಪ್ರ.ವಾ., ಜೂನ್ 22). ಅವರ ಬಾಯಿಂದ ಯಾವಾಗಲೂ ಇದೇ ರೀತಿಯ ನುಡಿಮುತ್ತುಗಳು ಉದುರುತ್ತಿರುತ್ತವೆ. ಮೆದುಳು ಇಲ್ಲದೇ ಸಗಣಿ ತುಂಬಿರುವವರಿಗೆ ಜನ ಮತ ಕೊಟ್ಟು ಗೆಲ್ಲಿಸಿದ್ದಾರೆಯೇ? ಹೀಗೆ ಮಾತನಾಡುವುದು ರಾಜ್ಯದ ಜನರಿಗೆ ಮಾಡುವ ಅವಮಾನ ಎಂಬ ಅಂಶ ಸಚಿವೆಯ ತಲೆಯಲ್ಲಿರಲಿ. ಅವರು ತಾವು ಹೊಂದಿರುವ ಸ್ಥಾನಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಮಾತನಾಡುವುದನ್ನು ಮೊದಲು ಕಲಿತುಕೊಳ್ಳಲಿ!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ರಾಜಕೀಯದಾಚೆಗೂ ಆಗಲಿ ಚರ್ಚೆ

'ಅಕ್ಕಿ ಕೊಡಬಾರದು ಎಂದು ರಾಜ್ಯ ಬಿಜೆಪಿ ನಾಯಕರು ಕೇಂದ್ರದ ಮೇಲೆ ಒತ್ತಡ ಹೇರಿದ್ದಾರೆ...' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ದೂರಿದ್ದಾರೆ. ಅಕ್ಕಿ ಜಗಳ ಇದೀಗ ನಮ್ಮ ರಾಜ್ಯದಲ್ಲಿ ಬೀದಿಗೆ ಬಂದಿದ್ದು, ಇಲ್ಲಿ ಬರೀ ರಾಜಕೀಯ ಮಾತ್ರ ಚರ್ಚೆ ಆಗುತ್ತಿದೆ. ಆದರೆ ಇದರ ಆಚೆಗೆ ಒಕ್ಕೂಟ ತತ್ವ, ನೀತಿ, ನಿಯಮಾವಳಿ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧ, ಹೊಣೆಗಾರಿಕೆಯ ಕುರಿತೂ ಸಾರ್ವಜನಿಕವಾಗಿ ಚರ್ಚೆ ಆಗಬೇಕಿದೆ. ನಮ್ಮ ಬಹುತೇಕ ಮತದಾರರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧವೇ ಅರ್ಥ ಆಗುತ್ತಿಲ್ಲ. ಹೀಗಾಗಿ ಕೇಂದ್ರ ಮತ್ತು ರಾಜ್ಯದಲ್ಲಿ ಬೇರೆ ಬೇರೆ ಪಕ್ಷಗಳು ಅಧಿಕಾರಕ್ಕೆ ಬಂದಾಗಲೆಲ್ಲ ಈ ರೀತಿಯ ರಾಜಕೀಯ ತಿಕ್ಕಾಟ ಮುನ್ನೆಲೆಗೆ ಬರುತ್ತದೆ. ಅದರಿಂದಾಗಿ ಕೆಲವೊಮ್ಮೆ ಬಡವರ ಹೊಟ್ಟೆ ಮೇಲೆ ಬರೆ ಎಳೆದಂತಾಗುತ್ತಿದೆ. ಇದು ತಪ್ಪಬೇಕು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಹಿರಿಯರಿಗೆ ಸಂತಸ ತಂದ ನಡೆ

ಮುಜರಾಯಿ ಇಲಾಖೆ ಅಧೀನಕ್ಕೆ ಒಳಪಡುವ ಎ ಮತ್ತು ಬಿ ವರ್ಗದ ದೇವಸ್ಥಾನಗಳಲ್ಲಿ 65 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ದೇವರ ಶೀಘ್ರ ದರ್ಶನಕ್ಕೆ ವ್ಯವಸ್ಥೆ ಮಾಡಿರುವುದು ಸ್ವಾಗತಾರ್ಹ. ಧಾರ್ಮಿಕ ದತ್ತಿ ಇಲಾಖೆಯ ಈ ಕ್ರಮ, ಭಕ್ತಾದಿಗಳಲ್ಲಿ ಸಂತೋಷ ಉಂಟು ಮಾಡಿದೆ. ಸರತಿ ಸಾಲಿನಲ್ಲಿ ನಿಂತು ದರ್ಶನ ಪಡೆಯಲು ಹಿರಿಯರಿಗೆ ಕಷ್ಟವಾಗುತ್ತಿತ್ತು. ಅವರ ಕಷ್ಟ ಸರ್ಕಾರದ ಗಮನಕ್ಕೆ ತಡವಾಗಿಯಾದರೂ ಬಂದಿರುವುದು ಸಂತಸದ ಸಂಗತಿ.

ಭೀಮಾಶಂಕರ ದಾದೆಲಿ ಹಳಿಸಗರ, ಶಹಾಪುರ

'ಅನ್ನಭಾಗ್ಯ'ದಲ್ಲಿ ರಾಗಿ, ಜೋಳ: ಸ್ವಾವಲಂಬನೆಗೆ ಸೂತ್ರ

'ಅನ್ನಭಾಗ್ಯ'ದಲ್ಲಿ ರಾಗಿ, ಜೋಳ ವಿತರಿಸುವ ಸರ್ಕಾರದ ತೀರ್ಮಾನ ಶ್ಲಾಘನೀಯ. ಆದರೆ ಆರು ತಿಂಗಳ ವಿತರಣೆಗಷ್ಟೇ ಈ ಧಾನ್ಯಗಳು ಲಭ್ಯ ಇವೆ ಎಂದು ಸರ್ಕಾರ ಹೇಳಿದೆ. ಮುಂದಿನ ವರ್ಷದಿಂದ ಈ ಎರಡು ಧಾನ್ಯಗಳನ್ನು ಪಡಿತರದಲ್ಲಿ ತಲಾ ಐದು ಕೆ.ಜಿ. ವಿತರಿಸಲು ಸರ್ಕಾರಕ್ಕೆ ಕಷ್ಟವೇನಿಲ್ಲ. ಅದಕ್ಕಾಗಿ ಈ ವಿಚಾರದಲ್ಲಿ ಇರುವ ಕೆಲ ತೊಡಕುಗಳ ನಿವಾರಣೆಗೆ ಸರ್ಕಾರ ಈಗಿನಿಂದಲೇ ಮುಂದಾಗಬೇಕು.

ರಾಜ್ಯದಲ್ಲಿ ರೋಹಿಣಿ, ಮೃಗಶಿರ ಮಳೆಗಳ ವೈಫಲ್ಯದಿಂದಾಗಿ ಮುಂಗಾರಿನ ಜೋಳದ ಬಿತ್ತನೆಗೆ ಇದ್ದ ಅವಕಾಶ ತಪ್ಪಿಹೋಗಿದೆ. ಆದರೆ ತಡ ಮುಂಗಾರು ಮತ್ತು ಹಿಂಗಾರಿನಲ್ಲಿ ರಾಜ್ಯದ ಹಲವು ಭಾಗಗಳಲ್ಲಿ ವ್ಯಾಪಕವಾಗಿ ಬೆಳೆಯುವ ಜೋಳದ ಬಿತ್ತನೆಗೆ ಇನ್ನೂ ಅವಕಾಶವಿದೆ. ಹಾಗೆಯೇ ರಾಗಿಯ ಬಿತ್ತನೆಗೂ ಸಾಕಷ್ಟು ಕಾಲಾವಕಾಶವಿದೆ. ಆದ್ದರಿಂದ ಸರ್ಕಾರ ತಕ್ಷಣ ರೈತರಿಗೆ ಅವರು ಬೆಳೆದ ರಾಗಿ, ಜೋಳವನ್ನು ಬೆಂಬಲ ಬೆಲೆಯಲ್ಲಿ ಖರೀದಿಸುವುದಾಗಿ ಘೋಷಿಸಿದರೆ ರೈತರಿಗೆ ಉತ್ತೇಜನ ಸಿಕ್ಕಿದಂತಾಗುತ್ತದೆ. ಜೋಳಕ್ಕೆ ಕೇಂದ್ರ ಸರ್ಕಾರ ಘೋಷಿಸಿರುವ ಬೆಂಬಲ ಬೆಲೆಯ ಮೇಲೆ ರಾಜ್ಯ ಸರ್ಕಾರ ತನ್ನ ಪ್ರೀಮಿಯಂ ದರ ಸೇರಿಸಿ ಕ್ವಿಂಟಲ್‌ಗೆ ಕನಿಷ್ಠ ₹ 40,000 ಗೊತ್ತುಪಡಿಸಿದರೆ ಸರ್ಕಾರಕ್ಕೆ ಬೇಕಾಗಿರುವಷ್ಟು ಪ್ರಮಾಣದ ಜೋಳ ಸಿಗುವುದರಲ್ಲಿ ಸಂದೇಹವಿಲ್ಲ. ಹಾಗೆಯೇ ಧಾನ್ಯ ಖರೀದಿಸಿದ ವಾರದೊಳಗಾಗಿ ರೈತರಿಗೆ ಹಣ ಪಾವತಿಸುವ ಭರವಸೆ ನೀಡಬೇಕು. ಭತ್ತದ ವಿಚಾರದಲ್ಲೂ ಇಂಥದ್ದೇ ಕ್ರಮ ಕೈಗೊಂಡದ್ದೇ ಆದರೆ ಮುಂದಿನ ಸಾಲಿಗೆ ಪಡಿತರಕ್ಕೆ ಅಗತ್ಯವಾದ ಅಕ್ಕಿ ಪಡೆಯುವಲ್ಲಿ ನಮ್ಮ ಸರ್ಕಾರ ಸ್ವಾವಲಂಬನೆ ಸಾಧಿಸಬಹುದು. ಪೌಷ್ಟಿಕತೆಯ ಮಹತ್ವ ಹೊಂದಿರುವ ಇತರ ಸಿರಿಧಾನ್ಯ ಗಳನ್ನು (ಅವು ಯಾವುದೇ ಪ್ರಮಾಣದಲ್ಲಿ ಲಭ್ಯವಿದ್ದರೂ) ಖರೀದಿಸಿ ಅಂಗನವಾಡಿಗಳ ಮೂಲಕ ಶಿಶುಗಳು, ಮಕ್ಕಳು ಮತ್ತು ತಾಯಂದಿರಿಗೆ ವಿತರಿಸುವ ದಿಸೆಯಲ್ಲಿ ಕೂಡ ಸರ್ಕಾರ ಗಂಭೀರವಾಗಿ ಯೋಚಿಸಬೇಕಿದೆ.

ಸರ್ಕಾರ ಈಗಿಂದೀಗಲೇ ಇವುಗಳ ಖರೀದಿಗೆ ಬೇಕಾಗಿರುವ ಮೊತ್ತಕ್ಕೆ ಅಗತ್ಯವಿರುವ ವ್ಯವಸ್ಥೆ ಮಾಡಿಕೊಳ್ಳಬೇಕು ಮತ್ತು ಸಂಬಂಧಪಟ್ಟ ಇಲಾಖೆಗಳಿಗೆ ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಲು ಆದೇಶ ನೀಡಬೇಕು. ದೀರ್ಘಾವಧಿಯಲ್ಲಿ, ರಾಜ್ಯ ಸರ್ಕಾರವು ಭಾರತೀಯ ಆಹಾರ ನಿಗಮದಂತೆಯೇ (ಎಫ್‌ಸಿಐ) ಕರ್ನಾಟಕಕ್ಕೆ ಆಹಾರ ನಿಗಮವನ್ನು ರಚಿಸುವ ಮೂಲಕ ಪಡಿತರ ವ್ಯವಸ್ಥೆಯಲ್ಲಿ ಸರ್ವಸ್ವಾತಂತ್ರ್ಯ ಸಾಧಿಸಬಹುದು.

ಕೆ.ಪಿ.ಸುರೇಶ, ವಿ.ಗಾಯತ್ರಿ, ಎಸ್. ನವೀನ್, ಶಾರದಾ ಗೋಪಾಲ

('ನಮ್ಮೂರ ಭೂಮಿ ನಮಗಿರಲಿ; ಅನ್ಯರಿಗಲ್ಲ' ಆಂದೋಲನದ ಪರವಾಗಿ)

ಟಿಪ್ಪು ವ್ಯಕ್ತಿತ್ವಕ್ಕೆ ಕನ್ನಡಿ

ಟಿಪ್ಪು ಸುಲ್ತಾನ್ ಕುರಿತಾದ ಪಿ. ಸಾಯಿನಾಥ್ ಅವರ ಲೇಖನ (ಪ್ರ.ವಾ., ಜೂನ್ 7) ನಿಜಕ್ಕೂ ಮನಸ್ಸಿಗೆ ನೆಮ್ಮದಿ ನೀಡಿತು. 'ಆತ ಬಯಸಿದ್ದರೆ, ಹಿಂದಿನ ಕೆಲ ಅರಸರಂತೆ ಬ್ರಿಟಿಷರ ಅಡಿಯಾಳಾಗಿ ತನ್ನ ಅರಸುತನವನ್ನು ಉಳಿಸಿಕೊಳ್ಳಬಹುದಾಗಿತ್ತು' ಎಂಬ ಸಾಲುಗಳು ಟಿಪ್ಪುವಿನ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿ. ತನ್ನ ಆಡಳಿತದ ಅವಧಿಯಲ್ಲಿ ಕರ್ನಾಟಕವನ್ನು ಶ್ರೀಮಂತವಾಗಿಸಿದ್ದ ಟಿಪ್ಪು ನಾವಿರುವ ದೇವನಹಳ್ಳಿ ತಾಲ್ಲೂಕಿನಲ್ಲಿ ಹುಟ್ಟಿದವನು ಎಂಬುದು ನಮಗೆ ಹೆಮ್ಮೆ ಎನಿಸುತ್ತದೆ.

ದಿವಾಕರ ರಾವ್ ಕೆ., ಬೂದಿಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಸಮುದ್ರದಾಳಕ್ಕೆ ಇಳಿದ 'ಟೈಟನ್' ಇರುವುದೆಲ್ಲಿ?

ಟೈಟನ್

ಸಮುದ್ರದಲ್ಲಿ ಮಾನವನನ್ನು 4,000 ಮೀಟರ್‌ಗಳಷ್ಟು ಆಳಕ್ಕೆ ಕರೆದುಕೊಂಡು ಹೋಗಿ ವಾಪಸ್ ಬರಬಲ್ಲ ಕೆಲವೇ ನೌಕೆಗಳಲ್ಲಿ ಒಂದು ಎಂಬ ಹೆಗ್ಗಳಿಕೆಗೆ ಟೈಟನ್ ಪಾತ್ರವಾಗಿದೆ. ಸಮುದ್ರದ ಮೇಲ್ಮೈನಿಂದ 3,800 ಮೀಟರ್‌ಗಳಷ್ಟು ಆಳದಲ್ಲಿರುವ ಟೈಟಾನಿಕ್ ಅವಶೇಷಗಳತ್ತ ಈಗಾಗಲೇ ಹಲವು ಬಾರಿ ಯಶಸ್ವಿ ಸಂಚಾರ ನಡೆಸಿದೆ



22 ಅಡಿ ಉದ್ದ

9.2 ಅಡಿ ಅಗಲ

8.3 ಅಡಿ ಎತ್ತರ

ಒಬ್ಬ ಪೈಲಟ್ ಮತ್ತು ನಾಲ್ವರು ಯಾತ್ರಿಕರನ್ನು ಕರೆದೊಯ್ಯುವ ಸಾಮರ್ಥ್ಯ

ನೌಕೆಯ ಒಳಗೆ ಯಾವುದೇ ಕುರ್ಚಿಗಳಿಲ್ಲ. ಯಾತ್ರಿಕರು ನೌಕೆಯ ನೆಲದಲ್ಲೇ ಕೂರಬೇಕು. ಎದ್ದು ನಿಲ್ಲಲೂ ಅವಕಾಶವಿಲ್ಲ



• ಜಯಸಿಂಹ ಆರ್.

'ನಮಗೆ ಸಮುದ್ರದ ತಳದ ಬಗ್ಗೆ ಗೊತ್ತಿರುವುದಕ್ಕಿಂತ, ಚಂದ್ರನ ಮೇಲ್ಮೈ ಬಗ್ಗೆ ಹೆಚ್ಚು ತಿಳಿದಿದೆ. ಏಕೆಂದರೆ, ಸಮುದ್ರದ ತಳವನ್ನು ನಾವಿನ್ನೂ ಇಡಿಯಾಗಿ ನೋಡಿಯೇ ಇಲ್ಲ'- ಬ್ರಿಟನ್‌ನ ಕೀಲ್ ವಿಶ್ವವಿದ್ಯಾಲಯದ ಭೂಗೋಳ ವಿಜ್ಞಾನಿ ಜೇಮ್ ಪ್ರಿಂಗ್ಲೆ ಅವರ ಮಾತಿದು. ಚಂದ್ರನ ಮೇಲ್ಮೈಗೆ ಮಾನವನನ್ನು ಕಳುಹಿಸುವ ತಂತ್ರಜ್ಞಾನ ಮತ್ತು ಸವಲತ್ತುಗಳು ಬಳಕೆಗೆ ಬಂದು ನಾಲ್ಕಾರು ದಶಕಗಳೇ ಕಳೆದಿವೆ. ಆದರೆ, ಸಮುದ್ರದ ಅತ್ಯಂತ ಆಳಕ್ಕೆ ಮಾನವನನ್ನು ಕರೆದೊಯ್ದು, ವಾಪಸ್ ಕರೆತರಬಲ್ಲ ಸಾಧನಗಳನ್ನು ಈವರೆಗೆ ಅಭಿವೃದ್ಧಿಪಡಿಸಲು ಸಾಧ್ಯವಾಗಿಲ್ಲ. ಅತ್ಯಂತ ತಳದವರೆಗೆ ಅಲ್ಲದಿದ್ದರೂ, ನಾಲ್ಕು ಕಿ.ಮೀ.ನಷ್ಟು ಆಳಕ್ಕೆ ಕರೆದೊಯ್ಯಬಲ್ಲ ಕೆಲವೇ ನೌಕೆಗಳು ಜಗತ್ತಿನಲ್ಲಿವೆ. ಅಂತಹ ನೌಕೆಯೊಂದರ ಒಳಗೆ ಕೂತು, ಸಮುದ್ರದಾಳದಲ್ಲಿ ಬಿದ್ದಿರುವ ಟೈಟಾನಿಕ್ ಹಡಗಿನ ಅವಶೇಷಗಳನ್ನು ನೋಡುವ ಸಾಹಸಕ್ಕೆ ಕೆಲವು ಮಂದಿ ಈಚೆಗೆ ಮುಂದಾಗಿದ್ದರು. ಅವರನ್ನು ಹೊತ್ತಿದ್ದ ಆ ನೌಕೆಯೇ ಈಗ ನಾಪತ್ತೆಯಾಗಿದೆ.

ಭೂಮಿಯ ಮುಕ್ಕಾಲುಪಾಲು ಪ್ರದೇಶವನ್ನು ಆವರಿಸಿರುವ ಸಮುದ್ರ ತನ್ನ ಒಡಲೊಳಗೆ ಹಲವಾರು ರಹಸ್ಯಗಳನ್ನು ಅಡಗಿಸಿಕೊಂಡಿದೆ. ಈ ಕಾರಣದಿಂದಲೇ, ಆಳ ಸಮುದ್ರದ ಸಂಶೋಧನೆ, ಸರ್ವೇಕ್ಷಣೆ ಮತ್ತು ಪ್ರವಾಸಕ್ಕೆ ಎಲ್ಲಿಲ್ಲದ ಬೇಡಿಕೆ. ಸಮುದ್ರಗಳ ಬಗ್ಗೆ ಹೆಚ್ಚು ತಿಳಿಯದೇ ಇರುವ ಕಾರಣಕ್ಕೇ, ಕುತೂಹಲಿ ಮಾನವನನ್ನು ಅವು ಸೂಜಿಗಲ್ಲಿನಂತೆ ಸೆಳೆಯುತ್ತಿವೆ. ಸಮುದ್ರದಾಳದ ಜೀವಿ ಇರಬಹುದು, ಸಮುದ್ರದ ತಳದಲ್ಲಿರುವ ಖನಿಜ ನಿಕ್ಷೇಪಗಳಿರಬಹುದು ಮತ್ತು ಅವಘಡಗಳ ಕಾರಣಕ್ಕೆ ಮುಳುಗಿ, ಸಮುದ್ರದ ತಳ ಸೇರಿದ ಹಡಗು–ದೋಣಿಗಳ ಅವಶೇಷಗಳಿರಬಹುದು. ಈ ರೀತಿ ಅತ್ಯಂತ ಕುತೂಹಲ ಉಳಿಸಿಕೊಂಡಿರುವ ಅವಶೇಷಗಳಲ್ಲಿ ಅತ್ಯಂತ ಪ್ರಮುಖವಾದುದು ಟೈಟಾನಿಕ್.

1997ರಲ್ಲಿ ತೆರೆಗೆ ಬಂದಿದ್ದ ಟೈಟಾನಿಕ್ ಸಿನಿಮಾ ಬಹುತೇಕರಿಗೆ ನೆನಪಿರಬಹುದು. ಜಾಕ್ ಮತ್ತು ರೋಸ್ ನಡುವಣ ಪ್ರೇಮ, ಅತ್ಯಂತ ಅಮೂಲ್ಯವಾದ ವಜ್ರದ ಹಾರ, ಹಿಮಗಡ್ಡೆಗೆ ಬಡಿದು ಹೋಳಾದ ಹಡಗು ಮತ್ತು ಸಾವಿರಾರು ಮಂದಿ ಬಲಿಯಾಗುವ ದೃಶ್ಯಗಳು ಈಗಲೂ ಕಣ್ಣಿಗೆ ಕಟ್ಟಿದಂತಿವೆ. ಈ ಟೈಟಾನಿಕ್ ಹಡಗಿನ ದುರಂತವು ನೈಜ ಘಟನೆಯಾಗಿದ್ದ ಕಾರಣ, ಅಂದು ಮುಳುಗಿದ ಹಡಗು ಏನಾಗಿರಬಹುದು ಎಂಬ ಕುತೂಹಲ ಬಹುತೇಕರದ್ದು.

1912ರಲ್ಲಿ ಅತ್ಯಾಧುನಿಕ ಮತ್ತು ಎಂದಿಗೂ ಮುಳುಗದ ನೌಕೆ ಎಂದು ಹೆಸರಾಗಿದ್ದ 'ಆರ್‌ಎಂಎಸ್ ಟೈಟಾನಿಕ್' ಹಡಗು ತನ್ನ ಮೊದಲ ಪ್ರಯಾಣದಲ್ಲೇ ಸಮುದ್ರದ ತಳ ಸೇರಿತ್ತು. ಅದರ ಅವಶೇಷಗಳನ್ನು ಪತ್ತೆ ಮಾಡುವ ಸಂಬಂಧ ನಡೆದ ಹಲವು ಶೋಧ ಕಾರ್ಯಾಚರಣೆಗಳು ವಿಫಲವಾಗಿದ್ದವು. ಟೈಟಾನಿಕ್‌ನಲ್ಲಿದ್ದ ಪ್ರಯಾಣಿಕರೊಬ್ಬರ ಬಳಿ ಇತ್ತು ಎನ್ನಲಾದ 'ಮೆಗ್‌ಲಾಡನ್' ಕಂಠೀಹಾರವನ್ನು (30 ಲಕ್ಷದಿಂದ 3.6 ಕೋಟಿ ವರ್ಷಗಳ ಹಿಂದೆ ಬದುಕಿದ್ದ ಮೆಗ್‌ಲಾಡನ್ ಶಾರ್ಕ್‌ನ ಹಲ್ಲಿನಿಂದ ತಯಾರಿಸಲಾದ ಕಂಠೀಹಾರ. ಸಿನಿಮಾದಲ್ಲಿ ಇದನ್ನು ವಜ್ರದ ಹಾರ ಎಂದು ತೋರಿಸಲಾಗಿದೆ) ಪತ್ತೆ ಮಾಡಲು ಪ್ರಯತ್ನಿಸಿ ಹಣ ಕಳೆದುಕೊಂಡ ಸಾವಿರಾರು ಮಂದಿ ಇದ್ದಾರೆ. ಈ ರೀತಿಯ ಸಾವಿರಾರು ಪ್ರಯತ್ನಗಳ ಫಲವಾಗಿ ಕೊನೆಗೊಮ್ಮೆ ಟೈಟಾನಿಕ್‌ನ ಅವಶೇಷಗಳನ್ನು ಪತ್ತೆ ಮಾಡಲಾಯಿತು. ಅದೂ 73 ವರ್ಷಗಳ ನಂತರ ಅಂದರೆ, 1985ರಲ್ಲಿ. ಆನಂತರ ಟೈಟಾನಿಕ್ ಬಗೆಗಿನ ಕುತೂಹಲ ಹೆಚ್ಚುತ್ತಲೇ ಹೋಯಿತು.

ಸಮುದ್ರದ ಮೇಲ್ಮೈನಿಂದ 3,800 ಮೀಟರ್‌ಗಳಷ್ಟು ತಳದಲ್ಲಿ ಟೈಟಾನಿಕ್ ಅವಶೇಷವಿತ್ತು. ಅತ್ಯಾಧುನಿಕ ಕ್ಯಾಮೆರಾಗಳನ್ನು ಹೊತ್ತು ಅಲ್ಲಿಗೆ ಹೋಗಿ ಬರಬಲ್ಲ ಹಲವಾರು ಮಾನವರಹಿತ ಜಲಾಂತರ್ಗಾಮಿ ನೌಕೆಗಳನ್ನು ಅಭಿವೃದ್ಧಿಪಡಿಸಲಾಯಿತು. ಅವುಗಳ ಮೂಲಕ ಟೈಟಾನಿಕ್‌ನ ಅವಶೇಷಗಳ ಚಿತ್ರ ಮತ್ತು ವಿಡಿಯೊಗಳನ್ನು ಸೆರೆಹಿಡಿಯಲಾಯಿತು. 1986ರಲ್ಲೇ ಮಾನವರನ್ನು ಹೊತ್ತ ನೌಕೆ ಮೊದಲ ಬಾರಿ ಟೈಟಾನಿಕ್ ಅವಶೇಷಕ್ಕೆ ಭೇಟಿ ನೀಡಿಬಂತು. ಆನಂತರ ಪ್ರವಾಸಕ್ಕೆಂದು ಜನರನ್ನೂ ಅಲ್ಲಿಗೆ ಕರೆದೊಯ್ಯುವ ಯತ್ನಗಳು ಹೆಚ್ಚು ನಡೆದವು. ಅಂತಹ ಸಾಹಸಕ್ಕೆ ಕೈಹಾಕಿದ ಕಂಪನಿಗಳಲ್ಲಿ ಓಷನ್‌ಗೇಟ್ ಸಹ ಒಂದು. ಆ ಯತ್ನದಲ್ಲಿ ಓಷನ್‌ಗೇಟ್ ಯಶಸ್ವಿಯೂ ಆಯಿತು. ಅದಕ್ಕಾಗಿ ಓಷನ್‌ಗೇಟ್ ಅಭಿವೃದ್ಧಿಪಡಿಸಿದ 'ಟೈಟನ್' ಎಂಬ ಸಬ್‌ಮರ್ಸಿಬಲ್ ನೌಕೆ 2021ರಲ್ಲಿ ಟೈಟಾನಿಕ್ ಅವಶೇಷಗಳತ್ತ ನಾಲ್ವರು ಸಂಶೋಧಕರನ್ನು ಕರೆದುಕೊಂಡು ಹೋಗಿಬಂತು. 2022ರಲ್ಲಿ ಎರಡನೇ ಕಾರ್ಯಾಚರಣೆ ನಡೆಸಲಾಯಿತು. 2023ರ ಮೂರನೇ ಕಾರ್ಯಾಚರಣೆಗೆ 2022ರಿಂದಲೇ ಸಿದ್ಧತೆ ನಡೆಸಲಾಗಿತ್ತು. ಅದರಂತೆ ಜೂನ್ ಮೂರನೇ ವಾರದಲ್ಲಿ ಒಬ್ಬ ಪೈಲಟ್ ಮತ್ತು ಬ್ರಿಟನ್‌ನ ನಾಲ್ವರು ಉದ್ಯಮಿಗಳನ್ನು ಹೊತ್ತು ಅಂಟ್ಲಾಂಟಿಕ್ ಒಡಲಿಗೆ ಧುಮುಕಿತ್ತು. ಯಾತ್ರೆ ಆರಂಭಿಸಿದ ಒಂದೂಮುಕ್ಕಾಲು ತಾಸಿನಲ್ಲೇ 'ಟೈಟನ್' ತನ್ನ ಮಾತೃ ನೌಕೆಯೊಂದಿಗಿನ ಸಂಪರ್ಕ ಕಡಿದುಕೊಂಡಿದೆ.

ಅಮೆರಿಕ, ಕೆನಡಾ, ಫ್ರಾನ್ಸ್, ಬ್ರಿಟನ್‌ನ ರಕ್ಷಣಾ ತಂಡಗಳು 'ಟೈಟನ್'ನ ಪತ್ತೆಗೆ ಕಾರ್ಯಾಚರಣೆ ನಡೆಸುತ್ತಿವೆ. ಈ ವರದಿ ಬರೆಯುವ ಹೊತ್ತಿಗೆ, ಸಮುದ್ರದಾಳದಲ್ಲಿ ಒಂದು ಸದ್ದನ್ನು ಸೋನಾರ್ ಯಂತ್ರಗಳು ಗ್ರಹಿಸಿದ್ದವು. ಆ ಸದ್ದು ಬಂದತ್ತ ರಕ್ಷಣಾ ತಂಡಗಳು ಧಾವಿಸಿದ್ದವು. ಕೆಲವೇ ಗಂಟೆಗಳಲ್ಲಿ ಸಮುದ್ರದಾಳದಿಂದ ವಾಪಸ್ ಬರಬೇಕಿದ್ದ ಟೈಟನ್ ನೌಕೆ, ಮೂರು ದಿನ ಕಳೆದರೂ ಪತ್ತೆಯಾಗಿಲ್ಲ.

ಆಧಾರ: ಓಷನ್‌ಗೇಟ್ ಇಂಕ್, ರಾಯಿಟರ್ಸ್, ಬಿಬಿಸಿ

ರಕ್ಷಣಾ ಕಾರ್ಯಚರಣೆ ಹೇಗೆ

ಟೈಟನ್ ನೌಕೆ ಎಲ್ಲಿದೆ ಎಂಬುದರ ಬಗ್ಗೆ ಸ್ವಲ್ಪವೂ ಸುಳಿವಿಲ್ಲ. ತುರ್ತು ಸಂದರ್ಭದಲ್ಲಿ ಸಮುದ್ರದ ಮೇಲ್ಮೈಗೆ ಬರುವ ಸವಲತ್ತು ಟೈಟನ್‌ನಲ್ಲಿ ಇದೆ. ಅದೂ ವಿಫಲವಾಗಿದ್ದರೆ ಕಾರ್ಯಾಚರಣೆ ಕಷ್ಟವಾಗುತ್ತದೆ. ಟೈಟನ್ ಸಮುದ್ರದ ತಳ ಸೇರಿದ್ದರೆ ಮತ್ತು ಅದು ಸಮುದ್ರದ ಮೇಲ್ಮೈನಲ್ಲಿದ್ದರೆ ಎಂಬ ಎರಡೂ ದಿಸೆಯಲ್ಲಿ ಪತ್ತೆ ಕಾರ್ಯ ನಡೆಸಲಾಗುತ್ತಿದೆ. ಆ ಕಾರ್ಯಾಚರಣೆಗಳ ಸಾಧಕ–ಬಾಧಕಗಳು ಇಂತಿವೆ.



1. ತಳ ಸೇರಿದ್ದರೆ

ಟೈಟಾನಿಕ್ ಅವಶೇಷ ಇರುವ ಪ್ರದೇಶದ ಸರಾಸರಿ ಆಳವು 3,800 ಮೀಟರ್ (12,500 ಅಡಿ). ಅಷ್ಟು ಆಳಕ್ಕೆ ಸೂರ್ಯನ ರಶ್ಮಿ ಒಂದಿನಿತೂ ತಲುಪುವುದಿಲ್ಲ. ಅಂತಹ ಪ್ರದೇಶದಲ್ಲಿ ಟೈಟನ್ ಸಿಲುಕಿದ್ದರೆ, ಅದನ್ನು ಪತ್ತೆ ಮಾಡುವುದೇ ಕಷ್ಟದ ಕೆಲಸ ಎಂಬುದು ತಜ್ಞರ ಅಭಿಪ್ರಾಯ. ಅಷ್ಟು ಆಳದಲ್ಲಿ ಟೈಟನ್ ಸಿಲುಕಿದ್ದರೆ ಅದನ್ನು ಪತ್ತೆ ಮಾಡಬಹುದಷ್ಟೇ, ಮೇಲಕ್ಕೆ ತರುವುದು ಸಾಧ್ಯವೇ ಇಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಸಾಧ್ಯತೆಗಳು

- ಕ್ಯಾಮೆರಾ ಮತ್ತು ಸೋನಾರ್ ಯಂತ್ರಗಳಿರುವ ಮಾನವರಹಿತ ಸಬ್‌ಮರ್ಸಿಬಲ್ ನೌಕೆಗಳನ್ನು ಅಲ್ಲಿಗೆ ಕಳುಹಿಸಿ, ಪೈಲಟ್ ಮತ್ತು ಯಾತ್ರಿಕರ ಸ್ಥಿತಿಗತಿಯನ್ನು ಪರಿಶೀಲಿಸಬಹುದು
- ಟೈಟನ್ ನೌಕೆಯ ಚಿತ್ರಗಳನ್ನು ಸೆರೆ ಹಿಡಿಯಬಹುದು ಮತ್ತು ವಿಡಿಯೊ ಚಿತ್ರೀಕರಣ ಮಾಡಬಹುದು

ಸವಾಲುಗಳು


- 3,800 ಮೀಟರ್ ಆಳದಲ್ಲಿ ಉಷ್ಣಾಂಶವೇ ಇರುವುದಿಲ್ಲ. ಅಂತಹ ಥಂಡಿಯ ಪ್ರದೇಶದಲ್ಲಿ ಇಷ್ಟು ದೀರ್ಘಾವಧಿಯವರೆಗೆ 'ಟೈಟನ್' ನೌಕೆಯ ಬ್ಯಾಟರಿಗಳು, ಎಲೆಕ್ಟ್ರಾನಿಕ್ ಉಪಕರಣಗಳು ಕಾರ್ಯನಿರ್ವಹಿಸುತ್ತವೆಯೇ ಎಂಬುದರ ಬಗ್ಗೆ ಮಾಹಿತಿ ಇಲ್ಲ
- ಅಷ್ಟು ಆಳದಲ್ಲಿ ಒಂದು ನೌಕೆ ಇರುವಾಗ, ಅದರ ಮೇಲೆ ಇರುವ ಲಕ್ಷಾಂತರ ಟನ್‌ಗಳಷ್ಟು ನೀರಿನ ಭಾರ ಮತ್ತು ಒತ್ತಡವನ್ನು ಅದು ತಡೆದುಕೊಳ್ಳಬೇಕು. ಹಾಗೆ ತಡೆದುಕೊಳ್ಳುವುದರಲ್ಲಿ ನೌಕೆಯ ಕವಚ ವಿಫಲವಾದರೆ, ಅದು ಕಾಗದದಂತೆ ಮುದುಡಿ ಹೋಗುತ್ತದೆ
- ಅಷ್ಟು ಆಳದಲ್ಲಿ ನೌಕೆ ಸಿಲುಕಿದ್ದರೆ, ಅಷ್ಟು ಆಳಕ್ಕೆ ಹೋಗಿ ಆ ನೌಕೆಯನ್ನು ಮೇಲಕ್ಕೆ ಎಳೆದು ತರಬಲ್ಲ ಸಾಮರ್ಥ್ಯವಿರುವ ಯಾವುದೇ ನೌಕೆ ಜಗತ್ತಿನಲ್ಲಿ ಇಲ್ಲ. ಹೀಗಾಗಿ ಅಂತಹ ನೌಕೆಯನ್ನು ಮೇಲಕ್ಕೆ ಎತ್ತಿ ತರಲು ಸಾಧ್ಯವೇ ಇಲ್ಲ
- ಅಷ್ಟು ಆಳದಲ್ಲಿನ ನೀರಿನ ಒತ್ತಡವನ್ನು ತಡೆದು ಕೊಳ್ಳಬಲ್ಲಂತಹ 'ಮುಳುಗು ತೊಡುಗೆ'ಗಳನ್ನು ಈವರೆಗೂ ಅಭಿವೃದ್ಧಿಸಿಲ್ಲ. ಹೀಗಾಗಿ ಅಷ್ಟು ಆಳಕ್ಕೆ ಹೋಗಿ ನೌಕೆಯನ್ನು ಒಡೆದು, ಯಾತ್ರಿಕರನ್ನು ಮೇಲಕ್ಕೆ ಕರೆತರುವ ಸಾಧ್ಯತೆ ಇಲ್ಲ



ಟೈಟಾನಿಕ್ ಅವಶೇಷ

2. ಸಮುದ್ರದ ಮೇಲ್ಮೈಗೆ ಬಂದಿದ್ದರೆ...

ತುರ್ತು ಸಂದರ್ಭದಲ್ಲಿ ದಿಢೀರ್ ಎಂದು ಸಮುದ್ರದ ಮೇಲ್ಮೈಗೆ ಬರುವ ಸವಲತ್ತು 'ಟೈಟನ್' ನೌಕೆಯಲ್ಲಿದೆ. ಮಾತೃ ನೌಕೆಯೊಂದಿಗೆ ಸಂಪರ್ಕ ಕಡಿದುಕೊಂಡ ತಕ್ಷಣವೇ ಪೈಲಟ್ ಆ ಸವಲತ್ತನ್ನು ಬಳಸಿಕೊಂಡಿದ್ದರೆ, ಟೈಟನ್ ನೌಕೆಯು ಸಮುದ್ರದ ಮೇಲ್ಮೈಗೆ ಬಂದು ತೇಲುತ್ತಿರುತ್ತದೆ. ಹೀಗೆ ಆಗಿರುವ ಸಾಧ್ಯತೆಯೇ ಹೆಚ್ಚು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ



ಸಾಧ್ಯತೆಗಳು

- ಟೈಟನ್ ನೌಕೆಯು ಸಮುದ್ರದ ಮೇಲ್ಮೈನಲ್ಲಿ ಇದ್ದರೆ, ವಿಮಾನ, ಹೆಲಿಕಾಪ್ಟರ್, ಹಡಗುಗಳ ಮೂಲಕ ಸರ್ವೇಕ್ಷಣೆ ನಡೆಸಿ ಅದನ್ನು ಹುಡುಕಬಹುದು
- ಸಮುದ್ರದ ಮೇಲ್ಮೈನಲ್ಲಿ ಇರುವ ಕಾರಣ ನೌಕೆ ಛಿದ್ರವಾಗುವ ಅಥವಾ ಧ್ವಂಸವಾಗುವ ಸಾಧ್ಯತೆ ತೀರಾ ಕಡಿಮೆ

ಸವಾಲುಗಳು

- ಕೇವಲ 22 ಅಡಿಯಷ್ಟು ಉದ್ದವಿರುವ ಈ ನೌಕೆಯು ಒಂದು ಎಸ್‌ಯುವಿಯ ಗಾತ್ರದಷ್ಟಿದೆ. ಲಕ್ಷಾಂತರ ಚದರ ಕಿ.ಮೀ. ವಿಸ್ತೀರ್ಣದ ಸಮುದ್ರದ ಮೇಲ್ಮೈನಲ್ಲಿ ಅಷ್ಟು ಸಣ್ಣ ಗಾತ್ರದ ನೌಕೆಯನ್ನು ಬರಿಗಣ್ಣಿನಿಂದ ಹುಡುಕುವುದು ಅತ್ಯಂತ ಕಷ್ಟ. ನೌಕೆ ಸಂಪರ್ಕ ಕಡಿದುಕೊಂಡಿದ್ದರೆ, ಅದನ್ನು ಪತ್ತೆ ಮಾಡಲು ಸಾಧ್ಯವೇ ಇಲ್ಲ ಎನ್ನಬಹುದು
- ನೌಕೆಯಲ್ಲಿ 96 ಗಂಟೆಗಳಿಗೆ ಆಗುವಷ್ಟು ಮಾತ್ರ ಆಮ್ಲಜನಕವಿತ್ತು. ನೌಕೆಯ ಬಾಗಿಲನ್ನು ಹೊರಗಿನಿಂದ ನಟ್–ಬೋಲ್ಟ್ ಹಾಕಿ ಸೀಲ್ ಮಾಡಲಾಗಿದೆ. ನೌಕೆ ಸಮುದ್ರದ ಮೇಲ್ಮೈಗೆ ಬಂದಿದ್ದರೂ, ಒಳಗಿರುವ ಯಾತ್ರಿಕರು ಬಾಗಿಲು ತೆರೆದುಕೊಂಡು ಹೊರಗೆ ಬರಲು ಸಾಧ್ಯವೇ ಇಲ್ಲ. ಹೀಗಾಗಿ ಆಮ್ಲಜನಕದ ಸಂಗ್ರಹ ಖಾಲಿಯಾದಾಗ ಯಾತ್ರಿಕರೆಲ್ಲಾ ಮೃತಪಡುವ ಅಪಾಯ ಅತ್ಯಧಿಕವಾಗಿದೆ
- ಪತ್ತೆ ಮಾಡುವುದು ವಿಳಂಬವಾದಷ್ಟೂ, ನೌಕೆ ದೂರಕ್ಕೆ ತೇಲಿ ಹೋಗುವ ಸಾಧ್ಯತೆ ಹೆಚ್ಚು. ಆಗ ಸರ್ವೇಕ್ಷಣಾ ಕಾರ್ಯಾಚರಣೆಯ ವ್ಯಾಪ್ತಿ ಹೆಚ್ಚಾಗುತ್ತದೆ. ಅದರಿಂದ ನೌಕೆ ಪತ್ತೆಯಾಗುವ ಸಾಧ್ಯತೆ ಕ್ಷೀಣಿಸುತ್ತಾ ಹೋಗುತ್ತದೆ

ಆಮ್ಲಜನಕ ಕೊರತೆ: ಜೀವ ಉಳಿಯುವುದೇ?

ಟೈಟನ್ ನೌಕೆಯು ವಿಹಾರಕ್ಕೆ ಹೊರಟಾಗ ಅದರಲ್ಲಿ 96 ತಾಸುಗಳಿಗೆ ಬೇಕಾದಷ್ಟು ಆಮ್ಲಜನಕ ಇತ್ತು. ನೌಕೆಯು ಭಾನುವಾರ ತನ್ನ ಸಂಚಾರ ಆರಂಭಿಸಿದೆ. ಹೀಗಾಗಿ, ಗುರುವಾರದ ಹೊತ್ತಿಗೆ ನೌಕೆಯಲ್ಲಿದ್ದ ಆಮ್ಲಜನಕ ಮುಗಿದು ಹೋಗಬಹುದು ಎಂದು ಲೆಕ್ಕ ಹಾಕಲಾಗಿದೆ. ಆಮ್ಲಜನಕವು ಪೂರ್ತಿ ಖಾಲಿಯಾದರೆ, ಟೈಟನ್‌ನಲ್ಲಿರುವವರು ಬದುಕುಳಿಯುವ ಸಾಧ್ಯತೆ ಎಷ್ಟು? ಆಮ್ಲಜನಕ ಕೊರತೆ ಇದ್ದರೂ ಬದುಕುಳಿಯಲು ಮಾರ್ಗಗಳಿವೆಯೇ ಎನ್ನುವ ಚರ್ಚೆಯನ್ನು ವಿಜ್ಞಾನಿಗಳು ಮಾಡುತ್ತಿದ್ದಾರೆ. ಏನೇ ಆದರೂ ರಕ್ಷಣಾ ಕಾರ್ಯವನ್ನು ಮುಂದುವರಿಸಲಾಗಿದೆ.

- ನೌಕೆಯು ಸಮುದ್ರದಾಳ ಸೇರಿದ್ದರೆ ಅಲ್ಲಿ ಶೂನ್ಯ ಡಿಗ್ರಿ ಸೆಲ್ಸಿಯಸ್‌ಗಿಂತಲೂ ಕಡಿಮೆ ಉಷ್ಣಾಂಶ ಇರುತ್ತದೆ. ಆಗ ಆಮ್ಲಜನಕದ ಬಳಕೆ ಹೆಚ್ಚಾಗಬಹುದು. ಅದರಿಂದ ಅವಧಿಗೂ ಮುನ್ನವೇ ಆಮ್ಲಜನಕ ಖಾಲಿಯಾಗಿರುವ ಅಪಾಯವಿದೆ
- ಇಂಗಾಲದ ಡೈಆಕ್ಸೈಡ್ ಅನ್ನು ಹೊರಹಾಕುವ ಯಾವುದೇ ವ್ಯವಸ್ಥೆಯು ಟೈಟನ್‌ನಲ್ಲಿ ಇಲ್ಲ. ನೌಕೆಯಲ್ಲಿರುವ ಆಮ್ಲಜನಕ ಖಾಲಿಯಾದರೆ, ಅದರಲ್ಲಿರುವ ಯಾತ್ರಿಕರು ಇಂಗಾಲದ ಡೈ ಆಕ್ಸೈಡ್ ಅನ್ನೇ ಉಸಿರಾಡಬೇಕಾಗುತ್ತದೆ. ದೀರ್ಘ ಕಾಲದ ವರೆಗೆ ಇಂಗಾಲದ ಡೈ ಆಕ್ಸೈಡ್ ಉಸಿರಾಡಿದರೆ ಬಹುಅಂಗಾಂಗ ವೈಫಲ್ಯ ಆಗುವ ಅಪಾಯವಿರುತ್ತದೆ. ಅಂತಿಮವಾಗಿ ಸಾವೂ ಸಂಭವಿಸಬಹುದು
- ಆಮ್ಲಜನಕದ ಕೊರತೆಯಿಂದ ಟೈಟನ್ ಒಳಗಿರುವವರು ನಿದ್ರೆಗೆ ಜಾರಿದರೂ ಅನುಕೂಲವಾಗುತ್ತದೆ. ಆಗ ದೇಹವು ತನ್ನನ್ನು ಬದುಕಿಸಿಕೊಳ್ಳುವ ಹೋರಾಟ ನಡೆಸುತ್ತದೆ. ಎಲ್ಲರೂ ನಿದ್ರೆಗೆ ಜಾರಿದರೆ, ತಾವು ಬದುಕಿದ್ದೇವೆ ಎಂಬ ಸಂದೇಶವನ್ನು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿರುವವರಿಗೆ ನೀಡಲು ಯಾರೂ ಇಲ್ಲದಂತಾಗುತ್ತದೆ.

ನೌಕೆಯಲ್ಲಿ ಇದ್ದವರು ಯಾರು?



1.ಹಮಿಷ್ ಹಾರ್ಡಿಂಗ್
ಇವರು ಬ್ರಿಟನ್‌ನ ಸಾಹಸ ಪ್ರೇಮಿ. 58 ವರ್ಷದ ಹಾರ್ಡಿಂಗ್ ಅವರ ಹೆಸರಲ್ಲಿ ಮೂರು ಗಿನ್ನಿಸ್ ದಾಖಲೆಗಳಿವೆ. ಫೆಸಿಫಿಕ್ ಸಾಗರದ ಆಳವಾದ ಭಾಗ ಮಾರಿಯಾನ ಟ್ರೆಂಚ್‌ನಲ್ಲಿ ಅತಿ ಹೆಚ್ಚು ಅವಧಿ ಇದ್ದ ದಾಖಲೆ ಮಾಡಿದ್ದಾರೆ. ದಕ್ಷಿಣ ಧ್ರುವಕ್ಕೂ ಹಲವು ಬಾರಿ ಹೋಗಿಬಂದಿದ್ದಾರೆ. ದುಬೈಯಲ್ಲಿ ಆ್ಯಕ್ಷನ್ ಏವಿಯೇಷನ್ ಎಂಬ ವಿಮಾನ ಮಾರಾಟ ಕಂಪೆನಿ ನಡೆಸುತ್ತಿದ್ದಾರೆ.

2. ಸ್ಟಾಕ್‌ಟನ್ ರಷ್
61 ವರ್ಷದ ರಷ್ ಅವರು ಓಷನ್‌ಗೇಟ್ ಕಂಪೆನಿಯ ಸಂಸ್ಥಾಪಕ. ಟೈಟನ್ ನೌಕೆಯ ಪೈಲಟ್ ಇವರೇ ಆಗಿದ್ದಾರೆ. ಇವರೊಬ್ಬ ಎಂಜಿನಿಯರ್ ಆಗಿದ್ದು, ಹಲವಾರು ಪರೀಕ್ಷಾರ್ಥ ವಿಮಾನಗಳನ್ನು ವಿನ್ಯಾಸಗೊಳಿಸಿದ್ದಾರೆ. ಜೊತೆಗೆ, ಹಲವಾರು ಸಣ್ಣ ಜಲಾಂತರ್ಗಾಮಿ ಹಡಗುಗಳನ್ನೂ ವಿನ್ಯಾಸ ಮಾಡಿದ್ದಾರೆ.

3.ಪಾಲ್ ಹೆನ್ರಿ ನಾರ್ಗಿಯೊಲೆಟ್
ಪಾಲ್ ಅವರಿಗೆ 77 ವರ್ಷ. ಮಿಸ್ಟರ್ ಟೈಟಾನಿಕ್ ಇವರ ಅಡ್ಡ ಹೆಸರು. ಟೈಟಾನಿಕ್ ಹಡಗಿನ ಅವಶೇಷಗಳು ಪತ್ತೆಯಾದ ಒಂದು ವರ್ಷದ ಬಳಿಕ (1986) ಸಮುದ್ರಕ್ಕಿಳಿದ ಮೊದಲ ತಂಡದಲ್ಲಿ ಇವರು ಇದ್ದರು. ಈ ತಂಡದಲ್ಲಿದ್ದ ಬೇರೆ ಎಲ್ಲಾ ಸದಸ್ಯರಿಗಿಂತ ಇವರೇ ಹೆಚ್ಚು ಅವಧಿ ಸಮುದ್ರದಾಳದಲ್ಲಿ ಇದ್ದವರು. ಟೈಟಾನಿಕ್ ಅವಶೇಷಗಳ ಮಾಲೀಕತ್ವ ಹೊಂದಿರುವ ಕಂಪೆನಿಯಲ್ಲಿ ಇವರು ಸಮುದ್ರದೊಳಗಿನ ವಿಚಾರಗಳ ಕುರಿತು ಸಂಶೋಧನೆ ನಡೆಸುತ್ತಿದ್ದಾರೆ.

4ಮತ್ತು 5. ಸುಲೇಮಾನ ಮತ್ತು ಶಹಝಾದ್ ದಾವೂದ್
48 ವರ್ಷದ ಶಹಝಾದ್ ದಾವೂದ್ ಅವರು ಬ್ರಿಟನ್‌ನ ಉದ್ಯಮಿ. 19 ವರ್ಷದ ಸುಲೇಮಾನ್ ಅವರು ಶಹಝಾದ್ ಅವರ ಮಗ. ಇವರದ್ದು ಪಾಕಿಸ್ತಾನದ ಶ್ರೀಮಂತ ಮನೆತನಗಳಲ್ಲಿ ಒಂದು. ಗೊಬ್ಬರ ಮಾರಾಟದ ಅತಿ ದೊಡ್ಡ ಕಂಪೆನಿಯಾದ ಎನ್‌ಗ್ರೊ ಕಾರ್ಪೊರೇಷನ್‌ನ ಉಪಾಧ್ಯಕ್ಷರಾಗಿದ್ದಾರೆ. ಸುಲೇಮಾನ್ ಅವರು ಸ್ಟ್ರಾಟ್‌ಕ್ಲೈಡ್ ವಿಶ್ವವಿದ್ಯಾಲಯದಲ್ಲಿ ಪದವಿ ಓದುತ್ತಿದ್ದಾರೆ.

ಗುಂಡಣ್ಣ





ಜೀವನ್ಮುಕ್ತ

ಇಂದ್ರಿಯಗಳೊಳು ಬಾಳಿ ಜೀವ ಪಕ್ವಂಗೊಳ್ಳ - |
ಲಿಂದ್ರಿಯಂಗಳ ಮೀರಿ ಮೇಲೇರಿ ಜಾಣಿಂ - ||
ದಿಂದ್ರಿಯಂಗಳನಾಳಿ ಲೋಕವಂ ಸಂತಯಿಪ |
ಬಂಧು ಜೀವನ್ಮುಕ್ತ – ಮಂಕುತಿಮ್ಮ || **912** ||

ಪದ-ಅರ್ಥ: ಇಂದ್ರಿಯಗಳೊಳು = ಇಂದ್ರಿಯಗಳ + ಒಳು(ಒಳಗೆ), ಪಕ್ವಗೊಳ್ಳಲಿಂದ್ರಿಯಂಗಳ = - ಪಕ್ವಗೊಳ್ಳಲು + ಇಂದ್ರಿಯಂಗಳ(ಇಂದ್ರಿಯಗಳನ್ನು), ಜಾಣಿಂದ್ರಿಯಗಳನಾಳಿ = ಜಾಣಿಂ (ಜಾಣತನದಿಂದ) + ಇಂದ್ರಿಯಗಳನು + ಆಳಿ, ಸಂತಯಿಪ = ಸಂತೈಸುವ.

ವಾಚ್ಯಾರ್ಥ: ಇಂದ್ರಿಯಾನುಭವಗಳಿಂದಲೇ ಬಾಳಿ, ಜೀವವು ಪಕ್ವಗೊಂಡಾಗ ಇಂದ್ರಿಯಗಳನ್ನು ಮೀರಿ, ದಾಟಿ, ಜಾಣತನದಿಂದ ಇಂದ್ರಿಯಗಳನ್ನು ಆಳಿ, ಪ್ರಪಂಚವನ್ನು ಸಂತೈಸುವ ಬಂಧುವಾದ ವ್ಯಕ್ತಿಯೇ ಜೀವನ್ಮುಕ್ತ.

ವಿವರಣೆ: ನಮಗೆ ಎರಡು ತರಹದ ಜೀವನಗಳು. ಮೊದಲನೆಯದು ನಿತ್ಯ ಬದುಕಿನ ಜೀವನ. ಎರಡನೆಯದು ಉಜ್ಜೀವನ. ಜೀವನ ತಾಪವಾದರೆ ಉಜ್ಜೀವನ ತಪ. ಜೀವನ ಚಿಂತೆಯಾದರೆ, ಉಜ್ಜೀವನ ಚಿಂತನೆ. ನಮ್ಮ ಜೀವನದ ಪ್ರತಿಕ್ಷಣವೂ ಇಂದ್ರಿಯಗಳಿಂದ ನಿರ್ದೇಶಿತವಾದದ್ದು. ಇಂದ್ರಿಯಗಳು ತಂದು ಹಾಕಿದ್ದೇ ಅನುಭವ. ಅನುಭವಗಳ ತೂಗುಯ್ಯಾಲೆಯಲ್ಲೇ ಬದುಕು ಸಾಗುತ್ತದೆ. ಆದರೆ ಒಂದು ಹಂತ ಬರುತ್ತದೆ. ನಮ್ಮ ಜೀವನವೆಲ್ಲ ಇಂದ್ರಿಯಗಳ ದಾಸನಾಗಿಯೇ ಉಳಿಯಿತಲ್ಲ, ಈ ಇಂದ್ರಿಯಗಳನ್ನು ಮೀರಿದ ಅನುಭವವೇನಾದರೂ ಉಂಟೇ ಎಂದು ಮನಸ್ಸು ಯೋಚಿಸತೊಡಗುತ್ತದೆ. ಅದು ಜೀವವು ಪಕ್ವವಾಗತೊಡಗಿದ ಲಕ್ಷಣ. ಆಗ ಇಂದ್ರಿಯಗಳಿಂದ ಜೀವ ಮೇಲಕ್ಕೇರಿ ಇಂದ್ರಿಯಾನುಭವಗಳನ್ನು ದಾಟಿ ಪರಸತ್ವದ ಅನುಭವವನ್ನು ಪಡೆಯುವುದು ಉಜ್ಜೀವನ. ವಿಚಿತ್ರವೆಂದರೆ ಜೀವನವಿಲ್ಲದಿದ್ದರೆ ಉಜ್ಜೀವನವಿಲ್ಲ. ಉಜ್ಜೀವನದೆಡೆಗೆ ಸಾಗುವುದೆಂದರೆ ನದಿಯನ್ನು ದಾಟಿದಂತೆ. ನದಿಯನ್ನು ದಾಟಲು ಮೊದಲು ನದಿಯಲ್ಲಿ ಹಾರಬೇಕು. ನೀರನ್ನು ಹಿಂದೆ ತಳ್ಳಿ, ತಳ್ಳಿ ಮುಂದೆ ಸಾಗಬೇಕು. ಹಾಗೆ ಸತತ ಪ್ರಯತ್ನ ಮಾಡಿದಾಗಲೇ ನದಿ ದಾಟುವುದು ಸಾಧ್ಯ. ಅದನ್ನೇ ಕಗ್ಗ ಹೇಳುತ್ತದೆ, ನಾವು ಇಂದ್ರಿಯಗಳ ಒಳಗೇ ಬದುಕಬೇಕು. ನಂತರ ಪ್ರಯತ್ನದಿಂದ ಇಂದ್ರಿಯಗಳನ್ನು ಮೀರಿ ಅಧ್ಯಾತ್ಮಿಕವಾಗಿ ಮೇಲಕ್ಕೇರಬೇಕು. ಆಗೇನಾಗುತ್ತದೆ? ಯಾವ ಇಂದ್ರಿಯಗಳು ನಮ್ಮನ್ನು ಆಳುತ್ತಿದ್ದವೋ ಅವೇ ನಮ್ಮ ಆಳುಗಳಾಗುತ್ತವೆ. ನಾವು ಹೇಳಿದ್ದನ್ನು, ಅಪೇಕ್ಷಿಸಿದ್ದನ್ನು ಮಾಡುತ್ತವೆ. ಅದೇ ಇಂದ್ರಿಯಗಳನ್ನು ಆಳುವ ಪ್ರಕ್ರಿಯೆ. ಇಂಥವರನ್ನು ನಮ್ಮ ಜಗತ್ತು ಕಂಡಿದೆ. ಅವರಾರೂ ಇಂದ್ರಿಯಗಳ ದಾಸರಾಗದೆ, ಇಂದ್ರಿಯಗಳನ್ನು ನಿಗ್ರಹಿಸಿದವರಾದರು. ಶ್ರೀ ರಾಮಕೃಷ್ಣ ಪರಮಹಂಸರು, ರಮಣ ಮಹರ್ಷಿಗಳು, ಅಲ್ಲಮಪ್ರಭು, ಮಹಾದೇವಿಯಕ್ಕ, ಸಿದ್ಧರಾಮೇಶ್ವರ ಇವರೆಲ್ಲ ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು, ಇಂದ್ರಿಯಗಳ ಹಿಡಿತದಲ್ಲಿ ನೋವುಂಡವರಿಗೆ, ಸಂತ್ರಸ್ತರಾದವರಿಗೆ ಸಾಂತ್ವನ ಹೇಳಿದವರು. ಹೀಗೆ ಲೋಕಕ್ಕೆಲ್ಲ ಸಾಂತ್ವನ ಹೇಳಿದವರು ಜಗತ್ತಿನ ಬಂಧುಗಳು ಮತ್ತು ಅವರೇ ಜೀವನ್ಮುಕ್ತರು, ಜೀವನದ ಜಂಜಾಟಗಳಿಂದ ಮುಕ್ತರಾದವರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜೂನ್ 23, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಶುದ್ಧ ಪಂಚಮಿ ಗಂ. 19-55, ನಕ್ಷತ್ರ: ಮಘ ಅಹೋರಾತ್ರ ಯೋಗ: ವಜ್ರ 28-31 ಕರಣ: ಬವ ಗಂ. 06-41, ಮಿಥುನ ಮಾಸದ 07 ನೇ ದಿನ, ಮಳೆನಕ್ಷತ್ರ: ಆರ್ದ್ರಾ 1.
ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-09
ಸೂರ್ಯಾಸ್ತ : 06-56 ಇಸ್ಲಿಂ ದಿನಾಂಕ : 04 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 8, 2

ಮೇಷ: ಪಿತ್ರಾರ್ಜಿತ ಆಸ್ತಿಗಳ ವಿಚಾರದಲ್ಲಿ ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡಿಬರಲಿದೆ. ವಿದ್ಯಾರ್ಥಿಗಳಿಗೆ ಆಲಸ್ಯ ಹೆಚ್ಚಾಗಿ ವಿದ್ಯಾಭ್ಯಾಸದಲ್ಲಿ ಆಸಕ್ತಿ ಕಡಿಮೆಯಾಗುವುದು. ಸೌಂದರ್ಯ ವಿನ್ಯಾಸಕರಿಗೆ ಇದು ಉತ್ತಮ ದಿನ.

ವೃಷಭ: ನಿರುದ್ಯೋಗಿಗಳ ಅಲೆದಾಟ ತಪ್ಪಿ ಹೊಸ ಕೆಲಸ ಪ್ರಾರಂಭ ಮಾಡುವ ಅವಕಾಶ ಸಿಗಲಿದೆ. ನಿಮ್ಮನ್ನು ಪ್ರೀತಿಸುವವರ ಮಾರ್ಗದರ್ಶನ ದಿಂದ ಜೀವನದಲ್ಲಿನ ನಿರುತ್ಸಾಹ ದೂರಾಗಲಿದೆ. ಕೈತಪ್ಪಿದ ಅವಕಾಶ ದೊರೆಯಲಿದೆ.

ಮಿಥುನ: ರಾಜಕೀಯ ವ್ಯಕ್ತಿಗಳಿಗೆ ಸಾಮಾಜಿಕವಾಗಿ ಜನ ಬೆಂಬಲದ ಮತ್ತು ಆರ್ಥಿಕತೆಯ ಕೊರತೆ ಕಾಡಲಿದೆ. ಭೋಜನ ನಿಮಿತ್ತ ಮಾಡುವ ವೃತ್ತಿಗಿಂತ ಪ್ರವೃತ್ತಿಯಲ್ಲಿ ಆಸಕ್ತಿ ಹೆಚ್ಚಲಿದೆ ಹಾಗೂ ಅದರಲ್ಲಿಯೆ ಹೆಚ್ಚಿನ ಲಾಭವಿದೆ.

ಕರ್ಕಾಟಕ: ದೂರದ ಸಂಚಾರ ತೋರಿಬಂದರೂ ಮುಂದೂಡುವುದು ಅನಿವಾರ್ಯ. ನಾಯಕರಾಗಿ ನೀವು ನೀಡುವ ಸಲಹೆ ಸೂಚನೆಯಂತೆ ನಡೆದುಕೊಳ್ಳಲು ಸಹೋದ್ಯೋಗಿಗಳಿಗೆ ಸೂಚನೆಯನ್ನು ನೀಡಿ.

ಸಿಂಹ: ದೂರದ ಪ್ರಯಾಣದಲ್ಲಿ ಇದ್ದರೂ ಮಗಳ ಜವಾಬ್ದಾರಿಯುತ ನಡೆಯಿಂದಾಗಿ ಮನೆ ಮತ್ತು ಕುಟುಂಬದ ಚಿಂತೆ ಅಷ್ಟಾಗಿ ಕಾಡುವುದಿಲ್ಲ. ಕಚ್ಚಾ ತೈಲದ ವ್ಯವಹಾರದಲ್ಲಿರುವವರಿಗೆ ಮಾಡುವವರಿಗೆ ಅಧಿಕ ಲಾಭ ಸಿಗಲಿದೆ.

ಕನ್ಯಾ: ರಿಯಲ್ ಎಸ್ಟೇಟ್ ವ್ಯವಹಾರ ನಡೆಸುವ ವ್ಯಕ್ತಿಗಳಿಗೆ ಕಲ್ಪನೆಗಿಂತ ಅಧಿಕವಾದ ಕಮಿಷನ್ ದೊರೆಯಲಿದೆ. ಧರ್ಮ-ಕರ್ಮಗಳಲ್ಲಿ ಆಸಕ್ತಿ ತೋರಿದರೆ, ಕಾರ್ಯಕ್ಷೇತ್ರ ಹಾಗೂ ಜೀವನದಲ್ಲಿ ಅಭೀಷ್ಟ ಪಡೆಯಬಹುದು.

ತುಲಾ: ನೂತನ ಗೃಹ ನಿರ್ಮಾಣ ಮಾಡುವ ಆಲೋಚನೆಯು ಕುಟುಂಬದ ಸದಸ್ಯರ ಸಂತಸಕ್ಕೆ ಕಾರಣವಾಗುತ್ತದೆ. ಆದರೆ ಅದಕ್ಕಾಗಿ ವಿವಿಧ ರೀತಿಯ ವೈಯಕ್ತಿಕ ಖರ್ಚುಗಳನ್ನೆಲ್ಲಾ ನಿಲ್ಲಿಸಬೇಕಾದಂತಹ ಪರಿಸ್ಥಿತಿ ಎದುರಿಸುವಿರಿ.

ವೃಶ್ಚಿಕ: ವಿನೂತನ ಕೆಲಸವನ್ನು ಸ್ಟಾರ್ಟಪ್ ರೀತಿಯಲ್ಲಿ ಪ್ರಾರಂಭಿಸಲು ಸ್ನೇಹಿತರಿಂದ ಒತ್ತಾಯ ಬರಲಿದೆ. ಆ ಕೆಲಸದ ಲಾಭ ನಷ್ಟಗಳ ಬಗ್ಗೆ ಬಹಳವಾಗಿ ಕಾಡಬಹುದು. ವಾಣಿಜ್ಯ ಅಥವಾ ಆರ್ಥಿಕ ಒಪ್ಪಂದಗಳು ಏರ್ಪಡುವುದು.

ಧನು: ಹಿತಶತ್ರುಗಳ ಪರಾಜಯ ನೋಡಿ ಸಂತಸ ಪಡುವಂತಾಗಲಿದೆ. ಸತ್ಕಾರ್ಯಗಳಲ್ಲಿ ಆದಾಯವನ್ನು ಮೀರಿ ಖರ್ಚುಗಳಿದ್ದರೂ ಚಿಂತಿಸುವ ಅಗತ್ಯವಿಲ್ಲ. ಮಹಿಳೆಯರಿಗೆ ತವರಿನವರ ಆಗಮನ ಸಂತೋಷಕ್ಕೆ ಕಾರಣವಾಗುವುದು

ಮಕರ: ಅರ್ಚಕ, ವೈದಿಕ ವೃತ್ತಿಯವರಿಗೆ ಕಾರ್ಯದೊತ್ತಡ ಅಧಿಕ ಮಟ್ಟದಲ್ಲಿದ್ದರೂ, ಸರಿಸಮಾನವಾದ ಗೌರವಧನಕ್ಕೆ ಕೊರತೆ ಕಾಣುವುದಿಲ್ಲ. ಸಾಂಸಾರಿಕವಾಗಿ ಸುಖ ಹಾಗೂ ನೆಮ್ಮದಿಯುಕ್ತ ಕುಟುಂಬ ನಿಮ್ಮದಾಗುವುದು.

ಕುಂಭ: ಆದಾಯದಲ್ಲಿ ಸಣ್ಣ ಹೊಡೆತವನ್ನು ಎದುರಿಸುವಂತಾಗಬಹುದು. ಕಾರಣವನ್ನು ಹುಡುಕಿ ಪಾಠದ ರೀತಿಯಲ್ಲಿ ತೆಗೆದುಕೊಳ್ಳುವುದು ಉತ್ತಮ. ಭೂ ವ್ಯವಹಾರದ ಬಂಡವಾಳದಲ್ಲಿ ಮೋಸಹೋಗುವ ಸ್ಥಿತಿ ಬರಬಹುದು.


ಮೀನ: ಅಡಿಕೆ ಬೆಳೆಗಾರರು ದಾಸ್ತಾನು ಬೆಳೆಯಿಂದ ಹೆಚ್ಚಿನ ಲಾಭ. ಮನೆತನದ ವೃತ್ತಿಯನ್ನೇ ಮುಂದುವರಿಸಿಕೊಂಡು ಹೋಗುತ್ತಿರುವವರಿಗೆ ಹಿರಿಯರಿಂದ ಪಡೆದ ಸಲಹೆ ಜೀವನಕ್ಕೆ ಹೊಸ ಬುನಾದಿಯಾಗಲಿದೆ.

ಪದಬಂಧ 5358

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದೇಶೀ ಗಿಡಮೂಲಿಕೆಗಳಿಂದ ಸಿದ್ಧಪಡಿಸಿದ ಔಷಧ (4)
3.ಶಿರದ ರಕ್ಷಣೆಗಾಗಿ ಧರಿಸುವ ಟೊಪ್ಪಿಗೆ (4)
5.ಕಾವು ಇದ್ದಾಗಲೇ ಕಾಣಿಸಿದ ಹೊರಗಿನ ಅಂದ (3)
7.ಈತ ಕೆಲಸಕ್ಕೆ ಬಾರದವನು (4)
9.ಸಂದಣಿಯಲ್ಲಿರುವ ಯಜಮಾನ ಕಾಣಿಸಿದನೇ? (2)
10.ಒಂದನೊಂದು ಬಲವಾಗಿ ಅಪ್ಪಳಿಸುವಿಕೆ (2)
11.ತೆಳ್ಳನೆಯ ಉದರವುಳ್ಳವಳು (4)
13.ದೊಡ್ಡ ಬುಟ್ಟಿ ಇಲ್ಲಿದೆ (3)
16.ತಂದೆಯ ತಾಯಿ (4)
17.ಸೇನಾನಾಯಕನಿವನು (4)

ಮೇಲಿಂದ ಕೆಳಕ್ಕೆ
1.ನಾಡಿನಲ್ಲಿರುವ ಅಲ್ಪವ್ಯಕ್ತಿ! (3)
2.ನೆನಪಿನಲ್ಲಿ ಉಳಿಯದಿರುವುದು (3)
3.ತಡದಿಂದ ಆದ ತಬ್ಬಿಬ್ಬು (4)
4.ನಕ್ಷತ್ರವೂ ಆಗಿರುವ ನವರತ್ನ! (2)
6.ವ್ಯಂಜನಕ್ಕೆ ಸ್ವರವನ್ನು ಸೇರಿಸಿ ಬರೆಯುವುದು (4)
7.ಈ ಪರಿ ತಪ್ಪಿಸಿಕೊಳ್ಳುವಿಕೆ! (3)
8.ಮಿಡಿ ಹಿಡಿದುಕೊಂಡು ತೋರಿದ ಸಿಟ್ಟು! (4)
12.ದನಗಳನ್ನು ಕಾಯುವವನು (4)
13.ಅಧಿಕ್ಯವನ್ನು ಹೀಗನ್ನಿ (3)
14.ಗೆಳೆಯನೊಡನಿರುವ ಸ್ನೇಹಿತೆ (3)
15.ಪಿಕವನ್ನು ನೋಡುತ್ತಿರುವ ಮಂಗ (2)



5357ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉರುಲು 2.ತಮೋಹರ
4.ಹಕ್ಕುದಾರ 6.ಗಿಂಬಳ
7.ಣೆಹ 9.ಸಿಬ್ಬಂದಿ
11.ಹಸು 13.ಮೆಲುಕು
14.ಪರಿಪೂರ್ಣ 16.ಭರವಸೆ
17.ಅಂಬುಧಿ

ಮೇಲಿಂದ ಕೆಳಕ್ಕೆ:
1.ಉದಾಹರಣೆ 2.ತತ್ತಿ
3.ಹಣೆಬರಹ 5.ರಕ್ಕಸಿ
8.ಹಲಾಲುಕೋರ 10.ದಿನಪ
12.ಸುವರ್ಣಸಂಧಿ 15.ಮೂಸೆ

ಸುಡೊಕು 5744

7		5	9				2	
					2			
2		9	3				6	
9		4						2
			4		9	1		
	3					9		6
4					8		7	
		1	7			2		3
8		2		5			1	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5743 ಸುಡೊಕು

2	5	4	6	9	1	7	8	3
6	1	8	4	3	7	9	5	2
7	3	9	2	5	8	4	6	1
4	9	1	3	2	5	8	7	6
3	8	7	1	4	6	5	2	9
5	2	6	8	7	9	1	3	4
1	6	5	9	8	2	3	4	7
9	7	3	5	6	4	2	1	8
8	4	2	7	1	3	6	9	5

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,856
ಇಂದಿನ ಅಂತ್ಯ	18,771
▼	85
ದಿನದ ಕನಿಷ್ಠ	18,853

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1300-1500
ಮಧ್ಯಮ	₹1000-1300
ಸಣ್ಣ	₹500-1000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹600
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹603

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1650 (1660)
ಸೋಯಾ (ರಿಫೈನ್ಡ್)	₹920 (940)
ಸೂರ್ಯಕಾಂತಿ (ರಿಫೈನ್ಡ್)	₹920 (940)
ಪಾಮೋಲಿನ್	₹832 (835)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್.ಪೇಟೆ	₹7900-7900
ಪುತ್ತೂರು	---
ತುರುವೇಕೆರೆ	₹8200-8200

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)
₹255-435
ದ್ವಿತಳಿ (ಬಿ.ವಿ)
₹300-596

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹150
ಆರ್‌ಎಸ್‌ಎಸ್-5	₹145
ಗುಡ್ ಲಾಟ್	₹126

ಮುಂಬೈ ಧಾರಣೆ

ಶೇಂಗಾ

22-6-2023

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12000-12100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1660(1680)
ಒಂದು ವಾರದ ಡೆಲಿವರಿ	1655(1675)
ಸೋಯಾ ಕಚ್ಚಾ	862(890)
ಪಾಮ್ ವಾರದ ಡೆಲಿವರಿ	830(853)
ಸೂರ್ಯಕಾಂತಿ ಎಣ್ಣೆ ಕಚ್ಚಾ	820(865)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,300 (58,950)
ಬೆಳ್ಳಿ ಕೆ.ಜಿ
68,800 (71,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ನಿಯಮಗಳಲ್ಲಿ ಬದಲಾವಣೆ ತರಲು ಕೇಂದ್ರದ ಚಿಂತನೆ: ಮೂಲಗಳ ಮಾಹಿತಿ

ನೌಕರರಿಗೆ ಖಾತರಿ ಮೊತ್ತದ ಪಿಂಚಣಿ?

ನವದೆಹಲಿ (ರಾಯಿಟರ್ಸ್): ಕೇಂದ್ರ ಸರ್ಕಾರವು ತನ್ನ ಉದ್ಯೋಗಿಗಳಿಗೆ, ಸೇವಾವಧಿಯ ಕಡೆಯ ವೇತನದ ಕನಿಷ್ಠ ಶೇಕಡ 40-45ರಷ್ಟು ಮೊತ್ತವನ್ನು ಖಾತರಿ ಪಿಂಚಣಿಯಾಗಿ ನೀಡುವ ಸಾಧ್ಯತೆ ಇದೆ.

ಈಗ ಜಾರಿಯಲ್ಲಿ ಇರುವ, ಬಂಡವಾಳ ಮಾರುಕಟ್ಟೆ ಆಧಾರಿತ ಎನ್‌ಪಿಎಸ್ ಬದಲಿಗೆ, ಹಳೆಯ ಪಿಂಚಣಿ ವ್ಯವಸ್ಥೆಯನ್ನೇ ಮತ್ತೆ ಜಾರಿಗೆ ತರಲು ಕೆಲವು ರಾಜ್ಯ ಸರ್ಕಾರಗಳು ಮುಂದಾಗಿವೆ. ಹೀಗಾಗಿ, ಈಗಿನ ಪಿಂಚಣಿ ನಿಯಮಗಳಲ್ಲಿ ಕೆಲವು ಬದಲಾವಣೆಗಳನ್ನು ತರುವ ಆಲೋಚನೆಯು ಕೇಂದ್ರಕ್ಕೆ ಇದೆ ಎಂದು ಮೂಲಗಳು ಹೇಳಿವೆ.

ಆದರೆ, ಇಂಥದ್ದೊಂದು ತೀರ್ಮಾನ ಆಗಿಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯವು ಪ್ರತಿಕ್ರಿಯೆ ನೀಡಿದೆ. ಎನ್‌ಪಿಎಸ್ ಹಾಗೂ ಒಪಿಎಸ್ ಬಗ್ಗೆ ಪರಿಶೀಲಿಸುತ್ತಿರುವ ಸಮಿತಿಯು 'ಸಂಬಂಧಪಟ್ಟವರ ಜೊತೆ ಸಮಾಲೋಚನೆ ನಡೆಸುತ್ತಿದೆ. ಸಮಿತಿಯು ಇನ್ನೂ ಯಾವುದೇ ತೀರ್ಮಾನಕ್ಕೆ ಬಂದಿಲ್ಲ' ಎಂದು ಸಚಿವಾಲಯ ಹೇಳಿದೆ.

ಮುಖ್ಯಾಂಶಗಳು

- ಹೊಸ ವ್ಯವಸ್ಥೆಯಿಂದ ಸರ್ಕಾರಗಳಿಗೆ ಪಿಂಚಣಿ ಹೊರೆಯಾಗದು
- ನೌಕರರು, ಉದ್ಯೋಗ ದಾತರಿಂದ ಪಿಂಚಣಿ ನಿಧಿಗೆ ಕೊಡುಗೆ ಸ್ಥಗಿತವಿಲ್ಲ

ಎನ್‌ಪಿಎಸ್ ವ್ಯವಸ್ಥೆಯಲ್ಲಿ ನೌಕರರು ಹಾಗೂ ಉದ್ಯೋಗದಾತರು ಪಿಂಚಣಿಗಾಗಿ ಮೀಸಲಿಡುವ ಹಣವನ್ನು ಬಂಡವಾಳ ಮಾರುಕಟ್ಟೆಯಲ್ಲಿ ತೊಡಗಿಸಲಾಗುತ್ತದೆ. ಮಾರುಕಟ್ಟೆಯ ಏರಿಳಿತಗಳಿಗೆ ಅನುಗುಣವಾಗಿ ಪಿಂಚಣಿಯ ಮೊತ್ತ ನಿರ್ಧಾರವಾಗುತ್ತದೆ.



ಆದರೆ ಹಳೆಯ ಪಿಂಚಣಿ ವ್ಯವಸ್ಥೆಯಲ್ಲಿ, ಕೊನೆಯ ವೇತನದ ಶೇಕಡ 50ರಷ್ಟು ಮೊತ್ತವನ್ನು ಪಿಂಚಣಿಯಾಗಿ ನೀಡಲಾಗುತ್ತದೆ. ಹಳೆಯ ವ್ಯವಸ್ಥೆಯಲ್ಲಿ ನೌಕರರು ಪಿಂಚಣಿಗೆ ತಮ್ಮ ವೇತನದಿಂದ ಯಾವುದೇ ಕೊಡುಗೆ ನೀಡಬೇಕಿಲ್ಲ.

ಹೊಸ ಪಿಂಚಣಿ ವ್ಯವಸ್ಥೆಯಲ್ಲಿ ಬದಲಾವಣೆ ತಂದು, ಪಿಂಚಣಿಯಾಗಿ ಖಾತರಿ ಮೊತ್ತವನ್ನು ನೀಡುವ ಆಲೋಚನೆ ಕೇಂದ್ರಕ್ಕಿದೆ. ಪಿಂಚಣಿಗಾಗಿ ನೌಕರರು ಹಾಗೂ ಉದ್ಯೋಗದಾತರಿಂದ ಕೊಡುಗೆಯನ್ನು ಪಡೆಯುವ ಉದ್ದೇಶ ಕೂಡ ಕೇಂದ್ರಕ್ಕೆ ಇದೆ ಎಂದು ಮೂಲಗಳು ವಿವರಿಸಿವೆ.

ಹೀಗೆ ಮಾಡಿದಾಗ, ಕೆಲವು ರಾಜ್ಯಗಳು ವ್ಯಕ್ತಪಡಿಸಿರುವ ಕಳವಳಕ್ಕೂ ಸ್ಪಂದಿಸಿದಂತೆ ಆಗುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಆದರೆ ಹಳೆಯ ಪಿಂಚಣಿ ವ್ಯವಸ್ಥೆಗೆ ಮರಳುವ ಪ್ರಶ್ನೆ ಇಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಈಗಿನ ಪಿಂಚಣಿ ವ್ಯವಸ್ಥೆಯಲ್ಲಿ ಈ ಬದಲಾವಣೆಗಳನ್ನು ಮಾಡಿದಲ್ಲಿ, ಸರ್ಕಾರಗಳಿಗೆ ಆರ್ಥಿಕ ಹೊರೆ ದೊಡ್ಡ ಮಟ್ಟದಲ್ಲಿ ಇರುವುದಿಲ್ಲ ಎನ್ನಲಾಗಿದೆ.

ಎನ್‌ಪಿಎಸ್ ಅಡಿಯಲ್ಲಿ, ಈಗಿನ ಲೆಕ್ಕಾಚಾರದ ಪ್ರಕಾರ, ನೌಕರರು ನಿವೃತ್ತಿಯ ನಂತರದಲ್ಲಿ ಅವರ ಕಡೆಯ ವೇತನದ ಶೇ 38ರಷ್ಟನ್ನು ಪಿಂಚಣಿಯಾಗಿ ಪಡೆಯುತ್ತಾರೆ. ಸರ್ಕಾರವು, ಕಡೆಯ ವೇತನದ ಶೇ 40ರಷ್ಟು ಮೊತ್ತವನ್ನು ಪಿಂಚಣಿಯಾಗಿ ನೀಡುವ ಖಾತರಿ ನೀಡಿದಲ್ಲಿ, ವ್ಯತ್ಯಾಸದ ಮೊತ್ತವನ್ನು (ಈಗಿನ ಲೆಕ್ಕಾಚಾರದ ಪ್ರಕಾರ ಶೇ 2ರಷ್ಟು) ತುಂಬಿಸಿಕೊಡಬೇಕಾಗುತ್ತದೆ.

ಆದರೆ, ಬಂಡವಾಳ ಮಾರುಕಟ್ಟೆಯಿಂದ ಸಿಗುವ ಲಾಭ ಕಡಿಮೆ ಆದಲ್ಲಿ, ಸರ್ಕಾರ ಬೊಕ್ಕಸದಿಂದ ಕೊಡಬೇಕಿರುವ ಮೊತ್ತವು ಹೆಚ್ಚಾಗುತ್ತದೆ.

'ಹಳೆಯ ಪಿಂಚಣಿ ವ್ಯವಸ್ಥೆಗೆ ಮರಳುವುದಕ್ಕಿಂತ ಈ ವ್ಯವಸ್ಥೆಯು ಹಣಕಾಸಿನ ಲೆಕ್ಕಾಚಾರದಲ್ಲಿ ಹೆಚ್ಚು ಸೂಕ್ತ' ಎಂದು ಮೂಲಗಳು ಹೇಳಿವೆ.

ಜಿಡಿಪಿ ಅಂದಾಜು ಹೆಚ್ಚಿಸಿದ ಫಿಚ್

ನವದೆಹಲಿ (ಪಿಟಿಐ): ಫಿಚ್ ರೇಟಿಂಗ್ಸ್ ಸಂಸ್ಥೆಯು ಭಾರತದ ಆರ್ಥಿಕ ಬೆಳವಣಿಗೆ ಮುನ್ನೋಟವನ್ನು ಪರಿಷ್ಕರಿಸಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಶೇಕಡ 6.3ರಷ್ಟು ಬೆಳವಣಿಗೆ ಕಾಣಲಿದೆ ಎಂದು ಹೇಳಿದೆ.

ಬೆಳವಣಿಗೆಯು ಶೇ 6ರಷ್ಟು ಇರಲಿದೆ ಎಂದು ಫಿಚ್ ಈ ಮೊದಲು ಹೇಳಿತ್ತು. ಮೊದಲ ತ್ರೈಮಾಸಿಕದಲ್ಲಿನ ಉತ್ತಮ ಬೆಳವಣಿಗೆ ಮತ್ತು ಅಲ್ಪಾವಧಿಯ ಚಲನೆಯನ್ನು ಗಮನದಲ್ಲಿ ಇಟ್ಟುಕೊಂಡು ಈ ಪರಿಷ್ಕರಣೆ ಮಾಡಿದೆ.

2023-24ರ ಜನವರಿ-ಮಾರ್ಚ್ ಅವಧಿಯಲ್ಲಿ ಜಿಡಿಪಿಯು ಶೇ 6.1ರಷ್ಟು ಬೆಳವಣಿಗೆ ಕಂಡಿದೆ. ಈಚಿನ ತಿಂಗಳುಗಳಲ್ಲಿ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ ಮತ್ತು ಸಾಲ ನೀಡಿಕೆ ಸಾಮರ್ಥ್ಯದಲ್ಲಿ ಉತ್ತಮ ಬೆಳವಣಿಗೆ ಕಂಡಿದೆ. ಹೀಗಾಗಿ ಪ್ರಸಕ್ತ ಹಣಕಾಸು ವರ್ಷಕ್ಕೆ ಜಿಡಿಪಿ ಮುನ್ನೋಟವನ್ನು ಶೇ 0.3ರಷ್ಟು ಹೆಚ್ಚಿಸಲಾಗಿದೆ ಎಂದು ಸಂಸ್ಥೆಯು ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು	480

ಅಡಿಕೆ

ಕುಮಟಾ	
ಚಿಪ್ಪು	28099-33369
ಕೋಕ	18699-33769
ಹಳೆಚಾಲಿ	37269-40069
ಹೊಸಚಾಲಿ	35900-39769
ಸಾಗರ	
ಬಿಳಿಗೋಟು	23069-33299
ಚಾಲಿ	34270-39601
ಕೋಕ	21290-36599
ಕೆಂಪುಗೋಟು	31599-39109
ರಾಶಿ	36099-52319
ಸಿಪ್ಪೆಗೋಟು	12345-22599
ಶಿವಮೊಗ್ಗ	
ಬೆಟ್ಟೆ	46666-54369
ಗೊರಬಲು	18001-40069
ರಾಶಿ	36066-53999
ಸರಕು	47000-86100
ಸಿದ್ದಾಪುರ	
ಬಿಳಿಗೋಟು	29619-33699
ಚಾಲಿ	36499-39399
ಕೋಕ	28619-32899
ಕೆಂಪುಗೋಟು	33000-33799
ರಾಶಿ	45099-50509
ತಟ್ಟಿಬೆಟ್ಟೆ	39389-48599
ಶಿರಸಿ	
ಬೆಟ್ಟೆ	34910-49499
ಬಿಳಿಗೋಟು	22699-34499
ಚಾಲಿ	35019-40158
ಕೆಂಪುಗೋಟು	26699-37999
ರಾಶಿ	46518-51399
ಯಲ್ಲಾಪುರ	
ಬಿಳಿಗೋಟು	28899-35599
ಚಾಲಿ	35299-39711
ಕೋಕ	18899-33300
ಕೆಂಪುಗೋಟು	31700-36206
ರಾಶಿ	43986-54619
ತಟ್ಟಿಬೆಟ್ಟೆ	41690-48469

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14900	14900	15000	172
ಎಸಿ	7980	7800	7600	
ಆರ್‌ಪಿ	10800	10800	10700	ಲಂಡನ್
ಆರ್‌ಸಿ	6360	254 on OT	6200	2759 ಡಾಲರ್ಸ್

ತೊಗರಿ ಬೇಳೆ ಬೆಲೆ ₹150ಕ್ಕೆ ಏರಿಕೆ

ಗ್ರಾಹಕರಿಗೆ ತಟ್ಟಿದ ಬಿಸಿ; ದರ ಇನ್ನೂ ಹೆಚ್ಚುವ ಸಾಧ್ಯತೆ

• ಓಂಕಾರ ಬಿರಾದಾರ

ಕಲಬುರಗಿ: ಮೇ ಮೊದಲ ವಾರದಲ್ಲಿ ಕ್ವಿಂಟಲ್‌ಗೆ ₹8,500 ಇದ್ದ ತೊಗರಿ ಬೆಲೆ, ಮಾರುಕಟ್ಟೆಯಲ್ಲಿ ಆವಕ ಕಡಿಮೆಯಾದ ಪರಿಣಾಮ ಒಂದೂವರೆ ತಿಂಗಳಲ್ಲಿ ಕ್ವಿಂಟಲ್‌ಗೆ ₹1,800ರಷ್ಟು ಹೆಚ್ಚಾಗಿದೆ.

ಜೂನ್ 22ರಂದು ಕ್ವಿಂಟಲ್ ಮಾದರಿ ತೊಗರಿ ₹10,500ವರೆಗೂ ಮಾರಾಟವಾಗಿದೆ. ಈಗ ದಾಲ್‌ಮಿಲ್‌ಗಳಲ್ಲಿ ತಯಾರಾದ ಬೇಳೆ ಬೆಲೆ ಪ್ರತಿ ಕ್ವಿಂಟಲ್‌ಗೆ ₹14,000ವರೆಗೆ ಮಾರಾಟವಾಗುತ್ತಿದೆ. ಮೇ ತಿಂಗಳಲ್ಲಿ ತೊಗರಿ ಬೇಳೆ ಪ್ರತಿ ಕೆ.ಜಿಗೆ ₹115ರಿಂದ ₹125ರವರೆಗೆ ಇತ್ತು. ಈಗ ರಿಟೇಲ್ ಮಾರುಕಟ್ಟೆಯಲ್ಲಿ ಇದರ ಬೆಲೆಯು ₹150ಕ್ಕೆ ತಲುಪಿದೆ.

ಕಲಬುರಗಿ ಜಿಲ್ಲೆಯಲ್ಲಿ ಕಳೆದ ವರ್ಷ 4.87 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬಿತ್ತನೆ ಮಾಡಲಾಗಿತ್ತು. ಅತಿವೃಷ್ಟಿ ಮತ್ತು ಪ್ರವಾಹದಿಂದ 1.29 ಲಕ್ಷ ಹೆಕ್ಟೇರ್,



ಕೊಳೆ ರೋಗದಿಂದ 69,900 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟವಾಗಿತ್ತು.

'ಜಿಲ್ಲೆಯಲ್ಲಿ ನೆಟೆರೋಗದಿಂದ ಉತ್ಪಾದನೆ ಕಡಿಮೆಯಾಗಿ ತೊಗರಿ ಆವಕ ಕಡಿಮೆಯಾಗುತ್ತಿದೆ. ಪ್ರತಿದಿನ 2,000 ಕ್ವಿಂಟಲ್‌ನಷ್ಟು ಮಾತ್ರ ತೊಗರಿ ಎಪಿಎಂಸಿಗೆ ಬರುತ್ತಿದೆ. ವರ್ತಕರು ತಮ್ಮ ಬಳಿ ದಾಸ್ತಾನು ಇರುವ ತೊಗರಿಯನ್ನೂ ಮಾರುಕಟ್ಟೆಗೆ ಬಿಡುತ್ತಿಲ್ಲ. ಹೀಗಾಗಿ ಬೆಲೆ ಏರಿಕೆಯಾಗುತ್ತಿದೆ' ಎಂದು ಕಲಬುರಗಿ ಎಪಿಎಂಸಿ ಕಾರ್ಯದರ್ಶಿ ಅಲ್ಲಾಭಕ್ಷ ಬಿಜಾಪುರ 'ಪ್ರಜಾವಾಣಿ'ಗೆ ತಿಳಿಸಿದರು.

ಜಿಲ್ಲೆಯಲ್ಲಿ ಸುಮಾರು 150 ದಾಲ್ ಮಿಲ್‌ಗಳಿವೆ. ಈ ಎಲ್ಲಾ ಗಿರಣಿಗಳನ್ನು ನಿರಂತರವಾಗಿ ನಡೆಸಲು ಪ್ರತಿದಿನ 10 ಸಾವಿರದಿಂದ 15 ಸಾವಿರ ಕ್ವಿಂಟಲ್ ತೊಗರಿ ಆವಕ ಆಗಬೇಕು. ಆದರೆ, ಪ್ರತಿದಿನ ಕೇವಲ 2 ಸಾವಿರದಿಂದ 3 ಸಾವಿರ ಕ್ವಿಂಟಲ್‌ಗಳಷ್ಟು ತೊಗರಿ ಮಾರುಕಟ್ಟೆಗೆ ಬರುತ್ತಿದೆ ಎಂದು ಕಲಬುರಗಿ ಎಪಿಎಂಸಿ ವರ್ತಕರ ಸಂಘದ ಕಾರ್ಯದರ್ಶಿ ಸಂತೋಷ ಲಂಗರ್ 'ಪ್ರಜಾವಾಣಿ'ಗೆ ತಿಳಿಸಿದರು.

'₹200ರ ಗಡಿ ದಾಟಬಹುದು'

ಜಿಲ್ಲೆಯಲ್ಲಿ ಅಧಿಕ ಪ್ರಮಾಣದಲ್ಲಿ ತೊಗರಿ ದಾಸ್ತಾನು ಇಲ್ಲದಿರುವುದರಿಂದ ದಾಲ್‌ಮಿಲ್‌ಗಳಿಗೆ ಸರಬರಾಜು ಆಗುತ್ತಿಲ್ಲ. ಹೊಸ ಬೆಳೆ ಬರುವ ವೇಳೆಗೆ ತೊಗರಿ ಬೇಳೆ ಬೆಲೆ ₹200ರ ಗಡಿ ದಾಟಬಹುದು ಎಂದು ಗುಲಬರ್ಗಾ ದಾಲ್ ಮಿಲ್‌ಗಳ ಮಾಲೀಕರ ಸಂಘದ ಅಧ್ಯಕ್ಷ ಶಿವಶರಣಪ್ಪ ನಿಗ್ಗುಡಗಿ ಹೇಳಿದರು.

ಬೆಂಜ್ ಎಎಂಜಿ ಎಸ್‌ಎಲ್‌55 ಬಿಡುಗಡೆ

ಪ್ರಜಾವಾಣಿ ವಾರ್ತೆ

ಮುಂಬೈ: ಮರ್ಸಿಡಿಸ್ ಬೆಂಜ್ ಇಂಡಿಯಾ ತನ್ನ ಸ್ಪೋರ್ಟ್ಸ್ ಕಾರು 'ರೋಡ್‌ಸ್ಟರ್ ಎಎಂಜಿ-ಎಸ್‌ಎಲ್‌55'ಅನ್ನು ಭಾರತದ ಮಾರುಕಟ್ಟೆಗೆ ಗುರುವಾರ ಬಿಡುಗಡೆ ಮಾಡಿದೆ.

ಕಂಪನಿಯು ತನ್ನ ಮೊದಲ ರೋಡ್‌ಸ್ಟರ್ ಎಸ್‌ಎಲ್ ಕಾರನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದ (1952) 71ನೇ ವರ್ಷದಲ್ಲಿ 7ನೇ ತಲೆಮಾರಿನ ಎಸ್‌ಎಲ್ ರೋಡ್‌ಸ್ಟರ್ ಬಿಡುಗಡೆ ಮಾಡಿದೆ.

ಈವರೆಗಿನ ಎಲ್ಲ ಎಸ್‌ಎಲ್ ಸ್ಪೋರ್ಟ್ಸ್ ಕಾರುಗಳನ್ನು ಮರ್ಸಿಡಿಸ್ ಬೆಂಜ್ ಮತ್ತು ಅದರ ರೇಸಿಂಗ್ ವಿಭಾಗ ಎಎಂಜಿ ಜಂಟಿಯಾಗಿ ಅಭಿವೃದ್ಧಿಪಡಿಸುತ್ತಿದ್ದವು. 7ನೇ ತಲೆಮಾರಿನ ಎಸ್‌ಎಲ್‌55 ಅನ್ನು ಎಎಂಜಿಯೇ ಸಂಪೂರ್ಣವಾಗಿ ಅಭಿವೃದ್ಧಿಪಡಿಸಿದೆ.

4 ಲೀಟರ್ ಸಾಮರ್ಥ್ಯ ಮತ್ತು ವಿ8 ಸಂಯೋಜನೆಯ ಎಂಜಿನ್ ಇದರಲ್ಲಿದ್ದು, ಅದಕ್ಕೆ ಎರಡು ಟರ್ಬೊ ಚಾರ್ಜರ್‌ಗಳನ್ನು ಅಳವಡಿಸಲಾಗಿದೆ. ಈ ಎಂಜಿನ್ ಗರಿಷ್ಠ 476 ಬಿಎಚ್‌ಪಿ ಶಕ್ತಿ ಉತ್ಪಾದಿಸುತ್ತದೆ. 700 ಎನ್‌ಎಂ ಟಾರ್ಕ್ ಉತ್ಪಾದಿಸುತ್ತದೆ. ಈ ಕಾರು ಸೊನ್ನೆಯಿಂದ 100 ಕಿ.ಮೀ ವೇಗ ಮುಟ್ಟಲು ತೆಗೆದುಕೊಳ್ಳುವ ಸಮಯ 3.9 ಸೆಕೆಂಡ್ ಮಾತ್ರ. ಇದು



ರೋಡ್‌ಸ್ಟರ್ ಎಎಂಜಿ–ಎಸ್‌ಎಲ್‌55 –ಪಿಟಿಐ ಚಿತ್ರ

ಗಂಟೆಗೆ ಗರಿಷ್ಠ 295 ಕಿ.ಮೀ ವೇಗದಲ್ಲಿ ಚಲಿಸುವ ಸಾಮರ್ಥ್ಯ ಹೊಂದಿದೆ.

ಸೆರಾಮಿಕ್ ಪ್ಯಾಡ್‌ಗಳು ಇರುವ ಪ್ರಬಲ ಬ್ರೇಕ್‌ಗಳು, ಆಲ್ ವೀಲ್ ಡ್ರೈವ್ ವ್ಯವಸ್ಥೆ '4ಮ್ಯಾಟಿಕ್ + 'ಅನ್ನು ಇದು ಹೊಂದಿದೆ. 8 ಏರ್‌ಬ್ಯಾಗ್‌ಗಳನ್ನು ಅಳವಡಿಸಲಾಗಿದೆ. ಈ ಕಾರಿನ ಎಕ್ಸ್ ಶೋರೂಂ ಬೆಲೆ ₹2.25 ಕೋಟಿಯಿಂದ ಆರಂಭವಾಗುತ್ತದೆ.

(ಕಂಪನಿಯ ಆಹ್ವಾನದ ಮೇರೆಗೆ ಪ್ರತಿನಿಧಿ ಮುಂಬೈಗೆ ತೆರಳಿದ್ದರು)

ಗುಜರಾತ್‌ನಲ್ಲಿ ಸೆಮಿಕಂಡಕ್ಟರ್ ಘಟಕ: ಮೈಕ್ರಾನ್

ನವದೆಹಲಿ (ಪಿಟಿಐ): ಕಂಪ್ಯೂಟರ್ ಚಿಪ್ ತಯಾರಿಸುವ ಮೈಕ್ರಾನ್ ಕಂಪನಿಯು ಗುಜರಾತ್‌ನಲ್ಲಿ ಸೆಮಿಕಂಡಕ್ಟರ್ ಜೋಡಣೆ ಮತ್ತು ಪರೀಕ್ಷಾ ಘಟಕ ಸ್ಥಾಪಿಸಲಿದೆ. ಇದರ ಒಟ್ಟು ಹೂಡಿಕೆಯು ₹22,540 ಕೋಟಿ ಆಗಲಿದೆ ಎಂದು ಕಂಪನಿಯು ಗುರುವಾರ ಹೇಳಿದೆ.

ಕೇಂದ್ರ ಸರ್ಕಾರದ ಅಸೆಂಬ್ಲಿ, ಟೆಸ್ಟಿಂಗ್, ಮಾರ್ಕಿಂಗ್ ಆ್ಯಂಡ್ ಪ್ಯಾಕೇಜಿಂಗ್‌ನ (ಎಟಿಎಂಪಿ) ಪರಿಷ್ಕೃತ ಯೋಜನೆಯ ಅಡಿ ಘಟಕ ಸ್ಥಾಪನೆಗೆ ಒಪ್ಪಿಗೆ ದೊರೆತಿದೆ.

ಮೈಕ್ರಾನ್ ಕಂಪನಿಯು ಎರಡು ಹಂತಗಳಲ್ಲಿ ಘಟಕ ಸ್ಥಾಪಿಸಲಿದ್ದು, ₹6,760 ಕೋಟಿ ಬಂಡವಾಳ ಹೂಡಿಕೆ ಮಾಡಲಿದೆ. ಘಟಕ ನಿರ್ಮಾಣ ಯೋಜನೆಯ ಒಟ್ಟು ಮೊತ್ತದಲ್ಲಿ 'ಎಟಿಎಂಪಿ' ಯೋಜನೆಯ ಅಡಿಯಲ್ಲಿ ಶೇ 50ರಷ್ಟು ಹಣವನ್ನು ಕೇಂದ್ರ ಸರ್ಕಾರ ಮತ್ತು ಶೇ 20ರಷ್ಟನ್ನು ಗುಜರಾತ್ ಸರ್ಕಾರ ನೀಡಲಿದೆ.

ಉದ್ದೇಶಿತ ಘಟಕವು ಮುಂಬರುವ ವರ್ಷಗಳಲ್ಲಿ ನೇರವಾಗಿ 5 ಸಾವಿರ ಮತ್ತು ಸ್ಥಳೀಯ ಸಮುದಾಯಕ್ಕೆ 15 ಸಾವಿರ ಉದ್ಯೋಗ ಸೃಷ್ಟಿಸಲಿದೆ. ದೇಶಿ ಮತ್ತು ಜಾಗತಿಕ ಮಾರುಕಟ್ಟೆಗಳ ಬೇಡಿಕೆಯನ್ನು ಈ ಘಟಕ ಪೂರೈಸಲಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಚೀನಾದ ರೆಸ್ಟೋರೆಂಟ್‌ನಲ್ಲಿ ಸ್ಫೋಟ: 31 ಸಾವು

ಬೀಜಿಂಗ್/ಯಿನ್‌ಚುಹಾನ್ (ಪಿಟಿಐ): ವಾಯವ್ಯ ಚೀನಾದ ಬಾರ್ಬೆಕ್ಯೂ ರೆಸ್ಟೊರೆಂಟ್‌ನಲ್ಲಿ ಭಾರಿ ಪ್ರಮಾಣದಲ್ಲಿ ಅಡುಗೆ ಅನಿಲ ಸ್ಫೋಟಿಸಿ 31 ಜನರು ಮೃತಪಟ್ಟಿರುವುದಾಗಿ ಮಾಧ್ಯಮಗಳು ಗುರುವಾರ ವರದಿ ಮಾಡಿವೆ.

ಜಿಂಗ್‌ಕಿಂಗ್ ಜಿಲ್ಲೆಯ ಯಿಂಚುಹಾನ್‌ನ ಜನದಟ್ಟಣೆಯ ಬೀದಿಯಲ್ಲಿ ಬುಧವಾರ ರಾತ್ರಿ 8.40ರ ಸುಮಾರಿಗೆ ಅಡುಗೆ ಅನಿಲ ಸೋರಿಕೆಯಿಂದ ಈ ಸ್ಫೋಟ ಸಂಭವಿಸಿದೆ. ಇದರಿಂದ ಸುತ್ತಲಿನ ಕಟ್ಟಡಗಳಿಗೆ ಭಾರಿ ಹಾನಿಯಾಗಿದೆ. ಗಾಯಗೊಂಡಿರುವ ಏಳು ಜನರಲ್ಲಿ ಒಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ಚೀನಾದ ಸರ್ಕಾರಿ ಸುದ್ದಿ ಸಂಸ್ಥೆ ಶಿನುವಾ ವರದಿ ಮಾಡಿದೆ.

ಕಲ್ಲಿದ್ದಲು ಬರ; ವಿದ್ಯುತ್ 'ಬರೆ'

ಒಂದನೇ ಪುಟದಿಂದ

2015ರಿಂದ ಇಂಧನ ಹೊಂದಾಣಿಕೆ ಶುಲ್ಕ (ಎಫ್‌ಎಸಿ) ವ್ಯವಸ್ಥೆಯೇ ಜಾರಿಯಲ್ಲಿತ್ತು. ಅಂದಿನಿಂದ ಪ್ರತಿ ಮೂರು ತಿಂಗಳಿಗೊಮ್ಮೆ ಮಾತ್ರ ಎಫ್‌ಎಸಿ ಪರಿಷ್ಕರಣೆಯಾಗುತ್ತಿತ್ತು. ಜತೆಗೆ ಇಂಧನದ ವೆಚ್ಚವನ್ನು ಮಾತ್ರ ಪಡೆಯಲಾಗುತ್ತಿತ್ತು.

ಆದರೆ, 2022ರ ಡಿಸೆಂಬರ್ 29ರಂದು ಗೆಜೆಟ್ ಮೂಲಕ ಅಧಿಸೂಚನೆ ಹೊರಡಿಸಿದ ಕೇಂದ್ರ ವಿದ್ಯುತ್ ಸಚಿವಾಲಯ, ಎಫ್‌ಸಿಎ ಅನ್ನು ಎಫ್‌ಪಿಪಿಸಿಎ ಆಗಿ ಬದಲಿಸಿತು. ಜತೆಗೆ, ಇಂಧನದ ವೆಚ್ಚವನ್ನು ಎಸ್ಕಾಂಗಳು ಪ್ರತಿ ತಿಂಗಳು ಗ್ರಾಹಕರಿಂದ ವಸೂಲಿ ಮಾಡಬೇಕು ಎನ್ನುವ ಸ್ಪಷ್ಟ ನಿರ್ದೇಶನ ನೀಡಿತು. ಇಂಧನದ ಜತೆಗೆ ವಿದ್ಯುತ್ ಪ್ರಸರಣ ಸೇರಿದಂತೆ ವಿವಿಧ ವೆಚ್ಚವನ್ನು ಸಹ ಭರಿಸಬೇಕು ಎನ್ನುವ ಸೂಚನೆ ನೀಡಲಾಗಿತ್ತು. ಹೀಗಾಗಿಯೇ, ಹೆಚ್ಚುವರಿ ಹೊರೆಯನ್ನು ಗ್ರಾಹಕರಿಂದ ಎಫ್‌ಪಿಸಿಸಿಎ ವಸೂಲಿ ಮಾಡುವ ಪ್ರಕ್ರಿಯೆಯನ್ನು ಎಸ್ಕಾಂಗಳು ಆರಂಭಿಸಿವೆ ಎಂದು ಇಂಧನ ಇಲಾಖೆ ಅಧಿಕಾರಿಗಳು ವಿವರಿಸುತ್ತಾರೆ.

ಕೇಂದ್ರದ ಸೂಚನೆ ಮೇರೆಗೆ 2 ತಿಂಗಳು ಕಾಲಾವಕಾಶ ಪಡೆದ ಎಸ್ಕಾಂಗಳು ಮಾರ್ಚ್ ತಿಂಗಳಿಂದ ಪರಿಷ್ಕರಿಸಿದ ಎಫ್‌ಪಿಪಿಸಿಎ ಶುಲ್ಕವನ್ನು ಪ್ರತಿ ತಿಂಗಳು ಗ್ರಾಹಕರಿಂದ ವಸೂಲಿ ಮಾಡುತ್ತಿವೆ. ಇಂಧನ ವೆಚ್ಚದಲ್ಲಿ ವ್ಯತ್ಯಾಸವಾದಂತೆ ಎಫ್‌ಪಿಸಿಎನಲ್ಲೂ ಏರಿಳಿಕೆಯಾಗುತ್ತದೆ. ಕೆಲವು ಬಾರಿ ನೆಗೆಟಿವ್ ಶುಲ್ಕ ಸಹ ಬರಬಹುದು. 2023ರ ಮಾರ್ಚ್‌ನಲ್ಲಿ ಒಂದು ಯೂನಿಟ್‌ಗೆ 59 ಪೈಸೆ, ಏಪ್ರಿಲ್‌ನಲ್ಲಿ 1 ಯೂನಿಟ್‌ಗೆ 90 ಪೈಸೆ ಹಾಗೂ ಮೇ ತಿಂಗಳಲ್ಲಿ 1.60 ಪೈಸೆ ಅನ್ನು ಗ್ರಾಹಕರ ಬಿಲ್‌ಗೆ ಸೇರಿಸಲೇಬೇಕಾಗಿತ್ತು.

ಮಾರ್ಚ್‌ನಿಂದ ಪೂರ್ವಾನ್ವಯವಾಗುವಂತೆ ಜೂನ್ ಬಿಲ್‌ನಲ್ಲಿ ಪ್ರತಿಯೂನಿಟ್‌ಗೆ ಒಟ್ಟು ₹3.09 ಅನ್ನು ಸೇರಿಸಿದ್ದರೆ ಬಿಲ್ ಮೊತ್ತ ಮತ್ತಷ್ಟು ಹೆಚ್ಚಳವಾಗುತ್ತಿತ್ತು. ಇದರ ಬದಲು ಮಾರ್ಚ್‌ನಲ್ಲಿ ವಸೂಲಿ ಮಾಡಬೇಕಾಗಿದ್ದ 59 ಪೈಸೆಯನ್ನಷ್ಟೇ ಸೇರಿಸಲಾಗಿದೆ. ಜುಲೈನಂತರ ಆರು ತಿಂಗಳ ಅವಧಿಯಲ್ಲಿ ಈ ಬಾಕಿಯನ್ನು ಹಂಚಿಕೆ ಮಾಡಿ ಬಿಲ್‌ನಲ್ಲಿ ಸೇರಿಸಲು ಅವಕಾಶ ಕೊಡುವಂತೆ ಎಸ್ಕಾಂಗಳ ಮನವಿಗೆ ಕೆಇಆರ್‌ಸಿ ಒಪ್ಪಿಗೆ ನೀಡಿದೆ. ಕೆಇಆರ್‌ಸಿ ಸೂಚನೆ ಪಾಲಿಸಿದ್ದರೆ ಜೂನ್‌ನಲ್ಲೇ ಬಿಲ್ ಮತ್ತಷ್ಟು ದುಬಾರಿಯಾಗುತ್ತಿತ್ತು ಎಂದು ಅಧಿಕಾರಿಗಳು ವಿವರಿಸುತ್ತಾರೆ.

ಮುಳುಗಿದ ದೋಣಿಯಲ್ಲಿದ್ದರು ಪಾಕಿಸ್ತಾನದ 209 ಮಂದಿ

ಕರಾಚಿ (ರಾಯಿಟರ್ಸ್): ಗ್ರೀಕ್ ಸಮುದ್ರದಲ್ಲಿ ಕಳೆದ ವಾರ ಮುಳುಗಿದ ಪ್ರಯಾಣಿಕ ದೋಣಿಯಲ್ಲಿ ಪಾಕಿಸ್ತಾನದ 209 ಮಂದಿ ಇದ್ದರು ಎಂದು ಪಾಕಿಸ್ತಾನದ ತನಿಖಾ ಸಂಸ್ಥೆಯು ಗುರುವಾರ ಮಾಹಿತಿ ಒದಗಿಸಿದೆ.

ಲಿಬಿಯಾದಿಂದ ಗ್ರೀಕ್‌ಗೆ ಹೊರಟಿದ್ದ ದೋಣಿ ಏರಿದ್ದ ತಮ್ಮ ಕುಟುಂಬ ಸದಸ್ಯರು ಕಣ್ಮರೆಯಾದ ಬಗ್ಗೆ ಸ್ಥಳೀಯರು ನೀಡಿರುವ ಮಾಹಿತಿ ಆಧರಿಸಿ ಈ ಅಂಕಿಅಂಶ ಪ್ರಕಟಿಸಲಾಗಿದೆ ಎಂದು ಫೆಡರಲ್ ತನಿಖಾ ಏಜೆನ್ಸಿಯು (ಎಫ್‌ಐಎ) ರಾಯಿಟರ್ಸ್ ಸುದ್ದಿಸಂಸ್ಥೆಗೆ ತಿಳಿಸಿದೆ.

ದುರಂತದ ಸ್ಥಳದಿಂದ ಒದಗಿಸಿರುವ ಅಧಿಕೃತ ಅಂಕಿಅಂಶದ ಪ್ರಕಾರ ಈವರೆಗೆ 82 ಜನರು ಮೃತಪಟ್ಟಿದ್ದಾರೆ. 104 ಜನರು ಪಾರಾಗಿದ್ದು, ಇದರಲ್ಲಿ 12 ಪಾಕಿಸ್ತಾನಿಯರಿದ್ದಾರೆ. ಇದನ್ನು ಪರಿಶೀಲಿಸಲಾಗುತ್ತಿದೆ ಎಂದು ಎಫ್‌ಐಎ ತಿಳಿಸಿದೆ.

ದೋಣಿಯಲ್ಲಿದ್ದವರು 181 ಪಾಕಿಸ್ತಾನಿಯರು ಮತ್ತು 28 ಮಂದಿ ಪಾಕ್ ಆಕ್ರಮಿತ ಕಾಶ್ಮೀರದವರು. ಮೃತರ ಗುರುತು ಪತ್ತೆಗೆ 201 ಕುಟುಂಬಗಳ ಸದಸ್ಯರ ಡಿಎನ್‌ಎ ಮಾದರಿ ಸಂಗ್ರಹಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ಪಾಕಿಸ್ತಾನದಲ್ಲಿ ಈವರೆಗೆ 29 ಶಂಕಿತ ಮಾನವ ಕಳ್ಳಸಾಗಣೆದಾರರನ್ನು ಬಂಧಿಸಲಾಗಿದೆ ಎಂದು ಎಫ್‌ಐಎ ತಿಳಿಸಿದೆ.

ದುರಂತಕ್ಕೀಡಾದ ದೋಣಿಯಲ್ಲಿ ಸುಮಾರು 400ರಿಂದ 750 ಜನರಿದ್ದರು ಎನ್ನಲಾಗಿದೆ.

ಶ್ರೀಲಂಕಾ: 22 ಭಾರತೀಯ ಮೀನುಗಾರರ ಬಂಧನ

ಕೊಲಂಬೊ(ಪಿಟಿಐ): ಶ್ರೀಲಂಕಾದ ಜಲ ಗಡಿ ಪ್ರವೇಶಿಸಿ ಮೀನುಗಾರಿಕೆ ಮಾಡುತ್ತಿದ್ದ ಆರೋಪದ ಮೇಲೆ ಶ್ರೀಲಂಕಾದ ನೌಕಾಪಡೆಯು 22 ಮಂದಿ ಭಾರತೀಯ ಮೀನುಗಾರರನ್ನು ಬಂಧಿಸಿ, ನಾಲ್ಕು ದೋಣಿಗಳನ್ನು ವಶಕ್ಕೆ ಪಡೆದಿದೆ ಎಂದು ಗುರುವಾರ ಅಧಿಕಾರಿಗಳು ತಿಳಿಸಿದ್ದಾರೆ.

ಜಾಫ್ನಾ ಜಿಲ್ಲೆಯ ವಾಯವ್ಯ ಭಾಗದಲ್ಲಿ ಬುಧವಾರ ವಿಶೇಷ ಕಾರ್ಯಾಚರಣೆ ನಡೆಸಿ ಭಾರತೀಯ ಮೀನುಗಾರರನ್ನು ಬಂಧಿಸಿದ್ದು ಅವರು ತಮಿಳುನಾಡಿನವರಾಗಿದ್ದಾರೆ. ಇವರನ್ನು ಬಳಿಕ ಬಂದರಿಗೆ ಕರೆತಂದು ಮೀನುಗಾರಿಕೆ ಇಲಾಖೆ ಅಧಿಕಾರಿಗೆ ಹಸ್ತಾಂತರಿಸಲಾಯಿತು ಎಂದು ನೌಕಾಪಡೆ ತಿಳಿಸಿದೆ.

‘ಎಂಕ್ಯೂ9’ ಶಸ್ತ್ರಸಜ್ಜಿತ ಡ್ರೋನ್ ಖರೀದಿ • ಭಾರತದಲ್ಲೇ ಎಫ್ 414 ಎಂಜಿನ್ ತಯಾರಿಕೆಗೆ ಒಪ್ಪಂದ

ರಾಷ್ಟ್ರೀಯ ಭದ್ರತೆ, ಸೇನೆ ಬಲವೃದ್ಧಿಗೆ ಒತ್ತು

ವಾಷಿಂಗ್ಟನ್ (ಪಿಟಿಐ): ರಾಷ್ಟ್ರೀಯ ಭದ್ರತೆ ಮತ್ತು ಕಣ್ಗಾವಲು ಕಾರ್ಯಕ್ಕೆ ಹೆಚ್ಚಿನ ಬಲ ನೀಡಲಿದೆ ಎನ್ನಲಾದ ‘ಎಂಕ್ಯೂ-9 ರೀಪರ್’ ಶಸ್ತ್ರ ಸಜ್ಜಿತ ಡ್ರೋನ್ ಅನ್ನು ಭಾರತವು ಖರೀದಿಸಲಿದೆ. ಪ್ರಧಾನಿ ಮೋದಿ, ಅಧ್ಯಕ್ಷ ಜೋ ಬೈಡನ್ ಚರ್ಚೆ ವೇಳೆ ಈ ಕುರಿತ ಒಪ್ಪಂದಕ್ಕೆ ಬರಲಾಗಿದೆ.

ಜನರಲ್ ಆಟೊಮಿಕ್ಸ್ ಸಂಸ್ಥೆಯು ಅಮೆರಿಕ ಸೇನೆಗೆ ಈ ಡ್ರೋನ್ ಅನ್ನು ತಯಾರಿಸುತ್ತಿದೆ. ಹಿಂದಿನ ‘ಎಂಕ್ಯೂ-1’ ಮಾದರಿಗೆ ಹೋಲಿಸಿದರೆ ಎಂಕ್ಯೂ-9 ಮಾದರಿಯು ಶೇ 500ರಷ್ಟು ಹೆಚ್ಚು ತೂಕ ಒಯ್ಯುವ ಮತ್ತು ಶೇ 9ರಷ್ಟು ಅಧಿಕ ಅಶ್ವಶಕ್ತಿ ಸಾಮರ್ಥ್ಯವನ್ನು ಒಳಗೊಂಡಿದೆ.

ಹೆಚ್ಚು ದೂರ ಸಂಚರಿಸಬಹುದಾದ, ನಿಖರ ಕಣ್ಗಾವಲು ಹಾಗೂ ದಾಳಿ ಸಾಮರ್ಥ್ಯವನ್ನು ಇದು ಒಳಗೊಂಡಿದೆ. 27 ಗಂಟೆ ಕಾಲ ಕಾರ್ಯನಿರತ ಸಾಮರ್ಥ್ಯದ ಇದರ ವೇಗ 240 ಕೆಟಿಎಎಸ್ ಆಗಿದ್ದು, 50 ಸಾವಿರ ಅಡಿ ಎತ್ತರದಲ್ಲಿ ಹಾರಾಟ ನಡೆಸಲಿದೆ. ಸುಮಾರು 1,746 ಕೆ.ಜಿ ತೂಕದ ಸಾಮರ್ಥ್ಯ ಹೊಂದಿದೆ ಎಂದು ಜನರಲ್ ಆಟೊಮಿಕ್ಸ್ ತಿಳಿಸಿದೆ.

‘ಎಂಕೆ-2-ತೇಜಸ್’ ಎಂಜಿನ್ ತಯಾರಿಕೆಗೆ ಒಪ್ಪಂದ: ವಾಯುಪಡೆಯ ಲಘು ಯುದ್ಧ ವಿಮಾನ (ಎಲ್‌ಸಿಎ) ‘ಎಂಕೆ-2-ತೇಜಸ್’ನ ಎಂಜಿನ್‌ಗಳನ್ನು ಭಾರತದಲ್ಲಿಯೇ ತಯಾರಿಸುವ ಬಗ್ಗೆ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್)ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಎಂದು ಅಮೆರಿಕದ ಜಿಇ ಏರೋಸ್ಪೇಸ್ ಗುರುವಾರ ಘೋಷಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿ ಸಂದರ್ಭದಲ್ಲಿಯೇ ಮಹತ್ವದ ಈ ಘೋಷಣೆ ಹೊರಬಿದ್ದಿದೆ. ಜಿಇ ಏರೋಸ್ಪೇಸ್‌ನ ಎಫ್ -414 ಎಂಜಿನ್‌ಗಳನ್ನು ಭಾರತದಲ್ಲಿಯೇ ತಯಾರಿಸುವುದು ಈ ಒಪ್ಪಂದದ ಪ್ರಮುಖ ಭಾಗ. ಇದರ ರಫ್ತು ಅನುಮತಿ ಪಡೆಯಲು ಸಂಸ್ಥೆಯು ಅಮೆರಿಕ ಸರ್ಕಾರದ ಜೊತೆಗೆ ಚರ್ಚೆ ನಡೆಸಲಿದೆ ಎಂದು ಹೇಳಿಕೆ ತಿಳಿಸಿದೆ.

‘ಉಭಯ ದೇಶಗಳ ನಡುವೆ ರಕ್ಷಣಾ ಕ್ಷೇತ್ರದ ಸಹಕಾರ ಬಲಪಡಿಸಲು, ಭಾರತ ಮುಖ್ಯವಾಗಿ ಎಚ್‌ಎಎಲ್ ಜೊತೆಗೆ ದೀರ್ಘಕಾಲಿಕ ಸಹಭಾಗಿತ್ವ ಹೊಂದುವಲ್ಲಿ ಇದು ಐತಿಹಾಸಿಕ ಒಪ್ಪಂದವಾಗಿದೆ’ ಜಿಇ ಏರೋಸ್ಪೇಸ್‌ನ ಸಿಇಒ ಮತ್ತು ಅಧ್ಯಕ್ಷ ಎಚ್.ಲಾರೆನ್ಸ್ ಕಲ್ಪ್ ಜೂನಿಯರ್ ತಿಳಿಸಿದರು.





ಶ್ವೇತಭವನದಲ್ಲಿ ತಮ್ಮ ಗೌರವಾರ್ಥ ಏರ್ಪಡಿಸಿದ್ದ ಔತಣಕೂಟಕ್ಕೆ ಆಗಮಿಸಿದ ಪ್ರಧಾನಿ ಮೋದಿ ಅವರು ಅಮೆರಿಕದ ಪ್ರಥಮ ಮಹಿಳೆ ಜಿಲ್ ಬೈಡನ್ ಮತ್ತು ಅಧ್ಯಕ್ಷ ಜೋ ಬೈಡನ್ ಅವರ ಜೊತೆಗೂಡಿ ಅತಿಥಿಗಳತ್ತ ಕೈಬೀಸಿದರು (ಎಡಚಿತ್ರ). ಪ್ರಧಾನಿ ನರೇಂದ್ರ ಮೋದಿ ಬುಧವಾರ ವಾಷಿಂಗ್ಟನ್‌ನಲ್ಲಿ ಭಾರತ ಮೂಲದ ಅಮೆರಿಕನ್ನರನ್ನು ಭೇಟಿ ಮಾಡಿದರು –ಪಿಟಿಐ ಚಿತ್ರಗಳು

ಮುಖ್ಯಾಂಶಗಳು

- ಸೆಮಿಕಂಡಕ್ಟರ್‌ಗಳ ಪೂರೈಕೆ ವ್ಯವಸ್ಥೆ ಬಲಪಡಿಸಲು ಭಾರತದ ಜೊತೆಗೆ ಅಮೆರಿಕ ಕಂಪನಿಗಳ ಸಹಯೋಗ.
- 60 ಸಾವಿರ ಭಾರತೀಯ ಎಂಜಿನಿಯರ್‌ಗಳಿಗೆ ತರಬೇತಿ ಕಾರ್ಯ ಆಯೋಜಿಸಲು ಲ್ಯಾಂಬ್ ರೀಸರ್ಚ್ ನಿರ್ಧಾರ
- ಸಂಶೋಧನೆ ಮತ್ತು ವಾಣಿಜ್ಯ ವಹಿವಾಟು ವೃದ್ಧಿಗಾಗಿ ಭಾರತದಲ್ಲಿ ಸೆಮಿಕಂಡಕ್ಟರ್ ಕೇಂದ್ರ ಸ್ಥಾಪನೆಗೆ ಅಪ್ಲೈಯಡ್ ಮೆಟೀರಿಯಲ್ಸ್ ನಿರ್ಧಾರ.
- ಅಡ್ವಾನ್ಸಡ್ ಕಂಪ್ಯೂಟಿಂಗ್, ಕೃತಕ ಬುದ್ಧಿಮತ್ತೆ ಕುರಿತು ಔದ್ಯಮಿಕ, ಶಿಕ್ಷಣ ಕ್ಷೇತ್ರ ಮತ್ತು ಸರ್ಕಾರದ ನಡುವೆ ಸಹಭಾಗಿತ್ವ ಹೊಂದಲು ಪೂರಕ ವ್ಯವಸ್ಥೆ ಸ್ಥಾಪನೆಗೆ ಭಾರತ–ಅಮೆರಿಕ ನಿರ್ಧಾರ.
- ಮುಕ್ತ ರೇಡಿಯೊ ಆ್ಯಕ್ಸೆಸ್ ನೆಟ್‌ವರ್ಕ್ (ಆರ್‌ಎಎನ್) ಸಿಸ್ಟಮ್ಸ್ ಒಳಗೊಂಡಂತೆ 5ಜಿ, 6ಜಿ ತಂತ್ರಜ್ಞಾನ ಕ್ಷೇತ್ರದಲ್ಲಿ ಉಭಯ ದೇಶಗಳ ಸಹಭಾಗಿತ್ವ.

‘ಅಭಿವೃದ್ಧಿಗಾಗಿ ಪ್ರತಿಭಾನ್ವಿತರ ಹರಿವು’

ವಾಷಿಂಗ್ಟನ್ (ಪಿಟಿಐ): ‘ಅಭಿವೃದ್ಧಿಯ ವೇಗವನ್ನು ನಿರಂತರವಾಗಿ ಕಾಯ್ದುಕೊಳ್ಳಲು ಭಾರತ ಮತ್ತು ಅಮೆರಿಕ ನಡುವೆ ‘ಪ್ರತಿಭಾನ್ವಿತರ ಹರಿವು’ ಅತ್ಯಗತ್ಯ’ ಎಂದು ಪ್ರಧಾನಿ ನರೇಂದ್ರ ಮೋದಿ ಇಲ್ಲಿ ಪ್ರತಿಪಾದಿಸಿದರು.

‘ಭವಿಷ್ಯಕ್ಕಾಗಿ ಕೌಶಲ’ ಕುರಿತು ರಾಷ್ಟ್ರೀಯ ವಿಜ್ಞಾನ ಪ್ರತಿಷ್ಠಾನ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಜಿಲ್ ಬೈಡನ್ ಆಹ್ವಾನದ ಮೇರೆಗೆ ಅಲೆಕ್ಸಾಂಡ್ರಿಯ ಮತ್ತು ವರ್ಜಿನಿಯಾದ ಕೇಂದ್ರಗಳಿಗೂ ಭೇಟಿ ನೀಡಿದ್ದರು.

ಐದು ಅಂಶಗಳ ಪ್ರಸ್ತಾವ: ಶಿಕ್ಷಣ, ಸಂಶೋಧನೆ ಕ್ಷೇತ್ರದಲ್ಲಿ ಚೇತರಿಕೆಗಾಗಿ ಭಾರತ ಮತ್ತು ಅಮೆರಿಕದ ಸಹಭಾಗಿತ್ವ ಹೊಂದಲು ಮೋದಿ ಐದು ಅಂಶಗಳನ್ನು ಪ್ರಸ್ತಾಪಿಸಿದರು ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಉದ್ಯಮ, ಶಿಕ್ಷಣ ಕ್ಷೇತ್ರ ಒಗ್ಗೂಡಿಸಲು ಸಮಗ್ರ ಯತ್ನ, ಶಿಕ್ಷಕರು–ವಿದ್ಯಾರ್ಥಿಗಳ ವಿನಿಮಯಕ್ಕೆ ಉತ್ತೇಜನ, ವಿವಿಧ ವಿಷಯಗಳಿಗೆ ಸಂಬಂಧಿಸಿ ಹ್ಯಾಕಥಾನ್‌ಗಳ ಆಯೋಜನೆ, ಪರಸ್ಪರ ಕೌಶಲ ಗುರುತಿಸುವಿಕೆ ಮತ್ತು ಶಿಕ್ಷಣ, ಸಂಶೋಧನೆ ಕ್ಷೇತ್ರದ ಪರಿಣತರ ಭೇಟಿಗೆ ಅವಕಾಶ –ಇವು ಆ ಐದು ಅಂಶಗಳು ಎಂದು ತಿಳಿಸಿದೆ.

ನಾಸಾ, ಇಸ್ರೊ ಸಹಭಾಗಿತ್ವ

ವಾಷಿಂಗ್ಟನ್ (ಪಿಟಿಐ): ಬಾಹ್ಯಾಕಾಶ ಸಂಶೋಧನೆಯ ಹೊಸ ಸಾಧ್ಯತೆಗಳನ್ನು ಗುರುತಿಸಲು ಸಮಾನ ಮನಸ್ಕ ರಾಷ್ಟ್ರಗಳನ್ನು ಒಳಗೊಂಡ ಅಮೆರಿಕ ನೇತೃತ್ವದ ‘ಅರ್ಟೆಮಿಸ್ ಅಕಾರ್ಡ್’ ಸಮೂಹ ಸೇರಲು ಭಾರತ ನಿರ್ಧರಿಸಿದೆ.

ಅಲ್ಲದೆ, 2024ರಲ್ಲಿ ಭಾರತದ ಇಸ್ರೊ ಮತ್ತು ಅಮೆರಿಕದ ನಾಸಾ ಜಂಟಿಯಾಗಿ ಅಂತರ ರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದ ಕಾರ್ಯಕ್ರಮ ರೂಪಿಸಲು ನಿರ್ಧರಿಸಿವೆ ಎಂದು ಶ್ವೇತಭವನ ಪ್ರಕಟಿಸಿದೆ.

‘ಅರ್ಟೆಮಿಸ್ ಅಕಾರ್ಡ್’ ಬಾಹ್ಯಾಕಾಶ ಸಂಶೋಧನೆಗೆ ನೆರವಾಗುವ ಸಮಾನ ನಿಯಮದಡಿ ಅಸ್ತಿತ್ವಕ್ಕೆ ಬಂದಿದೆ. 2025ರ ವೇಳೆಗೆ ಚಂದ್ರಯಾನಕ್ಕೆ ಮಾನವನನ್ನು ಕಳುಹಿಸುವ ಗುರಿ ಸಾಧಿಸುವುದು ಇದರಲ್ಲಿ ಸೇರಿದೆ.

ಮೋದಿ – ಜೋ ಬೈಡನ್ ಚರ್ಚೆ

ವಾಷಿಂಗ್ಟನ್ (ಪಿಟಿಐ): ಭಾರತ ಮತ್ತು ಅಮೆರಿಕ ನಡುವಿನ ಬಾಂಧವ್ಯವನ್ನು ಇನ್ನಷ್ಟು ದೃಢವಾಗಿಸುವ ಹೆಜ್ಜೆಯಾಗಿ ಪ್ರಧಾನಿ ನರೇಂದ್ರ ಮೋದಿ ಇಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಜೊತೆ ಮುಖಾಮುಖಿ ಚರ್ಚಿಸಿದರು. ಜೊತೆಗೆ ಉನ್ನತ ಮಟ್ಟದ ನಿಯೋಗದ ಸಭೆಗಳು ನಡೆದವು.

ರಕ್ಷಣಾ ಕ್ಷೇತ್ರ, ಬಾಹ್ಯಾಕಾಶ, ಶುದ್ಧ ಇಂಧನ ಮತ್ತು ಕಠಿಣ, ಕ್ಲಿಷ್ಟಕರ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಉಭಯ ದೇಶಗಳ ಸಹಭಾಗಿತ್ವ ಹೊಂದುವುದು ಹಾಗೂ ಕಾರ್ಯತಂತ್ರ ಪಾಲುದಾರಿಕೆಯನ್ನು ಉತ್ತಮಪಡಿಸುವ ಚರ್ಚೆಗೆ ಹೆಚ್ಚಿನ ಒತ್ತು ನೀಡಲಾಯಿತು.

‘ಉಭಯ ನಾಯಕರ ಈ ಭೇಟಿಯು ಎರಡೂ ರಾಷ್ಟ್ರಗಳ ನಡುವಿನ ಪಾಲುದಾರಿಕೆ ಬಲಪಡಿಸಲಿದೆ. ಭಾರತೀಯರು ಮತ್ತು ಅಮೆರಿಕನ್ನರ ಸ್ನೇಹ ಮತ್ತು ಕೌಟುಂಬಿಕ ಬಾಂಧವ್ಯವನ್ನು ಬಲಪಡಿಸಲಿದೆ’ ಎಂದು ಶ್ವೇತಭವನ ಉಭಯ ನಾಯಕರ ಭೇಟಿಯನ್ನು ಬಣ್ಣಿಸಿದೆ.

ಹಿಂದೂ ಮಹಾಸಾಗರ ವಲಯದ ರಕ್ಷಣೆ, ಮುಕ್ತ ಹಾಗೂ ಅಭ್ಯುದಯ ಕುರಿತಂತೆ ಉಭಯ ದೇಶಗಳ ಬದ್ಧತೆಯನ್ನು ಗಟ್ಟಿಗೊಳಿಸಲಿದೆ. ರಕ್ಷಣಾ ಕ್ಷೇತ್ರ, ಶುದ್ಧ ಇಂಧನ, ಬಾಹ್ಯಾಕಾಶ ಹಾಗೂ ತಂತ್ರಜ್ಞಾನ ಕ್ಷೇತ್ರದ ಪಾಲುದಾರಿಕೆಯನ್ನು ಇನ್ನಷ್ಟು ಎತ್ತರಕ್ಕೆ ಒಯ್ಯಲಿದೆ ಎಂದು ತಿಳಿಸಿದೆ.

- ಬೆಳಿಗ್ಗೆ ಶ್ವೇತಭವನದ ಸೌತ್‌ಲಾನ್‌ಗೆ ಆಗಮಿಸಿದ ಮೋದಿ ಅವರಿಗೆ 21 ಕುಶಾಲತೋಪುಗಳನ್ನು ಸಿಡಿಸಿ ಸ್ವಾಗತ ಕೋರಲಾಯಿತು.
- ಖುದ್ದು ಅಧ್ಯಕ್ಷ ಜೋ ಬೈಡನ್ –ಜಿಲ್ ದಂಪತಿ ಪ್ರಧಾನಿ ಮೋದಿ ಅವರನ್ನು ಬರಮಾಡಿಕೊಂಡರು. ಉಪಾಧ್ಯಕ್ಷೆ ಕಮಲಾ ಹ್ಯಾರಿಸ್, ಅವರ ಪತಿ ಡಗ್ಲಾಸ್ ಎಂಹಾಫ್ ಅವರೂ ಭಾಗವಹಿಸಿದ್ದರು.
- ಸ್ವಾಗತ ಸಮಾರಂಭದ ಬಳಿಕ ಶ್ವೇತಭವನದಲ್ಲಿ ಉಭಯ ದೇಶಗಳ ಪ್ರಮುಖರಿದ್ದ ನಿಯೋಗದ ನಡುವೆ ದ್ವಿಪಕ್ಷೀಯ ಸಭೆ ನಡೆಯಿತು.
- ಜೋ ಬೈಡನ್ ಮತ್ತು ಮೋದಿ ಶ್ವೇತಭವನದ ಪೂರ್ವ ಕೊಠಡಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಅಮೆರಿಕ ಮತ್ತು ಭಾರತದ ಮಾಧ್ಯಮಗಳಿಂದ ತಲಾ ಒಂದು ಪ್ರಶ್ನೆಗೆ ಅವಕಾಶವಿತ್ತು. ಸಾಮಾನ್ಯವಾಗಿ ಎರಡು ಪ್ರಶ್ನೆಗೆ ಅವಕಾಶ ಇರುತ್ತಿತ್ತು. 2009ರಲ್ಲಿ ಆಗಿನ ಪ್ರಧಾನಿ ಮನಮೋಹನ್ ಸಿಂಗ್ ಭೇಟಿ ನೀಡಿದ್ದ ಸಂದರ್ಭದಲ್ಲಿಯೂ ಉಭಯ ಕಡೆಗಳಿಂದ ತಲಾ ಒಂದು ಪ್ರಶ್ನೆ ಕೇಳಲಾಗಿತ್ತು.

‘ವೀಸಾ ನವೀಕರಣ ಸರಳಗೊಳಿಸಲು ಕ್ರಮ’

ವಾಷಿಂಗ್ಟನ್ (ರಾಯಿಟರ್ಸ್): ಭಾರತೀಯರು ಇನ್ನು ಮುಂದೆ ಅಮೆರಿಕದಲ್ಲಿ ಉದ್ಯೋಗ ಪಡೆಯುವುದು ಹಾಗೂ ವಾಸ ಮಾಡುವುದನ್ನು ಸುಲಭಗೊಳಿಸುವುದಕ್ಕಾಗಿ ವೀಸಾಕ್ಕೆ ಸಂಬಂಧಿಸಿದ ನಿಬಂಧನೆಗಳನ್ನು ಸರಳಗೊಳಿಸಲು ಅಧ್ಯಕ್ಷ ಜೋ ಬೈಡನ್ ಆಡಳಿತ ಕ್ರಮ ಕೈಗೊಳ್ಳಲಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಪ್ರವಾಸ ಕೈಗೊಂಡಿರುವ ಸಂದರ್ಭದಲ್ಲಿಯೇ ಈ ಕುರಿತು ಮಹತ್ವದ ಘೋಷಣೆ ಹೊರ ಬೀಳುವ ಸಾಧ್ಯತೆ ಇದೆ ಎಂದು ವಿಶ್ವಸನೀಯ ಮೂಲಗಳು ಹೇಳಿವೆ.

‘ಉದ್ಯೋಗ ಅರಸಿ ಅಮೆರಿಕಕ್ಕೆ ಬಂದಿರುವ ಭಾರತೀಯರು ಸೇರಿದಂತೆ ವಿದೇಶಿಯರಿಗೆ ಎಚ್–1ಬಿ ವೀಸಾ ನೀಡಲಾಗಿದೆ. ಈ ಉದ್ಯೋಗಿಗಳು ತಮ್ಮ ದೇಶಗಳಿಗೆ ತೆರಳದೇ, ಅಮೆರಿಕದಲ್ಲಿಯೇ ವೀಸಾ ನವೀಕರಣ ಮಾಡಿಕೊಳ್ಳಲು ಅನುಕೂಲ ಕಲ್ಪಿಸುವ ಯೋಜನೆಯನ್ನು ವಿದೇಶಾಂಗ ಇಲಾಖೆ ಪ್ರಾಯೋಗಿಕವಾಗಿ ಆರಂಭಿಸಲಿದೆ’ ಎಂದು ಇವೇ ಮೂಲಗಳು ತಿಳಿಸಿವೆ.

‘ವೀಸಾ ನವೀಕರಣಕ್ಕೆ ಸಂಬಂಧಿಸಿದ ಈ ಯೋಜನೆಯನ್ನು ಮುಂದಿನ ದಿನಗಳಲ್ಲಿ ವಿಸ್ತರಿಸುವುದರಿಂದ ಕೌಶಲ ಹೊಂದಿದ ಭಾರತೀಯ ಉದ್ಯೋಗಿಗಳಿಗೆ ಹಾಗೂ ತಾತ್ಕಾಲಿಕ ವೀಸಾ ಹೊಂದಿದವರಿಗೆ ಹೆಚ್ಚು ಅನುಕೂಲವಾಗಲಿದೆ’ ಎಂದು ತಿಳಿಸಿವೆ.

ಆದರೆ, ಯಾವ ಬಗೆಯ ವೀಸಾಗಳನ್ನು ನವೀಕರಿಸಲಾಗುತ್ತದೆ? ಈ ಪ್ರಾಯೋಗಿಕ ಯೋಜನೆಯನ್ನು ಯಾವಾಗ ಆರಂಭಿಸಲಾಗುತ್ತದೆ ಎಂಬ ಪ್ರಶ್ನೆಗಳಿಗೆ ಉತ್ತರಿಸಲು ವಿದೇಶಾಂಗ ಇಲಾಖೆ ವಕ್ತಾರ ನಿರಾಕರಿಸಿದ್ದಾರೆ.

‘ವೀಸಾ ನವೀಕರಣ ಕೋರಿ ಸಲ್ಲಿಕೆಯಾಗುವ ಅರ್ಜಿಗಳ ಪೈಕಿ ಕೆಲ ಅರ್ಜಿಗಳನ್ನು ವಿಲೇವಾರಿ ಮಾಡುವುದರೊಂದಿಗೆ ಈ ಪ್ರಾಯೋಗಿಕ ಯೋಜನೆಗೆ ಚಾಲನೆ ನೀಡಲಾಗುವುದು. ನಂತರದ ವರ್ಷಗಳಲ್ಲಿ ಈ ಸಂಖ್ಯೆಯನ್ನು ಹೆಚ್ಚಿಸಲಾಗುತ್ತದೆ’ ಎಂದೂ ಹೇಳಿದ್ದಾರೆ.

ಭಾರತೀಯರಿಗೆ ಅನುಕೂಲ: ವಿಶೇಷ ಕೌಶಲ ಹೊಂದಿದ ಉದ್ಯೋಗಿಗಳನ್ನು ನೇಮಕ ಮಾಡಿಕೊಳ್ಳಲು ಅಮೆರಿಕ ಸರ್ಕಾರ ಕಂಪನಿಗಳಿಗೆ ಅನುಮತಿ ನೀಡುತ್ತದೆ. ನೇಮಕಗೊಳ್ಳುವ ಉದ್ಯೋಗಿಗಳಿಗಾಗಿ ಪ್ರತಿ ವರ್ಷ 65 ಸಾವಿರ ಎಚ್–1ಬಿ ವೀಸಾ ವಿತರಿಸುತ್ತದೆ. ಹೆಚ್ಚಿನ ಶೈಕ್ಷಣಿಕ ಅರ್ಹತೆ ಹೊಂದಿರುವ ಉದ್ಯೋಗಿಗಳಿಗಾಗಿ ಹೆಚ್ಚುವರಿಯಾಗಿ 20 ಸಾವಿರ ವೀಸಾ ನೀಡಲಾಗುತ್ತದೆ.

ಮೋದಿ ಭಾಷಣ ಬಹಿಷ್ಕರಿಸಿದ ಮೂವರು ಸಂಸದರು

ವಾಷಿಂಗ್ಟನ್ (ರಾಯಿಟರ್ಸ್): ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಕಡೆಗಣಿಸಲಾಗುತ್ತಿದೆ ಎಂದು ಪ್ರಧಾನಿ ಮೋದಿ ಅವರ ಪ್ರವಾಸದ ಅವಧಿಯಲ್ಲಿಯೇ ಕೆಲ ಸಂಸದರು, ಮಾನವಹಕ್ಕುಗಳ ಹೋರಾಟಗಾರರು ಕಳವಳ ವ್ಯಕ್ತಪಡಿಸಿದರು.

ಡೆಮಾಕ್ರಟಿಕ್ ಪಕ್ಷದ ಸದಸ್ಯರಾದ ಒಕಾಸಿಯೊ ಕಾರ್ಟೆಜ್, ಇಲ್ಹಾನ್ ಓಮರ್, ರಶಿದಾ ತಾಯಿಬ್ ಅವರು, ಪ್ರಜಾಪ್ರಭುತ್ವ ಕಡೆಗಣಿಸುವ ಕ್ರಮವನ್ನು ಖಂಡಿಸಿ ತಾವು, ಅಮೆರಿಕ ಸಂಸತ್ತಿನಲ್ಲಿನ ಮೋದಿ ಭಾಷಣವನ್ನು ಬಹಿಷ್ಕರಿಸುವುದಾಗಿ ಪ್ರಕಟಿಸಿದರು.

ಪಕ್ಷದ ನನ್ನ ಸಹಸದಸ್ಯರು ಬಹುತ್ವ, ಸಹಿಷ್ಣುತೆ, ಸ್ವಾತಂತ್ರ್ಯಕ್ಕಾಗಿ ಒತ್ತಾಯಿಸಿ ನನ್ನ ಜೊತೆಗೆ ನಿಲ್ಲಬೇಕು ಎಂದು ಭಾವಿಸುತ್ತೇನೆ ಎಂದು ಒಕಾಸಿಯೊ ಕಾರ್ಟೆಜ್ ಅವರು ಟ್ವೀಟ್ ಮಾಡಿದರು.

ಭಾರತದಲ್ಲಿ ಪ್ರಜಾಪ್ರಭುತ್ವ ಕಡೆಗಣನೆ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆ ಕುರಿತು ಮೋದಿ ಅವರ ಜೊತೆಗೆ ಪ್ರಸ್ತಾಪ ಮಾಡಬೇಕು ಎಂದು ಅಧ್ಯಕ್ಷ ಜೋ ಬೈಡನ್ ಮೇಲೂ ಒತ್ತಡ ಹೇರಲಾಗಿತ್ತು.

ಮಾಧ್ಯಮ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ ಮತ್ತು ಇತರೆ ವಿಷಯಗಳ ಕುರಿತು ಬೈಡನ್ ಅವರು ಗೌರವಯುತ ಮಾರ್ಗದಲ್ಲಿಯೇ ಮೋದಿ ಗಮನಕ್ಕೆ ತರಲಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಧಿಕಾರಿಯೊಬ್ಬರು ತಿಳಿಸಿದರು.

ಮೋದಿ ಪ್ರವಾಸದ ವೇಳೆ ಪ್ರತಿಭಟನೆಗೆ ಸಿದ್ಧತೆ ನಡೆಸಿದ್ದ ಸಂಘಟನೆಯೊಂದು, ಈ ಅಂಶಗಳ ಬಗ್ಗೆ ಬಹಿರಂಗವಾಗಿಯೇ ಮೋದಿ ಅವರ ಗಮನಸೆಳೆಯಬೇಕು ಎಂದು ಆಗ್ರಹ ಪಡಿಸಿದೆ.

‘ಅಮೂಲ್ ಗರ್ಲ್’ ಸೃಷ್ಟಿಕರ್ತ ಸೆಲ್ವೆಸ್ಟರ್ ದಾಕುನ್ಹಾ ನಿಧನ



ಸಿಲ್ವೆಸ್ಟರ್ ಡಚುನ್ಹ

ಮುಂಬೈ (ಪಿಟಿಐ): ಭಾರತೀಯ ಜಾಹೀರಾತು ಉದ್ಯಮದ ಹಿರಿಯ ಪ್ರತಿಭೆ, ‘ಅಮೂಲ್ ಗರ್ಲ್’ ಅಭಿಯಾನದ ಸೃಷ್ಟಿಕರ್ತ ಸಿಲ್ವೆಸ್ಟರ್ ದಾಕುನ್ಹಾ ಅವರು ಮುಂಬೈನಲ್ಲಿ ಮಂಗಳವಾರ ರಾತ್ರಿ ನಿಧನರಾಗಿದ್ದಾರೆ.

ಗುಜರಾತ್ ಹಾಲು ಸಹಕಾರ ಸಂಘಗಳ ಒಕ್ಕೂಟದ (ಜಿಸಿಎಂಎಂಎಫ್) ವ್ಯವಸ್ಥಾಪಕ ನಿರ್ದೇಶಕ ಜಯೆನ್ ಮೆಹ್ತಾ ಅವರು ಈ ಕುರಿತು ಬುಧವಾರ ಮಾಹಿತಿ ನೀಡಿದ್ದಾರೆ. ‘ದಾಕುನ್ಹಾ ಕಮ್ಯುನಿಕೇಷನ್ಸ್ ಮುಖ್ಯಸ್ಥ ಸಿಲ್ವೆಸ್ಟರ್ ದಾಕುನ್ಹಾ ಅವರು ಮಂಗಳವಾರ ರಾತ್ರಿ ನಿಧನರಾದರು ಎಂದು ತಿಳಿಸಲು ವಿಷಾದಿಸುತ್ತೇವೆ’ ಎಂದು ಟ್ವೀಟ್ ಮಾಡಿದ್ದಾರೆ.

ದಾಕುನ್ಹಾ 80 ವಸಂತಗಳನ್ನು ಪೂರೈಸಿದ್ದರು. ಅವರಿಗೆ ಪತ್ನಿ ಮತ್ತು ಪುತ್ರ ಇದ್ದಾರೆ.

ಅಮೂಲ್ ಗರ್ಲ್ ಖ್ಯಾತಿ: 1966ರಲ್ಲಿ ದಾಕುನ್ಹಾ ಅವರು ಜಿಸಿಎಂಎಂಎಫ್‌ನ ಅಮೂಲ್ ಉತ್ಪನ್ನಗಳ ಜಾಹೀರಾತು ಅಭಿಯಾನವನ್ನು ರೂಪಿಸಿದ್ದರು. ಅಭಿಯಾನದ ಗುರುತಾಗಿ ಅವರು ಬಾಲಕಿಯ ಪಾತ್ರವನ್ನು ರಚಿಸಿದ್ದರು. ದೇಶದ ತಾಯಂದಿರು ಮತ್ತು ಮಕ್ಕಳನ್ನು ಮನಸ್ಸಿನಲ್ಲಿ ಇರಿಸಿಕೊಂಡು ಅವರು ರಚಿಸಿದ್ದ ಪಾತ್ರವು ‘ಅಮೂಲ್ ಗರ್ಲ್’ ಎಂದೇ ಖ್ಯಾತಿ ಪಡೆಯಿತು. ಜಾಹೀರಾತಿನ ಅಡಿಬರಹ ‘ಅಟ್ಟರ್ಲಿ ಬಟ್ಟರ್ಲಿ ಡೆಲಿಷಿಯಸ್’ ಕೂಡಾ ಮನೆಮಾತಾಗಿದೆ. ಈ ಘೋಷಣೆಯನ್ನು ದಾಕುನ್ಹಾ ಪತ್ನಿ ನಿಶಾ ಅವರು ನೀಡಿದ್ದರು. ಅಮುಲ್ ಜಾಹೀರಾತುಗಳಲ್ಲಿ ಈಗಲೂ ‘ಅಮೂಲ್ ಗರ್ಲ್’ ಇರುವುದನ್ನು ಕಾಣಬಹುದು. 2016ರಲ್ಲಿ ‘ಅಮೂಲ್ ಗರ್ಲ್’ ಅಭಿಯಾನದ 50ನೇ ವಾರ್ಷಿಕೋತ್ಸವ ಆಚರಿಸಲಾಗಿತ್ತು.

ಮಣಿಪುರ: ಗುಂಡಿನ ದಾಳಿ– ಇಬ್ಬರು ಯೋಧರಿಗೆ ಗಾಯ

ಇಂಫಾಲ್/ಗುವಾಹಟಿ (ಪ್ರಜಾವಾಣಿ ವಾರ್ತೆ/ಪಿಟಿಐ): ಒಂದು ವಾರದ ಹಿಂದೆ ಮಣಿಪುರದಲ್ಲಿ ಬಿಜೆಪಿ ಸಚಿವರು, ಶಾಸಕರು ಮತ್ತು ಆ ಪಕ್ಷದ ನಾಯಕರನ್ನು ಗುರಿಯಾಗಿಸಿಕೊಂಡು ನಡೆಯುತ್ತಿದ್ದ ದಾಳಿಯು ಸೇನೆಯತ್ತ ತಿರುಗಿದ್ದು, ಗುರುವಾರ ಮುಂಜಾನೆ ಶಸ್ತ್ರಸಜ್ಜಿತ ದುಷ್ಕರ್ಮಿಯೊಬ್ಬ ನಡೆಸಿದ ಗುಂಡಿನ ದಾಳಿಗೆ ಇಬ್ಬರು ಯೋಧರು ಗಾಯಗೊಂಡಿದ್ದಾರೆ.

ಪಶ್ಚಿಮ ಇಂಫಾಲ್‌ನ ಉತ್ತರ ಬೊಲ್ಜಾಂಗ್‌ನಲ್ಲಿ ಮುಂಜಾನೆ 5ಗಂಟೆಗೆ ಈ ದಾಳಿ ನಡೆದಿದೆ. ಯೋಧರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಹೆಚ್ಚುವರಿ ಸೇನಾ ಪಡೆಯು ಸ್ಥಳಕ್ಕೆ ತೆರಳಿದ್ದು ಕಾರ್ಯಾಚರಣೆ ಪ್ರಗತಿಯಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಘಟನಾ ಸ್ಥಳದಲ್ಲಿ ಪ್ರಾಥಮಿಕ ತನಿಖೆ ನಡೆಸಿದ್ದು, ಮಷಿನ್ ಗನ್ ವಶಪಡಿಸಿಕೊಳ್ಳಲಾಗಿದೆ. ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ತಿಳಿಸಿದ್ದಾರೆ.

ಬೈಡನ್‌ಗೆ ಮೈಸೂರಿನ ಶ್ರೀಗಂಧ ಪೆಟ್ಟಿಗೆ ಕಾಣಿಕೆ

ಒಂದನೇ ಪುಟದಿಂದ...

ವಿಶೇಷವಾಗಿ ವಿನ್ಯಾಸಗೊಳಿಸಿ, ಸಿದ್ಧಪಡಿಸಿರುವ 7.5 ಕ್ಯಾರಟ್ ಹಸಿರು ವಜ್ರವನ್ನು ಜಿಲ್ ಬೈಡನ್ ಅವರಿಗೆ ಉಡುಗೊರೆಯಾಗಿ ನೀಡಿದ್ದಾರೆ.

ಶ್ರೀಗಂಧದ ಪೆಟ್ಟಿಗೆಯನ್ನು ಮೈಸೂರಿನಿಂದ ಒಯ್ಯಲಾಗಿದೆ. ಜೈಪುರದ ಕುಶಲಕರ್ಮಿಗಳು ಮಾಡಿರುವ ಕೆತ್ತನೆಗಳು ಈ ಪೆಟ್ಟಿಗೆಯ ಸೌಂದರ್ಯವನ್ನು ಹೆಚ್ಚಿಸಿದ್ದು, ಹೂವು–ಪ್ರಾಣಿಗಳ ಚಿತ್ರಗಳು ಕಲಾವಿದರ ಕೈಚಳಕದಲ್ಲಿ ಚೆನ್ನಾಗಿ ಮೂಡಿಬಂದಿವೆ.

ಬೆಳ್ಳಿಯಿಂದ ಮಾಡಿರುವ ಗಣೇಶನ ವಿಗ್ರಹ ಈ ಪೆಟ್ಟಿಗೆಯಲ್ಲಿದೆ. ಕೋಲ್ಕತ್ತದಲ್ಲಿರುವ ಐದನೇ ತಲೆಮಾರಿನ ಅಕ್ಕಸಾಲಿಗರು ಈ ವಿಗ್ರಹವನ್ನು ಸಿದ್ಧಪಡಿಸಿದ್ದಾರೆ. ದೇಶದ ವಿವಿಧ ಭಾಗಗಳಲ್ಲಿರುವ ಆಚರಣೆಗಳು, ಕಲಾಶ್ರೀಮಂತಿಕೆಯನ್ನು ಈ ಉಡುಗೊರೆ ಪ್ರತಿನಿಧಿಸುತ್ತದೆ ಎನ್ನುವುದು ಭಾರತೀಯ ಅಧಿಕಾರಿಗಳ ಹೇಳಿಕೆ.

‘ದಿ ಟೆನ್ ಪ್ರಿನ್ಸಿಪಲ್ ಉಪನಿಷದ್ಸ್’ ಪುಸ್ತಕವನ್ನು ಲಂಡನ್‌ನ ಫೇಬರ್ ಅಂಡ್ ಫೇಬರ್ ಕಂಪನಿ 1937ರಲ್ಲಿ ಪ್ರಕಟಿಸಿತ್ತು. ಶ್ರೀ ಪುರೋಹಿತ ಸ್ವಾಮಿ ಹಾಗೂ ಹೆಸರಾಂತ ಐರಿಷ್ ಕವಿ ವಿಲಿಯಮ್ ಬಟ್ಲರ್ ಯೇಟ್ಸ್ ಇದನ್ನು ರಚಿಸಿದ್ದರು.

ಪ್ರಯೋಗಾಲಯದಲ್ಲಿ ಸಿದ್ಧಪಡಿಸಲಾಗಿರುವ ವಜ್ರದ ಹರಳು, ಗಣಿಯಲ್ಲಿ ತೆಗೆದ ವಜ್ರವನ್ನೇ ಹೋಲುತ್ತದೆ. ನೈಸರ್ಗಿಕ ವಜ್ರ ಹೊಂದಿರುವ ರಾಸಾಯನಿಕ ಸಂಯೋಜನೆ ಹಾಗೂ ಇತರ ಗುಣಲಕ್ಷಣಗಳನ್ನು ಹೊಂದಿದೆ. ಭಾರತ 75ನೇ ಸ್ವಾತಂತ್ರ್ಯೋತ್ಸವ ಆಚರಿಸಿಕೊಳ್ಳುತ್ತಿರುವುದರ ಸಂಕೇತವಾಗಿಯೂ ಈ ವಜ್ರದ ಹರಳನ್ನು ನೀಡಲಾಗಿದೆ.

20ನೇ ಶತಮಾನದಲ್ಲಿ ತಯಾರಿಸಿರುವ ಪುಸ್ತಕದ ಗ್ಯಾಲರಿಯನ್ನು ಬೈಡನ್ ದಂಪತಿ, ಮೋದಿ ಅವರಿಗೆ ಉಡುಗೊರೆಯಾಗಿ ನೀಡಿದ್ದಾರೆ.

ಹಳೆಯ ಅಮೆರಿಕನ್ ಕ್ಯಾಮೆರಾ, ವನ್ಯಜೀವಿ ಛಾಯಾಗ್ರಹಣ ಕುರಿತ ಪುಸ್ತಕ ಹಾಗೂ ‘ಕಲೆಕ್ಟೆಡ್ ಪೊಯೆಮ್ಸ್ ಆಫ್ ರಾಬರ್ಟ್ ಫ್ರಾಸ್ಟ್’ ಕೃತಿಯನ್ನು ಸಹ ಅವರು ಮೋದಿ ಅವರಿಗೆ ನೀಡಿದ್ದಾರೆ.

ವೈವಿಧ್ಯಮಯ ಭಕ್ಷ್ಯಗಳು

ವಾಷಿಂಗ್ಟನ್ (ಪಿಟಿಐ): ಸಿರಿಧಾನ್ಯಗಳಿಂದ ತಯಾರಿಸಿದ್ದ ಸ್ವಾದಿಷ್ಟಮಯ ತಿನಿಸುಗಳು, ಕೋಸಂಬರಿ, ಮಸಾಲೆಯುಕ್ತ ಅಣಬೆ ಸೇರಿದಂತೆ ತರಹೇವಾರಿ ಭಕ್ಷ್ಯಗಳನ್ನು ಪ್ರಧಾನಿ ನರೇಂದ್ರ ಮೋದಿ ಗುರುವಾರ ಸವಿದರು.

ಬೈಡನ್ ದಂಪತಿ ಶ್ವೇತಭವನದ ದಕ್ಷಿಣ ಭಾಗದಲ್ಲಿರುವ ಉದ್ಯಾನದಲ್ಲಿ ಮೋದಿ ಅವರಿಗಾಗಿ ಏರ್ಪಡಿಸಿದ್ದ ಔತಣಕೂಟದಲ್ಲಿ 400 ಜನ ಗಣ್ಯ ಅತಿಥಿಗಳು ಪಾಲ್ಗೊಂಡಿದ್ದರು.

ಕಲ್ಲಂಗಡಿ ಹಣ್ಣುಗಳು, ಆವಕಾಡೊ ಸಾಸ್, ಇಟಲಿಯ ಜನಪ್ರಿಯ ಖಾದ್ಯ ರಿಸೊಟ್ಟೊವನ್ನು ಕೂಡ ಸಿದ್ಧಪಡಿಸಲಾಗಿತ್ತು. ಸೀಫುಡ್ ಪ್ರಿಯರಿಗಾಗಿ ವಿವಿಧ ಬಗೆಯ ಮೀನುಗಳಿಂದ ತಯಾರಿಸಿದ್ದ ಖಾದ್ಯಗಳೂ ಇದ್ದವು.

‘ಪ್ರಧಾನಿ ಮೋದಿ ಅವರು ಸಸ್ಯಹಾರಿ. ಬಾಣಸಿಗರಾದ ನಿನಾ ಕರ್ಟಿಸ್ ಸಸ್ಯಹಾರಿ ಅಡುಗೆ ತಯಾರಿಸುವಲ್ಲಿ ನಿಷ್ಣಾತೆ. ಹೀಗಾಗಿ ಮೋದಿ ಅವರಿಗಾಗಿ ರುಚಿಕರವಾದ ಸಸ್ಯಹಾರಿ ಅಡುಗೆ ಸಿದ್ಧಪಡಿಸಲು ಶ್ವೇತಭವನದ ಸಿಬ್ಬಂದಿಗೆ ನೆರವಾಗುವಂತೆ ಕರ್ಟಿಸ್ ಅವರಿಗೆ ಹೇಳಿದ್ದೆ’ ಎಂದು ಜಿಲ್ ಬೈಡನ್ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಕಾನ್ಸುಲೇಟ್ ಕಚೇರಿ

ಒಂದನೇ ಪುಟದಿಂದ...

‘ಉಭಯ ದೇಶಗಳ ಜನರ ನಡುವಿನ ಬಾಂಧವ್ಯ ಮತ್ತಷ್ಟು ಗಟ್ಟಿಗೊಳ್ಳಬೇಕು ಎಂಬ ದೃಷ್ಟಿಯಿಂದ ಈ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಅಮೆರಿಕದ ಇನ್ನೂ ಕೆಲ ನಗರಗಳಲ್ಲಿ ಭಾರತ ತನ್ನ ಕಾನ್ಸುಲೇಟ್ ಕಚೇರಿ ಆರಂಭಿಸುವ ನಿರೀಕ್ಷೆ ಇದೆ’ ಎಂದು ಹೇಳಿದ್ದಾರೆ.

‘ಕಳೆದ ವರ್ಷ 1.25 ಲಕ್ಷ ಭಾರತೀಯ ವಿದ್ಯಾರ್ಥಿಗಳಿಗೆ ಅಮೆರಿಕ ವೀಸಾ ವಿತರಿಸಲಾಗಿದ್ದು, ಇಲ್ಲಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಶೇ 20ರಷ್ಟು ಹೆಚ್ಚಳ ಕಂಡುಬಂದಿತ್ತು. ಅಧ್ಯಯನಕ್ಕಾಗಿ ಅಮೆರಿಕಕ್ಕೆ ಬರುವ ವಿದೇಶಿಯರ ಪೈಕಿ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆಯೇ ದೊಡ್ಡದಾಗಲಿದೆ’ ಎಂದು ಅಧಿಕಾರಿ ತಿಳಿಸಿದ್ದಾರೆ.

ನವದೆಹಲಿಯಲ್ಲಿ ಅಮೆರಿಕದ ರಾಯಭಾರ ಕಚೇರಿ ಇದ್ದು, ಮುಂಬೈ, ಕೋಲ್ಕತ್ತ, ಚೆನ್ನೈ ಹಾಗೂ ಹೈದರಾಬಾದ್‌ನಲ್ಲಿರುವ ಕಾನ್ಸುಲೇಟ್‌ಗಳೊಂದಿಗೆ ಸಮನ್ವಯ ಸಾಧಿಸುತ್ತಿದೆ. ಅದೇ ರೀತಿ, ವಾಷಿಂಗ್ಟನ್‌ನಲ್ಲಿ ಭಾರತದ ರಾಯಭಾರ ಕಚೇರಿ ಇದೆ. ನ್ಯೂಯಾರ್ಕ್, ಸ್ಯಾನ್ ಫ್ರಾನ್ಸಿಸ್ಕೊ, ಷಿಕಾಗೊ, ಹ್ಯೂಸ್ಟನ್, ಅಟ್ಲಾಂಟಾದಲ್ಲಿ ಕಾನ್ಸುಲೇಟ್ ಕಚೇರಿಗಳನ್ನು ಹೊಂದಿದೆ.

ವಿಪಕ್ಷ ಒಗ್ಗಟ್ಟು ಪ್ರದರ್ಶನಕ್ಕೆ ವೇದಿಕೆ ಸಜ್ಜು

ಇಂದು ಸಭೆ: ಖರ್ಗೆ, ರಾಹುಲ್, ಮಮತಾ, ಕೇಜ್ರಿವಾಲ್ ಸೇರಿ 18 ಪಕ್ಷದ ನಾಯಕರು ಭಾಗಿ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ‘ಅಶ್ವಮೇಧದ ಕುದುರೆ’ಯನ್ನು ಕಟ್ಟಿಹಾಕುವ ಸಂಬಂಧ ರಣತಂತ್ರ ಹೆಣೆಯಲು ವಿರೋಧ ಪಕ್ಷಗಳ ನಾಯಕರು ಬಿಹಾರದ ರಾಜಧಾನಿ ಪಟ್ನಾದಲ್ಲಿ ಶುಕ್ರವಾರ ಸಭೆ ಸೇರಲಿದ್ದಾರೆ. ಕಮಲ ಪಾಳಯದ ವಿರುದ್ಧ ಐಕ್ಯ ಹೋರಾಟ ನಡೆಸಲು ಈ ಸಭೆಯಲ್ಲಿ ಮೊದಲ ಕರಡು ಸಿದ್ಧಪಡಿಸುವ ಸಾಧ್ಯತೆ ಇದೆ.

ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಟ ನಡೆಸಲು ವಿರೋಧ ಪಕ್ಷಗಳ ನಾಯಕರು 48 ವರ್ಷಗಳ ಹಿಂದೆ ಪಟ್ನಾದಲ್ಲಿ ಸಭೆ ನಡೆಸಿದ್ದರು. ಆ ಸಭೆ ವಿರೋಧ ಪಕ್ಷಗಳ ಅಭೂತಪೂರ್ವ ಒಗ್ಗಟ್ಟಿಗೆ ಕಾರಣವಾಗಿತ್ತು. ಅಂದಿನ ವಿಪಕ್ಷಗಳ ಏಕತೆಯ ಕರೆಯು ಕಾಂಗ್ರೆಸ್‌ನ ಸೋಲು ಹಾಗೂ ಇಂದಿರಾ ಗಾಂಧಿಯ ಪತನಕ್ಕೆ ಕಾರಣವಾಗಿತ್ತು. ಈಗ ಅದೇ ಜಾಗದಲ್ಲಿ ಮತ್ತೊಂದು ಹೋರಾಟಕ್ಕೆ ಮುನ್ನುಡಿ ಬರೆಯಲು ವಿರೋಧ ಪಕ್ಷಗಳ ನಾಯಕರು ಸಜ್ಜಾಗಿದ್ದಾರೆ. ಈಗ ಅವರ ಸಮಾನ ಶತ್ರು ಆರ್‌ಎಸ್‌ಎಸ್, ಬಿಜೆಪಿ ಹಾಗೂ ಪ್ರಧಾನಿ ನರೇಂದ್ರ ಮೋದಿಯಾಗಿದ್ದಾರೆ.

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಮುಂದಾಳುತನದಲ್ಲಿ ನಡೆಯಲಿರುವ ಈ ಸಭೆಯಲ್ಲಿ ಸುಮಾರು 18 ಪಕ್ಷಗಳ ನಾಯಕರು ಭಾಗವಹಿಸುವ ನಿರೀಕ್ಷೆ ಇದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ನಾಯಕ ರಾಹುಲ್ ಗಾಂಧಿ, ತೃಣಮೂಲ ಕಾಂಗ್ರೆಸ್‌ನ ಮಮತಾ ಬ್ಯಾನರ್ಜಿ, ಡಿಎಂಕೆಯ ಎಂ.ಕೆ. ಸ್ಟಾಲಿನ್, ಶಿವಸೇನಾದ(ಯುಬಿಟಿ) ಉದ್ಧವ್ ಠಾಕ್ರೆ, ಎನ್‌ಸಿಪಿಯ ಶರದ್ ಪವಾರ್, ಸಿಪಿಎಂನ ಸೀತಾರಾಮ ಯೆಚೂರಿ, ಎಎಪಿಯ ಅರವಿಂದ ಕೇಜ್ರಿವಾಲ್, ಆರ್‌ಜೆಡಿಯ ತೇಜಸ್ವಿ ಯಾದವ್, ಜೆಜೆಎಂನ ಹೇಮಂತ್ ಸೊರೇನ್, ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್, ಸಿಪಿಐಯ ಡಿ. ರಾಜಾ, ನ್ಯಾಷನಲ್ ಕಾನ್ಫರೆನ್ಸ್‌ನ ಫಾರೂಕ್ ಅಬ್ದುಲ್ಲಾ ಸಭೆಯಲ್ಲಿ ಪಾಲ್ಗೊಳ್ಳುವ ಪ್ರಮುಖರು. ಹಲವು ಸಣ್ಣ ಪಕ್ಷಗಳ ಅಧ್ಯಕ್ಷರು ಪಾಲ್ಗೊಳ್ಳಲಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ವಿರುದ್ಧ ಪ್ರತಿಪಕ್ಷಗಳ ಕೂಟದಿಂದ ಒಮ್ಮತದ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೆ ಬಿಜೆಪಿಯನ್ನು ಚುನಾವಣೆಯಲ್ಲಿ ಕಟ್ಟಿ ಹಾಕಬಹುದು ಎಂಬುದು ವಿರೋಧ ಪಕ್ಷಗಳ ಹಲವು ನಾಯಕರ ಆಲೋಚನೆ.

ರಾಷ್ಟ್ರ ರಾಜಧಾನಿಯಲ್ಲಿ ಸೇವಾ ವಲಯದ ಮೇಲಿನ ನಿಯಂತ್ರಣ ಕುರಿತು ಸುಗ್ರೀವಾಜ್ಞೆ ತಂದಿರುವ ಕೇಂದ್ರ ಸರ್ಕಾರದ ವಿರುದ್ಧ ಆಮ್ ಆದ್ಮಿ ಪಕ್ಷವು ಸಿಡಿದೆದ್ದಿದೆ. ಈ ಹೋರಾಟಕ್ಕೆ ವಿರೋಧ ಪಕ್ಷಗಳ ನಾಯಕರಿಂದ ನಿರೀಕ್ಷಿತ ಬೆಂಬಲ ಸಿಕ್ಕಿಲ್ಲ ಎಂಬುದು ಎಎಪಿ ನಾಯಕರ ಅಭಿಪ್ರಾಯ.

ಸುಗ್ರೀವಾಜ್ಞೆಯ ವಿಷಯವನ್ನೇ ಸಭೆಯಲ್ಲಿ ಮೊದಲು ಚರ್ಚಿಸಬೇಕು ಎಂದು ದೆಹಲಿಯ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಕೆಲ ದಿನಗಳ ಹಿಂದೆ ಹೇಳಿದ್ದರು. ಈ ವಿಚಾರದಲ್ಲಿ ಎಎಪಿಗೆ ಬೆಂಬಲ ನೀಡಬಾರದು ಎಂದು ಕಾಂಗ್ರೆಸ್‌ನ ದೆಹಲಿ ಹಾಗೂ ಪಂಜಾಬ್ ಘಟಕಗಳು ಹೈಕಮಾಂಡ್ ಮೇಲೆ ಒತ್ತಡ ಹೇರಿವೆ.

ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಗೆಲುವಿನ ನಗೆ ಬೀರಿರುವ ಕಾಂಗ್ರೆಸ್‌ಗೆ ವಿರೋಧ ಪಕ್ಷಗಳ ಕೂಟದ ನೇತೃತ್ವವನ್ನು ತಾನೇ ವಹಿಸಿಕೊಳ್ಳಬೇಕು ಎಂಬ ಹಂಬಲ. ಆದರೆ, ಈ ಕೂಟಕ್ಕೆ ಕಾಂಗ್ರೆಸ್ ನಾಯಕತ್ವ ವಹಿಸಿಕೊಳ್ಳುವುದು ಮಮತಾ ಬ್ಯಾನರ್ಜಿ, ಅರವಿಂದ ಕೇಜ್ರಿವಾಲ್, ಅಖಿಲೇಶ್ ಯಾದವ್ ಮತ್ತಿತರ ನಾಯಕರಿಗೆ ಸುತಾರಾಂ ಇಷ್ಟವಿಲ್ಲ.

ಉತ್ತರ ಪ್ರದೇಶ, ಪಶ್ಚಿಮ ಬಂಗಾಳದಂತಹ ದೊಡ್ಡ ರಾಜ್ಯಗಳಲ್ಲಿ ಒಂದು ಸ್ಥಾನ ಗೆಲ್ಲಲೂ ತಿಣುಕಾಡುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ವಿಪಕ್ಷ ಕೂಟದ ನಾಯಕತ್ವ ವಹಿಸಲು ಯಾವ ಅರ್ಹತೆ ಇದೆ ಎಂಬುದು ಈ ನಾಯಕರ ಪ್ರಶ್ನೆ.

ಬಿಎಸ್‌ಪಿ ನಾಯಕಿ ಮಾಯಾವತಿ ಸಭೆಗೆ ಗೈರು

ಪ್ರತಿಪಕ್ಷಗಳ ಸಭೆಯಲ್ಲಿ ಬಿಎಸ್‌ಪಿ ಭಾಗವಹಿಸುವುದಿಲ್ಲ ಎಂದು ಬಿಎಸ್‌ಪಿ ನಾಯಕಿ ಮಾಯಾವತಿ ಸ್ಪಷ್ಟಪಡಿಸಿದ್ದಾರೆ. ಕಳೆದ ಎರಡು ವರ್ಷಗಳಿಂದ ಬಿಎಸ್‌ಪಿ ಹಾಗೂ ವಿರೋಧ ಪಕ್ಷಗಳು ಪರಸ್ಪರ ಅಂತರ ಕಾಯ್ದುಕೊಂಡಿವೆ.

ಈ ಸಂಬಂಧ ಗುರುವಾರ ಸರಣಿ ಟ್ವೀಟ್ ಮಾಡಿರುವ ಅವರು, ‘ಹಣದುಬ್ಬರ, ಬಡತನ, ನಿರುದ್ಯೋಗ, ಅನರಕ್ಷತೆ, ಜಾತಿ ದ್ವೇಷ, ಧಾರ್ಮಿಕ ಹಿಂಸಾಚಾರದಿಂದ ಬಳಲುತ್ತಿರುವ ದೇಶದ ಸ್ಥಿತಿ ನೋಡಿದರೆ ಅಂಬೇಡ್ಕರ್ ಅವರ ಸಮಾನತೆಯ ಸಂವಿಧಾನ ಅನುಷ್ಠಾನಗೊಳಿಸುವ ಸಾಮರ್ಥ್ಯ ಕಾಂಗ್ರೆಸ್ ಹಾಗೂ ಬಿಜೆಪಿಗೆ ಇಲ್ಲ’ ಎಂದಿದ್ದಾರೆ.

ಪಕ್ಷಗಳು ತಮ್ಮ ಸ್ಪಷ್ಟ ಉದ್ದೇಶಗಳನ್ನು ಪ್ರತಿಪಾದಿಸಿ ಜನರಲ್ಲಿ ವಿಶ್ವಾಸ ಮೂಡಿಸಲು ಪ್ರಯತ್ನಿಸಿದ್ದರೆ ಉತ್ತಮ ಎಂದು ಹೇಳಿರುವ ಮಾಯಾವತಿ, ಮುಖದ ಮೇಲೆ ಹೊಗಳಿಕೆ ಹಾಗೂ ಬೆನ್ನಿಗೆ ಚೂರಿ ಹಾಕುವುದು ಎಷ್ಟು ದಿನ ಉಳಿಯುತ್ತದೆ ಎಂದು ಕೇಳಿದ್ದಾರೆ.

ಉತ್ತರ ಪ್ರದೇಶದಲ್ಲಿರುವ 80 ಲೋಕಸಭಾ ಸ್ಥಾನಗಳು ಚುನಾವಣಾ ಯಶಸ್ಸಿಗೆ ಪ್ರಮುಖವೆಂದು ಹೇಳಲಾಗುತ್ತದೆ. ಆದರೆ, ವಿರೋಧ ಪಕ್ಷಗಳ ನಾಯಕರ ವರ್ತನೆ ನೋಡಿದರೆ ಅವರು ತಮ್ಮ ಉದ್ದೇಶದ ಬಗ್ಗೆ ಗಂಭೀರವಾದ ಮತ್ತು ನಿಜವಾದ ಕಾಳಜಿ ಹೊಂದಿದ್ದಾರೆಂದು ತೋರುತ್ತಿಲ್ಲ. ಸರಿಯಾದ ಆದ್ಯತೆಗಳಿಲ್ಲದೆ, ಲೋಕಸಭಾ ಚುನಾವಣೆಯ ಸಿದ್ಧತೆಗಳು ನಿಜವಾಗಿಯೂ ಬದಲಾವಣೆಯನ್ನು ತರುತ್ತವೆಯೇ ಎಂದೂ ಪ್ರಶ್ನಿಸಿದ್ದಾರೆ.

ಈ ನಡುವೆ, ಪೂರ್ವ ನಿಗದಿತ ಕೌಟುಂಬಿಕ ಕಾರ್ಯಕ್ರಮದ ಕಾರಣ ಶುಕ್ರವಾರದ ಸಭೆಗೆ ಹಾಜರಾಗುತ್ತಿಲ್ಲ ಎಂದು ಆರ್‌ಎಲ್‌ಡಿ ಮುಖ್ಯಸ್ಥ ಜಯಂತ್ ಚೌಧರಿ ಅವರು ನಿತೀಶ್ ಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

ಸಕಾರಾತ್ಮಕ ನಿರ್ಧಾರ: ಮಮತಾ ಬ್ಯಾನರ್ಜಿ ಆಶಯ

ಕೋಲ್ಕತ್ತ(ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲೇಬೇಕು ಎಂದಿರುವ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, ಪಟ್ನಾ ಸಭೆಯಿಂದ ಸಕಾರಾತ್ಮಕ ನಿಲುವು ಹೊರಹೊಮ್ಮಲಿವೆ ಎಂದು ಆಶಿಸಿದ್ದಾರೆ.

‘ಸಭೆಯಲ್ಲಿ ಉತ್ತಮ ಮತ್ತು ಸಾಮೂಹಿಕ ನಿರ್ಧಾರಗಳನ್ನು ತೆಗೆದುಕೊಳ್ಳಲಿ ಎನ್ನುವುದು ನಮ್ಮ ಆಶಯ. ದೇಶವನ್ನು ವಿಪತ್ತುಗಳಿಂದ ಪಾರು ಮಾಡಲು ಜನತೆ ಬಿಜೆಪಿ ವಿರುದ್ಧ ಮತ ಚಲಾಯಿಸುತ್ತಾರೆಂದು ಭಾವಿಸಿದ್ದೇನೆ’ ಎಂದು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ಬಾಕ್ಸಿಂಗ್ ಸಂಸ್ಥೆ ಮಾನ್ಯತೆ ಹಿಂಪಡೆದ ಒಲಿಂಪಿಕ್ ಸಮಿತಿ

ಲುಸಾನ್ (ಸ್ವಿಜರ್ಲೆಂಡ್), (ರಾಯಿಟರ್ಸ್): ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ (ಐಬಿಎ)ಯ ಮಾನ್ಯತೆಯನ್ನು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಗುರುವಾರ ಹಿಂಪಡೆದಿದೆ. ಆ ಮೂಲಕ ಕಾರ್ಯಕಾರಿ ಮಂಡಳಿಯ ಶಿಫಾರಸನ್ನು ಸ್ಥಿರೀಕರಿಸಿದೆ.

ಗುರುವಾರ ಆನ್‌ಲೈನ್ ಮೂಲಕ ನಡೆದ ಸಮಿತಿಯ ವಿಶೇಷ ಅಧಿವೇಶನದಲ್ಲಿ ಮಾನ್ಯತೆ ಹಿಂಪಡೆಯುವುದರ ಪರ 69 ಮಂದಿ ಮತ ಚಲಾಯಿಸಿದರೆ, ಒಬ್ಬರು ವಿರೋಧವಾಗಿ ಮತ ಚಲಾಯಿಸಿದರು. ಆಡಳಿತ, ಹಣಕಾಸು ಮತ್ತು ನೀತಿ-ನಿಯಮಗಳಲ್ಲಿ ಸುಧಾರಣೆ ತರುವಲ್ಲಿ ವಿಫಲವಾಗಿರುವ ಕಾರಣ ಈ ಕ್ರಮ ಕೈಗೊಂಡಿರುವುದಾಗಿ ಐಒಸಿ ಹೇಳಿದೆ.

ಒಲಿಂಪಿಕ್ ಸಮಿತಿ ಆಡಳಿತ ಮಂಡಳಿಯ ಈ ಕ್ರಮ 'ಅಸಹ್ಯಕರ ಮತ್ತು ರಾಜಕೀಯವಲ್ಲದೇ ಬೇರೇನೂ ಅಲ್ಲ' ಎಂದು ಬಾಕ್ಸಿಂಗ್ ಸಂಸ್ಥೆ ಪ್ರತಿಕ್ರಿಯಿಸಿದೆ.

ಐಒಸಿ ಕ್ರಮ ತಡೆಯಲು ಅತ್ಯುನ್ನತ ಕ್ರೀಡಾ ನ್ಯಾಯಾಲಯ ಎನಿಸಿದ 'ಕೋರ್ಟ್ ಆಫ್ ಆರ್ಬಿಟ್ರೇಷನ್ ಆಫ್ ಸ್ಪೋರ್ಟ್'ಗೆ ಬಾಕ್ಸಿಂಗ್ ಸಂಸ್ಥೆ ತುರ್ತಾಗಿ ಸಲ್ಲಿಸಿದ ಮನವಿ ತಿರಸ್ಕೃತಗೊಂಡಿದೆ.


ವಿಧಾತ್ರಿ ಅರಸ್

ಹೀರೊ ಡಬ್ಲ್ಯುಪಿಜಿಟಿ: ವಿಧಾತ್ರಿ ಮುನ್ನಡೆ

ಬೆಂಗಳೂರು: ಅಮೇಚೂರ್ ಆಟಗಾರ್ತಿ ವಿಧಾತ್ರಿ ಅರಸ್ ಅವರು ಎಲೀಟ್ ಆಟಗಾರ್ತಿಯರಿಗೆ ಕಠಿಣ ಪೈಪೋಟಿಯೊಡ್ಡಿದರು.

ಪ್ರೆಸ್ಟಿಜ್ ಗಾಲ್ಫ್‌ಶೈರ್‌ನಲ್ಲಿ ನಡೆಯುತ್ತಿರುವ ಹೀರೊ ವುಮೆನ್ಸ್ ಪ್ರೊ ಗಾಲ್ಫ್ ಟೂರ್‌ನ ಮೊದಲ ಸುತ್ತಿನಲ್ಲಿ ಸೆವೆನ್ ಅಂಡರ್ 65 ಆಡಿದರು. ಗುರುವಾರ ನಡೆದ ಎರಡನೇ ಸುತ್ತಿನಲ್ಲಿ ಫೈವ್ ಅಂಡರ್ 67 ಆಡಿ ಮೊದಲ ಸ್ಥಾನಕ್ಕೇರಿದರು. ಪ್ರೊ ಆಟಗಾರ್ತಿ ಕೀರ್ತಿ ಚವ್ಹಾಣ್ ಅವರು (72, 69) ಎರಡನೇ ಸ್ಥಾನದಲ್ಲಿದ್ದಾರೆ.

ಸಾನ್ವಿ ಸೋಮು ಮೊದಲ ಸುತ್ತಿನಲ್ಲಿ 73 ಮತ್ತು 69 ಷಾಟ್ ಸೇರಿಸಿದರು. ಸಾಚಿಕಾ ಸಿಂಗ್ (70, 72) ಮತ್ತು ಸೆಹರ್ ಅಟ್ವಾಲ್ (69, 73) ಅವರು ಜಂಟಿ ಮೂರನೇ ಸ್ಥಾನದಲ್ಲಿದ್ದಾರೆ.

ರಾಷ್ಟ್ರೀಯ ವಾಟರ್ ಪೋಲೊ: ಕರ್ನಾಟಕ ವನಿತೆಯರ ಮೇಲುಗೈ

ಡೈವಿಂಗ್: ಪಲಕ್ ಮಿಂಚು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಪೋಲೊ; ಪುರುಷರ ವಿಭಾಗದಲ್ಲಿ ಕರ್ನಾಟಕ ಎರಡನೇ ದಿನವೂ ನಿರಾಶೆ
- 19–0ಯಿಂದ ಅಸ್ಸಾಂ ತಂಡವನ್ನು ಮಣಿಸಿದ ಕರ್ನಾಟಕ ಮಹಿಳಾ ತಂಡ

ಬೆಂಗಳೂರು: ಆತಿಥೇಯ ಕರ್ನಾಟಕದ ಮಹಿಳೆಯರು 76ನೇ ರಾಷ್ಟ್ರೀಯ ವಾಟರ್ ಪೋಲೊ ಚಾಂಪಿಯನ್‌ಷಿಪ್‌ನಲ್ಲಿ ಮತ್ತೊಂದು ಜಯ ಸಾಧಿಸಿದರು.

ಬಸವನಗುಡಿ ಈಜುಕೇಂದ್ರದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಕರ್ನಾಟಕ ಮಹಿಳಾ ತಂಡವು 19–0ಯಿಂದ ಅಸ್ಸಾಂ ತಂಡವನ್ನು ಹಣಿಯಿತು. ಇಡೀ ಪಂದ್ಯದಲ್ಲಿ ಆತಿಥೇಯ ವನಿತೆ ಯರು ಪಾರಮ್ಯ ಸಾಧಿಸಿದರು. ಮೊದಲ ದಿನವಾದ ಬುಧವಾರದ ಪಂದ್ಯದಲ್ಲಿಯೂ ಈ ತಂಡವು ಜಯಿಸಿತ್ತು.

ಮಹಿಳೆಯರ ವಿಭಾಗದ ಇನ್ನುಳಿದ ಪಂದ್ಯಗಳಲ್ಲಿ ಮಹಾರಾಷ್ಟ್ರ 16–0ಯಿಂದ ದೆಹಲಿ ಎದುರು; ತಮಿಳುನಾಡು 7–1ರಿಂದ ತೆಲಂಗಾಣ ಎದುರು ಹಾಗೂ ಕೇರಳ 9–2ರಿಂದ ಬಂಗಾಳ ಎದುರು ಗೆದ್ದವು.


ಪುರುಷರ ವಿಭಾಗದಲ್ಲಿ ಕರ್ನಾಟಕವು ಎರಡನೇ ದಿನವೂ ನಿರಾಶೆ ಅನುಭವಿಸಿತು. ಸರ್ವಿಸಸ್ ಕ್ರೀಡಾ ನಿಯಂತ್ರಣ ಮಂಡಳಿ (ಎಸ್‌ಎಸ್‌ಸಿಬಿ) ತಂಡವು 9–4ರಿಂದ ಕರ್ನಾಟಕ ತಂಡದ ಸವಾಲನ್ನು ಮೆಟ್ಟಿನಿಂತಿತು.

ಪುರುಷರ ವಿಭಾಗದ ಇನ್ನುಳಿದ ಪಂದ್ಯಗಳಲ್ಲಿ ಕೇರಳ ತಂಡವು 13–5ರಿಂದ ಪಂಜಾಬ್ ವಿರುದ್ಧ, ರೈಲ್ವೆ ಕ್ರೀಡಾ ಅಭಿವೃದ್ಧಿ ಮಂಡಳಿ (ಆರ್‌ಎಸ್‌ಪಿಬಿ) 11–1ರಿಂದ ಅಸ್ಸಾಂ ವಿರುದ್ಧ; ಮಹಾರಾಷ್ಟ್ರ ತಂಡವು 6–3ರಿಂದ ಬಂಗಾಳ ಎದುರು; ಪೊಲೀಸ್ ತಂಡವು 15–0ಯಿಂದ ಹರಿಯಾಣ ಎದುರು ಜಯಿಸಿದವು.

ಡೈವಿಂಗ್– ಸೌರವ್, ಪಲಕ್ ಪ್ರಥಮ: ಭಾರತ ಕ್ರೀಡಾ ಪ್ರಾಧಿಕಾರದ ಈಜುಕೊಳದಲ್ಲಿ ನಡೆದ ಡೈವಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸರ್ವಿಸಸ್‌ನ ಸೌರವ್ ದೇವನಾಥ್ ಮತ್ತು ಮಧ್ಯಪ್ರದೇಶದ ಪಲಕ್ ಶರ್ಮಾ ಪ್ರಥಮ ಸ್ಥಾನ ಗಳಿಸಿದರು.

ಪುರುಷರ ವಿಭಾಗದ ಪ್ಲಾಟ್‌ಫಾರ್ಮ್ ಸ್ಪರ್ಧೆಯಲ್ಲಿ ಸೌರವ್ 291.90 ಅಂಕಗಳನ್ನು ಗಳಿಸಿ ಮೊದಲಿಗರಾಗದರು. ಅವರದ್ದೇ ತಂಡದ ಎನ್. ವಿಲ್ಸನ್ ಸಿಂಗ್ 269.55 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದರು. ರೈಲ್ವೆಸ್ ತಂಡದ ತುಷಾರ್ ಗೀತಾಯ (252.35) ಮೂರನೇ ಸ್ಥಾನ ಪಡೆದರು.

ಮಹಿಳೆಯರ ವಿಭಾಗದಲ್ಲಿ ಮಧ್ಯಪ್ರದೇಶದ ಪಲಕ್ 202.05 ಅಂಕಗಳನ್ನು ಕಲೆಹಾಕಿ ಪ್ರಥಮ ಸ್ಥಾನ ಗಳಿಸಿದರು. ರೈಲ್ವೆ ತಂಡದ ಈಶಾ ವಾಘ್ಮೊಡೆ (195.65) ಹಾಗೂ ಹೃತಿಕ್ ಶ್ರೀರಾಮ್ (190.50) ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದರು.


76ನೇ ರಾಷ್ಟ್ರೀಯ ಅಕ್ವೆಟಿಕ್ಸ್‌ನ ಡೈವಿಂಗ್‌ನಲ್ಲಿ ಮಹಿಳೆಯರ ಪ್ಲಾಟ್‌ಫಾರ್ಮ್ ಸ್ಪರ್ಧೆಯಲ್ಲಿ ಮಧ್ಯಪ್ರದೇಶದ ಪಲಕ್ ಶರ್ಮ ಮೊದಲ ಸ್ಥಾನ ಗಳಿಸಿದರು –ಪ್ರಜಾವಾಣಿ ಚಿತ್ರ /ಕಿಶೋರ್ ಕುಮಾರ್ ಬೋಳಾರ್

ಆರು ಪೈಲ್ವಾನರಿಗೆ 'ಒಂದು' ಅವಕಾಶ

ಭಾರತ ಒಲಿಂಪಿಕ್ ಸಂಸ್ಥೆಯ ಅಡ್‌ಹಾಕ್ ಸಮಿತಿ ನಿರ್ಧಾರ

ನವದೆಹಲಿ (ಪಿಟಿಐ): ಜಂತರ್ ಮಂತರ್‌ನ ಧರಣಿಯಲ್ಲಿ ಒಳಗೊಂಡಿದ್ದ ಆರು ಮಂದಿ ಕುಸ್ತಿಪಟುಗಳು, ಮುಂಬರುವ ಏಷ್ಯನ್ ಗೇಮ್ಸ್ ಮತ್ತು ವಿಶ್ವ ಚಾಂಪಿಯನ್‌ಷಿಪ್‌ಗೆ ಭಾರತ ತಂಡಕ್ಕೆ ಆಯ್ಕೆಯಾಗಲು 'ಒಂದು ಸೆಣಸಾಟದ ಸ್ಪರ್ಧೆ'ಯನ್ನು ಗೆಲ್ಲಬೇಕಾಗಿದೆ. ಭಾರತ ಒಲಿಂಪಿಕ್ ಸಂಸ್ಥೆಯ ಅಡ್‌ಹಾಕ್ ಸಮಿತಿ ಕೈಗೊಂಡ ಕ್ರಮದಂತೆ, ಈ ಕುಸ್ತಿಪಟುಗಳು ಟ್ರಯಲ್ಸ್ ವಿಜೇತರ ವಿರುದ್ಧ ಗೆದ್ದರೆ ಮೇಲಿನ ಎರಡು ಪ್ರತಿಷ್ಠಿತ ಕೂಟಗಳಿಗೆ ಆಯ್ಕೆಯಾಗಬಹುದು.

ವಿನೇಶಾ ಫೋಗಟ್, ಬಜರಂಗ್ ಪೂನಿಯಾ, ಸಾಕ್ಷಿ ಮಲಿಕ್, ಸಂಗೀತಾ ಫೋಗಟ್, ಸತ್ಯವ್ರತ ಕಾದಿಯಾನ್ ಮತ್ತು ಜಿತೇಂದರ್ ಕಿನ್ಹಾ – ಈ ಆರು ಕುಸ್ತಿಪಟುಗಳು. ಅವರಿಗೆ ಪೂರ್ವಭಾವಿ ಟ್ರಯಲ್ಸ್ ಪ್ರಕ್ರಿಯೆಯಿಂದ ವಿನಾಯಿತಿ ನೀಡಲಾಗಿದೆ. ಅವರು ಆಗಸ್ಟ್ 5 ರಿಂದ 15ರ ನಡುವೆ ನಡೆಯುವ ಟ್ರಯಲ್ಸ್‌ನಲ್ಲಿ ಆಯಾ ತೂಕ ವಿಭಾಗದ ವಿಜೇತರ ಎದುರು ಹೋರಾಟ ನಡೆಸಿದರಷ್ಟೇ ಸಾಕು ಎಂದು ಈ ಕುಸ್ತಿಪಟುಗಳಿಗೆ ಭರವಸೆ ನೀಡಲಾಗಿದೆ.

ದೀರ್ಘಕಾಲದ ಧರಣಿಯಿಂದಾಗಿ ಸಿದ್ಧತೆ ನಡೆಸಲು ಸಾಧ್ಯವಾಗದ ಕಾರಣ ಆಗಸ್ಟ್‌ನಲ್ಲಿ ಏಷ್ಯನ್ ಗೇಮ್ಸ್ ಟ್ರಯಲ್ಸ್‌ನಲ್ಲಿ ಭಾಗವಹಿಸಲು ಅವಕಾಶ ನೀಡುವಂತೆ ಈ ಕುಸ್ತಿಪಟುಗಳು ಕ್ರೀಡಾ ಸಚಿವಾಲಯವನ್ನು ಕೋರಿದ್ದರು. ಲೈಂಗಿಕ ಕಿರುಕುಳದ ಆರೋಪ ಎದುರಿಸುತ್ತಿ ರುವ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಧರಣಿ ನಡೆಸಿದ್ದರು.

ಗಾಯಾಳಾಗುವ ಸಂಭವದ ಕಾರಣ, ಈ ಹಿಂದೆ ಕೆಲಬಾರಿ ಬಜರಂಗ್ ಮತ್ತು ವಿನೇಶಾ ಅವರಿಗೆ ಪೂರ್ಣ ಪ್ರಮಾಣದ ಟ್ರಯಲ್ಸ್‌ನಿಂದ ವಿನಾಯಿತಿ ನೀಡಲಾಗಿತ್ತು. ಆದರೆ ಸಂಗೀತಾ, ಸತ್ಯವ್ರತ ಮತ್ತು ಜಿತೇಂದರ್ ಅವರಿಗೆ ಈ ರೀತಿಯ ವಿನಾಯಿತಿಗೆ ಪರಿಗಣಿಸಿರಲಿಲ್ಲ.

ಏಷ್ಯನ್ ಗೇಮ್ಸ್‌ಗೆ ಸಂಘಟಕರು ನೀಡಿರುವ ಜುಲೈ 15ರ ಗಡುವಿನೊಳಗೆ ಅಡ್‌ಹಾಕ್ ಸಮಿತಿ ಟ್ರಯಲ್ಸ್ ನಡೆಸಿ ತಂಡದ ಪಟ್ಟಿ ಕಳುಹಿಸಬೇಕಿತ್ತು. ಈಗ ಪೂರ್ವಭಾವಿಯಾಗಿ ಟ್ರಯಲ್ಸ್ ನಡೆಸಿ ಐಒಎ ಕುಸ್ತಿಪಟುಗಳ ಪಟ್ಟಿ ಕಳಿಸಬಹುದಾಗಿದೆ. ಆದರೆ ಈ ಆರು ಕುಸ್ತಿಪಟುಗಲು ಪೂರ್ವಭಾವಿ ಟ್ರಯಲ್ಸ್‌ನ ವಿಜೇತರನ್ನು ಸೋಲಿಸಿದಲ್ಲಿ, ಪಟ್ಟಿಯಲ್ಲಿ ಕಳಿಸಿದ ಹೆಸರನ್ನು ನಂತರ ಬದಲಾಯಿಸಲು ಅವಕಾಶವಿದೆ. ಅಡ್‌ಹಾಕ್ ಸಮಿತಿಯ ನಿರ್ಧಾರವನ್ನು ಬಾಜ್ವಾ ಅವರು ಕುಸ್ತಿಪಟುಗಳಿಗೆ ಜೂನ್ 16ರಂದು ಪತ್ರ ಮುಖೇನ ತಿಳಿಸಿದ್ದು, ಅದರ ಪ್ರತಿ ಸುದ್ದಿಸಂಸ್ಥೆಗೆ ಲಭ್ಯವಾಗಿದೆ.

ಐಒಎಗೆ ಸಿಇಒ ನೇಮಕ: ವಿಳಂಬಕ್ಕೆ ಐಒಸಿ ಆಕ್ಷೇಪ

ಲುಸಾನ್ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆಗೆ (ಐಒಎ) ಸಿಇಒ ನೇಮಕ ಮಾಡುವಲ್ಲಿ ಆಗುತ್ತಿರುವ ವಿಳಂಬಕ್ಕೆ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಆಕ್ಷೇಪ ವ್ಯಕ್ತಪಡಿಸಿದೆ.

ಭಾರತ ಕುಸ್ತಿ ಫೆಡರೇಷನ್‌ಅನ್ನು ಬಾಧಿಸುತ್ತಿರುವ ಸಮಸ್ಯೆಗಳನ್ನು, ವಿಶ್ವ ಕುಸ್ತಿ ಸಂಸ್ಥೆ (ಯುಡಬ್ಲ್ಯುಡಬ್ಲ್ಯು) ಜೊತೆ ನಿಕಟವಾಗಿ ಚರ್ಚಿಸಿ ಬಗೆಹರಿಸುವಂತೆಯೂ ಐಒಎಗೆ ಒಲಿಂಪಿಕ್ ಸಮಿತಿ ಒತ್ತಾಯಿಸಿದೆ.

ಬುಧವಾರ ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಐಒಸಿ ಈ ಬಗ್ಗೆ ಕಟು ಮಾತುಗಳಲ್ಲಿ ಹೇಳಿಕೆ ಬಿಡುಗಡೆ ಮಾಡಿದೆ.

ನೇಮಕಗಳನ್ನು ನಡೆಸುವಂತೆ ಭಾರತದ ಒಲಿಂಪಿಕ್ ಸಂಸ್ಥೆಗೆ ಹಲವು ಬಾರಿ ನಿರ್ದೇಶನ ನೀಡಲಾಗಿದೆ. ಸಂಸ್ಥೆಯ ನಿಯಮಾವಳಿ ಪ್ರಕಾರ ಸಿಇಒ/ ಮಹಾ ಕಾರ್ಯದರ್ಶಿಯನ್ನು ನೇಮಕ ಮಾಡಬೇಕು ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ಆರೋಪದ ಮೇಲೆ ಭಾರತ ಕುಸ್ತಿ ಫೆಡರೇಷನ್‌ನ ನಿರ್ಗಮಿತ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ಬಂಧಿಸುವಂತೆ ಆಗ್ರಹಿಸಿ ಪ್ರಮುಖ ಮಹಿಳಾ ಪೈಲ್ವಾನರು ನವದೆಹಲಿಯಲ್ಲಿ ಧರಣಿ ಕುಳಿತಿದ್ದು ಎರಡು ತಿಂಗಳು ಕಾಲ ಎಲ್ಲೆಡೆ ಸುದ್ದಿಯಾಗಿತ್ತು. ವಿನೇಶಾ ಫೋಗಟ್, ಸಾಕ್ಷಿ ಮಲಿಕ್ ಜೊತೆಗೆ ಬಜರಂಗ್ ಪೂನಿಯಾ ಅವರೂ ಹೋರಾಟದ ಮುಂಚೂಣಿಯಲ್ಲಿದ್ದರು.

ಅಂತರರಾಷ್ಟ್ರೀಯ ಫುಟ್‌ಬಾಲ್ ಪಂದ್ಯಗಳಲ್ಲಿ ಗೋಲು

ನಾಲ್ಕನೇ ಸ್ಥಾನಕ್ಕೆ ಏರಿದ ಚೆಟ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಫುಟ್‌ಬಾಲ್ ಪಂದ್ಯಗಳಲ್ಲಿ 90 ಗೋಲುಗಳನ್ನು ಗಳಿಸಿರುವ ಭಾರತ ತಂಡದ ನಾಯಕ ಸುನಿಲ್ ಚೆಟ್ರಿ ಈ ಸಾಧನೆ ಮಾಡಿದ ವಿಶ್ವದ 4ನೇ ಆಟಗಾರ ನೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ನಡೆದ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್ ಟೂರ್ನಿಯ ಪಾಕಿಸ್ತಾನದ ವಿರುದ್ಧದ ಮೊದಲ ಪಂದ್ಯದಲ್ಲಿ ಚೆಟ್ರಿ, ಹ್ಯಾಟ್ರಿಕ್ ಗೋಲು ಗಳಿಸಿದ್ದರು. ಅದರೊಂದಿಗೆ ಐದನೇ ಸ್ಥಾನದಿಂದ ನಾಲ್ಕನೇ ಸ್ಥಾನಕ್ಕೆ ಏರಿದರು. ಮೊದಲ ಸ್ಥಾನದಲ್ಲಿ ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ (123), ಎರಡನೇ ಸ್ಥಾನದಲ್ಲಿ ಇರಾನ್‌ನ ಅಲಿ ದಾಯಿ (109) ಹಾಗೂ ಅರ್ಜೆಂಟಿನಾದ ಲಿಯೊನೆಲ್ ಮೆಸ್ಸಿ (103) ಇದ್ದಾರೆ.

87 ಗೋಲುಗಳ ದಾಖಲೆಯೊಂದಿಗೆ ಮೈದಾನಕ್ಕೆ ಇಳಿದಿದ್ದ 38 ವರ್ಷದ ಚೆಟ್ರಿ, ಪಾದರಸದಂತೆ ಓಡಾಡಿ ಮೂರು ಗೋಲುಗಳನ್ನು ತನ್ನ ಜೋಳಿಗೆಗೆ ಸೇರಿಸಿಕೊಂಡರು. ಈ ಮೂಲಕ ಮಲೇಷ್ಯಾದ ಮೊಖ್ತಾರ್ ದಹರಿ (89 ಗೋಲು) ಅವರನ್ನು ಹಿಂದಿಕ್ಕಿದರು. ಜತೆಗೆ ಇರಾನ್‌ನ ಅಲಿ ದಾಯಿ ಬಳಿಕ ಅತಿ ಹೆಚ್ಚು ಗೋಲುಗಳನ್ನು ಗಳಿಸಿದ ಏಷ್ಯಾದ ಎರಡನೇ ಆಟಗಾರ ಎಂಬ ಖ್ಯಾತಿಗೂ ಪಾತ್ರರಾದರು. ಪಾಕ್ ವಿರುದ್ಧದ ಪಂದ್ಯವನ್ನು ಭಾರತ 4–0 ಅಂತರದಲ್ಲಿ ಗೆದ್ದು ಬೀಗಿತ್ತು.

ಭುವನೇಶ್ವರದಲ್ಲಿ ನಡೆದ ಇಂಟರ್‌ಕಾಂಟಿನೆಂಟಲ್ ಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಚೆಟ್ರಿ ನೇತೃತ್ವದ ಭಾರತ ತಂಡವು ಫಿಫಾ ರ್‍ಯಾಂಕಿಂಗ್‌ನಲ್ಲಿ ತನಗಿಂತ ಮೇಲಿನ ಸ್ಥಾನದಲ್ಲಿರುವ ಲೆಬನಾನ್ ತಂಡವನ್ನು 2–0ಯಿಂದ ಸೋಲಿಸಿ ಪ್ರಶಸ್ತಿ ಗೆದ್ದಿತ್ತು. ಆ ಪಂದ್ಯದಲ್ಲೂ ಚೆಟ್ರಿ ಮೊದಲ ಗೋಲಿನೊಂದಿಗೆ ತಂಡವನ್ನು ಗೆಲುವಿನ ಹಾದಿಗೆ ತಂದಿದ್ದರು.

ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಗೋಲುಗಳು

ಆಟಗಾರ	ದೇಶ	ಪಂದ್ಯ	ಗೋಲು
ಕ್ರಿಸ್ಟಿಯಾನೊ ರೊನಾಲ್ಡೊ	ಪೋರ್ಚುಗಲ್	200	123
ಅಲಿ ದಾಯಿ	ಇರಾನ್	148	109
ಲಿಯೊನೆಲ್ ಮೆಸ್ಸಿ	ಅರ್ಜೆಂಟಿನಾ	175	103
ಸುನಿಲ್ ಚೆಟ್ರಿ	ಭಾರತ	138	90
ಮೊಖ್ತಾರ್ ದಹರಿ	ಮಲೇಷ್ಯಾ	142	89


ಸುನಿಲ್ ಚೆಟ್ರಿ

ಲೆಬನಾನ್ ಶುಭಾರಂಭ: ಬಾಂಗ್ಲಾಕ್ಕೆ ನಿರಾಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಲಿಷ್ಠ ತಂಡವಾಗಿರುವ ಲೆಬನಾನ್ ಇಲ್ಲಿ ನಡೆಯುತ್ತಿರುವ ದಕ್ಷಿಣ ಏಷ್ಯಾ ಫುಟ್‌ಬಾಲ್ ಫೆಡರೇಷನ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿತು.

ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಲೆಬನಾನ್ ತಂಡವು 2–0ಯಿಂದ ಬಾಂಗ್ಲಾದೇಶ ವಿರುದ್ಧ ಜಯಿಸಿತು.

ಬಾಂಗ್ಲಾದೇಶವು ಸುಲಭವಾಗಿ ಮಣಿಯಲಿಲ್ಲ. ಫಿಫಾ ರ್‍ಯಾಂಕಿಂಗ್‌ನಲ್ಲಿ 192ನೇ ಸ್ಥಾನದಲ್ಲಿರುವ ಬಾಂಗ್ಲಾ ತಂಡವು 99ನೇ ರ್‍ಯಾಂಕ್ ಪಡೆದಿರುವ ಲೆಬನಾನ್ ಬಳಗಕ್ಕೆ ದಿಟ್ಟ ಪೈಪೋಟಿಯೊಡ್ಡಿತು. ಇದರಿಂದಾಗಿ ಮೊದಲ 73 ನಿಮಿಷಗಳಲ್ಲಿ ಲೆಬನಾನ್ ತಂಡಕ್ಕೆ ಒಂದೂ ಗೋಲು ಗಳಿಸಲು ಸಾಧ್ಯವಾಗಲಿಲ್ಲ.

ಆದರೆ ಹಸನ್ ಮತೌಕ್ 74ನೇ ನಿಮಿಷದಲ್ಲಿ ಗೋಲು ಗಳಿಸುವಲ್ಲಿ ಯಶಸ್ವಿಯಾದರು. ಇದು ಲೆಬನಾನ್ ತಂಡದ ಆತ್ಮಬಲ ಹೆಚ್ಚಿಸಿತು. ಇಂಜುರಿ ಸಮಯದಲ್ಲಿ ಖಲೀಲ್ ಬದರ್ ಕೂಡ ಗೋಲು ಬಾರಿಸಿದರು.

ಪಂದ್ಯದ ಮೊದಲಾರ್ಧದಲ್ಲಿ ಲೆಬನಾನ್ ಆಕ್ರಮಣಶೀಲ ಆಟವಾಡಿತು. ಆದರೂ ಬಾಂಗ್ಲಾದ ರಕ್ಷಣಾ ಆಟಗಾರರು ತಡೆಯೊಡ್ಡಿದರು. ಲೆಬನಾನ್ ಆಟಗಾರರೂ ಗೋಲು ಗಳಿಸುವ ಕೆಲ ಅವಕಾಶ ಕೈಚೆಲ್ಲಿದರು.

ಆದರೆ, 2ನೇ ಅವಧಿಯಲ್ಲಿ ಬಾಂಗ್ಲಾದ ಆಟಗಾರರ ವೇಗ ಹೆಚ್ಚಾಯಿತು. ಲೆಬನಾನ್ ಕೂಡ ಹಿಂದೆ ಬೀಳಲಿಲ್ಲ.

ಬಿಸಿಯೇರಿದ್ದ ಸ್ಪರ್ಧೆಯಲ್ಲಿ ಆಟಗಾರರು ಸಂಘರ್ಷಕ್ಕೂ ಇಳಿದರು. ಇದರಿಂದಾಗಿ ರೆಫರಿ ಜಾನ್ ಕ್ರಿಸ್ಟಲ್ ಅವರು ಲೆಬನಾನ್ ತಂಡದ ಅಲಿ ಟಿನೀಚ್ ಮತ್ತು ಬಾಂಗ್ಲಾದ ವಿಶ್ವನಾಥ್ ಘೋಷ್ ಅವರಿಗೆ ಹಳದಿ ಕಾರ್ಡ್ ದರ್ಶನ ಮಾಡಿಸಿದರು. ಬಾಂಗ್ಲಾ ತಂಡದ ಆಟಗಾರರ ಗೋಲು ಗಳಿಸುವ ಪ್ರಯತ್ನಗಳಿಗೆ ಲೆಬನಾನ್ ಗೋಲ್‌ಕೀಪರ್ ಅಲಿ ಸಬೆಹಾ ಬಂಡೆಗಲ್ಲಿನಂತೆ ಅಡ್ಡ ನಿಂತರು.

ಭೂತಾನ್ ವಿರುದ್ಧ ಮಾಲ್ಡೀವ್ಸ್‌ಗೆ ಜಯ: ಮತ್ತೊಂದು ಪಂದ್ಯದಲ್ಲಿ ಎರಡು ಬಾರಿಯ ಚಾಂಪಿಯನ್ ಮಾಲ್ಡೀವ್ಸ್ ತಂಡವು ಭೂತಾನ್ ವಿರುದ್ಧ 2–0 ಅಂತರದಿಂದ ಜಯ ಸಾಧಿಸಿದೆ.

6ನೇ ನಿಮಿಷದಲ್ಲಿ ಹಮ್ಜಾ ಮೊಹಮದ್ ಅವರ ಪೆನಾಲ್ಟಿ ಕಿಕ್‌ನಿಂದ ಮಾಲ್ಡೀವ್ಸ್ ಮುನ್ನಡೆ ಪಡೆಯಿತು. 89ನೇ ನಿಮಿಷದಲ್ಲಿ ನೈಜ್ ಹಸನ್ ಮತ್ತೊಂದು ಗೋಲು ಗಳಿಸಿಕೊಟ್ಟರು.



ಲೆಬನಾನ್ ದೇಶದ ಹಸನ್ ಮಾತೌಕ್ ಅವರು ಬಾಂಗ್ಲಾದೇಶದ ಗೋಲ್‌ಕೀಪರ್ ಅನ್ಸೂರ್ ರೆಹಮಾನ್ ಅವರನ್ನು ವಂಚಿಸಿ ಗೋಲು ಗಳಿಸಲು ಮುನ್ನುಗಿದ ಕ್ಷಣ – ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಏಷ್ಯನ್ ಅಥ್ಲೆಟಿಕ್ಸ್: ಭಾರತ ತಂಡದಲ್ಲಿ ಯಶಸ್, ಮನು

ನವದೆಹಲಿ (ಪಿಟಿಐ): ಬ್ಯಾಂಕಾಕ್‌ನಲ್ಲಿ ಜುಲೈ 12 ರಿಂದ 16ರವರೆಗೆ ನಡೆಯಲಿರುವ ಏಷ್ಯನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೆ 54 ಸದಸ್ಯರ ಭಾರತ ತಂಡವನ್ನು ಗುರುವಾರ ಆಯ್ಕೆ ಮಾಡಲಾಗಿದೆ. ಕರ್ನಾಟಕದ 400 ಮೀ. ಹರ್ಡಲ್ಸ್ ಓಟಗಾರ ಯಶಸ್ ಪಿ., ಜಾವೆಲಿನ್ ಥ್ರೊ ಸ್ಪರ್ಧಿ ಡಿ.ಪಿ.ಮನು ತಂಡದಲ್ಲಿದ್ದಾರೆ.

ರಿಲೇ ಓಟಗಾರರಾದ ನಿಹಾಲ್ ಜೋಯೆಲ್, ಮಿಜೊ ಚಾಕೊ ಕುರಿಯನ್ ಅವರೂ ಅವಕಾಶ ಪಡೆದಿದ್ದಾರೆ. ಅಗ್ರಮಾನ್ಯ ಲಾಂಗ್‌ಜಂಪ್ ಪಟು ಮುರಳಿ ಶ್ರೀಶಂಕರ್, ಏಷ್ಯನ್ ದಾಖಲೆ ಹೊಂದಿರುವ ಶಾಟ್‌ಪಟ್ ಸ್ಪರ್ಧಿ ತಜಿಂದರ್‌ಪಾಲ್ ತೂರ್, ನೂತನ ಡೆಕಾಥ್ಲಾನ್ ಚಾಂಪಿಯನ್ ತೇಜಸ್ವಿನ್ ಶಂಕರ್, ಮಹಿಳೆಯರ ವಿಭಾಗದಲ್ಲಿ ಲಾಂಗ್‌ಜಂಪ್ ಸ್ಪರ್ಧಿ ಶೈಲಿ ಸಿಂಗ್ ತಂಡದಲ್ಲಿ ಇರುವ ಪ್ರಮುಖರಲ್ಲಿ ಒಳಗೊಂಡಿದ್ದಾರೆ.

ತಂಡದಲ್ಲಿ 26 ಮಂದಿ ಮಹಿಳಾ ಅಥ್ಲೀಟುಗಳಿದ್ದಾರೆ. ಭಾರತ ಅಥ್ಲೆಟಿಕ್ ಫೆಡರೇಷನ್‌ನ ಆಯ್ಕೆ ಸಮಿತಿ ತಂಡ ಪ್ರಕಟಿಸಿದೆ.

ಒಲಿಂಪಿಕ್ ಚಾಂಪಿಯನ್ ನೀರಜ್ ಚೋಪ್ರಾ ಮತ್ತು 3000 ಮೀ. ಸ್ಟೀಪಲ್‌ಚೇಸ್‌ನಲ್ಲಿ ಕಾಮನ್ವೆಲ್ತ್ ಗೇಮ್ಸ್ ಬೆಳ್ಳಿ ಪದಕ ವಿಜೇತ ಅವಿನಾಶ್ ಸಾಬ್ಳೆ ಅವರಿಬ್ಬರೂ ಆಗಸ್ಟ್ ತಿಂಗಳಲ್ಲಿ ಬುಡಾಪೆಸ್ಟ್‌ನಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್‌ಗೆ ತರಬೇತಿಯಲ್ಲಿ ಇರುವ ಕಾರಣ ಈ ಕೂಟದಲ್ಲಿ ಭಾಗವಹಿಸುತ್ತಿಲ್ಲ.



ಡಿ.ಪಿ. ಮನು

ಮಹಿಳಾ ಆ್ಯಷಸ್ ಟೆಸ್ಟ್: ಪೆರಿ, ತಹಿಲಾ ಶತಕದ ಜೊತೆಯಾಟ

ನಾಟಿಂಗ್‌ಹ್ಯಾಮ್ (ಎಎಫ್‌ಪಿ): ಕೇವಲ ಒಂದು ರನ್‌ನಿಂದ ಶತಕ ಕೈತಪ್ಪಿಸಿಕೊಂಡ ಎಲೀಸ್ ಪೆರಿ ಅವರ ಬ್ಯಾಟಿಂಗ್ ಬಲದಿಂದ ಆಸ್ಟ್ರೇಲಿಯಾ ತಂಡವು ಮಹಿಳಾ ಆ್ಯಷಸ್ ಸರಣಿಯ ಮೊದಲ ಟೆಸ್ಟ್‌ನಲ್ಲಿ ಉತ್ತಮ ಆರಂಭ ಮಾಡಿದೆ.

ಟ್ರೆಂಟ್‌ಬ್ರಿಡ್ಜ್ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾದ ಪಂದ್ಯದಲ್ಲಿ ಟಾಸ್ ಗೆದ್ದ ಆಸ್ಟ್ರೇಲಿಯಾ ವನಿತೆಯರು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಎಲಿಸ್ ಪೆರಿ (99; 153ಎ, 4X15) ಹಾಗೂ ತಹಿಲಾ (61; 83ಎ, 4X8) ಅವರ ಆಟದ ಬಲದಿಂದ ಮೊದಲ ಇನಿಂಗ್ಸ್‌ನಲ್ಲಿ ದಿನದಾಟದ ಅಂತ್ಯಕ್ಕೆ 85 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 328 ರನ್ ಗಳಿಸಿತು.

ಆಸ್ಟ್ರೇಲಿಯಾ ತಂಡಕ್ಕೆ ಬೆಥ್ ಮೂನಿ (33; 57ಎ, 4X4) ಹಾಗೂ ಫೋಬ್ ಲಿಚ್‌ಫೀಲ್ಡ್ (23; 32ಎ, 4X4) ಉತ್ತಮ ಆರಂಭ ನೀಡುವ ಪ್ರಯತ್ನ ಮಾಡಿದರು. ಆದರೆ, ಇಂಗ್ಲೆಂಡ್ ತಂಡದ ಕೇಟ್ ಕ್ರಾಸ್ ಒಂಬತ್ತನೇ ಓವರ್‌ನಲ್ಲಿ ಲಿಚ್‌ಫೀಲ್ಡ್ ವಿಕೆಟ್ ಗಳಿಸಿದರು. ಈ ಹಂತದಲ್ಲಿ ಕ್ರೀಸ್‌ಗೆ ಬಂದ ಪೆರಿ ಇನಿಂಗ್ಸ್ ಹೊಣೆಯನ್ನು ನಿಭಾಯಿಸಿದರು. ಅವರು ಮತ್ತು ಮೂನಿ ಎರಡನೇ ವಿಕೆಟ್ ಜೊತೆಯಾಟವನ್ನು ನಿಧಾನವಾಗಿ ಕಟ್ಟತೊಡಗಿದ್ದರು. 48 ರನ್ ಕೂಡ ಸೇರಿಸಿದರು. ಆದರೆ ಇಂಗ್ಲೆಂಡ್ ತಂಡದ ಲಾರೆನ್ ಫ್ಲೈಯರ್ ಬೌಲಿಂಗ್‌ನಲ್ಲಿ ಮೂನಿ ಔಟಾದರು.

ಪೆರಿ ಜೊತೆಗೂಡಿದ ತಹಿಲಾ ಉಪಯುಕ್ತ ಕಾಣಿಕೆ ನೀಡಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ 129 ರನ್ ಸೇರಿಸಿದರು. ಆದರೆ, ಪೆರಿ ಅವರು ಶತಕ ಪೂರೈಸಲು ಇನ್ನೊಂದು ರನ್ ಮಾತ್ರ ಅಗತ್ಯವಿದ್ದಾಗ ಔಟಾದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 85 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 328 (ಬೆಥ್ ಮೂನಿ 33, ಫೋಬ್ ಲಿಚ್‌ಫೀಲ್ಡ್ 23, ಎಲೀಸ್ ಪೆರಿ 99, ತಹಿಲಾ ಮೆಕ್‌ಗ್ರಾ 61, ಆಶ್ಲೀಗ್ ಗಾರ್ಡ್ನರ್ 40, ಸೋಫಿ ಎಕ್ಸೆಲ್‌ಸ್ಟನ್ 50ಕ್ಕೆ3, ಲಾರೆನ್ ಫ್ಲೈಯರ್ 54ಕ್ಕೆ2)

ಟೇಬಲ್ ಟೆನಿಸ್ ಟೂರ್ನಿ: ಕ್ವಾರ್ಟರ್‌ಗೆ ಮಣಿಕಾ– ಸತ್ಯನ್

ನವದೆಹಲಿ (ಪಿಟಿಐ): ಭಾರತದ ಐಹಿಕಾ ಮುಖರ್ಜಿ ಡಬ್ಲ್ಯುಟಿಟಿ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಪ್ರೀಕ್ವಾರ್ಟರ್‌ಫೈನಲ್ ಪ್ರವೇಶಿಸಿದರು. ಮಿಶ್ರ ಡಬಲ್ಸ್‌ನಲ್ಲಿ ಜ್ಞಾನಶೇಖರನ್ ಸತ್ಯನ್ ಮತ್ತು ಮಣಿಕಾ ಬಾತ್ರ ಜೋಡಿಯು ಎಂಟರ ಘಟ್ಟಕ್ಕೆ ಲಗ್ಗೆ ಹಾಕಿತು.

ಟ್ಯುನಿಸ್‌ನಲ್ಲಿ ಗುರುವಾರ ನಡೆದ ಮಹಿಳೆಯರ ಸಿಂಗಲ್ಸ್‌ನಲ್ಲಿ ಐಹಿಕಾ 3–0 (11–8, 11–3, 11–2) ಯಿಂದ ಚೀನಾದ ಶಿಯಾಟಾಂಗ್ ವಾಂಗ್ ವಿರುದ್ಧ ಜಯಿಸಿದರು.

ಇನ್ನೊಂದು ಪಂದ್ಯದಲ್ಲಿ ಜರ್ಮನಿಯ ಸಬೀನಾ ವಿಂಟರ್ ಮತ್ತು ಜಪಾನಿನ ಮಿಯು ನಾಗಾಸಕಿ ಅವರು ಪೈಪೋಟಿ ನಡೆಸುವರು. ಇದರಲ್ಲಿ ಜಯಿಸಿದವರು ಐಹಿಕಾ ಅವರಿಗೆ ಮುಖಾಮುಖಿಯಾಗುವರು.

ಮಿಶ್ರ ಡಬಲ್ಸ್‌ನಲ್ಲಿ ಸತ್ಯನ್ ಮತ್ತು ಮಣಿಕಾ 11–3, 11–3, 11–6ರಿಂದ ಅಲ್ಜೀರಿಯಾದ ಅಬ್ದೆಲ್‌ಬಾಸೆಟ್ ಚೈಚಿ ಮತ್ತು ಮೆಲಿಸಾ ನಾಸ್ರಿ ಜೋಡಿಯ ವಿರುದ್ಧ ಜಯಿಸಿದರು. ಪಂದ್ಯದುದ್ದಕ್ಕೂ ಭಾರತದ ಜೋಡಿಯು ಪಾರಮ್ಯ ಮೆರೆಯಿತು.

ವಿಶೇಷ ಒಲಿಂಪಿಕ್ಸ್: ಹರೀಶ್‌ಗೆ 3 ಚಿನ್ನ

ಮಂಗಳೂರು: ಜರ್ಮನಿಯ ಬರ್ಲಿನ್‌ನಲ್ಲಿ ನಡೆಯುತ್ತಿರುವ ವಿಶೇಷ ಒಲಿಂಪಿಕ್ಸ್ ವರ್ಲ್ಡ್ ಗೇಮ್ಸ್‌ನ ಪವರ್ ಲಿಫ್ಟಿಂಗ್‌ನಲ್ಲಿ ನಗರದ ಸಾನಿಧ್ಯ ವಸತಿ ಶಾಲೆ ಮತ್ತು ತರಬೇತಿ ಕೇಂದ್ರದ ವಿದ್ಯಾರ್ಥಿ, ಬೆಂಗಳೂರಿನ ಹರೀಶ್ ವಿ. ಮೂರು ಚಿನ್ನ ಮತ್ತು ಒಂದು ಬೆಳ್ಳಿ ಪದಕ ಗಳಿಸಿದ್ದಾರೆ.


ಎಂ12 ವಿಭಾಗದ ಬೆಂಚ್‌ಪ್ರೆಸ್ ಮತ್ತು ಸ್ಕ್ವಾಟ್‌ನಲ್ಲಿ ಚಿನ್ನ ಗೆದ್ದಿರುವ ಅವರು ಡೆಡ್‌ಲಿಫ್ಟ್‌ನಲ್ಲಿ ಬೆಳ್ಳಿ ಪದಕ ಗಳಿಸಿದ್ದಾರೆ. ಮೂರೂ ವಿಭಾಗಗಳ ಸಮಗ್ರ (ಕಂಬೈನ್ಡ್) ಸಾಧನೆಯ ಚಿನ್ನದ ಪದಕವೂ ಅವರ ಪಾಲಾಯಿತು.

ಬೆಂಚ್ ಪ್ರೆಸ್‌ನ ಮೊದಲ ಪ್ರಯತ್ನದಲ್ಲಿ 75 ಕೆ.ಜಿ. ಎತ್ತಿದ ಹರೀಶ್ ಎರಡನೇ ಪ್ರಯತ್ನದಲ್ಲಿ 80 ಕೆ.ಜಿ. ಎತ್ತಿ ಚಿನ್ನಕ್ಕೆ ಮುತ್ತಿಕ್ಕಿದರು.

ಸ್ಕ್ವಾಟ್‌ನ ಮೊದಲ ಪ್ರಯತ್ನದಲ್ಲಿ ಹರೀಶ್ 130 ಕೆ.ಜಿ. ಎತ್ತಿದ್ದರು. ಎರಡನೇ ಪ್ರಯತ್ನದಲ್ಲಿ 140 ಕೆ.ಜಿ. ಸಾಧನೆಯೊಂದಿಗೆ ಚಿನ್ನ ಗೆದ್ದರು. ಡೆಡ್‌ಲಿಫ್ಟ್‌ನಲ್ಲಿ ಹರೀಶ್ ಅವರ ಸಾಧನೆ 145 ಕೆ.ಜಿ. ಆಗಿತ್ತು. ಗುವೊ ಪೆಂಗ್ಯಂಗ್ 147.50 ಕೆ.ಜಿ. ಸಾಧನೆಯೊಂದಿಗೆ ಚಿನ್ನ ಗಳಿಸಿದರು. 125 ಕೆ.ಜಿ. ಎತ್ತಿದ ಅಗಿರ್ ಜಿಂಜೆಲ್ ಕಂಚಿನ ಪದಕ ಗಳಿಸಿದರು.

ಮೂರೂ ವಿಭಾಗದಲ್ಲಿ ಹರೀಶ್ ಒಟ್ಟು 365 ಕೆ.ಜಿ. ಸಮಗ್ರ ಸಾಧನೆ ಮಾಡಿದರು. 2018ರಲ್ಲಿ ಸಾನ್ನಿಧ್ಯ ವಸತಿ ಶಾಲೆಗೆ ಸೇರಿದ ಹರೀಶ್ ಅವರಿಗೆ ಪ್ರೇಮ್‌ನಾಥ್ ಉಳ್ಳಾಲ್, ಸರಸ್ವತಿ ಪುತ್ರನ್ ಹಾಗೂ ವಿಶಾಲ್ ತರಬೇತಿ ನೀಡುತ್ತಿದ್ದಾರೆ ಎಂದು ಸಂಸ್ಥೆಯ ಆಡಳಿತಾಧಿಕಾರಿ ವಸಂತ್ ಕುಮಾರ್ ಶೆಟ್ಟಿ ತಿಳಿಸಿದ್ದಾರೆ.

ಭಾರತಕ್ಕೆ 55 ಪದಕ: ಭಾರತ ತಂಡವು ವಿಶೇಷ ಒಲಿಂಪಿಕ್ಸ್‌ನಲ್ಲಿ 55 ಪದಕಗಳನ್ನು ಜಯಿಸಿತು. ಅಥ್ಲೆಟಿಕ್ಸ್, ಸೈಕ್ಲಿಂಗ್, ಪವರ್‌ಲಿಫ್ಟಿಂಗ್, ರೋಲರ್ ಸ್ಕೇಟಿಂಗ್ ಮತ್ತು ಈಜು ವಿಭಾಗಗಳಲ್ಲಿ ಭಾರತ ಪದಕ ಸಾಧನೆ ಮಾಡಿತು. ಅದರಲ್ಲಿ 15 ಚಿನ್ನ, 27 ಬೆಳ್ಳಿ ಮತ್ತು 13 ಕಂಚಿನ ಪದಕಗಳು ಸೇರಿವೆ.


ಪದಕಗಳೊಂದಿಗೆ ಹರೀಶ್ ವಿ.

ತೈಪೆ ಓಪನ್: ಕ್ವಾರ್ಟರ್‌ಗೆ ಪ್ರಣಯ್

ತೈಪೆ (ಪಿಟಿಐ): ಭಾರತದ ಅಗ್ರಮಾನ್ಯ ಆಟಗಾರ ಎಚ್‌.ಎಸ್. ಪ್ರಣಯ್, ತೈಪೆ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಇಂಡೊನೇಷ್ಯಾದ ಟಾಮಿ ಸುಗಿಯಾರ್ತೊ ಅವರನ್ನು ಹೆಚ್ಚಿನ ಪ್ರಯಾಸವಿಲ್ಲದೇ ನೇರ ಸೆಟ್‌ಗಳಿಂದ ಸೋಲಿಸಿ ಕ್ವಾರ್ಟರ್‌ಫೈನಲ್ ತಲುಪಿದರು.

ಗುರುವಾರ ನಡೆದ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ಪ್ರಣಯ್ 21–9, 21–17 ರಿಂದ ಸುಗಿಯಾರ್ತೊ ಅವರನ್ನು ಸೋಲಿಸಲು ತೆಗೆದುಕೊಂಡಿದ್ದು 36 ನಿಮಿಷಗಳನ್ನಷ್ಟೇ. ಭಾರತದ ಆಟಗಾರ ಎಂಟರ ಘಟ್ಟದ ಪಂದ್ಯದಲ್ಲಿ ಐದನೇ ಶ್ರೇಯಾಂಕದ ಆ್ಯಂಗಸ್ ಎಂಗ್ ಕಾ ಲಾಂಗ್ ಅವರನ್ನು ಎದುರಿಸಲಿದ್ದಾರೆ.

ಕಳೆದ ತಿಂಗಳು ಮಲೇಷ್ಯಾ ಓಪನ್‌ನಲ್ಲಿ ಚಾಂಪಿಯನ್ ಆಗಿದ್ದ ಪ್ರಣಯ್ ಉತ್ತಮ ಲಯದಲ್ಲಿದ್ದಾರೆ. ಕಳೆದ ವಾರ ಇಂಡೊನೇಷ್ಯಾ ಓಪನ್‌ನಲ್ಲಿ ಉತ್ತಮ ಸಾಧನೆ ತೋರಿ, ಸೆಮಿಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ವಿಕ್ಟರ್ ಆಕ್ಸೆಲ್‌ಸನ್ ಎದುರು ಸೋತಿದ್ದರು.

ಕಣದಲ್ಲಿ ಇರುವ ಭಾರತದ ಇತರ ಆಟಗಾರರು ಹೊರಬಿದ್ದರು. ಪರುಪಳ್ಳಿ ಕಶ್ಯಪ್ ಸ್ಥಳೀಯ ನೆಚ್ಚಿನ ಆಟಗಾರ ಸು ಲಿ ಯಂಗ್ ಅವರಿಗೆ ಮಣಿದರು.